ಸಂಪುಟ ೧೭
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಜನವರಿ, ೧೯೮೫

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸ ಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತ ಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು "ಕರ್ನಾಟಕ ಭಾರತಿ," ಕನ್ನಡ ಅಧ್ಯಯನಪೀಠ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 580 003 ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸು ವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–580 003 ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ	೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮–೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨–೫೦ (ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೪-೦೦ ಮಾತ್ರ. ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ **ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು)

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೭

ಸಂಚಿಕೆ : ೩

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಕ್ರಮಣ ಸಂಚಿಕೆ

ಜನವರಿ, ೧೯೮೫

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಹೊಂಬಾಳಿ ಪ್ರಿಂಟರಿ

ಕೋಯಿನ್ ರೋಡ, ಹುಬ್ಬಳ್ಳಿ–೫೮೦ ೦೨೦.

ಪರಿವಿಡಿ

ಪಂಪ-ನನ್ನಯರಲ್ಲಿ ಪಾಂಡು-ಮಾದ್ರಿ ಪ್ರಸಂಗ

● ಪ್ರೊ. ಎಂ. ಎಸ್. ಮಹಾಂತಯ್ಯ

ಭಾರತ, ಭಾಗವತ, ರಾಮಾಯಣಾದಿಗಳು ಬಹು ಜನಪ್ರಿಯವಾದ ಕೃತಿಗಳು. ಭಾರತವಾದರೋ ಪಂಚಮ ವೇದವೆನಿಸಿ ಕೊಂಡಿದೆ; ಚತುರ್ವೇದ ಸಾರವೆಲ್ಲವು ಇದರಲ್ಲಿ ಭಟ್ಟಿಯಿಳಿದಿದೆ. ಆ ಬಾಲ ವೃದ್ಧರನ್ನು ಸೆರೆಗೈವ ಚಮತ್ಕಾರವಿದಕ್ಕಿದೆ. ಭಾರತವು ಕಥೆ, ಉಪಕಥೆಗಳಿಂದ ಕೊಡಿದ ಒಂದು ಮಹಾ "ಕಥಾಸರಿತ್ಸಾಗರ". ವ್ಯಾಸ ಪ್ರೋಕ್ತವಾದೀ ಭಾರತ ವಿಶ್ವಭಾಷೆಗಳಲ್ಲಿ ಅಮರವಾಗಿದೆ; ಚಿರನೂತನವಾಗಿದೆ; ನಿತ್ಯವಾಗಿದೆ.

"ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ ವ್ಯಾಸನೆನ್" ಎಂಬ ಗರ್ವ ಯಾವ ಕವಿಗೂ ಬಂದಿಲ್ಲ. ಕನ್ನಡದಲ್ಲಿ ಆದಿಕವಿ ಪಂಪ ವಿನಮ್ರನಾಗಿ "ಗುಣಾರ್ಣವನೊಳ್ಪು" ತನ್ನ ಮನಸ್ಸನ್ನು ಸೂರೆಮಾಡಿರಲು, "ಅಟಿ" ಯಿಂದ ಅರಿಕೇಸರಿಯನ್ನು ಅರ್ಜುನನೊಡನೆ ಸಮೀಕರಿಸಿ "ಸಮಸ್ತ ಭಾರತ" ವನ್ನು ಹೇಳಿರುವನು. ಸೋದರ ಭಾಷೆಯಾದ ತೆಲುಗಿನಲ್ಲಿ ಆದಿಕವಿಯೂ, ವಾಗನು ಶಾಸನನೂ ಆದ ನನ್ನಯ ಭಟ್ಟಾರಕನು ಕೂಡ "ಆಂಧ್ರ ಮಹಾಭಾರತ" ವನ್ನು ತನ್ನ ರಾಜನಾದ ರಾಜರಾಜನರೇಂದ್ರ ಚಾಲುಕ್ಯ ಭೂಪತಿಗಾಗಿ ಬರೆದನು.[1] ಪಂಪ ತನ್ನ ಆಶ್ರಯದಾತನಿಗಾಗಿ ಮಹಾಭಾರತವನ್ನು ಸಂಗ್ರಹಿಸಿದ್ದಾನೆ. ಇಡೀ ಭಾರತ ದುದ್ದಕ್ಕೂ ವಿಕ್ರಮಾರ್ಜುನನ ವಿಜಯವೇ ತುಂಬಿದೆ. ಕೇವಲ ಅರ್ಜುನನ ಸುತ್ತ ಹೆಣೆಯಲಾದ ಭಾರತ ಕಥಾ ಸಂವಿಧಾನವಾಗಿದೆ. ನನ್ನಯನ ಕೃತಿಯಾದರೋ ಅಸಂಪೂರ್ಣ; ಭಾರತದ ಅಷ್ಟಾದಶ ಪರ್ವಗಳಲ್ಲಿ ಕೇವಲ ಮೊದಲ ಎರಡು (ಆದಿ, ಸಭಾ) ಪರ್ವಗಳನ್ನು, ಮೂರನೆಯದಾದ ಅರಣ್ಯಪರ್ವದಲ್ಲಿ ಮೂರು ಆಶ್ವಾಸಗಳ ಮೇಲೆ 142 ಪದ್ಯಗಳನ್ನು ಮಾತ್ರ ಬರೆದಿರುವನು. ರಾಜಕೀಯದಲ್ಲಿನ ಬದಲಾವಣೆ, ಕವಿಯ ಮೃತಿ, ಭಾರತ ಕೃತಿಯ ಅಸಮಗ್ರತೆಗೆ ಕಾರಣವೆಂದು ಬಲ್ಲವರ ಹೇಳಿಕೆ.[2]

1. ನನ್ನಯ : ಆಂಧ್ರ ಮಹಾಭಾರತಮು, (ಪ್ರ : ಆಂ. ಪ್ರ. ಸಾ. ಅಕಾಡೆಮಿ, ಹೈದರಾಬಾದು) 1970, ಆದಿಪರ್ವಮು-ಪ್ರಥಮಾಶ್ವಾಸಮು-ಪದ್ಯ 14 ರಿಂದ ವಚನ 20 ರವರೆಗೆ, ಪುಟ 4.
2. ದಿವಾಕರ್ಲ ವೆಂಕಟಾವಧಾನಿ : "ಆಂಧ್ರವಾಙ್ಮಯ ಚರಿತ್ರೆ" (ಕನ್ನಡ ಅನುವಾದ) ಪ್ರ : ಆಂ. ಕ. ಸಾ. ಪರಿಷತ್ತು, ಹೈದರಾಬಾದು, 1965, ಪುಟ 14.

ಪಂಪ-ನನ್ನಯರು ಕನ್ನಡ-ತೆಲುಗು ಸಾಹಿತ್ಯಗಳಿಗೆ ಆದಿ ಕವಿಗಳಾಗಿರುವುದರಿಂದ ಅವರ ಕಾಲ ಭೇದವನ್ನು ಲೆಕ್ಕಿಸದೆ, ಅವರ ಕೃತಿಗಳಲ್ಲಿನ ಒಂದು ಸನ್ನಿವೇಶವನ್ನು ತೆಗೆದುಕೊಂಡು, ವ್ಯಾಸರ ಮೂಲ ಮಹಾಭಾರತದ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ಮಹಾಭಾರತದಲ್ಲಿ "ಪಾಂಡು-ಮಾದ್ರಿ" ಪ್ರಸಂಗ ಮನಸ್ಸನ್ನು ಸೆರೆ ಹಿಡಿಯುವ ಸನ್ನಿವೇಶವಾಗಿದೆ. ಮಾನವ ವಿಧಿಯ ಕೈಯ ಸೂತ್ರದ ಬೊಂಬೆ ಎಂಬುದನ್ನಿಲ್ಲಿ ಕಾಣಬಹುದು. ವಿಧಿ ಎಂಥವರಿಗೂ ಅನುಲ್ಲಂಘನೀಯ. ಅದನ್ನು ಮೀರುವೆವು ಎನ್ನುವವರ ತಲೆಮೆಟ್ಟಿ ಇಕ್ಕುತ್ತದೆ ಈ ವಿಧಿಯ ಬಲವತ್ತರವಾದ ವಜ್ರದಂಡ. ಮೃಗ ಶಾಪ ಭೀತನಾದ ಪಾಂಡುರಾಜ ನಿರ್ವೇಗಗೊಂಡು ಮುನ್ನಾಶ್ರಮ ಪ್ರಾಂತವೊಂದರಲ್ಲಿ ಕಾಮ ವಿದೂರನಾಗಿ, ತಾಪಸವೃತ್ತಿಯಲ್ಲಿರಲು, ವಸಂತದಲ್ಲೊಮ್ಮೆ ಮಾದ್ರಿಯ ಸಹಜ ಸುಂದರ ರೂಪು ಅವನ ದೃಷ್ಟಿಗೆ ಬಲೆ, ಹೃದಯಕ್ಕೆ ಸಂಕಲೆಯಾಗಿ ಹಿಡಿದೆಳೆದು ಮೃತ್ಯುವನ್ನಪ್ಪುವಂತೆ ಮಾಡುತ್ತದೆ. ಈ ಸನ್ನಿವೇಶದ ಸಮಾಲೋಕನವೇ ಪ್ರಕೃತೋದ್ದೇಶ.

ಸಾಹಿತ್ಯ ಚರಿತ್ರೆಯಲ್ಲಿ ಕಾಲಮಾನದ ದೃಷ್ಟಿಯಿಂದ ನೋಡಿದರೆ ಪಂಪ ಮೊದಲು, ನನ್ನಯ ಆಮೇಲೆ. ಪಂಪನಕಾಲ ಕ್ರಿ.ಶ. 941 ಆದರೆ, ನನ್ನಯನದು ಕ್ರಿ.ಶ. 1000 ದಿಂದ 1060ರ ವರೆಗೆ. ಇಬ್ಬರೂ ಪ್ರತಿಭಾಶಾಲಿಗಳು; ಉದ್ದಾಮ ಕವಿಗಳು; ಉಭಯಕವಿತಾ ವಿಶಾರದರು. ಪಂಪ, ಕನ್ನಡ-ಸಕ್ಕದದಲ್ಲಿ, ನನ್ನಯ ತೆಲುಗು–ಸಂಸ್ಕೃತದಲ್ಲಿ. ಇಬ್ಬರೂ ತಮ್ಮ ಆಶ್ರಯದಾತರಾದ ರಾಜರಿಗಾಗಿ ವ್ಯಾಸ ಭಾರತವನ್ನು ತಮ್ಮ ತಮ್ಮ ಭಾಷೆಗಳಲ್ಲಿ ಬರೆದರು. ಪಂಪ ಸಂಗ್ರಹಿಸಿದ, ನನ್ನಯ ಯಥಾನುವಾದ ಮಾಡಿದ; ಆದರೂ ಅದರಲ್ಲಿ ತನ್ನತನವನ್ನು ತೋರದೆ ಇಲ್ಲ. ಗುಣಾರ್ಣವನನ್ನು ಕಥಾನಾಯಕನನ್ನಾಗಿ ಮಾಡಿದುದರಿಂದ ಪಂಪ ಸಂಗ್ರಹಿಸ ಬೇಕಾಯ್ತು. ಆದರೂ ಅಲ್ಲಲ್ಲಿ ಹಲವು ಕಥೆಗಳನ್ನು ಯಥಾವತ್ತಾಗಿ ಅನುಸರಿಸಿ ಕೊಂಡು ಹೋಗಿದ್ದಾನೆ. ಅವುಗಳಲ್ಲಿ "ಪಾಂಡು-ಮಾದ್ರಿ" ಪ್ರಸಂಗ ಒಂದು. ಇದರ ವಿವೇಚನೆ ಪಾಂಡು–ಮಾದ್ರಿಯರ ಮದುವೆಯಿಂದ ಪ್ರಾರಂಭಿಸಬಹುದು.

ಕುಂತಿದೇವಿಯ ಸ್ವಯಂವರ. ಎಲ್ಲ ರಾಜರ ಜೊತೆ ಪಾಂಡುವೂ ಇದ್ದಾನೆ. ಆಗ ಯಾವ "ಚೆನ್ನಿಗರುಮನ್ ಆಸೆಕಾರರುಮನ್ ಒಲ್ಲದೆ ಚೆಲ್ವಿಡಿದಿರ್ದ ರೂಪು ದೃಷ್ಟಿಗೆವರೆ ಪಾಂಡುರಾಜನನೆ ಕುಂತಿ ಮನಂಬುಗೆ ಮಾಲೆ ಸೂಡಿದಳ್"ವ॥ ಅಂತು ಸ್ವಯಂಬರದೊಳ್ ನೆರೆದರಸು ಮಕ್ಕಳೊಳಪ್ಪುಕೆಯ್ದು ಕುಂತಿಯೊಡನೆ ಮದ್ರರಾಜನ ಮಗಳ್, ಶಲ್ಯನೊಡವುಟ್ಟಿದ ಮಾದ್ರಿಯುಮನೊಂದೆ ಪಸೆಯೊಳಿರಿಸಿ ಗಾಂಗೇಯಂ

ವಿಧಾತ್ರಂ ಮುಂಡಾಡುವಂತೆ ತಾಂ ಮದುವೆಯಂ ಮಾಡಿ"[3] ಎಂದು ಪಂಪ ಕವಿ ಹೇಳಿದರೆ

ಬೃಥಿವಿ ಬೋನಿದಾನಿ ಬೃಥಯನು ಕನ್ಯಕೆ
ನಧಿಕ ವೀರುಡೈ ಸ್ವಯಂವರಮುನ
ಬಡಸಿ ಪರನರೇಂದ್ರ ಪರಿಭಾವಿಯುಪ್ಪಾಂಡು
ವ ರುಡು ಪೇರ್ಮಿತೋ ವಿವಾಹಮಯ್ಯೆ
"(ಆಶ್ವಾ. 5, ಪದ್ಯ 34, ಪುಟ185)[4]

ಮಱಿಯು ಭೀಷ್ಮಾನುಮತಂಬುನ ಮದ್ರರಾಜ ತನಯ ಮಾದ್ರಿಯನುದಾನಿ ಮಹೋತ್ಸವಂಬುನ ವಿವಾಹಂಬೈ. ಪಾಂಡುರಾಜು ಭರತಕುಲ ರತ್ನಾಲಂಕಾರುಂಡೈ" (ಆ5–35ರ ವಚನ ಪು. 185) ಎಂದು ನನ್ನಯ ಭಟ್ಟಾರಕನು ಬಣ್ಣಿಸಿದ್ದಾನೆ. ಇಲ್ಲಿ ಪಂಪನ ಅಭಿಪ್ರಾಯವನ್ನೇ ನನ್ನಯನೂ ಹೇಳಿದಂತಿದೆ. ಇಬ್ಬರೂ ಒಂದೇ ತೆರನಾಗಿ ಬಣ್ಣಿಸಿದ್ದಾರೆ. ಮಾದ್ರಿಯ ಮದುವೆ ಭೀಷ್ಮನ ಬಯಕೆಯಂತೆ ಆಯಿತು ಎಂದು ಹೇಳಿದಾಗ ನನ್ನಯನು ಪಂಪನನ್ನು ಅನುಸರಿಸಿದಂತೆ ಅನಿಸುತ್ತದೆ. ಆದರೆ ವ್ಯಾಸ ಭಾರತವನ್ನಿಲ್ಲಿ ಪರಿಶೀಲಿಸಿದರೆ ಇಬ್ಬರೂ ಯಥಾ ತಥವಾಗಿ ವ್ಯಾಸರನ್ನನು ಸರಿಸಿದುದು ಕಂಡು ಬರುತ್ತದೆ.

ರೂಪ ಸತ್ವ ಗುಣೋಪೇತಾ ಧರ್ಮಾರಾಮಾ ಮಹಾವ್ರತಾ
ದುಹಿತಾ ಕುನ್ತಿಭೋಜಸ್ಯ ಕೃತೇ ಪಿತ್ರಾ ಸ್ವಯಂವರೇ ॥1॥

ಸಿಂಹದಂಷ್ಟ್ರಂ ಗಜಸ್ಕಂಧಮೃಷಭಾಕ್ಷಂ ಮಹಾಬಲಮ್
ಭೂಮಿ ಪಾಲ ಸಹಪ್ರಾಣಂ ಮಧ್ಯೇ ಪಾಂಡು ಮವಿನ್ದತ ॥2॥

ಸ ತಯಾ ಕುನ್ತಿ ಭೋಜಸ್ಯ ದುಹಿತ್ರಾ ಕುರುನಂದನಃ
ಯು ಯು ಜೇಮಿತ ಸೌಭಾಗ್ಯಃ ಪೌಲೋಮ್ಯಾ ಮಘವಾನಿವ ॥3॥

ಯಾತ್ವಾ ದೇವ ವ್ರತೇನಾಪಿ ಮದ್ರಾಣಾಂ ಪುಟಭೇದನಮ್
ವಿಶ್ರುತಾ ತ್ರಿಷು ಲೋಕೇಷು ಮಾದ್ರೀ ಮದ್ರ ಪತೇಃ ಸುತಾ ॥4॥

---

3. ಸಂ : ಪುಟ್ಟಪ್ಪ, ಕೆ. ವಿ., "ಪಂಪ ಭಾರತಂ" (ಭಾಗ-1) ಪ್ರ : ಕರ್ನಾಟಕ ಸಾಹಿತ್ಯ ಪರಿಷತ್ತು ಬೆಂಗಳೂರು, 1935, ಆಶ್ವಾಸ 1–ಪದ್ಯ 106 ಮತ್ತು ತರುವಾಯದ ವಚನ, ಪು. 26.
4. ನನ್ನಯ : ಶ್ರೀಮತ್ ಆಂಧ್ರ ಮಹಾಭಾರತಮು-ಆದಿಪರ್ವಮು ಪ್ರ. ಆಂ. ಪ್ರ. ಸಾ. ಅಕಾಡೆಮಿ, ಹೈದರಾಬಾದು, ಪ್ರಥಮ ಮುದ್ರಣ, 1970.

ಸರ್ವರಾಜ ಸು ವಿಖ್ಯಾತಾ ರೂಪೇಣಾ ಸದೃಶೀ ಭುವಿ
ಪಾಂಡೋರರ್ಥೇ ಪರಿಕ್ರೀತಾ ಧನೇನ ಮಹತಾ ತದಾ ॥5॥

ವಿನಾಹಂ ಕಾರಯಾ ಮಾಸ ಭೀಷ್ಮಃ ಪಾಂಡೋರ್ಮಹಾತ್ಮನಃ[5]

ಆದುದರಿಂದ ಇಬ್ಬರ ಮೇಲೂ ವ್ಯಾಸರ ವರ್ಚಸ್ಸು ವಿಶೇಷವಾಗಿದೆ. "ವಿವಾಹದೊಸಗೆಯೊಡನೆ ಪಟ್ಟಬಂಧದೊಸಗೆಯುಂ ಮಾಡಿ ನೆಲನನ್ ಆಳಿಸೆ" ಎಂದು ಪಂಪ ಹೇಳಿದರೆ, ನನ್ನಯನಲ್ಲಿ ಭೀಷ್ಮರೀ ಪಟ್ಟಬಂಧೋತ್ಸವ ಮಾಡಿದಂತೆ ಇಲ್ಲ. ವಿವಾಹಾನಂತರ ಪಾಂಡು ರಾಜ ದಿಗ್ವಿಜಯ ಮಾಡಿ ಸಕಲ ರಾಜನ್ಯರಿಂದಲೂ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿ ಬಂದು ಭೀಷ್ಮಾದಿ ಹಿರಿಯರಿಗೆ ತಂದೊಪ್ಪಿಸುವುದು ಇಬ್ಬರಲ್ಲೂ ಮೂಲದಂತೆ ಸರಿಯಾಗಿ ಬಂದಿದೆ.

ದಿಗ್ವಿಜಯವಾದ ಮೇಲೆ ಪಾಂಡು ಒಂದು ದಿನ ತೋಪಿನ ಬೇಟೆಯಾಡಲು ಹೋಗಿ ಮೃಗಯಾ ವ್ಯಸನದಲ್ಲಿ ಪೂರ್ವಾಪರವನ್ನಾಲೋಚಿಸದೆ ಮೃಗಚಾರಿಯಾಗಿ ಮನೋಜ ಸುಖಕ್ಕೆ ಸೋಲ್ತು ಅಲಂಪಿನೆ ತನ್ನಿನಿಯಳಂ ನೆರೆದಿರ್ದ ಮುನಿ ಯೊಬ್ಬನನ್ನು ಹೊಡೆಯುತ್ತಾನೆ. ಮೃಗರೂಪಿಯಾದ ಮುನಿ ತನ್ನನ್ 'ಆವನ್ ಎಚ್ಚನ್ ಪೇೞಿಮ್' ಎಂದು ಕಿನಿಸಿ ಮುಂದಿರ್ದ ಭೂಪನನ್ನು ನೋಡಿ

ಸನ್ನತದಿಂ ರತಕ್ಕೆಳಸಿ ನಲ್ಲಳೊಳೋತೊಡಗೂಡಿದೆನ್ನನಿಂ
ತನ್ನೆಯ ಮೆಚ್ಚುದರ್ಕೆ ಪೆಱತಿಲ್ಲದು ದಂಡಮೊಱಲ್ದು ನಲ್ಲಳೊಳ್
ನೀನ್ನಡೆ ನೋಡಿಯುಂ ಬಯಸಿ ಕೂಡಿಯುಮಾಗಡೆ ಸಾವೆಯಾಗಿ ಪೋ
ಗಿನ್ನೆನೆ ರೌದ್ರ ಶಾಪ ಪರಿತಾಪ ವಿಳಾಪದೊಳಾ ಮಹೀಶ್ವರಂ॥[6]

"ಆತ್ಮ ಕರ್ಮಾಯತ್ತಂ ಪೆಱತಲ್ತಿದೆಲ್ಲಮುಘಟಿತ ಘಟಿತಂ (1–113 ಪು 27) ಎಂದು ಚಿಂತಿಸುತ್ತ ಪಟ್ಟಣಕ್ಕೆ ತಿರುಗಿ ಬರುವನೆಂದು ಪಂಪ ಹೇಳುತ್ತಾನೆ. ಮುನಿ ಯಾರೆಂಬುದನ್ನು ಮಾತ್ರ ಹೇಳಿಲ್ಲ. ಆದರೆ ಇದೇ ಸನ್ನಿವೇಶ ನನ್ನಯನಲ್ಲಿ ವಿಸ್ತಾರ ವಾಗಿ ಬಂದಿದೆ; ಮುನಿಯ ಹೆಸರೂ ಬಂದಿದೆ. ವಾಸವ ಸನ್ನಿಭನಾದ ಪಾಂಡುರಾಜ ಹೈಮಾಚಲದ ದಕ್ಷಿಣ ಪಾರ್ಶ್ವ ಭೂಮಿಯಲ್ಲಿ ಲಕ್ಷ್ಮಿಯಂತಿದ್ದ ಕುಂತಿಯನ್ನು, ಚೆಲುವಿಗಾಗರವಾದ ಮಾದ್ರಿಯನ್ನು ಜೊತೆಮಾಡಿಕೊಂಡು ಬಾಣಾಸನ ಬಾಣ ಭಾಸಿತ ಮಹಾ ಭುಜನಾಗಿ, ಇಚ್ಛಾಸದೃಶವಾಗಿ ಗಜವಶಾದ್ವಯ ಮಧ್ಯದ ಗಜೇಂದ್ರನಂತೆ

5. Ed : Sukthankar V. S. : Mahabharata, Bhandarkar, O.R. I. Poona (1931) Adiparva (Sambhava Parva) Adhyaya 105, Page 471.

6. ಪಂ. ಭಾ. (1935) 1–112, ಪುಟ 27.

ಮೃಗಯಾ ವ್ಯಸನದಲ್ಲಿ ಸಿಲ್ಕಿ ಸಂಚರಿಸುತ್ತಿದ್ದನಂತೆ. ಹಾಗೆ ವಿಹರಿಸುತ್ತಿರುವಾಗ ಕಣ್ಣಿಗೆ ಬಿದ್ದ ಮೃಗ ಮಿಥುನವನ್ನು ಎಚ್ಚ ಕೂಡಲೆ ಹೆಣ್ಣು ಜಿಂಕೆ ಸಾಯುತ್ತದೆ. ಅಲ್ಪಾವಶಿಷ್ಟ ಜೀವವಾಗಿ ಬಿದ್ದಿದ್ದ ಪುರುಷ ಮೃಗವು ಮನುಷ್ಯ ವಚನಗಳಿಂದ ಹೀಗನ್ನುತ್ತದೆ.

ತೆರಲಮು : ಹರಿಪರಾಕ್ರಮಯೇಸು ಗಿಂದಮುಡನ್ಮುನಿನ್ ಮೃಗಮುಲ್ ನಿರಂ
ತರಮು ನಿಟ್ಲುರಮಿಂಪ ಜೋಯಿನ ದದ್ರತಂ ಬೆಡ ಗೋರಿ ಸುಂ
ದರ ಮೃಗಾಕೃತಿ ನೇನು ಭಾರ್ಯಯು ದಾರುಣಾಟವಿ ಗಾಮಭೋ
ಗರತಿ ನುಂಡಿತಿ ಮಿಷ್ಟಚಾರಿ ಮೃಗ ವ್ರಜಂಬುಲ ಪೊತ್ತುನನ್"[7]

(ಸಿಂಹ ಪರಾಕ್ರಮಿಯೇ ನಾನು ಕಿಂದಮನೆಂಬ ಮುನಿ, ಮೃಗಗಳು ರಮಿಸುತ್ತಿದ್ದುದನ್ನು ಕಂಡು. ಕಾಮೋಪಭೋಗವನ್ನನುಭವಿಸಲು ನಾನು ನನ್ನ ಸತಿಯು ಮೃಗರೂಪಿಗಳಾಗಿ ವನಾಂತರದಲ್ಲಿ ಇಷ್ಟಚಾರಿಗಳಾಗಿ ಮೃಗಗಳ ಸಂಗಡ ಸಂಚರಿಸುತ್ತಿದ್ದೆವು). "ಮೃಗಗಳಾಗಿದ್ದ ನಮ್ಮನ್ನು ಕೊಂದುದು ನಿನ್ನ ತಪ್ಪಲ್ಲ. ಆದರೆ ಇದರಲ್ಲಿಯೂ ಕೆಲವು ನೀತಿ ನಿಯಮಗಳುಂಟು. ಅವುಗಳನ್ನು ಪಾಲಿಸುವುದು ಅರಸರ ಕರ್ತವ್ಯ".

ತೇ : ಪಜವನೋಪಕಯುನ್ನ. ಮೈಮಜಚಿ ಪೆಂಟಿ
ಬೆನಗಿಯುನ್ನನು, ಬ್ರಸವಿಂಪ ಮೊನಸಿಯುನ್ನ
ದೆವ್ವಲುಗೊನಿಯುನ್ನ. ಮೃಗಮುಲ ದಿವಿರಿಯೇಯು
ಶೆಜಚಿ ಯಾಹಾರಮುಗ ಮನು ನೆಜಿಕುಲಯಿನ"[8]

"ಓಡಲಾಗದೆ ಇರತಕ್ಕವು. ಸುರತದಲ್ಲಿ ಮೈಮರೆತವು. ಪ್ರಸವಿಸಲು ಸಿದ್ಧವಾಗಿರುವವು. ಒಂದರೊಡನೊಂದು ಕೂಡಿರುವ ಮೃಗಗಳನ್ನು ಕಿರಾತರು ಕೂಡ ತಮ್ಮ ಆಹಾರಕ್ಕಾಗಿಯಾದರೂ ಕೊಲ್ಲುವುದಿಲ್ಲವೆಂದ ಮೇಲೆ ನಿನ್ನಂಥ ಅರಸನು, ಎಲ್ಲ ಬಲ್ಲವನು, ನಮ್ಮನ್ನು ವಿನಾಕಾರಣ ಕೊಂದೆ. ಸಕಲ ಪ್ರಾಣಿಗಳಿಗೂ ಸಾಮಾನ್ಯವಾಗಿರುವ ಇಷ್ಟ ಸುಖಾವಸರಲ್ಲಿದ್ದ ನಮ್ಮನ್ನು. ನಿರಪರಾಧಿಗಳನ್ನು ಕೊಂದೆಯಾದುದರಿಂದ ನೀನು ಕೂಡ ಪ್ರಿಯಾ ಸಂಗವಾಗುವುದೇ ತಡ ಮೃತ್ಯು ವಶನಾಗು, ನಿನ್ನ ಪ್ರಿಯೆಯು ನಿನ್ನನ್ನು ಅನುಗಮಿಸುವಳು"[9] ಎಂದು ಶಾಪವಿತ್ತು ಗತಪ್ರಾಣವಾಗಿ ಬಿದ್ದ ಮೃಗವನ್ನು ಕಂಡು ಪಾಂಡುವು "ಎಂಥ ವಿಶಿಷ್ಟ ಕುಲದಲ್ಲಿ

7. ನನ್ನಯ : ಆಂಧ್ರ ಮಹಾಭಾರತಮು, ಆದಿ ಪರ್ವಮು, (1970) ಆ 5-51 ಪುಟ 188.
8. ಅದೇ, ಆ 5-53 ಪುಟ 188.
9. ಅದೇ, ಆ 5, ವಚನ 57, ಪುಟ 189.

ಮುಟ್ಟಿಯು, ಸದಸದ್ವಿವೇಕ ವುಳ್ಳವರಾಗಿಯು, ಪೂರ್ವದಲ್ಲಿ ಮಾಡಿದ ಕರ್ಮಫಲ ನೆಟ್ಟನೆ ಭೋಗಿಸದೆ ಇರಬಲ್ಲರೆ ಮನುಜರು"[10] ಎಂದು ಹಲುಬುತ್ತಾನೆ.

ಇದೇ ಸನ್ನಿವೇಶ ವ್ಯಾಸರ ಮಹಾಭಾರತದಲ್ಲಿ ಚಿತ್ರಿತವಾದ ರೀತಿಯನ್ನು ನೋಡಬಹುದು.

ಅಹಂ ಹಿ ಕಿಂದಮೋನಾಮ ತಪಸಾಪ್ರತಿಮೋ ಮುನಿಃ
ವ್ಯಪತ್ರ ಪನ್ಮನುಷ್ಯಾಣಾಂ ಮೃಗ್ಯಾಂ ಮೈಥುನಮಾಚರಮ್"
ಮೃಗೋ ಭೂತ್ವಾ ಮೃಗ್ಯೈಃ ಸಾರ್ಧಂ ಚರಾಮಿ ಗಹನೇ ವನೇ
ನತುತೇ ಬ್ರಹ್ಮ ಹತ್ಯೇಯಂ ಭವಿಷ್ಯತ್ಯವಿ ಜಾನತಃ
ಮೃಗರೂಪಧರಂ ಹತ್ವಾ ಮಾಮೇವಂ ಕಾಮುಮೋಹಿತಮ್ ॥27॥

ಅಸ್ಯ ತು ತ್ವಂ ಫಲಂ ಮೂಢ ಪ್ರಾಪ್ಸ್ಯಸೀ ದೃಶಮೇ ವಹಿ
ಪ್ರಿಯ ಯಾ ಸಹ ಸಂವಾಸಂ ಪ್ರಾಪ್ಯ ಕಾಮ ವಿಮೋಹಿತಃ
ತ್ವಮ ಪ್ಯ ಸ್ಯಾಮ ವಸ್ಥಾಯಾಂ ಪ್ರೇತಲೋಕಂ ಗಮಿಷ್ಯಸಿ ॥28॥

ಅಂತಕಾಲೇಚ ಸಂವಾಸಂ ಯಯಾಗನ್ತಾಸಿ ಕಾನ್ತಯಾ
ಪ್ರೇತರಾಜವಶಂ ಪ್ರಾಪ್ತಂ ಸರ್ವ ಭೂತ ದುರತ್ಯಯಮ್
ಭಕ್ತ್ಯಾ ಮತಿಮತಾಂ ಶ್ರೇಷ್ಠ ಸೈವ ತ್ವಾಮನುಯಾಸ್ಯತಿ ॥29॥

ವರ್ತಮಾನಃ ಸುಖೇ ದುಃಖಂ ಯಥಾಹಂ ಪ್ರಾಪಿತಸ್ತ್ವಯಾ
ತಥಾಸುಖಂ ತ್ವಾಂ ಸಂಪ್ರಾಪ್ತಂ ದುಃಖ ಮಭ್ಯಾಗಮಿಷ್ಯತಿ[11] ॥30॥

ವ್ಯಾಸರಲ್ಲಿ ಬಂದ ಈ ಭಾವವೆಲ್ಲವೂ ಚಾ ಚು ತಪ್ಪದಂತೆ ನನ್ನಯನಲ್ಲಿ ಬಂದುದನ್ನು ಕಾಣಬಹುದು. "ನಲ್ಲಳೊಳ್ ನೀನ್ನಡೆ ನೋಡಿಯುಂ ಬಯಸಿ ಕೂಡಿಯುಂ ಆಗಡೆ ಸಾವೆಯಾಗಿ ಪೋಗು" (1–112 ಪ. 27) ಎಂಬ ಮಾತು ಪಂಪ-ನನ್ನಯರಲ್ಲಿ ಸುಸ್ಪಷ್ಟವಾಗಿದೆ. "ಅಂತ ಕಾಲೇಚ ಸಂವಾಸಂ ಯಯಾಗನ್ತಾಸಿ ಕಾಂತಯಾ" ಎಂಬ ಮಾತು ಮಾತ್ರ ನನ್ನಯನಲ್ಲಿ ಬರುವ "ನೀ ಪ್ರಿಯಯು ನಿನ್ನು ನನುಗಮಿಂಚುನ್" (ನಿನ್ನ ಪ್ರಿಯೆಯು ನಿನ್ನನನುಸರಿಸುವಳು) ಎಂಬ ಮಾತಿಗೆ ಸಂವಾದಿಯಾಗಿ ಬರುತ್ತದೆ. ಈ ಭಾವ ಪಂಪನಲ್ಲಿ ಸ್ಪಷ್ಟವಾಗಿ ಬಂದಿಲ್ಲ. ಪಂಪನಿಗೆ ಪ್ರತಿಯೊಂದು ಮಾತನ್ನೂ ಎಳೆದೆಳೆದು ಹೇಳಬೇಕಾಗಿದ್ದಿಲ್ಲ. ಅದಕ್ಕೆ ಕಾರಣ ಅವನ ಕಾವ್ಯದ ಪರಿಮಿತಿ: ಸಂಗ್ರಹನೀತಿ: ಹಿತಮಿತ ಮೃದು ವಚನ ಪದ್ಧತಿ.

---

10. ಅದೇ, 5-58, ಪುಟ 189.
11. Ed : Sukthankar, V. S. Mahabharata (Adiparva), B. O. R. I. Poona, 1931, Adhyaya 109, Page 486.

ವ್ಯಾಸ, ಪಂಪ, ನನ್ನಯರಲ್ಲಿ ಒಂದೇ ತೆರನಾಗಿ ಶಾಪಗ್ರಸ್ತನಾದ ಪಾಂಡು ಸಂಸಾರದಲ್ಲಿ ವಿರಕ್ತಿಯನ್ನು ಹೊಂದುತ್ತಾನೆ. ಚತುರ್ವಿಧ ಪುರುಷಾರ್ಥಗಳಲ್ಲಿ ಮೂರನೆಯದಾದ ಕಾಮವೇ ದೂರವಾದಮೇಲೆ ಉಳಿದ ಜೀವನ ನಿಸ್ಸಾರವಾಗಿ ಕಾಣುತ್ತದೆ. ಕೊನೆಯದಾದ ಮೋಕ್ಷವೊಂದೇ ಏಕ ಮಾತ್ರ ಗುರಿಯಾಗುತ್ತದೆ. ಅಂತೆಯೆ ಪಾಂಡು ಕಾಡಿಗೆ ತೆರಳಲುದ್ಯುಕ್ತನಾಗುತ್ತಾನೆ. ತನ್ನ ಸಮಸ್ತ ವಸ್ತುಗಳನ್ನು "ದೀನಾನಾಥ ಜನಂಗಳ್ಗೆ ಸೂಱೆಗೊಟ್ಟು ಕುಂತಿ ಮಾದ್ರಿಯರ್ ಬೆನ್ನ ಬೆನ್ನನೆ ಬರೆ ... .ಮುನಿ ಮುಖ್ಯ ಮುಖಾಂಭೋಜೋದರ ನಿರ್ಗತ ಮಂತ್ರ ಪೂತಾಂಗಮಂ ಉದ್ಯತ್ ಶೃಂಗಮನಾ ಶತಶೃಂಗಂ ನೃಪನ್ ಎಯ್ದಿದನ್" ಎಂದು ಪಂಪ ಹೇಳಿ ಅಲ್ಲಿನ ಮುನ್ಯಾಶ್ರಮವನ್ನು, ಅಲ್ಲಿನ ಪ್ರಶಾಂತ ವಾತಾವರಣದಲ್ಲಿ ಪಶುಪಕ್ಷ್ಯಾದಿಗಳು ನಿರ್ವೈರದಿಂದಿದ್ದು, ಅಲ್ಲಿನ ಮುನಿಜನರಿಗೆ ಒಂದಿಲ್ಲೊಂದು ರೀತಿಯಲ್ಲಿ ಸೇವೆಸಲ್ಲಿ ಸುತ್ತಿದ್ದುದನ್ನು ಬಣ್ಣಿಸುತ್ತಾನೆ. ಈ ಬಣ್ಣನೆ ನನ್ನಯನಲ್ಲಾಗಲಿ, ವ್ಯಾಸರಲ್ಲಾಗಲಿ ಇಲ್ಲ. ಇದು ಕೇವಲ ಪಂಪಕವಿ ಕೃತ ಜೈನ ಕಾವ್ಯಗಳಲ್ಲಿ ಬರುವ ಇಂಥ ವರ್ಣನೆಗಳ ಛಾಯೆ ಇಲ್ಲಿ ಕಂಡು ಬರುತ್ತದೆ. ಇದು ಪಂಪನದೇ: ಅವನದೇ ಸೊತ್ತು: ಇದಕ್ಕವನೇ ಮೊದಲಿಗನೆನ್ನಬಹುದು.

ನನ್ನಯನಾದರೊ ಪಾಂಡು ಕಾಡಿಗೆ ಹೋಗುವಾಗ ತನ್ನೆಲ್ಲ ವಸ್ತುವನ್ನು ಧೃತರಾಷ್ಟ್ರನಿಗಿತ್ತು ಮಮತ್ವಾಹಂಕಾರ ವಿಮುಕ್ತನಾಗಿ, ಧರ್ಮ ಪತ್ನಿಯರಿಬ್ಬರು ತನ್ನಂತೆ ತಪಸ್ವಿನಿಯರಾಗಿ ಕೂಡಬರೆ ಉತ್ತರಾಭಿಮುಖವಾಗಿ ಹೊರಟು ನಾಗ ಶೈಲವನ್ನು, ಚೈತ್ರರಥವನ್ನು, ಹಿಮವಂತವನ್ನು ಕಳೆದು ಸುರಸಿದ್ಧಸೇವಿತವಾದ ಗಂಧಮಾದನದಲ್ಲಿ ಕೆಲವು ಕಾಲವಿದ್ದು, ಇಂದ್ರದ್ಯುಮ್ನವೆಂಬ ಸರೋವರವನ್ನು ಹಂಸಕೂಟವನ್ನು ಅತಿಕ್ರಮಿಸಿ ಶತಶೃಂಗವೆಂಬ ಪರ್ವತಕ್ಕೆ ಬಂದು ಸೇರಿ ಶುಭಾ ಚಾರನಾಗಿ ನಿತ್ಯವ್ರತೋದ್ಯತನಾಗಿ ಘೋರ ತಪಸ್ಸನ್ನು ಮಾಡಿದನೆಂದು ಹೇಳು ತ್ತಾನೆ.[12] ನನ್ನಯ ವ್ಯಾಸರಲ್ಲಿಯ ಭಾವವನ್ನೆ ಚಾ ಚು ತಪ್ಪದೆ ನಿರೂಪಿಸಿದ್ದಾನೆ. (ವ್ಯಾಸ ಮಹಾಭಾರತದಲ್ಲಿನ ಅಧ್ಯಾಯ 110, ಪುಟ 491 ರಲ್ಲಿನ ಆದಿ ಪರ್ವ–ಸಂಭವ ಪರ್ವದಲ್ಲಿನ 42 ರಿಂದ 45ರ ವರೆಗಿನ ಸಾಲುಗಳನ್ನು ನೋಡಬಹುದು).

ಮುನ್ಯಾಶ್ರಮದಲ್ಲಿ "ಆಶ್ರಮಕ್ಕೆ ಗುರುವಾಗಿ ಪಾಂಡುರಾಜ ನಿರ್ಪನ್ನೆಗಂ" (ಪಂ. ಭಾ. 1–116ರ ತರುವಾಯದ ವಚನ, ಪುಟ 28) ಎಂದು ಪಂಪ ಹೇಳಿದರೆ, "ಶತಶೃಂಗಂ ಬುನ ಮುತ್ತರ ಭಾಗಂಬುನ ದಪಂಬು ಸೇಯುಚು ಬ್ರಹ್ಮಮುನಿ ಸಮಾನುಂಡೈ" (ನನ್ನಯ : ಆಂಧ್ರ. ಭಾ; ಆದಿ. ಪ. 5-65 ವಚನ, ಪುಟ 191) ಎಂದು ನನ್ನಯ ಹೇಳುತ್ತಾನೆ. ಪಂಪನಲ್ಲಿ ಬಂದ "ಗುರು" ಶಬ್ದ, ನನ್ನಯನಲ್ಲಿ

12. ನನ್ನಯ : ಆಂಧ್ರ ಮಹಾಭಾರತ (ಆದಿಪರ್ವ). ಆ 5-63, 64 ಪುಟ 190, 191.

ಬಂದ "ಬ್ರಹ್ಮಋಷಿ"ಗೆ ಸಮಾನವಾಗಿದೆ. ಮೂಲದಲ್ಲಿಯೂ 'ಬ್ರಹ್ಮಋಷಿ' ಎಂದೇ ಇದೆ. ಹೀಗಿರುತ್ತಿರಲು ದಿವ್ಯ ವಿಮಾನಗಳಲ್ಲಿ ಊರ್ಧ್ವಲೋಕಗಳಿಗೆ ಹೋಗಿ ಬರುತ್ತಿದ್ದ ಮುನಿ ಸಹಸ್ರರನ್ನು ಪಾಂಡುರಾಜನು ನೋಡಿ ಅಮಾವ್ಯಾಸೆಯ ದಿನವಾದುದರಿಂದ ಬ್ರಹ್ಮನನ್ನು ಪೂಜಿಸಲು ಮಹರ್ಷಿ, ಪಿತೃಗಣಗಳು ಹೋಗಿ ಬರುತ್ತಿರುವರು ಎನ್ನುವುದನ್ನು ಕೇಳಿ ತಾನೂ ಭಾರ್ಯಾದ್ವಯನಾಗಿ ಸಮ ವಿಷಮ ಪ್ರದೇಶಗಳಲ್ಲಿ ಸಂಚರಿಸುತ್ತಾ ನಡೆತರುತ್ತಿದ್ದ ಪಾಂಡುರಾಜನನ್ನು ಮುನಿಗಳು ನೋಡಿ, "ನಿನ್ನ ಸತಿಯರತಿ ಸುಕುಮಾರಿಯರು. ಅವರೀ ಕಾನನಾಂತರದ ಕಠಿನ ಮಾರ್ಗಗಳಲ್ಲಿ ನಡೆಯಲಾರರು. ಇವು ದೇವ ಮಾರ್ಗಗಳು. ನರರಿಗಿಲ್ಲಿ ಪ್ರವೇಶವಿಲ್ಲ! ಎಂಬುದನ್ನು ಕೇಳಿ ಖಿನ್ನನಾಗಿ 'ಅಪುತ್ರಸ್ಯಗತಿರ್ನಾಸ್ತಿ' ಎಂಬ ಆರ್ಯೋಕ್ತಿಯಂತೆ ತನಗೆ ಉತ್ತಮ ಗತಿಗಳಿಲ್ಲವಲ್ಲ ಎಂದು ಚಿಂತಿಸುತ್ತಿರಲು. ಆ ಮುನಿಗಳು ತಮ್ಮ ದಿವ್ಯದೃಷ್ಟಿಯಿಂದನಾಗತವನ್ನು ತಿಳಿದು ಆತನ್ನು ಸಂತೈಸಿ. ನೀನಪುತ್ರಕನಲ್ಲ. ನಿನಗೆ ದೈವಾಧಿಷ್ಠಿತವಾದ ಸಂತಾನವು ಧರ್ಮಾನಿಲ ಶಕ್ರಾಶ್ವಿನಿಗಳ ವರದಿಂದಾಗುತ್ತದೆ, ಸಂತಾನಾರ್ಥವಾಗಿ ಯತ್ನ ಮಾಡುವವನಾಗು ಎಂದು ಹೇಳುವರು. ಅವರ ಅಭಿಮತದಂತೆ ಕುಂತಿ, ಮಾದ್ರಿಯರನ್ನು ಕರೆದು ಶಾಪನಿಮಿತ್ತವಾಗಿ ತನಗೆ ಔರಸನಿಲ್ಲದುದನ್ನು ನೆನೆದು, ಪಿತೃಋಣ ತೀರಲು ಪುತ್ರವಂತನಾಗವುದು ಅವಶ್ಯವೆಂದು ತಿಳಿಸಿ, ಅವರನ್ನೊಡಂಬಡಿಸಿ, ಕ್ಷೇತ್ರಜರಾದ ಮಕ್ಕಳನ್ನು ಪಡೆಯಿರೆಂದು ಹೇಳುತ್ತಾನೆ. ಆಗ ಕುಂತಿ ತಾನು ಪೂರ್ವದಲ್ಲಿ ದೂರ್ವಾಸ ಮುನಿಯಿಂದ ಮಂತ್ರೋಪದೇಶವನ್ನು ಪಡೆದುದಾಗಿ ತಿಳಿಸಿ, ಪತಿಯಾಜ್ಞಾನುವರ್ತಿನಿಯಾಗಿ ತಾನೂ ಮಾದ್ರಿಯೂ ಪುತ್ರವತಿಯರಾಗುತ್ತಾರೆ.

ಈ ಕಥೆ ಎಲ್ಲ ಮೂಲದಲ್ಲಿದ್ದಂತೆಯೆ ನನ್ನಯ ಭಟ್ಟಿ ಇಳಿಸಿದ್ದಾನೆ. ಆದರೆ ಪಂಪ ಇವೆಲ್ಲವನ್ನೂ ಕೈ ಬಿಟ್ಟು, ಮೊಟಕು ಮಾಡಿ. "ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ನೂರ್ವರ್ ಮಕ್ಕಳಂ ಪಡೆವಂತು ಪರಾಶರ ಮುನೀಂದ್ರನೊಳ್ ಬರಂಬಡೆದವಳೆಂಬುದಂ ಕುಂತಿ ಕೇಳ್ದು ತಾನುಂ ಪುತ್ರಾರ್ಥಿ[ನಿ]ಯಾಗಲ್ ಬಗೆದು"[13] ಎಂದು ಕಥೆಯನ್ನು ಮುಂದುವರಿಸಿದ್ದಾನೆ. ಪಂಪನ ಜೈನದೃಷ್ಟಿಗೆ "ಅಪುತ್ರಸ್ಯಗತಿರ್ನಾಸ್ತಿ" ಮುಖ್ಯವಲ್ಲ: ಕುಂತಿಯಲ್ಲಿನ ಮಾತ್ಸರ್ಯದ ಬಯಕೆಯೆ ಮುಖ್ಯ. ಇಲ್ಲಿ ಕವಿ ಓರಗಿತ್ತಿಯರ ಮನಸ್ತತ್ವವನ್ನು ಬಲ್ಲವನಾಗಿ, ಸ್ತ್ರೀ ಮಾತ್ಸರ್ಯ ಅತ್ಯಾಸೆಗಳು ಅವರಲ್ಲಿ ಹೇಗೆ ಮನೆ ಮಾಡಿರುತ್ತವೆಂಬುದನ್ನು ನಿರೂಪಿಸಿದ್ದಾನೆ. ಕುಂತಿಗೆ ಗೊತ್ತು ತನ್ನ ಪತಿಗಾದ ಶಾಪದ ಕಥೆ: ಅದಕ್ಕಾಗಿಯೇ ತಾನೂ ಗಂಡನನ್ನನುಸರಿಸಿ ಕಾಡಿನಲ್ಲಿ ತಪೋನಿರತಳಾದುದು ಜೀವಿತ ಶೇಷವನ್ನು ಶಾಂತ

13. ಪಂಪ : ಪಂಪಭಾರತಂ (1935). 1-116 ರತರುಪಾಯದ ವಚನ. ಪುಟ 29.

ಚಿತ್ತದಿಂದ ಕಳೆಯುಲೆಳಸಿ ತನಗಿಂತ ಕಿರಿಯಳಾದ ಮಾದ್ರಿಯಲ್ಲಿರಬೇಕಾಗಿತ್ತು ಮಕ್ಕಳನ್ನು ಪಡೆವ ಬಯಕೆ. ಆದರೆ ಅದಾವುದೂ ಆಕೆಯಲ್ಲಿ ಸದ್ಯಕ್ಕೆ ಗೋಚರಿಸದು. ಪಂಪನಿಗೆ ಮುಖ್ಯವಾಗಿ ಕಥೆ ಮುಂದುವರಿಸಿಕೊಂಡು ಹೋಗಬೇಕಾಗಿತ್ತು. ಆದುದರಿಂದ ಮೂಲದಲ್ಲಿನ ಅಷ್ಟುದ್ದದ ಸನ್ನಿವೇಶವನ್ನು ಕೈ ಬಿಟ್ಟು ತನ್ನದೇ ಆದ ವಿಚಿತ್ರ ಕುಂಚದಿಂದ ಬಣ್ಣ ಬಳಿದಿದ್ದಾನೆ. ಹೊಸರೂಪು ಕೊಡಲೆತ್ನಿಸಿದ್ದಾನೆ. ಹೀಗೆ ಮಾಡುವಾಗ ಪಂಪ ಸ್ವಲ್ಪ ತಪ್ಪಿದ್ದಾನೆ ಎನ್ನಬಹುದು. ಮೂಲದಲ್ಲಿ ಹೀಗಿದೆ :

ತೋಷಯಾ ಮಾಸ ಗಾಂಧಾರೀ ವ್ಯಾಸಸ್ತಸ್ಯೈ ವರಂ ದದೌ ॥7॥
ಸಾವವ್ರೇ ಸದೃಶಃ ಭರ್ತುಃ ಪುತ್ರಾಣಾಂ ಶತಮಾತ್ಮನಃ ॥
(ಆದಿ (ಸಂಭವ) ಪರ್ವ, ಅಧ್ಯಾಯ 107, ಪುಟ 476)[14]

"ಮುಂದಜ ಧೃತರಾಷ್ಟ್ರ ವಲನನ್ ಗಾಂಧಾರಿ ಕೃಷ್ಣದ್ವೈಪಾಯನುವರಂಬುನ[15] ಗರ್ಭಂಬು ದಾಲ್ಚಿ" ಎಂದು ವ್ಯಾಸರ ಮಾತನ್ನೇ ನನ್ನಯನೂ ಹೇಳಿದ್ದಾನೆ. ಆದರೆ ಪಂಪನಲ್ಲಿ ವ್ಯಾಸನಿಲ್ಲ. "ಗಾಂಧಾರಿ ನೂರ್ವರ್ ಮಕ್ಕಳಂ ಪಡೆವಂತು **ಪರಾಶರ ಮುನೀಂದ್ರನೊಳ್** ಬರಂಬಡೆದಳೆಂಬುದಂ ಕುಂತಿ ಕೇಳ್ದು" ಎಂದು ಪಂಪ ಹೇಳುತ್ತಾನೆ. ಸಂಸ್ಕೃತ ಮಹಾಭಾರತದಲ್ಲಿ ಗಾಂಧಾರಿ ತನಗೆ ನೂರು ಮಕ್ಕಳಾಗು ವಂತೆ ವ್ಯಾಸರಿಂದ ವರ ಪಡೆಯುತ್ತಾಳೆ. ಪಂಪನಲ್ಲಾದರೋ **ಪರಾಶರ**ನಿಂದ ವರ ಪಡೆಯುತ್ತಾಳೆ. ಪರಾಶರ ವ್ಯಾಸನ ತಂದೆ ಎಂಬುದನ್ನಿಲ್ಲಿ ಗಮನಿಸಬೇಕಾದ ವಿಷಯ. ಮೂಲ ಭಾರತದಲ್ಲಿಲ್ಲದುದನ್ನು ಹೇಳಿದ್ದಾನೆ ಪಂಪ. ನ್ಯಾಯವಾಗಿ ನೋಡಿದರೆ ಇಲ್ಲಿ "ಪಾರಾಶರ ಮುನೀಂದ್ರನೊಳ್" ಎಂದಿರಬೇಕು. ಅಚ್ಚಿನ ದೋಷವೇನೋ ಎಂದರೆ ಅದೂ ಅಲ್ಲ. ಪಾಠಾಂತರವೇನಾದರೂ ಇದೆಯೋ ಎಂದರೆ ಅದೂ ಇಲ್ಲ. ಎಂದ ಮೇಲೆ ಇಲ್ಲಿ ಕಾಣಿಸಲಾದ ಪಾಠ ಸರಿಯಾದ ಪಾಠವೇ ಇರಬೇಕು ಎಂದು ಒಪ್ಪುವುದಾದರೆ, ಪಂಪನಲ್ಲಿ ಕಂಡು ಬರುವ "ಮುಂಪರಿನ" ಪಟ್ಟಿಯಲ್ಲಿ "ಪಾರಾಶರ"ಕ್ಕೆ "ಪರಾಶರ" ಎಂದು ಬರೆದುದನ್ನು ಸೇರಿಸಬೇಕಾಗುತ್ತದೆ. ಒಂದು ವೇಳೆ ಧರ್ಮ ಕರ್ಮ ಸಂಯೋಗದಿಂದ "ಬರೆಪಕಾರರ ಕೈಗಳ ಕೇಡಿಸಿಂದಾಗಿ" ಹೀಗೆ ದೀರ್ಘಕ್ಕೆ ಪ್ರತಿಯಾಗಿ ಹ್ರಸ್ವ ಬಂದಿದ್ದರೆ ಅದು ಪ್ರತಿಕಾರರ ದೋಷವಾದೀತೇ ಹೊರತು, ಪಂಪನ ನ್ಯೂನತೆಯಲ್ಲ. ಹಾಗೆಂದು ಗಟ್ಟಿಯಾಗಿ ಹೇಳಲೂ ಬಾರದು; ಏಕೆಂದರೆ ಅಚ್ಚಾದ ಪ್ರತಿಗೆ ಸೆರವಾದ ಪ್ರತಿಗಳಲ್ಲಿ ಅಂಥ ಅನುಮಾನಕ್ಕಾಸ್ಪದವೇ ಇಲ್ಲವಾಗಿದೆ.

ಮತ್ತೆ ಮೊದಲಿಗೆ ಬಂದರೆ, ಪಂಪನ ಸಂಗ್ರಹ ಕೌಶಲವನ್ನು ಕಾಣಬಹುದು. ಧರ್ಮ, ಭೀಮ, ನಕುಲ, ಸಹದೇವಾದಿಗಳ ಜನನವನ್ನು ಸಂಗ್ರಹವಾಗಿ ಹೇಳಿ-

14. Ed. Sukthankar, V. S. Mahabharta, (1931).
15. ನನ್ನಯ : ಆಂಧ್ರ ಮಹಾಭಾರತಮು. (1970), ಆ. 5-ಪ 98, ಪುಟ 197.

ದ್ದಾನೆ. ಅರ್ಜುನ ಕಥಾನಾಯಕನಾದುದರಿಂದ ಆತನ ಜನನವನ್ನು ಲಂಬಿಸಿದ್ದಾನೆ. ಅದರೊಂದಿಗೆ ಅರಿಕೇಸರಿಯ ಕಥೆಯನ್ನೇ ಕೋದಿದ್ದಾನೆ, ಪಾಂಡು ಕುಂತಿಯರಿಬ್ಬರೂ ಒಂದು ವರ್ಷ ನೋಂಪಿ ಮಾಡಿ ಇಂದ್ರನನ್ನು ಮೆಚ್ಚಿಸಿ ಅರ್ಜುನನನ್ನು ಪಡೆಯು ತ್ತಾರೆ. ಕುಂತಿಯ ಮಕ್ಕಳ ಜನನದ ಕಥೆ ತುಸುದೊಡ್ಡದಾಗಿದೆ. ಅದರಲ್ಲಿಯೂ ಅರ್ಜುನನ ಜನನ ಅತಿಶಯೋಕ್ತಿಗಳಿಂದ ತುಂಬಿಹೋಗಿದೆ. ಮಾದ್ರಿಯ ಮಕ್ಕಳ ಜನನದ ಕಥೆಯಾದರೂ ಒಂದೇ ಕಂದಕ್ಕಿಳಿದ ಯಮಳ ಕಂದರದಾಗಿದೆ. ಶತಶೃಂಗದ ಮುನಿಗಳಿಂದ ಈ ಮಕ್ಕಳಿಗೆ ಜಾತ ಕರ್ಮಾದಿಗಳನ್ನು ಮಾಡಿಸಿ ಪಾಂಡುವು ಇವರ ಆಟ ಪಾಟಗಳಲ್ಲೆ ಕಾಲ ಕಳೆಯುತ್ತಿರುತ್ತಾನೆ. ತನ್ನನ್ನು ತಾನು ಧನ್ಯನೆಂದು ಕೊಂಡಿರುತ್ತಾನೆ. ಈ ಸಂತೋಷಾತಿಶಯದಲ್ಲೆ ಮುನಿಶಾಪದ ಮರವೆಯಾಗುತ್ತದೆ. ಇಂತಿರುವಾಗಲೆ ಮುನ್ಯಾಶ್ರಮದಲ್ಲಿ ವಸಂತವು ಅಪೂರ್ವ ಶೋಭೆಯಿಂದ ಆಗಮಿಸುತ್ತದೆ. ಪಾಂಡುವಿಗೆ ಮೃತ್ಯುವಾಗಿ ಪರಿಣಮಿಸುತ್ತದೆ. ಪಂಪ ವಸಂತದ ವರ್ಣನೆ ವಿಶೇಷವಾಗಿ ಮಾಡಿದ್ದಾನೆ. ಮೂಲದಲ್ಲಿ ವಸಂತದ ವರ್ಣನೆ ನಾಲ್ಕೆಂಟು ಸಾಲುಗಳಲ್ಲಿ ಬಂದಿದ್ದರೆ, ನನ್ನಯನಲ್ಲಿ ಎರಡು ಲಯಗ್ರಾಹಿ ವೃತ್ತಗಳಲ್ಲಿ (ಆಂ. ಭಾ. ಆದಿ. ಪ., ಆ 5–138, 139, ಪುಟ 205) ಮುಗಿದಿದೆ. ಸಂಗ್ರಹ ಕುಶಲನಾದ ಪಂಪನಿಗೆ ಮಾವು ಮಲ್ಲಿಗೆಗಳೆಂದರೆ ಬಲು ಪ್ರೀತಿ. ಅವನಿಗೆ ತನ್ನ ಬನವಾಸಿಯ ನೆನಪಾಗಿರಬೇಕು. ಈ ಸಂದರ್ಭದಲ್ಲಿ ಆದುದರಿಂದ ವಸಂತಾಗಮನವನ್ನು ನಾಲ್ಕು ವೃತ್ತ, ಒಂದು ಗದ್ಯದಲ್ಲಿ ಹೇಳಿ ತೃಪ್ತಿ ಪಟ್ಟಿದ್ದಾನೆ. ಬಿರಯಿಯ ಮಿಮ್ಮಿವಾಗಿ ಬಂದಿದೆ ಇಲ್ಲಿನ ವಸಂತ.

ಇಂಥ ವಸಂತದಲ್ಲೊಮ್ಮೆ ಮಾದ್ರಿ "ತಾಂ ಗರ್ವವ್ಯಾಲೆಯುಂ ಕ್ರೀಡಾನು ಶೀಲೆಯುಂ ಅಪ್ಪುದರಿಂ ವನಕ್ರೀಡಾ ನಿಮಿತ್ತದಿಂ ಪೋಗಿ" ಕಾಡಿನಲ್ಲಿ ತಿರುಗಿ ಮನಕ್ಕೆ ಬಂದ ಹೂಗಳನ್ನಳ್ತಿಯಿಂದಾಯ್ದು ಕೊಯ್ದು ಅಂಬುಜ ಸೂತ್ರದಿಂದವೆಲ್ಲ ವನ್ನು ಮುಗುಳ್ಸರಿಗೆ ತೋಳ್ಬಳೆ, ಕಂಕಣವಾರ (ಬಳೆಗಳಗುಂಪು) ಮಾಡಿ ತೊಟ್ಟು, ಮದನನ ತೊಟ್ಟ ಪೂಗಣೆ ಗೆಣೆಯಾಗಿದ್ದಳೆಂದು ಪಂಪ ಹೇಳುತ್ತಾನೆ. ನನ್ನಯ ನಲ್ಲಾದರೊ ಸರ್ವಭೂತ ಸಮ್ಮೋಹನವಾದ ವಸಂತ ಸಮಯದಲ್ಲಿ ಪಾಂಡುರಾಜ ಮದನ ಸಮ್ಮೋಹನ ಮಾರ್ಗಣ ಬಂದೀಕೃತ ಮಾನಸನಾಗಿ ಮದ್ರರಾಜ ಸುತೆಯ ಮನೋಹರಾಕೃತಿಯಲ್ಲಿ ಮನಸು ನಿಲ್ಲಿಸಿದವನಾಗಿರಲು, ಒಂದು ದಿವಸ ಕುಂತೀದೇವಿ ಬ್ರಾಹ್ಮಣರ ಸಂತರ್ಪಣೆಯಲ್ಲಿ ಮಾದ್ರೀ ಶಿಕ್ಷಣೆಯನ್ನಲಕ್ಷಿಸಿರಲು. ಮಾದ್ರಿ ಕಾಡಿಗೆ ತೆರಳಿ ಪುಷ್ಪಗಳನ್ನು ತಿರಿದು, ದಂಡೆ ಮಾಡಿ. ಅಂಗಾಂಗಗಳಲ್ಲಿ ಅಲಂಕರಿಸಿಕೊಂಡಿರಲು ಅಪೂರ್ವ ಶೃಂಗಾರ ವಿಲಾಸದಿಂ ಮೆರವ ಮಾದ್ರಿಯ ನಂಭೋರುಹ ನೇತ್ರೆಯುಂ ಕಂಡು ಕುರುಪುಂಗವ ನಂಗಜರಾಗ ಮತ್ತನಾದವನೆಂದು ಬರುತ್ತದೆ.

ಇಲ್ಲಿ ಪಂಪ–ನನ್ನಯರು ಮಾದ್ರಿಯ ಅಪೂರ್ವ ಶೃಂಗಾರವನ್ನು ಬಣ್ಣಿಸಿದ್ದಾರೆ. ಪಂಪನು ಆಕೆಯ ಬರವನ್ನು "ಸೊರ್ಕಿದಂಗಜ ಮತಂಗಜ"ಕ್ಕೆ ಹೋಲಿಸಿದ್ದಾನೆ. ಅಲ್ಲದೆ ಕಾಂತಾರದಲ್ಲಾ ಕಾಂತೆಯ ತಿರುಗಾಟವನ್ನು ತುಂಬ ಸೊಗಸಾಗಿ ಬಣ್ಣಿಸಿದ್ದಾನೆ. ಈ ಸನ್ನಿವೇಶ ಅತ್ಯಂತ ರಮ್ಯವಾಗಿದೆ. ಇಲ್ಲಿ ಬಂದ ಚಂಪಕ ಮಾಲೆ ರಮಣೀಯವೆನಿಸಿದೆ.

ಮಿಳಿರ್ವಕುರುಳ್ಗಳ್ ತೊಡರ್ದು ದೇಸಿಯನಾವಗಮೊವ ಚೆನ್ನ ಪೂ
ಗಳನವನೊಯ್ಯನೋಸರಿಸುತಂ, ವದನಾಬ್ಜದ ಕಂಪನಾಳ್ದುಣಲ್
ಬಳಸುಮ ತುಂಬಿಯಂ ಪಿಡಿವ ನೆಯ್ದಿಲೊಳೊಯ್ಯನೆ ಸೋವುತುಂ
ಬೆಡಂ
ಗೊಳಕೊಳೆ ಸೊರ್ಕಿದಂಗಜ ಮತಂಗಜದಂತಿಕೆ ಬರ್ಪ ಮಾದ್ರಿಯಂ"[16]

"ತಾಪಸಾಶ್ರಮದಿಂ ಪೊಱಮಟ್ಟಂತೆ ಬನಮಂ ತೊಳಲ್ವ ಪಾಂಡುರಾಜಂ ಕಂಡು" ಕಾಮ ಮೋಹಿತನಾದನಂತೆ. ಈ ಬಗೆಯ ಸೊಗಸು ನನ್ನ ಪಾರ್ಯನಲ್ಲಿಲ್ಲ. ಆದರೆ ನನ್ನಯನಲ್ಲಿ ಬಂದಿರುವ "ಒಕ್ಕನಾಡು ಕುಂತಿದೇವಿ ಬ್ರಾಹ್ಮಣ ಭೋಜನಂಬು ಸೇಯಿಂಚು ಚುಂಡಿ ಮಾದ್ರೀ ರಕ್ಷಣಂಬುನಂ ದೇಮಱಿಯುನ್ನ ಯವಸರಂಬುನ"[17] ಎಂಬ ವಿಷಯ ವ್ಯಾಸರ ಮಹಾಭಾರತದ ಮೂಲದಲ್ಲಿ ಬಾರದೆ ಅಡಿಟಿಪ್ಪಣಿಯಲ್ಲಿ ಪಾಠಾಂತರವಾಗಿ

"ರಕ್ಷಣೇ ವಿಸ್ಮೃತಾ ಕುಂತೀ ವ್ಯಗ್ರಾ ಬ್ರಾಹ್ಮಣ ಭೋಜನೇ
ಪುರೋಹಿತೇನ ಸಹಸಾ ಬ್ರಾಹ್ಮಣಾನ್ಪರ್ಯ ವೇಷಯತ್
ತಸ್ಮಿನ್ ಶಾಲೇ ಸಮಾಹೂಯ ಮಾದ್ರೀಂ ಮದನಮೋಹಿತಃ"[18]
(ಆದಿ (ಸಂಭವ) ಪರ್ವ, ಅಧ್ಯಾಯ 116)

ಎಂದು ಬಂದಿದೆ. ಪಂಪನಲ್ಲಿ ಈ ಮಾತೇ ಇಲ್ಲ.

ಅಂತು ಕುಂತಿ ಮೈಮರೆತ ಹೊತ್ತಿನಲ್ಲಿಯೆ ಪಾಂಡು ಮಾದ್ರಿಯ ರೂಪಿಗೆ ಮನಸೋತು ಕಿಂದಮ ಮುನಿಯ ಶಾಪವನ್ನೂ ಮರೆತು, ಮಾದ್ರಿ ಬೇಡ ಬೇಡ ವೆನ್ನುತ್ತಿದ್ದರೂ ಲೆಕ್ಕಿಸದೆ, ಅವಳನ್ನು ಬಲಾತ್ಕಾರದಿಂದಪ್ಪಿ ವಿಗತ ಜೀವನಾಗುತ್ತಾನೆಂದು ನನ್ನಯ ಹೇಳುತ್ತಾನೆ. "ಆ ವಿಭು ತನ್ನ ಶಾಪಮಂ ಬಗೆಯದೆ ಮಿಮ್ಮಿ ದೇವತೆಯುನಪ್ಪಿ ಱುಳುರ್ಕೆಯಿನಪ್ಪುವಂತೆವೊಲ್" ಮಾದ್ರಿಯನ್ನು ವಿಷಮ

16. ಪಂಪಭಾರತಂ, (1935) ಆ. 2. ಪದ್ಯ 17, ಪುಟ 41.
17. ಆಂಧ್ರ ಮ. ಭಾ. (ಆದಿ. ಪ) 1970, ಪಂ. ಆ. ವಚನ 140, ಪುಟ 134.
18. Ed. Sukthankar V. S. Mahabharata, (1931), page 518.

ವಿಷವಲ್ಲಿಯನ್ನಪ್ಪುವಂತೆ ಅಪ್ಪಿದನಂತೆ; ಹಾಗೆ ಅಪ್ಪಿ ಅವಳ ತೋಳ ತೆಕ್ಕೆಯಲ್ಲಿ ಗತಪ್ರಾಣನಾಗುತ್ತಾನೆಂದು ಪಂಪನ ಹೇಳಿಕೆ. ಇಲ್ಲಿ ಬಂದ ಮಿಮ್ಮಿದೇವತೆ, ವಿಷವು ವಿಷವಲ್ಲಿಗಳು ತುಂಬ ಸಮಯೋಚಿತವಾಗಿವೆ; ಸನ್ನಿವೇಶಕ್ಕೊಂದು ಕಳೆ ತಂದಿವೆ.

ಅಂತು ತನ್ನ ತೋಳುಗಳಲ್ಲಿ "ಮಱಸೊಂದಿದಂದದೊಳೆ ಜೋಲ್ದ ನಿಜೇಶನನ್ ಆ ಲಲಿತಾಂಗಿ" ಕಂಡು "ವನದೇವತೆಗಳ್ಗಲ್ಲಂ ಕರುಣಮಾಗೆ" ರೋದಿಸುತ್ತಾಳೆ. ಈ ಮಾದ್ರಿಯ ಆಕ್ರಂದನ ಧ್ವನಿಯನ್ನು ಕೇಳಿದ ಕುಂತಿ "ಭೂಪತಿಗೇನಾದುದೊ. ಬಿದಿಯೆಕೆಟ್ಟೆನ್, ಅಮಿದೆನ್" ಎನ್ನುತ್ತಾ ಅಳುವ ಮಕ್ಕಳೊಡನೆ ಆ ತಾಣಕ್ಕೆ ಏಳು ಬೀಳುಗಳನ್ನೂ ಲೆಕ್ಕಿಸದೆ ಓಡಿ ಬರುತ್ತಾಳೆ: ಬಂದು ನಲ್ಲನ ಕಳೇವರವನ್ನು ತಳ್ಕೈಸಿಕೊಂಡು ತನ್ನ ಸಾವನ್ನು ನಿಶ್ಚೈಸಿದ್ದ ಮಾದ್ರಿಯನ್ನು ಕಂಡು ಕುಂತಿ ವಿಶೇಷವಾಗಿ ರೋಧಿಸುತ್ತಾಳೆ. ತಾನೂ ರಾಜನೊಡನೆ ಬರುವುದಾಗಿ ನುಡಿದು ಮಾದ್ರಿಗೆ ಮಕ್ಕಳ ರಕ್ಷಣೆ ವಹಿಸಿಕೊಳ್ಳುವಂತೆ ಹೇಳಿ, ಪತಿಯ ಶರೀರವನ್ನು ತನಗೊಪ್ಪಿಸಲು ಕೇಳಿ ಕೊಳ್ಳುತ್ತಾಳೆ. ಆದರೆ ಮಾದ್ರಿ ಅವಕ್ಕೊಪ್ಪದೆ.

ಎನಗಿಂದಿನೊಂದು ಸೂಱುಮ
ನಿನಿಯಂ ದಯೆಗೆಯ್ದುನೆನ್ನ ಸೂೞಂ ನಿನಗಾ
ನೆನಿತಾದೊಡ ಮಿಾವೆನೆ ಮ
ತ್ತನಯರ್ ಕೆಯ್ಯೆಡೆ ಪಲುಂಬದಿರ್ ಪೆಱಪೆಱವಂ"[19]

ಎಂದು ನುಡಿದು ತಪೋವನದ ಜನವೂ, ವನದೇವತಾ ಜನವು ತನ್ನ ಸಾಹಸವನ್ನು ಹೊಗಳುತ್ತಿರಲು ಮಾದ್ರಿ ಪಾಂಡುರಾಜನೊಡನೆ ಚಿತೆಯೇರಿ "ಕುಲದೊಳಂ ಚಲದೊಳಂ ಆವ ಕಂದುಂ ಕುಂದುಂ ಇಲ್ಲದೆ ತನ್ನೊರೆಗಂ ದೊರೆಗಂ ಆರುಂ ಇಲ್ಲ" ಎನಿಸಿಕೊಳ್ಳುತ್ತಾಳೆ.

ಇಲ್ಲಿ ಪಂಪ ವ್ಯಾಸರ ಚಿತ್ರಕ್ಕೆ ಭಿನ್ನವಾದ ರೀತಿಯಲ್ಲಿ ಮಾದ್ರಿಯ ಮನಸ್ತತ್ವವನ್ನು ಚಿತ್ರಿಸಿದ್ದಾನೆ. ವ್ಯಾಸರ ಮಾದ್ರಿ

ಅಹಮೇನಾನು ಯಾಸ್ಯಾಮಿ ಭರ್ತಾರಮಪಲಾಯಿನಮ್
ನಹಿ ತೃಪ್ತಾಸ್ಮಿ ಕಾಮಾನಾಂ ತಜ್ಜ್ಯೇಷ್ಠಾ ಅನುಮನ್ಯತಾಮ್ ॥25॥

ಮಾಂ ಚಾಭಿಗಮ್ಯ ಕ್ಷೀಣೋಯಂ ಕಾಮಾದ್ಭರತ ಸತ್ತಮ।
ತಮು ಚ್ಛಿಂದ್ಯಾಮಸ್ಯ ಕಾಮಂ ಕಥಂ ನು ಯಮಸಾದನೇ ॥26॥

19. ಪಂ. ಭಾ. (1935) ಆ. 2-26. ಪು. 43.

ನ ಚಾಪ್ಯಹಂ ವರ್ತಯಂತೀ ನಿರ್ವಿಶೇಷಂ ಸುತೇಷು ತೇ
ವೃತ್ತಿ ಮಾರ್ಯೇ ಚರಿಷ್ಯಾಮಿ ಸ್ಪೃಶೇದೇ ನ ಸ್ತಥಾ
ಹಿ ಮಾಮ್ ॥27॥

ತಸ್ಮಾನ್ಮೇ ಸುತಯೋಃ ಕುಂತಿ ವರ್ತಿತವ್ಯಂ ಸ್ವಪುತ್ರವತ್
ಮಾಂ ಹಿ ಕಾಮ್ಯಮಾ ನೋಽಯಂ ರಾಜಾ ಪ್ರೇತವಶಂ ಗತಃ ॥28॥

ರಾಜ್ಞಃ ಶರೀರೇಣ ಸಹ ಮಮಾಪೀದಂ ಕಲೇವರಂ
ಸಗ್ಧವ್ಯಂ ಸುಪ್ರತಿಚ್ಛನ್ನ ಮೇತದಾರ್ಯೇ ಪ್ರಿಯಂ ಕುರು ॥29॥

ದಾರಕೇಷ್ವಪ್ರಮತ್ತಾ ಚ ಭವೇಥಾಶ್ಚ ಹಿತಾ ಮಮ
ಅತೋಽನ್ಯನ್ನ ಪ್ರಪಶ್ಯಾಮಿ ಸಂದೇಷ್ಟವ್ಯಂ ಹಿ ಕಿಂಚನ ॥30॥[20]

ಎಂದು ನುಡಿಯುತ್ತಾಳೆ. ಈ ಚಿತ್ರಣದಲ್ಲಿ ಸ್ತ್ರೀ ಸಹಜವಾದ ಕಾಮಾಪಕ್ತಿ ಕಂಡಬರುತ್ತದೆ. ಎಳೆಯಳಾದ ಮಾದ್ರಿಯ ಆಶೆ ಆಕಾಂಕ್ಷೆಗಳನ್ನು ಪಂಪನು ಸೊಗಸಾಗಿ ಚಿತ್ರಿಸಿದ್ದಾನೆ. "ನಿನಗಾನೆನಿ ತಾದೊಡಮ್ ಈವೆನೆ ಎನ್ನಸೂಟಂ" ಎಂದು ಕುಂತಿಗೆ ಹೇಳುವಲ್ಲಿ ಮಾದ್ರಿಯ ವ್ಯಕ್ತಿತ್ವ ಕಾಣಬಹುದು.

ಇದೇ ಸನ್ನಿವೇಶ ಸಂಸ್ಕೃತ ಮಹಾಭಾರತದಲ್ಲಿದ್ದಂತೆಯೆ ನನ್ನಯ ಭಟ್ಟಾರಕನಲ್ಲೂ ಬಂದಿದೆ. ಶಾಪಕ್ಕೆ ತಕ್ಕಂತೆ ಮಾದ್ರಿಯ ಸಹಗಮನವೂ ಉಚಿತವಾಗಿದೆ. ಕಿಂದಮಮುನಿ ಸಾಯುವಾಗ "ಮಮ್ಮುನ್ ಅನಪರಾಧುಲ ವಧಿಂಚಿತಿ ಗಾವುನ ನೀವುನುಂ ಪ್ರಿಯಾ ಸಂಗಮಂ ಬಯಿನ ಯಪ್ಪುಡ ಪಂಚತ್ವಂ ಬೊಂದೆಡು, ನೀ ಪ್ರಿಯಯು ನಿನ್ನನುಗಮಿಂಚು"[21] ಎಂದು ಪಾಂಡುರಾಜನಿಗೆ ಶಾಪವೀಯುತ್ತಾನೆ. ನಿರಪರಾಧಿಗಳಾದ ನಮ್ಮನ್ನು ಕೊಂದೆಯಾದುದರಿಂದ ನೀನು ಕೂಡ ಪ್ರಿಯಾ ಸಂಗವಾದಾಗ ಸಾಯುವೆ, ನಿನ್ನ ಪ್ರಿಯೆಯು ನಿನ್ನನನುಸರಿಸುವಳು ಎಂದು ನುಡಿದ ಮಾತು ಇಲ್ಲಿ ದಿಟವಾಗುತ್ತದೆ. ಕುಂತಿ ಮಕ್ಕಳನ್ನು ಕಂಡು, ಪತಿಯನ್ನು ತನಗೊಪ್ಪಿಸಲು ಮಾದ್ರಿಯನ್ನು ಬೇಡಿದಾಗ, ಮಾದ್ರಿ ವಿನಯ ಶೀಲಿಯಾಗಿ ಎರಡು ಮಾತು ಹೇಳುತ್ತಾಳೆ. ಇದು ನನ್ನ ಪಾರ್ಯನ ಕಲಾ ಕೌಶಲಕ್ಕೊಂದು ಮಾದರಿಯಾಗಿದೆ.

ಕುರುವಂಶ ವಿಸ್ತಾರ ಕುಲಧರ್ಮಯುಕ್ತಿ ಗೊಡುಕುಲಬಡಸಿ ಯಿಕ್ಕರು
ಕುಂಜರುನಕು ಗರಮು ಮನಃ ಪ್ರೀತಿಗಾವಿಂಚು ಪುಣ್ಯಗತಿಕಿ ಗಾರಣ

---

20. Ed : Sukthankar V. S. Mahabharatha (1931) Adiparva Adhyaya 116, page 520.
21. ಆಂಧ್ರ ಮಹಾಭಾರತಮು (ಆಧಿಪರ್ವಮು) 1970 ಆ. 5. ವಚನ ಮು 57. ಪುಟ 189.

ಮನ್ನೈ ಕಮಲಾಕ್ಷಿ ನೀವು ದಿರಮುಗಾ ನಿಪ್ಪಂಬು ದೀರ್ಚ್ಚಿತೇ ನಿಂದು ಧೃತಿ
ಬತಿಯಿಪ್ಪಂಬು ದೀರ್ಪನ ಕಾನ ಯರಿಗೆದ ಬತಿತ್ತೋಡ ನನ್ಯ ಲೋಕಂಬು
ನಂದ್ಯೈನ ಬ್ರೀತಿಸೇಯಗ ಗಾಂತುನನಿಯು ॥

"ಮಱಿಯು ಮೃಗಶಾಪ ಭಯಂ ಬೆಱಿಂಗಿಯು ನಿಪ್ಲೇಮಿಱಿನ ಯತಿಪ್ರಮತ್ತುರಾಲ ನೇ ನಿಂದುಂಡಿ ಪುತ್ರುಲ ರಕ್ಷಿಂಪನೇರ ನನ್ನು ವಾರಿಂಪವಲದು"[22] ಎಂದು ಮಾದ್ರಿ ಕುಂತಿಗೆ ನುಡಿಯುತ್ತಾಳೆ. "ಕುಲಧರ್ಮಾನುಸಾರವಾಗಿ ಕುರುವಂಶಾಭಿವೃದ್ಧಿಗೆಂದು ಮಕ್ಕಳನ್ನು ಪಡೆದು ಈ ಕುರುಭೂಪತಿಯಾದ ಪಾಂಡುವಿಗೆ ಮನಃಪ್ರೀತಿಯನ್ನುಂಟು ಮಾಡುವ ಪುಣ್ಯಗತಿಗೆ ಕಾರಣಳಾಗಿ ನೀನು ಪತಿಯ ಆಶೆಯನ್ನು ಪೂರೈಸಿದೆ. ನಾನು ಇಂದು ಆತನ ಬಯಕೆಯನ್ನು ತೀರಿಸಲಿಲ್ಲವಾದುದರಿಂದ ಆತನೊಡನೆಯೆ ಪರಲೋಕಕ್ಕೆ ಹೋಗಿ ಅಲ್ಲಿಯಾದರೂ ಆತನಿಗೆ ಪ್ರಿಯವನ್ನುಂಟು ಮಾಡುವೆ; ಅಲ್ಲದೆ ಮೃಗ ಶಾಪ ಭೀತಿಯನ್ನರಿತಿದ್ದರೂ ಹೀಗೆ ಮೈಮರೆತ್ತಿದ್ದ ಮರವೆಕಾರ್ತಿ; ನಾನಿಲ್ಲಿದ್ದು ಮಕ್ಕಳನ್ನೆಂತು ಕಾಪಾಡಬಲ್ಲೆ. ನನ್ನನ್ನು ನಿರೋಧಿಸದಿರು" ಎಂಬುದೇ ನನ್ನಯನಲ್ಲಿ ಬಂದ ಮಾದ್ರಿಯ ಮಾತಿನ ಸಾರೆ. ಇದು ಔಚಿತ್ಯ ಪೂರ್ಣವಾಗಿದೆ; ಹೃದ್ಯವಾಗಿದೆ; ತರ್ಕಬದ್ಧವೂ ಆಗಿದೆ. ಕೊನೆಯಲ್ಲಿ ಮಾದ್ರಿ ಕುಂತಿಯನ್ನು ಬೀಳ್ಕೊಂಡು, ಮುನಿ ಸಹಸ್ರಕ್ಕೆ ನಮಿಸಿ ಪತಿಯೊಡನೆ ಚಿತೆಯೇರಿ ಸತಿಯಾಗುತ್ತಾಳೆ. ಪಂಪನಲ್ಲಿ ಮಾದ್ರಿಯ ಸಾಹಸದ ಹೊಗಳಿಕೆ ಇದೆ. ನನ್ನಯನಲ್ಲಿ ಅದಿಲ್ಲ. ಈ ಹೊಗಳಿಕೆ, ಈ ತೆರನಾದ ಸತಿ ಹೋಗುವ ವೀರ ಸನ್ನಿವೇಶ ಜೈನ ಧರ್ಮದಲ್ಲಿದೆ. ಇದು ಪಂಪ ಕವಿಯ ಕಾಲದ ಸಮಕಾಲೀನ ಪ್ರಜ್ಞೆಗೆ ಪ್ರತೀಕವೆನ್ನಬಹುದು. ಅದರ ಪ್ರಭಾವವೇ ಇಲ್ಲಿ ಬಂದಿದೆ ಎನ್ನಲಡ್ಡಿಯಿಲ್ಲ.

ಇಲ್ಲಿಯವರೆಗೆ ಪಂಪ–ನನ್ನಯರಲ್ಲಿನ "ಪಾಂಡು-ಮಾದ್ರಿ" ಪ್ರಸಂಗವನ್ನು ವ್ಯಾಸರ ಹಿನ್ನೆಲೆಯಲ್ಲಿ ವಿವೇಚಿಸಿದ್ದಾಯಿತು. ನನ್ನಯನು ವ್ಯಾಸರ ಭಾರತವನ್ನು ಯಥಾವತ್ತಾಗಿ ಅನುಸರಿಸಿದ್ದಾನೆ; ಆದರೆ ಕೆಲವೆಡೆ ಸ್ವತಂತ್ರಿಸಿದ್ದಾನೆ. ಪಂಪನಂತೆ ಹಲವು ಕಡೆ ಒಂದು ಕಥೆಯನ್ನು ಒಂದು ಪದ್ಯದಲ್ಲಿ ಹಿಡಿದಿಡುವ ಸಂಗ್ರಹ ಕುಶಲತೆ ನನ್ನಯನಲ್ಲೂ ಇದೆ. ತನ್ನ ವೈದಿಕ ಧರ್ಮಶ್ರದ್ಧೆಗೆ ಕುಂದುಂಟಾಗದ ರೀತಿ ಪಾಂಡು-ಮಾದ್ರಿ ಪ್ರಸಂಗವನ್ನು ಚಿತ್ರಿಸಿದ್ದಾನೆ. ಪಂಪ ವ್ಯಾಸರ ಕತೆ ತೆಗೆದುಕೊಂಡಿದ್ದರೂ, ಕತೆಯ 'ಮೆಯ್ಗಿಡಲೀಯದೆ' ಅದನ್ನು ತನ್ನ ಪ್ರತಿಭಾ ಕುಂಚದಿಂದ ಚಿತ್ರಿಸಿದ್ದಾನೆ. ಇದೊಂದು ಹೊಸ ಚಿತ್ರವೋ ಏನೋ ಎನ್ನುವಷ್ಟರ ಮಟ್ಟಿಗೆ ಸುಂದರವಾಗಿ ನಿರೂಪಿಸಿದ್ದಾನೆ: ತನ್ನ ಸಂಗ್ರಹ ಕೌಶಲವನ್ನು ಇಲ್ಲಿ ಮೆರೆದಿದ್ದಾನೆ.

22. ಆಂಧ್ರ ಮಹಾಭಾರತಮು (ಆದಿಪರ್ವಮು) 1970. ಆ. 5. ಪದ್ಯ 145. ವಚನ 146. ಪುಟ 207.

"ಪಾಂಡು–ಮಾದ್ರಿ" ಪ್ರಸಂಗ, ಮೊದಲೆ ಸೂಚಿಸಿದಂತೆ ಮಾನವ ಜೀವನದ ಪ್ರತಿಚಿತ್ರಣದ ಸಂಕೇತವೆನಿಸಿದೆ. ಮಾನವ ಎಷ್ಟೇ ಬಲಶಾಲಿಯಾದರೂ, ವಿವೇಕ ವಂತನಾದರೂ, ವಿಧಿಯೊಡ್ಡಿದ ಬಲೆಯ ಮಿಗವಾಗದಿರನು, ಮುನಿಯ ಶಾಪ ಪಾಂಡು-ಮಾದ್ರಿಯರಿಗೆ ಮೃತ್ಯುಪಾಶವಾಗಿ ಪರಿಣಮಿಸುತ್ತದೆ. ಅಲ್ಲದೆ ಕಾಮ ವನ್ನಿದಿರಿಸಿ ನಿಂದವರು ಅತಿ ವಿರಳ; "ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂಮುಕೂಗವೆ ನರರಂ" ಎಂಬ ಜನ್ನನ ಮಾತಿಲ್ಲಿ ಸಾರ್ಥಕವಾಗುತ್ತದೆ. ಕಾಮ ವಿದೂರವೂ. ಪ್ರಶಾಂತವೂ ಆದ ಮುನ್ಯಾಶ್ರಮ ಪ್ರಾಂತದಲ್ಲಿ ಗುರುವಾಗಿ, ಬ್ರಹ್ಮಋಷಿ ಯಾಗಿ, ತಾಪಸೋತ್ತಮನಾಗಿದ್ದ ಪಾಂಡುವು ಕ್ಷಣಿಕವಾದ ಸುಖದಾಶೆಗೆ ಬಲಿಬಿದ್ದು ಮೃತ್ಯುವನ್ನಪ್ಪುವುದು, ಚೆಲುವೆಯಾದ ಮಾದ್ರಿ ಆತನನ್ನನುಗಮಿಸುವುದು, ತುಂಬ ಕರುಣಾಜನಕವಾಗಿದೆ. ಆದರೆ ಎಲ್ಲವೂ ಪ್ರಾರಬ್ಧ. ಅದನ್ನು ಮೀರಲು ಯಾರಿಂದಲೂ ಶಕ್ಯವಿಲ್ಲವೆಂಬುದನ್ನುದ್ಬೋಧಿಸುವುದೇ ಇದರ ಗುರಿ.

ಜೋಸೆಫ್ ಕಾನ್ರಾಡನ ಕಾದಂಬರಿ : "ವಿಕ್ಟರಿ"

● ಬಸವರಾಜ ನಾಯ್ಕರ

ಜೋಸೆಫ್ ಕಾನ್ರಾಡನು ಜಗತ್ತಿನ ಅತ್ಯಂತ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬನಾಗಿದ್ದಾನೆ. ಆತ ತನ್ನ ಇಪ್ಪತ್ತೊಂದನೆಯ ವಯಸ್ಸಿಗೆ ಆಂಗ್ಲ ಭಾಷೆಯ ಮೂಲಾಕ್ಷರಗಳನ್ನು ಕಲಿತು ನಂತರ ಆಂಗ್ಲಭಾಷೆಯಲ್ಲಿಯೆ ತನ್ನ ಸಾಹಿತ್ಯಕೃಷಿಗೈದು ಆಂಗ್ಲರನ್ನೇ ಮೀರಿಸಿದ ಪೋಲಂಡ ದೇಶದ ಕಾದಂಬರಿಕಾರ. ಆತನ Nostromo ಮತ್ತು Lord Jim ಮುಂತಾದ ಕಾದಂಬರಿಗಳು ಜಗತ್ಪ್ರಸಿದ್ಧವಾಗಿವೆ. ಹಲವಾರು ಕಾದಂಬರಿಗಳನ್ನು ಬರೆದ ಕಾನ್ರಾಡನ Victory (ವಿಜಯ) ಎಂಬ ಕಾದಂಬರಿಯನ್ನು ಇಲ್ಲಿ ಪರಿಚಯಿಸಲಾಗಿದೆ. ಈ ಕಾದಂಬರಿಯು ಉಳಿದ ಕಾದಂಬರಿಗಳಷ್ಟು ಪ್ರಸಿದ್ಧವಾಗಿರದಿದ್ದರೂ ಅದಕ್ಕೆ ತನ್ನದೆ ಆದ ಒಂದು ಸ್ಥಾನಮಾನವಿದ್ದೇಯಿದೆ. ಇದರಲ್ಲಿ ಚಿತ್ರಿತವಾದ ಕಥಾವಸ್ತು Nostromo ಕಾದಂಬರಿಯಲ್ಲಿ ಚಿತ್ರಿತವಾದ ಕಥಾವಸ್ತುವಿನ ವೈಶಾಲ್ಯವನ್ನಾಗಲಿ, ಅಥವಾ Lord Jim ಕಾದಂಬರಿಯಲ್ಲಿ ಚಿತ್ರಿತವಾದ ಕಥಾವಸ್ತುವಿನ ಭಾವನಾತೀವ್ರತೆಯನ್ನಾಗಲಿ ಹೊಂದಿರದಿದ್ದರೂ ಇದಕ್ಕೆ ಮಾನವೀಯ ಸಂಬಂಧವನ್ನು ಚಿತ್ರಿಸಿ ಅದರ ಮೂಲಕ ಜನರ ಹೃದಯವನ್ನು ತಟ್ಟುವ ಸಹಜತೆ ಮತ್ತು ಸ್ವಾಭಾವಿಕತೆಗಳಿವೆ ಎಂದು ಹೇಳಬಹುದು. ಎರಡು ಗಂಡುಗಳು ಒಂದು ಹೆಣ್ಣಿನ ಬೆನ್ನತ್ತಿರುವ ಸಾಮಾನ್ಯ ಕಥೆಯ ಮೂಲಕವೆ ಜೀವನದ ಮೂಲಭೂತ ಸಮಸ್ಯೆಗಳ ದರ್ಶನ ಮಾಡಿಸುವುದು ಈ ಕಾದಂಬರಿಯ ಮೂಲ ಗುರಿಯಾಗಿದೆ. ಈ ಕಾದಂಬರಿಯಲ್ಲಿ ಕಾನ್ರಾಡನು ಯಥಾಪ್ರಕಾರವಾಗಿ ತನ್ನ ಸಾಂಕೇತಿಕ ಮತ್ತು ಪತ್ತೇದಾರಿ ತಂತ್ರಗಳಿಂದಲೂ. ಕಾವ್ಯಮಯವೂ ಪಾರಿಭಾಷಿಕಗಳಿಂದ ಕೂಡಿದ ಭಾಷಾವೈಖರಿಯಿಂದಲೂ ಸರಳವೆನ್ನಿಸಬಹುದಾದ ಅನುಭವಕ್ಕೆ ಹೆಚ್ಚಿನ ಆಳವನ್ನೂ ಸಂಕೀರ್ಣತೆಯನ್ನೂ ತಂದುಕೊಡುತ್ತಾನೆ. ಇಂಥ ಮಹತ್ವದ ಕಾದಂಬರಿಯ ವಿಮರ್ಶೆಯನ್ನು ಮಾಡುವುದಕ್ಕಿಂತ ಮೊದಲು ಅದರ ಕಥಾ ಸಾರಾಂಶವನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ.

ಅಲೆಕ್ಸ್ ಹೆಸ್ಟ್‌ನು ಟ್ರಾಪಿಕಲ್ ಬೆಲ್ಟ ಕೋಲ್ ಕಂಪನಿಯ ನೌಕರದಾರನಾಗಿ ಸ್ಯಾಂಬೂರನ್ ನಡುಗಡ್ಡೆಗೆ ಬಂದಿದ್ದಾನೆ. ಆದರೆ ಆ ಸಂಸ್ಥೆ ದಿವಾಳಿಯೆದ್ದ ನಂತರ ಅದರಲ್ಲಿ ದುಡಿಯುತ್ತಿದ್ದ ನೌಕರರೆಲ್ಲ ಆ ನಡುಗಡ್ಡೆಯನ್ನು ಬಿಟ್ಟು ಹೊರಟು ಹೋದರು. ಆದರೂ ಸಹಿತ ಹೆಸ್ಟ್ ಆ ನಡುಗಡ್ಡೆಯ ಸೌಂದರ್ಯಕ್ಕೆ ಮನಸೋತು

ಅಲ್ಲಿಯೆ ಉಳಿದುಕೊಳ್ಳುತ್ತಾನೆ. ತಾನು ಅಲ್ಲಿ ಉಳಿದುಕೊಂಡ ಕಾರಣವನ್ನು ಅಲ್ಲಿಯ ಟೆಸ್ಮನ್ ಎಂಬ ವ್ಯಕ್ತಿಗೆ ಹೇಳಿದಾಗ ಆತ ಹೆಸ್ಟ್‌ನಿಗೆ ಸಾಧ್ಯವಾದ ಎಲ್ಲ ಸಹಾಯವನ್ನು ನೀಡುವೆನೆಂದು ಆಶ್ವಾಸನೆ ಕೊಡುತ್ತಾನೆ. ಹೆಸ್ಟ್‌ನಿಗೆ ನಿಜವಾದ 'ಸಂಗತಿ'ಗಳು ಅಥವಾ ಸತ್ಯವೆಂದರೆ ಬಹಳ ಪ್ರೀತಿ. ಆದರೂ ಸಹಿತ ಮ್ಯಾಕ್‌ನಾಬ್ ಎಂಬ ವ್ಯಕ್ತಿ ಆತನನ್ನು ಒಬ್ಬ ಆದರ್ಶವಾದಿ (utopist) ಎಂದು ಹೇಳುತ್ತಾನೆ. ಹೆಸ್ಟ್‌ನು ಮೈಕೈಯಿಂದ ದಷ್ಟಪುಷ್ಟನಾಗಿದ್ದರೂ ಆತ ಯಾರೊಡನೆಯೂ ಹೊಡೆದಾಡಲಿಕ್ಕೆ ಹೋಗುವುದಿಲ್ಲ.

ಒಂದು ದಿನ ಹೆಸ್ಟ್‌ನು ಮಾರಿಸನ್‌ನನ್ನು ಭೇಟಿಯಾಗುತ್ತಾನೆ. ಮಾರಿಸನ್‌ನು ತನ್ನ ಹಣವನ್ನೆಲ್ಲ ಕಳೆದುಕೊಂಡು ಕಂಗಾಲಾಗಿ ಓಡಾಡುತ್ತಿದ್ದಾನೆ. ಈಗ ಅವನಿಗೆ ಬೇರೆಯವರಿಂದ ಬರುವ ಹಣ ಕೇವಲ ಐದುಸಾವಿರ ಡಾಲರು ಮಾತ್ರ. ಹೀಗೆ ಕಂಗೆಟ್ಟ ಮಾರಿಸನ್‌ನು ದೇವರಲ್ಲಿ ನಿಜವಾದ ಪ್ರೀತಿಯಿರದಿದ್ದರೂ ಪ್ರಾರ್ಥಿಸುತ್ತಾನೆ. ಆತನ ಪ್ರಾರ್ಥನೆ ಮುಗಿದೊಡನೆಯೇ ಹೆಸ್ಟ್ ಭೇಟಿಯಾಗುವುದರಿಂದ ದೇವರೆ ತನ್ನ ಪ್ರಾರ್ಥನೆಯಿಂದ ಸುಪ್ರೀತಗೊಂಡು ಹೆಸ್ಟ್‌ನನ್ನು ಕಳಿಸಿದ್ದಾನೆಂದು ತಿಳಿಯುತ್ತಾನೆ. ಅವರಿಬ್ಬರ ನಡುವಿನ ಸ್ನೇಹ ದಿನದಿನಕ್ಕೆ ಹೆಚ್ಚಾಗುತ್ತದೆ. ಮಾರಿಸನ್ ತನ್ನ ಅಂತ ರಂಗವನ್ನು ಹೆಸ್ಟ್‌ನೆದುರಿಗೆ ಬಿಚ್ಚಿಡುತ್ತಾನೆ. ತನ್ನನ್ನು ಪೋರ್ತುಗೀಜರು ಮೋಸ ಗೊಳಿಸಿದ ಬಗೆಗೆ ಆತನಿಗೆ ಹೇಳುತ್ತಾನೆ. ಅವರಿಬ್ಬರ ಗಾಢವಾದ ಸ್ನೇಹವನ್ನು ಕಂಡು ಜನರು ಅವರನ್ನು ಸಂಶಯ ದೃಷ್ಟಿಯಿಂದ ನೋಡಲಾರಂಭಿಸುತ್ತಾರೆ. ಹೀಗಾಗಿ ಅಲ್ಲಿಯ ಹೋಟೆಲ್ಲಿನ ಮಾಲಿಕನಾದ ಶೊಂಬರ್ಗನು ಅವರಿಬ್ಬರನ್ನು 'ಜೇಡ ಮತ್ತು ನೊಣ' ವೆಂದು ಕರೆಯುತ್ತಿರುತ್ತಾನೆ. ದುಷ್ಟನಾದ ಶೊಂಬರ್ಗನು ಹೆಸ್ಟ್‌ನ ಚಾರಿತ್ರ್ಯವಧೆ ಮಾಡುವುದರಿಂದ ಜನರೆಲ್ಲ ಹೆಸ್ಟ್‌ನನ್ನು ತಮ್ಮ ವೈರಿಯೆಂದೆ ಪರಿಗಣಿಸುತ್ತಾರೆ. ಟ್ರಾಪಿಕಲ್ ಬೆಲ್ಟ್ ಕೋಲ್ ಕಂಪನಿ ದಿವಾಳಿದೆಗೆದ ನಂತರವೂ ಈ ಹೆಸ್ಟ್ ಆ ನಡುಗಡ್ಡೆಯನ್ನು ಯಾಕೆ ಬಿಟ್ಟು ಹೋಗಿಲ್ಲ ಎಂದು ಎಲ್ಲರೂ ಆಶ್ಚರ್ಯಪಡುತ್ತಾರೆ. ಹೆಸ್ಟ್‌ನು ಮಾರಿಸನ್‌ನ ಹಣವನ್ನೆಲ್ಲ ಎತ್ತಿಹಾಕಿದ್ದನೆಂದು ಶೊಂಬರ್ಗ ಅಲ್ಲಿ ಸುಳ್ಳು ಸುದ್ದಿ ಹಬ್ಬಿಸುತ್ತಾನೆ. ಅದರಂತೆ ಹೆಸ್ಟ್ ಒಬ್ಬ 'ಸನ್ಯಾಸಿ' ಎಂದೂ ವ್ಯಂಗ್ಯವಾಗಿ ಮಾತನಾಡುತ್ತಿರುತ್ತಾನೆ. ಆದರೆ ಡೇವಿಡ್‌ಸನ್‌ನು ಹೆಸ್ಟ್‌ನನ್ನು ಭೇಟಿಯಾದಾಗ ಅವನಿಗೆ ಹೆಸ್ಟ್‌ನು ಅತ್ಯಂತ ಒಳ್ಳೆಯ ಮನುಷ್ಯನೆಂದನಿಸುತ್ತದೆ. ಹೆಸ್ಟ್‌ನು ತನ್ನ ತಂದೆ ಒಬ್ಬ ತತ್ವಜ್ಞಾನಿಯಾಗಿದ್ದನೆಂದೂ ಹೇಳುತ್ತಾನೆ.

ಶೊಂಬರ್ಗನ ಹೋಟೆಲ್ಲಿನಲ್ಲಿ ಜೋನ್ಸ್, ರಿಕಾರ್ಡೋ ಮತ್ತು ಪೆಡ್ರೊ ಎಂಬ ಮೂರುಜನ ಅಪರಿಚಿತರು ಬಂದು ಇಳಿದುಕೊಂಡಿದ್ದಾರೆ. ಅವರೆಲ್ಲ ತಾವು ಮಾಡಿದ ದರೋಡೆಗಳೆಲ್ಲದರ ಬಗೆಗೆ ಬಢಾಯಿ ಕೊಚ್ಚುತ್ತಿರುತ್ತಾರೆ. ಒಂದು ದಿನ ಶೊಂಬರ್ಗನು ಅವರೊಂದಿಗೆ ಪಾನಗೋಷ್ಠಿಯಲ್ಲಿ ತೊಡಗಿದಾಗ ಅವರು ಇನ್ನೂ ಒಂದು ತಿಂಗಳು

ವರೆಗಾದರೂ ತನ್ನ ಹೋಟೆಲನ್ನು ಬಿಟ್ಟು ಹೋಗುವುದಿಲ್ಲವೆಂಬುದು ಅವನಿಗೆ ತಿಳಿದು ಬರುತ್ತದೆ. ಅಲ್ಲದೆ ಅವರೆಲ್ಲ ಆತನನ್ನು ಹೆದರಿಸುತ್ತಾರೆ. ಅದರಿಂದ ರೊಚ್ಚಿಗೆದ್ದ ಶೊಂಬರ್ಗನು ಅವರೊಂದಿಗೆ ಜಗಳವಾಡುತ್ತಾನೆ. ಆ ಮೂವರೂ ಶೊಂಬರ್ಗನಿಗೆ 'ನಿನಗೊಬ್ಬ ಹೆಂಡತಿ ಇದ್ದಾಳೆ' ಎಂದು ನೆನಪಿಸುತ್ತಾರೆ. ಅದನ್ನು ಕೇಳಿದ ಶೊಂಬರ್ಗ ಅವರಿಗೆ 'ನೀವು ನನ್ನ ಹೆಂಡತಿಯನ್ನು ದೋಚಿಕೊಂಡು ಹೋದರೂ ನಾನೇನು ನಿಮ್ಮ ಬೆನ್ನುಹತ್ತಿ ಬರುವುದಿಲ್ಲ' ವೆಂದು ಸಿಟ್ಟಿನ ಭರದಲ್ಲಿ ಹೇಳುತ್ತಾನೆ. ಅನಂತರ ಆಗಾಗ್ಗೆ ಶೊಂಬರ್ಗ ಬಿಲಿಯರ್ಡ್ಸ್– ಕೋಣೆಗೆ ಹೋಗಿ ಜೋನ್ಸ್ ಮತ್ತು ರಿಕಾರ್ಡೊ ಅವರ ಸಾಹಸದ ಕಥೆಗಳನ್ನು ಕೇಳುತ್ತಿರುತ್ತಾನೆ. ಹೀಗೆ ಅವರೆಲ್ಲ ವಿಚಾರ ವಿನಿಮಯ ಮಾಡುತ್ತಿರುವಾಗ ಹೆಸ್ಟ್‌ನು ಹುಡುಗಿಯೊಬ್ಬಳೊಂದಿಗೆ ಓಡಿಹೋಗಿದ್ದಾ ನೆಂಬುದೂ ತಿಳಿದುಬರುತ್ತದೆ.

ಹೆಸ್ಟನು ತನ್ನ ಪ್ರೇಯಸಿಗೆ ಎಳ್ಳಷ್ಟೂ ದಣಿವಾಗದಂತೆ ನೋಡಿ ಕೊಳ್ಳುತ್ತಿರುತ್ತಾನೆ. ಒಮ್ಮೆ ಆತ ಅಕಸ್ಮಾತ್ತಾಗಿ ವ್ಯಾಂಗ್ ಎಂಬ ಚೀನಿ ಮನುಷ್ಯನನ್ನು ಭೇಟಿಯಾದಾಗ ಆತನನ್ನು ತನ್ನ ಮನೆಯಲ್ಲಿ ಕೆಲಸಕ್ಕಾಗಿ ಬರುತ್ತೀಯಾ ಎಂದು ಕೇಳಿದಾಗ ಆತ ಒಪ್ಪಿಕೊಂಡುಬಿಡುತ್ತಾನೆ. ಆತ ಮಿತಭಾಷಿಯೂ ಸರಳ ಜೀವಿಯೂ ಆಗಿದ್ದು ಅಲುಫ್ರೊ ಹುಡುಗಿಯೊಬ್ಬಳೊಡನೆ ಜೀವಿಸುತ್ತಿದ್ದಾನೆ. ಇನ್ನಿತರ ಚೀನಿ ವ್ಯಕ್ತಿಗಳಂತೆ ಆತನೂ ಕೈತೋಟವನ್ನು ಬೆಳೆಸುವುದರಲ್ಲಿ ಅತ್ಯಂತ ಆಸಕ್ತಿ ವಹಿಸುತ್ತಾನಲ್ಲದೆ ಸದಾ ಹಸನ್ಮುಖಿಯಾಗಿಯೇ ಇರುತ್ತಾನೆ. ಹೆಸ್ಟ್ ಮತ್ತು ಆತನ ಪ್ರೇಯಸಿ ಅಲ್ಮಾ ಇಬ್ಬರೂ ಕೂಡಿ ಸುರಾಬಾಯಾ ಊರಲ್ಲಿದ್ದ ಹೊಸಮನೆಗೆ ಹೋಗುತ್ತಾರೆ. ವ್ಯಾಂಗ್‌ನು ಅವರ ಸಾಮಾನುಗಳನ್ನೆಲ್ಲವನ್ನು ಅಲ್ಲಿಗೆ ಹೊತ್ತು ಸಾಗಿಸುತ್ತಾನೆ. ಹೆಸ್ಟ್ ಮತ್ತು ಅಲ್ಮಾ ತಮ್ಮ ಗತಜೀವನದ ಸನ್ನಿವೇಶಗಳನ್ನು ನೆನೆಯುತ್ತ ಹರಟೆ ಹೊಡೆಯುತ್ತಾರೆ. ತಾನೊಬ್ಬ 'ನಿಜವಾದ' ವ್ಯಕ್ತಿಯೆಂದೆನಿಸಲಿಕ್ಕೆ ಕಾರಣ ತನ್ನ ಪ್ರೇಯಸಿಯೆ ಎಂದು ಹೆಸ್ಟನಿಗೆ ಚೆನ್ನಾಗಿ ಗೊತ್ತಿದೆ. ಆತ ಅವಳಿಗೆ ಕಷ್ಟದಲ್ಲಿ ಸಿಲುಕಿದ ವ್ಯಕ್ತಿಗಳ ಕಥೆ ಹೇಗಿರುತ್ತದೆ ಎಂಬುದನ್ನು ವಿವರಿಸುತ್ತಾನೆ. ಒಂದು ದಿನ ಅವರಿಬ್ಬರೂ ಹೀಗೆಯೆ ಹರಟುತ್ತಾ ಕುಳಿತಾಗ ಲೀನಾ (ಅಲ್ಮಾ) ಶೊಂಬರ್ಗನ ಬಗೆಗೆ ಏನೊ ಹೇಳುತ್ತಾಳೆ. ಅದನ್ನು ಕೇಳಿದಾಕ್ಷಣ ಹೆಸ್ಟ್‌ನಿಗೆ ಆಶ್ಚರ್ಯವಾಗುತ್ತದೆ. ಹೋಟೆಲಿನಲ್ಲಿ ಶೊಂಬರ್ಗ ಮಾತನಾಡಿದುದೆನ್ನೆಲ್ಲ ತಾನು ಕೇಳಿದ್ದೇನೆಂದು ಅವಳು ಹೇಳಿದಾಗ ಹೆಸ್ಟ್‌ನಿಗೆ ಮತ್ತಷ್ಟು ಆಶ್ಚರ್ಯವಾಗುತ್ತದೆ. ಆತ ಶೊಂಬರ್ಗ ಏನೇನು ಮಾತನಾಡಿದನೆಂದು ಅವಳನ್ನು ಕೇಳಿಕೇಳಿ ಒತ್ತಾಯ ಪಡಿಸಿದಾಗ ಅವಳು ತನಗೆ ಗೊತ್ತಿದ್ದ ಮಾಹಿತಿಯನ್ನೆಲ್ಲ ಹೇಳುತ್ತಾಳೆ. ತನ್ನನ್ನು ಹೆಸ್ಟ್‌ನು ಮೋಸಮಾಡಿದ್ದಾನೆಂದೂ, ಶೋಷಿಸಿದ್ದಾನೆಂದೂ ಮತ್ತು ಸಾಂಕೇತಿಕವಾಗಿ ಕೊಂದಿದ್ದಾನೆಂದೂ ಶೊಂಬರ್ಗನು ಊರಲ್ಲೆಲ್ಲ ಸುದ್ದಿ ಹಬ್ಬಿಸಿದ್ದಾನೆಂದೂ ಅಲ್ಮಾ ಹೇಳಿದುದನ್ನು ಕೇಳಿ ಹೆಸ್ಟ್‌ನಿಗೆ ಅತೀವ ಸಿಟ್ಟು ಮತ್ತು

ದುಃಖವಾಗುತ್ತದೆ. ಆಮೇಲೆ ಮಾರಿಸನ್ ಕೊಲೆಯಾದ ಬಗೆಗೆ ಹೆಸ್ಟ್‌ನು ಹೇಳಿದಾಗ ಅಲ್ಮಾಳಿಗೆ ದುಃಖವಾಗಿ ಕಣ್ಣೀರು ಸುರಿಸುತ್ತಾಳೆ. ಅದಕ್ಕೆ ಕಾರಣವೇನೆಂದು ಆತ ಕೇಳಿದಾಗ ಅವಳು ಮಾರಿಸನ್‌ನ ಬಗೆಗೆ ಜನರ ಬಾಯಿಂದ ಕೇಳಿದ್ದೇನೆಂದು ಹೇಳುತ್ತಾಳೆ. ಒಂದು ದಿನ ಲೀನಾ 'ನೀನೇಕೆ ನನ್ನನ್ನು ಪ್ರೀತಿಸುವ' ಪ್ರಯತ್ನ ಮಾಡುವುದಿಲ್ಲವೆಂದು ಹೆಸ್ಟ್‌ನನ್ನು ಕೇಳುತ್ತಾಳೆ. ಆತನಿಗೆ ಅವಳು ಅಪರಿಚಿತ ಭಾಷೆಯ ಲಿಪಿಯಂತೆ ವಿಚಿತ್ರಳೂ ನಿಗೂಢಳೂ ಆಗಿ ಕಾಣುತ್ತಾಳೆ. ಮಾರಿಸನ್‌ನನ್ನು ತಾನೇ ಕೊಂದೆನೆಂದು ಜನ ತಿಳಿದಿದ್ದಾರೆಂಬುದನ್ನು ಕೇಳಿ ಹೆಸ್ಟ್ ಬಹಳ ವ್ಯಥೆಪಟ್ಟು ಕೊಳ್ಳುತ್ತಾನೆ.

ಆಗ ಅವರಿದ್ದ ಪ್ರದೇಶಕ್ಕೆ ಜೋನ್ಸ್, ರಿಕಾರ್ಡೊ ಮತ್ತು ಪೆಡ್ರೊ ಈ ಮೂವರೂ ಬರುತ್ತಾರೆ. ಹೆಸ್ಟ್‌ನು ಅವರ ವಾಸಕ್ಕಾಗಿ ಖಾಲಿ ಮನೆಯೊಂದನ್ನು ತೋರಿಸುತ್ತಾನೆ. ಆ ಪ್ರದೇಶದಲ್ಲಿ ಯಾರಾದರೂ ಬಿಳಿಯರು ಬಂದಿದ್ದಾರೆಯೆ ಎಂದು ಅವರು ಹೆಸ್ಟ್‌ನನ್ನು ಕೇಳಿದಾಗ ಆತ ಅಲ್ಲಿ ತನ್ನೊಬ್ಬನನ್ನು ಬಿಟ್ಟು ಮತ್ತಾರೂ ಇಲ್ಲವೆಂದು ಹೇಳುತ್ತಾನೆ. ಒಂದು ದಿನ ಹೆಸ್ಟ್ ಮತ್ತು ಲೀನಾ ಅವರಿಗೆ ತಮ್ಮ ಮನೆಯಲ್ಲಿ ಯಾವುದೊ ಒಂದು ವಸ್ತು ಕಳವಾಗಿದೆಯೆಂಬುದು ಗೊತ್ತಾಗುತ್ತದೆ. ಆಗ ಅವರು ಮನೆಯೆಲ್ಲ ಹುಡುಕಿದಾಗ ತಮ್ಮ ಸೇವಕನಾದ ವ್ಯಾಂಗ್‌ನೆ ಪಿಸ್ತೂಲನ್ನು ಕದ್ದುಕೊಂಡು ಹೋಗಿದ್ದಾನೆಂಬುದು ತಿಳಿದುಬರುತ್ತದೆ. ಆಗ ಅವರಿಬ್ಬರೂ ಭಯ ಪಟ್ಟುಕೊಂಡು ಕಳುವಿನ ಕಾರಣವೇನಿರಬಹುದೆಂದು ಚಿಂತಿಸತೊಡಗುತ್ತಾರೆ. ಒಂದು ದಿನ ರಾತ್ರಿ ರಿಕಾರ್ಡೊ ಮತ್ತು ಜೋನ್ಸ್ ಹರಟೆಹೊಡೆಯುತ್ತ ಕುಳಿತಾಗ ತಮ್ಮ ಮನೆಯೆದುರಿಗೆ ದೂರದಲ್ಲಿ ಯಾರೊ ಒಬ್ಬ ಹುಡುಗಿ ಕಂದೀಲಿನ ಬೆಳಕಿನಲ್ಲಿ ನೆಲವನ್ನು ಅಗಿಯುತ್ತಿರುವುದು ಕಾಣಿಸುತ್ತದೆ. ಅವರಿಗೆ ಹೆಸ್ಟ್‌ನ ಮೇಲೆ ಸಂಶಯ ಬರುತ್ತದೆ. ಆತನೊಬ್ಬ 'ದುಷ್ಟಪ್ರಾಣಿ' ಎಂದು ವರ್ಣಿಸುತ್ತಾರೆ. ಬೆಳಗಾಗುತ್ತಲೆ ಒಂದಿನ ರಾತ್ರಿ ನೋಡಿದ ಹುಡುಗಿಯನ್ನು ನೋಡಬೇಕೆಂದು ರಿಕಾರ್ಡೊನಿಗೆ ಕುತೂ ಹಲವುಂಟಾಗುತ್ತದೆ. ಆತ ಹೆಸ್ಟ್‌ನ ಮನೆಯ ಹತ್ತಿರ ಹೋಗಿ ನಿಂತು ಆ ಹುಡುಗಿ ಹೊರಗೆ ಬಂದಾಗ ನೋಡಬೇಕೆಂದು ಕಾಯುತ್ತಾನೆ. ಆದರೆ ಎಷ್ಟು ಹೊತ್ತು ಕಾದರೂ ಅವಳು ಹೊರಗೆ ಬರದಾದಾಗ ಆತನಿಗೆ ತಡೆದುಕೊಳ್ಳಲಾಗದೆ ಹೆಸ್ಟ್‌ನ ಮನೆಯೊಳಗೆ ನುಗ್ಗುತ್ತಾನೆ. ಹೆಸ್ಟ್‌ನೇನಾದರೂ ಅಡ್ಡಬಂದಲ್ಲಿ ಆತನನ್ನು ಸೀಳಬೇಕೆಂಬ ನಿರ್ಧಾರ ವನ್ನೂ ಮನಸ್ಸಿನಲ್ಲಿಯೆ ಮಾಡಿಕೊಂಡಿರುತ್ತಾನೆ. ಆದರೆ ಹೆಸ್ಟ್‌ನು ಆಗ ಮನೆಯಲ್ಲಿ ಇಲ್ಲವೆಂಬ ಸಂಗತಿ ಗೊತ್ತಾದ ಕೂಡಲೆ ಆ ಹುಡುಗಿಯು ತಲೆಯನ್ನು ಒಕ್ಕಿಕೊಳ್ಳುತ್ತ ನಿಂತಿದ್ದ ಕೋಣೆಯೊಳಗೆ ಧುಮುಕುತ್ತಾನೆ. ಕೂಡಲೆ ಲೀನಾ ಆಶ್ಚರ್ಯಗೊಂಡರೂ ಧೈರ್ಯಗುಂದದೆ ಆತನೊಂದಿಗೆ ಹೋರಾಡುತ್ತಾಳೆ. ರಿಕಾರ್ಡೊ ಅವಳನ್ನು ಅಪ್ಪಿಕೊಳ್ಳಲು ಪ್ರಯತ್ನಿಸಿದಾಗ ಅವಳು ಆತನ ಗಂಟಲನ್ನು ಗಟ್ಟಿಯಾಗಿ ಹಿಚುಕಿ

ಗೋಡೆಗೆ ಜೋರಾಗಿ ನೂಗಿಸುತ್ತಾಳೆ. ಈಗ ಆವನಿಗೆ ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡುವ ನೈತಿಕ ಧೈರ್ಯ ಉಳಿದಿರುವುದಿಲ್ಲ. ಆದ್ದರಿಂದ ಆತ ಅವಳ ಕ್ಷಮೆ ಕೇಳುತ್ತಾನೆ. ಅನಂತರ ಆತ ಅವಳಿಗೆ ಹೆಸ್ಟ್‌ನ ಇತಿಹಾಸವನ್ನೆಲ್ಲ ಹೇಳಿ ಆತನೊಬ್ಬ ಮೋಸಗಾರನೆಂದು ವರ್ಣಿಸುತ್ತಾನೆ. ತದನಂತರ ಹೆಸ್ಟ್ ತನ್ನ ದ್ರವ್ಯವನ್ನು ಎಲ್ಲಿ ಬಚ್ಚಿಟ್ಟಿದ್ದಾನೆಂದು ಕೇಳಿದಾಗ ಲೀನಾ ಅದರ ಬಗೆಗೆ ತನಗೇನೂ ಗೊತ್ತಿಲ್ಲವೆಂದು ಹೇಳುತ್ತಾಳೆ. ಆಗ ಹೊರಗೆ ಹೆಸ್ಟ್‌ನ ಹೆಜ್ಜೆಗಳ ಸದ್ದು ಕೇಳಿ ಬರುತ್ತದೆಯಾದ್ದರಿಂದ ರಿಕಾರ್ಡೊ ಬಲೆಯಲ್ಲಿ ಸಿಕ್ಕಿಕೊಂಡ ಹಾಗೆ ತಳಮಳಿಸುತ್ತಾನೆ. ಆತ ಲೀನಾಳಿಗೆ ಸಹಾಯ ಮಾಡೆಂದೂ, ಮಾಡದಿದ್ದರೆ ಅವಳನ್ನು ಇರಿದು ಕೊಲ್ಲುವೆನೆಂದೂ ಬೆದರಿಕೆ ಹಾಕುತ್ತಾನೆ. ಪರಿಸ್ಥಿತಿಯ ಗಾಂಭೀರ್ಯವನ್ನು ತಿಳಿದುಕೊಂಡು ಲೀನಾ ಮಾಳಿಗೆಯ ಹತ್ತಿರವಿದ್ದ ಕಿಟಿಕಿಯ ಕಡೆ ಕೈಮಾಡಿ ಅದರ ಕೆಳಗೊಂದು ಖುರ್ಚಿ ಇಡುತ್ತಾಳೆ. ಕೂಡಲೆ ರಿಕಾರ್ಡೊ ಅದರ ಮೇಲೆ ಹತ್ತಿ ಕಿಟಿಕಿಯೊಳಗಿಂದ ಪಾರಾಗುತ್ತಾನೆ. ಅಷ್ಟರಲ್ಲಿ ಹೆಸ್ಟ್‌ನು ಕೋಣೆಯೊಳಗೆ ಬಂದು ತನ್ನ ನಲ್ಲೆಯೊಡನೆ ಮೃದುವಾಗಿ ಮಾತನಾಡುತ್ತಾನೆ. ಆದರೆ ರಿಕಾರ್ಡೊನ ಚಪ್ಪಲಿಯೊಂದು ಅಲ್ಲಿ ಬಿದ್ದದ್ದು ನೋಡಿ ಬೆಚ್ಚಿ ಲೀನಾ ಅದರ ಹತ್ತಿರ ಯಾವುದೊ ಒಂದು ನೆಪಮಾಡಿಕೊಂಡು ಹೋಗಿ ಅದನ್ನು ಮರೆಯಾಗಿಸಿ ನಂತರ ಹೆಸ್ಟ್‌ನಿಗೆ ಕಾಣದಂತೆ ಕಿಟಿಕಿಯೊಳಗಿಂದ ಹೊರಗೆಸೆಯುತ್ತಾಳೆ. ಆಗ ಅಲ್ಲಿ ಅವರ ಸೇವಕ ವ್ಯಾಂಗ್ ಬಂದು ತಾನು ಇನ್ನು ಮೇಲೆ ಅವರನ್ನು ಬಿಟ್ಟು ದೂರ ಹೋಗುತ್ತೇನೆಂದು ಹೇಳುತ್ತಾನೆ. ಅವರು ಆತನನ್ನು ಕಳೆದು ಹೋದ ಪಿಸ್ತೂಲಿನ ಬಗೆಗೆ ಕೇಳಿದಾಗ ಅದೇನೂ ತನಗೆ ಗೊತ್ತಿಲ್ಲವೆಂದು ನಾಟಕವಾಡಿ ಅಲ್ಲಿಂದ ಕಾಲ್ಕಿಗೆಯುತ್ತಾನೆ. ಇದಾದ ಮೇಲೆ ಒಂದು ದಿನ ಹೆಸ್ಟ್‌ನು ಜೋನ್ಸ್ ಮತ್ತು ರಿಕಾರ್ಡೊನನ್ನು ಭೇಟಿಯಾಗಿ ತನ್ನ ಸೇವಕ ವ್ಯಾಂಗ್ ತನ್ನ ಪಿಸ್ತೂಲನ್ನು ಕಳವುಮಾಡಿಕೊಂಡು ಹೋಗಿದ್ದಾನೆಂದೂ ಆತ ಅದರಿಂದ ಅವರಿಗೇನಾದರೂ ಅಪಾಯ ಮಾಡಿದರೆ ಅದಕ್ಕೆ ತಾನು ಜವಾಬುದಾರ ನಲ್ಲವೆಂದೂ ತಿಳಿಸುತ್ತಾನೆ. ಆದರೆ ಅವರಿಬ್ಬರೂ ಈ ಸತ್ಯಸಂಗತಿಯನ್ನು ನಂಬುವುದಿಲ್ಲ. ವ್ಯಾಂಗ್ ಆತನ ಪಿಸ್ತೂಲನ್ನು ಕದ್ದಿರದೆ ಹಣವನ್ನು ಕದ್ದಿರಬಹುದೆಂದು ಸಂಶಯ ಪಡುತ್ತಾರಲ್ಲದೆ ಹೆಸ್ಟ್‌ನನ್ನು ಹೇಗಾದರೂ ಮಾಡಿ ಕೊಲ್ಲಬೇಕೆಂದು ಹೊಂಚು ಹಾಕುತ್ತಾರೆ. ಒಂದು ದಿನ ಹೆಸ್ಟ್ ಮತ್ತು ಲೀನಾ ತಿರಗಾಡಲು ಹೋದಾಗ ವ್ಯಾಂಗ್‌ನು ದಾರಿಯಲ್ಲಿ ಗಿಡ ಮತ್ತು ಟೊಂಗೆಗಳನ್ನು ಒಟ್ಟಿ ಅದರ ಹಿಂದೆ ಅವಿತುಕೊಂಡು ಕುಳಿತಿರುತ್ತಾನೆ. ಮನೆಗೆ ಬಂದಮೇಲೆ ಲೀನಾ ಮತ್ತು ಹೆಸ್ಟ್ ತಮ್ಮಿಬ್ಬರ ನಡುವಿನ ಸಂಬಂಧವು ಪಾಪವಾದದ್ದೆ ಎಂಬುದನ್ನು ಚರ್ಚಿಸುತ್ತಾರೆ. ಅವರಿಬ್ಬರೂ ಕೊನೆಗೆ ಅದು ಪಾಪವಲ್ಲವೆಂಬ ನಿರ್ಧಾರಕ್ಕೆ ಬರುತ್ತಾರೆ. ಏಕೆಂದರೆ ಹೆಸ್ಟ್‌ನು ಲೀನಾಳನ್ನು ಬಲಾತ್ಕಾರದಿಂದ ಕರೆದು ತಂದಿಲ್ಲ. ಅವಳು ತಾನಾಗಿಯೆ ಆತನಲ್ಲಿ ಅನುರಕ್ತೆ ಯಾಗಿ ಬಂದು ಆತನೊಂದಿಗೆ ಜೀವಿಸುತ್ತಲಿದ್ದಾಳೆ. ಆದ್ದರಿಂದ ಅವರಿಬ್ಬರೂ

ಸಮಾಧಾನ ಪಟ್ಟುಕೊಳ್ಳುತ್ತಾರೆ. ಮತ್ತೊಂದು ದಿನ ರಿಕಾರ್ಡೊ ಬಂದು ಹೆಸ್ಟ್‌ನನ್ನು ಜೋನ್ಸ್‌ನ ಹತ್ತಿರ ಕರೆದೊಯ್ಯುಬಯಸುತ್ತಾನೆ. ಆಗ ಹೆಸ್ಟ್‌ನಿಗೆ ಏನೊ ಅಪಾಯವಿರಬಹುದೆಂದು ಸಂಶಯ ಬರುತ್ತದೆ. ಆದ್ದರಿಂದ ಆತ ಒಳಗೆ ಹೋಗಿ ಲೀನಾಳಿಗೆ ಕರಿಯ ಉಡುಪು ಧರಿಸಿ ಮನೆಯ ಹಿಂದಿನ ಅಡವಿಯಲ್ಲಿ ಅವಿತುಕೊಂಡಿರಬೇಕೆಂದೂ. ತಾನು ಮೇಣಬತ್ತಿ ಹತ್ತಿಸಿ ಅನಂತರ ಆರಿಸಿ ಸಂಜ್ಞೆಯನ್ನು ಕೊಡುವವರೆಗೂ ಅಲ್ಲಿಂದ ಹೊರಗೆ ಬರಬಾರದೆಂದು ಹೇಳುತ್ತಾನೆ. ಕೂಡಲೆ ಲೀನಾ ಕರಿಯ ಉಡುಪು ಧರಿಸಿ ಹಿಂದಿನ ಬಾಗಿಲಿನಿಂದ ಹೋಗುತ್ತಾಳೆ. ಇತ್ತ ಹೆಸ್ಟ್‌ನು ರಿಕಾರ್ಡೊನೊಡನೆ ಜೋನ್ಸ್‌ನ ಮನೆಗೆ ಹೋಗುತ್ತಾನೆ. ನಂತರ ರಿಕಾರ್ಡೊ ಹೆಸ್ಟ್‌ನ ಮನೆಯಲ್ಲಿ ಲೀನಾ ಒಬ್ಬಳೆ ಇರಬಹುದೆಂದು ತಿಳಿದು ಅಲ್ಲಿಗೆ ಧಾವಿಸುತ್ತಾನೆ. ಹೆಸ್ಟ್‌ನು ಜೋನ್ಸ್‌ನೊಡನೆ ಮಾತನಾಡುತ್ತಿದ್ದಾಗ ಜೋನ್ಸ್‌ನು ಹೆಸ್ಟ್ ಬಚ್ಚಿಟ್ಟಿರುವ ಹಣವನ್ನು ಕೊಡು ಎಂದು ಕೇಳುತ್ತಾನೆ. ಹೆಸ್ಟ್‌ನು ಒಂದು ಹುಡುಗಿಯೊಂದಿಗೆ ಜೀವಿಸುತ್ತಿದ್ದಾನೆಂಬುದು ತಿಳಿದಮೇಲೆ ಜೋನ್ಸ್‌ನಿಗೆ ಬಹಳ ಜಿಗುಪ್ಸೆಯಾಗುತ್ತದೆ. ಅದೇ ಹೊತ್ತಿನಲ್ಲಿ ರಿಕಾರ್ಡೊ ಹೆಸ್ಟ್‌ನ ಮನೆಯಲ್ಲಿ ಹಣ ಹುಡುಕುತ್ತಿರಬಹುದೆಂದು ಹೆಸ್ಟ್ ಮತ್ತು ಜೋನ್ಸ್ ಇಬ್ಬರಿಗೂ ಸಂಶಯ ಬರುತ್ತದೆ. ರಿಕಾರ್ಡೊ ಲೀನಾಳೊಂದಿಗೆ ಪ್ರಣಯದಲ್ಲಿ ತೊಡಗಿರಬಹುದೆಂದು ಜೋನ್ಸ್‌ನಿಗೆ ಸಂಶಯ ಬರುತ್ತದೆ.

ರಿಕಾರ್ಡೊ ಹೆಸ್ಟ್‌ನ ಮನೆಗೆ ಧಾವಿಸಿ ಬಂದಾಗ ಲೀನಾ ಮನೆಯಲ್ಲಿಯೆ ಇರುತ್ತಾಳೆ. ಆತ ಅವಳ ಬಗೆಗೆ ತನಗಿದ್ದ ಪ್ರೀತಿಯನ್ನು ಬಹಿರಂಗ ಪಡಿಸುತ್ತಾನೆ. ಅಲ್ಲದೆ ಶೊಂಬರ್ಗನನ್ನು ಮರೆತುಬಿಡಲು ಹೇಳುತ್ತಾನೆ. ಅವಳ ಸಲುವಾಗಿ ತಾನು ಏನನ್ನಾದರೂ ಮಾಡಲು ಸಿದ್ಧನಿದ್ದಾನೆಂದು ತಿಳಿಸುತ್ತಾನೆ. ಅವಳಿಗಾಗಿ ತಾನು ತನ್ನ ಯಜಮಾನನಾದ ಜೋನ್ಸ್‌ನನ್ನೂ ಕೊಲ್ಲಲು ಅಥವಾ ಎಷ್ಟು ಬೇಕಾದರೂ ಹಣವನ್ನು ಖರ್ಚುಮಾಡಲು ಹಿಂಜರಿಯುವದಿಲ್ಲವೆಂದೂ ಹೇಳುತ್ತಾನೆ. ಆತ ನೆಲದಮೇಲೆ ಬಿದ್ದು ಲೀನಾಳ ಪಾದವನ್ನು ನೆಕ್ಕುತ್ತಾನೆ. ಅವಳಿಗೆ ತನ್ನ ಚೂರಿಯನ್ನು ಕೊಡುತ್ತಾನೆ. ಅವಳದನ್ನು ತೆಗೆದುಕೊಂಡು ತನ್ನ ತೊಡೆಯ ಮೇಲಿಟ್ಟುಕೊಂಡಿರುತ್ತಾಳೆ. ರಿಕಾರ್ಡೊ ಕುತೂಹಲದಿಂದ ಅವಳನ್ನೆ ನೋಡುತ್ತಿರುತ್ತಾನೆ. ಕೆಲವು ನಿಮಿಷಗಳ ವರೆಗೆ ವಿಚಾರಮಾಡಿ ತದನಂತರ ಅವಳು ಒಮ್ಮೆಲೆ ರಿಕಾರ್ಡೊನನ್ನು ಒದ್ದು ಬಿಡುತ್ತಾಳೆ. ರಿಕಾರ್ಡೊನಿಗೆ ಆಶ್ಚರ್ಯವಾಗುತ್ತದೆ. ಅಲ್ಲದೆ ಚೂರಿಗಾಗಿ ಆತ ಅತ್ತಿತ್ತ ಹೊರಳುತ್ತಾನೆ. ಅಷ್ಟರಲ್ಲಿ ಅಲ್ಲಿ ಪಿಸ್ತೂಲು ಹಾರಿಸಿದ ಸದ್ದಾಗುತ್ತದೆ. ಜೋನ್ಸ್ ಹಾರಿಸಿದ ಗುಂಡು ರಿಕಾರ್ಡೊನ ಕುತ್ತಿಗೆಗೆ ತೆರೆದು ಮುಂದೆ ಹೋಗಿ ಲೀನಾಳಿಗೆ ಬಡಿಯುತ್ತದೆ. ರಿಕಾರ್ಡೊ ಭಯದಿಂದ ತತ್ತರಿಸಿ ತನ್ನ ವಸತಿಗೃಹಕ್ಕೆ ಓಡುತ್ತಾನೆ. ಲೀನಾ ತನ್ನ ಸ್ವಭಾವಕ್ಕನುಗುಣವಾಗಿ ನಡೆದುಕೊಂಡು ಹೆಸ್ಟ್‌ನ ಜೀವವನ್ನು ಉಳಿಸಿದ್ದಕ್ಕಾಗಿ

ಆತನಿಗೆ ಬಹಳ ಮೆಚ್ಚುಗೆಯಾಗುತ್ತದೆಯಲ್ಲದೆ ಆಕೆಯ ಬಗೆಗೆ ಆತನ ಗೌರವ ಹೆಚ್ಚುತ್ತದೆ. ತನ್ನ ಪ್ರಿಯತಮನನ್ನು ಉಳಿಸಿ ತಾನು ಸತ್ತರೂ ಚಿಂತೆಯಿಲ್ಲ ಅವಳು ಮರಣವನ್ನು ಗೆದ್ದು ವಿಜಯಿಯಾಗಿದ್ದಾಳೆ. ಕೊನೆಗೆ ಲೀನಾ ಮತ್ತು ಹೆಸ್ಟ್ ಇಬ್ಬರನ್ನೂ ಒಂದೇ ಚಿತೆಯಲ್ಲಿ ಸುಡಲಾಗುತ್ತಿದೆ.

'ವಿಜಯ' ಕಾದಂಬರಿಯಲ್ಲಿ ಚಿತ್ರಿತವಾಗಿರುವ ಸಮಸ್ಯೆ ಗಂಡು ಹೆಣ್ಣಿನ ನಡುವಿನ ಸಂಬಂಧವನ್ನು ಕುರಿತುದೆ ಆಗಿದೆ. ಹೆಸ್ಟ್‌ನೊಬ್ಬ ಮುಗ್ಧಮನಸ್ಸಿನ ವ್ಯಕ್ತಿಯಾಗಿದ್ದು ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಬಯಸುತ್ತಿರುತ್ತಾನೆ. ಆತನಿಗೆ ಸ್ಯಾಂಬೂರನ್ ನಡುಗಡ್ಡೆಯಲ್ಲಿರುವ ಶೊಂಬರ್ಗನ ಹೋಟೆಲಿನಲ್ಲಿದ್ದ ಅಲ್ಮಾಳು ಶೊಂಬರ್ಗನ ಹಿಡಿತದಲ್ಲಿ ಸಿಕ್ಕು ತೊಂದರೆಪಡುತ್ತಿದ್ದಾಳೆಂಬುದು ತಿಳಿದೊಡನೆ ಅವಳನ್ನು ಕರೆದುಕೊಂಡು ದೂರದ ನಿರ್ಜನವಾದ ಗುಡ್ಡಗಾಡಿನ ಪ್ರದೇಶವಾದ ಸೂರಾಬಾಯಾ ಎಂಬ ಊರಿಗೆ ಹೋಗಿ ಅಲ್ಲಿಯೆ ಅವಳೊಂದಿಗೆ ವಾಸಿಸುತ್ತಾನೆ. ಪ್ರಣಯಿಗಳಾದ ಅವರಿಬ್ಬರೂ ಪರಸ್ಪರ ಪ್ರೀತಿಸುತ್ತಾರೆ. ಅವರಿಬ್ಬರೂ ವಿಧಿವತ್ತಾಗಿ ಮದುವೆ ಮಾಡಿಕೊಳ್ಳದಿದ್ದರೂ ನಿಜವಾದ ಗಂಡಹೆಂಡಿರಂತೆಯೆ ಜೀವಿಸುತ್ತಾರೆ. ಆದರೆ ಇದನ್ನು ನೋಡಿ ಕರುಬಿದ ಶೊಂಬರ್ಗನು ಊರಲ್ಲೆಲ್ಲ ಅವರಿಬ್ಬರ ವ್ಯಭಿಚಾರದ ಬಗೆಗೆ ಕೆಟ್ಟ ಸುದ್ದಿಗಳನ್ನು ಹಬ್ಬಿಸುತ್ತಾನೆ. ಹೀಗಾಗಿ ಅಲ್ಲಿದ್ದ ಜನರೆಲ್ಲ ಅವರಿಬ್ಬರ ಲೈಂಗಿಕ ಸಂಬಂಧದ ಬಗೆಗೆ ಅಲ್ಲದ ಸಲ್ಲದ ಮಾತುಗಳನ್ನಾಡುತ್ತಾರಲ್ಲದೆ ಅವರಿಬ್ಬರನ್ನೂ ಸಂಶಯ ದೃಷ್ಟಿಯಿಂದಲೆ ನೋಡುತ್ತಾರೆ. ಅದಲ್ಲದೆ ಶೊಂಬರ್ಗನು ಹೆಸ್ಟ್‌ನ ಬಗೆಗೆ ಅನೇಕ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಾನೆ. ಹೆಸ್ಟ್‌ನೊಬ್ಬ ಕೊಲೆಗಾರನೆಂದೂ, ದರೋಡೆಕಾರನೆಂದೂ, ಶೋಷಕನೆಂದೂ ಸಮಯ ಸಿಕ್ಕಾಗಲೆಲ್ಲ ಹೇಳುತ್ತಿರುತ್ತಾನೆ. ಹೀಗಾಗಿ ಜನರು ಹೆಸ್ಟ್ ಮತ್ತು ಅಲ್ಮಾ ಇವರಿಬ್ಬರ ನಡುವಿನ ಲೈಂಗಿಕ ಸಂಬಂಧಕ್ಕೆ ಹೆಚ್ಚು ಬಣ್ಣಬಳಿದು ಮಾತನಾಡುತ್ತಾರೆ. ಇದನ್ನೆಲ್ಲ ಕೇಳಿದ ಹೆಸ್ಟ್‌ನು ಬಹಳ ನೊಂದುಕೊಳ್ಳುತ್ತಾನೆ. ಇದಕ್ಕೆಲ್ಲ ಬೇಸತ್ತು ಆತ ತನ್ನ ಪ್ರೇಯಸಿಯನ್ನು ಕರೆದುಕೊಂಡು ಸೂರಾಬಾಯಾ ಎಂಬ ನಿರ್ಜನ ಪ್ರದೇಶದಲ್ಲಿರುವ ಊರಿಗೆ ಹೋಗಿ ಕುಹಕಜನರಿಂದ ದೂರವಾಗಿರಬಯಸುತ್ತಾನೆ. ಆದರೆ ವಿಧಿಯು ಆತನನ್ನು ಅಲ್ಲಿಯೂ ಬೆನ್ನುಬಿಡುವುದಿಲ್ಲ. ಹೆಸ್ಟ್‌ನು ಸೂರಾಬಾಯಾದಲ್ಲಿ ತನ್ನ ಪ್ರೇಯಸಿಯೊಂದಿಗೆ ಹಾಯಾಗಿ ಇರುತ್ತಿರುವಾಗ ಶೊಂಬರ್ಗನ ಚಾಡಿಮಾತುಗಳಿಂದ ಪ್ರೇರಿತರಾಗಿ ಮೂರುಜನ– ಜೋನ್ಸ್, ರಿಕಾರ್ಡೋ ಮತ್ತು ಪೆಡ್ರೊ ಅಲ್ಲಿಗೆ ಬಂದು ಆತನಲ್ಲಿ ದ್ರವ್ಯವಿರಬಹುದೆಂದು ಹುಡುಕಾಡುತ್ತಾರೆ. ಆ ಮೂವರ ಪೈಕಿ ರಿಕಾರ್ಡೋ ಎಂಬವನು ಹೆಸ್ಟ್‌ನ ಪ್ರೇಯಸಿಯ ಮೇಲೆ ಕಣ್ಣಿಟ್ಟಿರುತ್ತಾನೆ. ಅನೇಕ ಸಲ ಅವಳಿಗೆ ಹೆಸ್ಟ್‌ನು ನಿರುಪಯುಕ್ತ ವ್ಯಕ್ತಿಯೆಂದೂ, ಹೇಡಿಯೆಂದೂ ಹೀಯಾಳಿಸಿ ಅವನನ್ನು ಬಿಟ್ಟುಬಿಡಲು ಆಕೆಯನ್ನು ಒತ್ತಾಯಿಸುತ್ತಾನೆ. ಒಂದು ದಿನ ಉಪಾಯದಿಂದ

ಹೆಸ್ಟ್‌ನನ್ನು ಜೋನ್ಸ್‌ನ ಹತ್ತಿರ ಕಳುಹಿಸಿ ರಿಕಾರ್ಡೋ ಅಲ್ಮಾಳನ್ನು ಸಂಭೋಗಿಸಲು ಪ್ರಯತ್ನಿಸುತ್ತಿರುತ್ತಾನೆ. ಆತನ ಕೈಗೆ ಬಂದ ತುತ್ತು ಬಾಯಿಗೆ ಬರುವುದರೊಳಗಾಗಿ ಜೋನ್ಸ್ ಬಂದು ಗುಂಡು ಹಾರಿಸುತ್ತಾನೆ. ಆದರೆ ದುರ್ದೈವದಿಂದ ಗುಂಡು ರಿಕಾರ್ಡೋನನ್ನು ಕೊಲ್ಲದೆ ಕುತ್ತಿಗೆಯ ಬದಿಗೆ ತಾಕಿ ಮುಂದೆ ಸಾಗಿ ಅಲ್ಮಾಳ ಜೀವವನ್ನು ತೆಗೆದುಕೊಳ್ಳುತ್ತದೆ. ಕೊನೆಗೆ ದುಃಖಿತಪ್ತನಾದ ಹೆಸ್ಟ್‌ನು ತನ್ನ ದಿವಂಗತ ಪ್ರೇಯಸಿಯೊಂದಿಗೆಯೆ ಚಿತೆಯೇರಿ ಪ್ರಾಣಬಿಡುತ್ತಾನೆ.

ಈ ಕಥೆಯಲ್ಲಿ ಗಂಡು ಹೆಣ್ಣಿನ ನಡುವಿನ ಸಾರ್ವತ್ರಿಕ ಸಂಬಂಧ ಚಿತ್ರಿತವಾಗಿದೆ. ಹೆಸ್ಟ್‌ನು ಒಬ್ಬ ಆದರ್ಶವಾದಿಯಾಗಿದ್ದುದರಿಂದ ಲೀನಾಳನ್ನು ಆ ಹೋಟೆಲ್ ಜೀವನದಿಂದ ಮುಕ್ತಗೊಳಿಸಲು ನಿರ್ಧರಿಸುತ್ತಾನೆ. ಕಷ್ಟದಲ್ಲಿದ್ದವರಿಗಾಗಿ ಆತ ಬಹಳ ಅನುಕಂಪ ಪಡುತ್ತಾನೆ. ಆತನ ಈ ಆದರ್ಶವಾದ ವರ್ತನೆಗೆ ಆತನ ಸುತ್ತಲಿನ ಪರಿಸರವೆ ಕಾರಣವಾಗಿರುತ್ತದೆ. ಅದರಂತೆ ಆತ ಹುಟ್ಟಿ ಬೆಳೆದ ಕೌಟುಂಬಿಕ ವಾತಾವರಣವೂ ಕಾರಣವಾಗಿರುತ್ತದೆ. ಆತನ ತಂದೆಯೊಬ್ಬ ತತ್ವಜ್ಞಾನಿಯಾಗಿದ್ದು ಅನೇಕ ತಾತ್ವಿಕ ಗ್ರಂಥಗಳನ್ನು ರಚಿಸಿದ್ದನಲ್ಲದೆ ಅನೇಕಸಲ ಮಗನಿಗೆ 'ಕರುಣೆಯೆಂದು ಕರೆಯುವ ತಿರಸ್ಕಾರ'ವನ್ನು ಕಲಿಯಲು ಬೋಧಿಸುತ್ತಿದ್ದ. ತಂದೆಯ ಇಂಥ ಸ್ಟಾಯಿಕ್ ತತ್ವಗಳ ಪ್ರಭಾವದಿಂದ ಹೆಸ್ಟ್‌ನ ಜೀವನ ರೂಪಿತಗೊಂಡಿದೆ. ಆತ ಮಾನವ ಜನಾಂಗದೊಂದಿಗೆ ಜಿಗುಪ್ಸೆ ಪಟ್ಟುಗೊಂಡು ತಿರಸ್ಕಾರಭಾವದಿಂದ ಗುಡ್ಡುಗಾಡು ಪ್ರದೇಶಕ್ಕೆ ಹೋಗಿ ಟ್ರಾಪಿಕಲ್ ಬೆಲ್ಟ್ ಕೋಲ್ ಕಂಪನಿಯ ಮೇಲ್ವಿಚಾರಕನಾಗುತ್ತಾನೆ. ಮಾನವ ಜನಾಂಗದೊಡನೆ ಸಂಬಂಧ ಕಡಿದುಕೊಂಡು ಕೊನೆಯವರೆಗೆ ಅಲ್ಲಿಯೆ ಇರಬಯಸುತ್ತಾನೆ. ಜೀಸಸ್ ಕ್ರೈಸ್ತನು ನಲವತ್ತು ದಿನಗಳ ವರೆಗೆ ನಿರ್ಜನ ಪ್ರದೇಶದಲ್ಲಿ ಅಜ್ಞಾತವಾಸವಾಗಿದ್ದು ಅನಂತರ ಮರಳಿಬಂದು ಜನಾಂಗವನ್ನು ಉದ್ಧರಿಸುತ್ತಾನೆ. ಆದರೆ ಹೆಸ್ಟ್‌ನು ಜೀಸಸ್ ಕ್ರೈಸ್ತನಂತೆ ಜನ ಜಂಗುಳಿಂದ ದೂರ ಹೋದರು ಆತನಂತೆ ಮರಳಿ ಬರದೆ ಅಲ್ಲಿಯೆ ನೆಲೆಯೂರಿ ನಿಲ್ಲುತ್ತಾನೆ.

ಹಾಗಿದ್ದರೆ ಹೆಸ್ಟ್‌ನೇಕೆ ಅಷ್ಟೊಂದು ತೊಂದರೆಗಳನ್ನನುಭವಿಸ ಬೇಕು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದಕ್ಕೆ ಕಾರಣ ಆತನ ವ್ಯಕ್ತಿತ್ವದಲ್ಲಿರುವ ಒಡಕೆಂದೆ ಹೇಳಬೇಕು. ಮಾನವ ಜನಾಂಗದೊಂದಿಗೆ ಜಿಗುಪ್ಸೆಹೊಂದಿ ಅವನ್ನು ತಿರಸ್ಕರಿಸಿ ಏಕಾಕಿಯಾಗಿ ನಿರ್ಜನ ಪ್ರದೇಶದಲ್ಲಿರಬಯಸಿದ ಆತನಿಗೆ ಮಾರಿಸನ್ ಮತ್ತು ಲೀನಾಳನ್ನು ನೋಡಿದಾಗ, ಅವರ ಕಷ್ಟಗಳನ್ನು ತಿಳಿದುಕೊಂಡಾಗ ಅವರ ಬಗೆಗೆ ಕನಿಕರ ಪಟ್ಟು ಅವರನ್ನು ಅದರಿಂದ ಪಾರು ಮಾಡಲು ಪ್ರಯತ್ನಿಸುತ್ತಾನೆ. ಆ ಕಾರಣದಿಂದಲೆ ಆತ ಲೀನಾಳನ್ನು ತನ್ನ ಪ್ರೇಯಸಿಯನ್ನಾಗಿ ಸ್ವೀಕರಿಸುತ್ತಾನೆ.

ಮಾನವ ಜನಾಂಗದ ಬಗೆಗಿರುವ ದ್ವೇಷದಿಂದಾಗಿಯೆ ಆತ ತನ್ನ ಪ್ರೇಯಸಿಯನ್ನು ಅಥವಾ ಗೆಳೆಯರನ್ನು ನಿಜವಾಗಿ, ಪ್ರಾಮಾಣಿಕವಾಗಿ ಮತ್ತು ಆಳವಾಗಿ ಪ್ರೀತಿಸಲು ಸಾಧ್ಯವಾಗುವುದಿಲ್ಲ. ಈ ತರಹದ ಶುಷ್ಕತೆ ಆತನ ಪ್ರೇಯಸಿಗೂ ಅರಿವಾಗಿರುತ್ತದೆ. ಆದ್ದರಿಂದಲೆ ಅವಳು ಆಗಿಂದಾಗ ಆತನಿಗೆ 'ನನ್ನನ್ನು ಪ್ರೀತಿಸುವ ಪ್ರಯತ್ನ ಮಾಡು' ಎಂದು ಕೇಳುತ್ತಿರುತ್ತಾಳೆ. ಹೀಗೆ ಮಾನವ ಜನಾಂಗದ ಬಗೆಗಿರುವ ಮೂಲಭೂತ ವಾದ ದ್ವೇಷದಿಂದಾಗಿಯೆ ಆತನಿಗೆ ಪ್ರೀತಿ ಸ್ನೇಹ ಮೊದಲಾದ ನಿಜವಾದ ಅನುಭವ ವಾಗುವುದಿಲ್ಲ. ಹೆಸ್ಟ್‌ನು ತನ್ನ ಪ್ರೇಯಸಿಯೊಂದಿಗೆ ಸೂರಾಬಾಯಾ ಊರಲ್ಲಿ ವಾಸವಾಗಿದ್ದಾಗ ಶೊಂಬರ್ಗನು ಹೆಸ್ಟ್‌ನ ಚಾರಿತ್ರ್ಯವಧೆ ಮಾಡಿದುದನ್ನು ಕೇಳಿ ಆತನಿಗೆ ಮತ್ತಷ್ಟು ಜಿಗುಪ್ಸೆಯುಂಟಾಗುತ್ತದೆ. ಏಕೆಂದರೆ ಆತ ಮತ್ತೆ ಮಾನವ ಜನಾಂಗದ ಒಂದು ಅಂಗವೆಂಬ ಭಾವನೆ ಬರುತ್ತದೆ. ಶೊಂಬರ್ಗನು ಮಾಡಿದ ಚಾರಿತ್ರ್ಯವಧೆಯ ಕಾರಣದಿಂದಲೆ ಮೂರು ಜನ ದರೋಡೆಕಾರರು ಆತನಿದ್ದಲ್ಲಿಗೆ ಬಂದು ಆತನ ದ್ರವ್ಯವನ್ನೂ ಹುಡುಗಿಯನ್ನೂ ದೋಚಿಕೊಂಡೊಯ್ಯುವ ಪ್ರಯತ್ನ ಮಾಡುತ್ತಾರೆ. ಹೆಸ್ಟ್‌ನ ಅಹಂಕಾರ ಎಷ್ಟು ವಿಪರೀತವಾಗಿದೆಯೆಂದರೆ ತಾನು ಉಳಿಸಿದ ಪ್ರೇಯಸಿ ತನ್ನ ತೋಳುಗಳ ಮಧ್ಯದಲ್ಲಿಯೆ ಕೊನೆಯುಸಿರೆಳೆಯುವಾಗ ಸಹಿತ ಆತ ತನ್ನ ಪ್ರೇಮವನ್ನು ಮುಕ್ತವಾಗಿ ಅಭಿವ್ಯಕ್ತಿಸುವುದಿಲ್ಲ. ಅಲ್ಮಾ ಮಾತ್ರ ತನ್ನ ಪ್ರಿಯತಮನಿಂದ ನಿಜವಾದ ಪ್ರೇಮವನ್ನು ಕೊನೆಗಾದರೂ ಪಡೆದೆನೆಂಬ ಭಾವನೆಯಿಂದ ಕೊನೆಯುಸಿರೆಳೆಯುತ್ತಾಳೆ. ಆದ್ದರಿಂದಲೆ ಕಾನ್ರಾಡನು ಕಾದಂಬರಿಗೆ 'ವಿಜಯ' ವೆಂದು ನಾಮಕರಣ ಮಾಡಿದ್ದಾನೆ.

ಅನೇಕ ವಿಮರ್ಶಕರು ಈ ಕಾದಂಬರಿಯಲ್ಲಿ ಬೈಬಲ್ ಪುರಾಣದ ಅರ್ಥವನ್ನು ಕಂಡುಕೊಂಡಿದ್ದಾರೆ. ಈ ವಿಚಾರಸರಣಿಯ ಪ್ರಕಾರ ಹೆಸ್ಟ್‌ನ ಪ್ರೇಯಸಿಯಾದ ಅಲ್ಮಾ (ಅಥವಾ ಮ್ಯಾಗ್ದಾಲೀನ್ ಅಥವಾ ಲೀನಾ) ಬೈಬಲ್ಲಿನಲ್ಲಿ ಬರುವ ವ್ಯಭಿಚಾರಿಣಿಯಾದ ಮ್ಯಾಗ್ದಾಲೀನ್‌ಳನ್ನು ನೆನಪಿಗೆ ತರುತ್ತಾಳೆ. ಈ ಕಾದಂಬರಿಯಲ್ಲಿ ರುವ ಘಟನೆಗಳೆಲ್ಲ ನಡೆಯುವ ಸ್ಯಾಂಬೂರನ್ ನಡುಗಡ್ಡೆ ಬೈಬಲ್ಲಿನ ಈಡನ್ ಉದ್ಯಾನ ವನ್ನು ಹೋಲುತ್ತದೆ. ಅಲ್ಮಾಳಲ್ಲಿ ಒಳ್ಳೆಯ ಮತ್ತು ಕೆಟ್ಟಗುಣಗಳೆರಡೂ ಕಂಡು ಬರುತ್ತವೆ. ಈಡನ್ ಉದ್ಯಾನದಲ್ಲಿ ಈವ್‌ಳು ಆ್ಯಡಮ್‌ನನ್ನು ಪಾಪಕೃತ್ಯಕ್ಕೆಳೆದಂತೆ ಲೀನಾಳೂ ಕೂಡ ಹೆಸ್ಟ್‌ನನ್ನು ತನ್ನ ಹೆಣ್ಣುತನದದಿಂದಾಗಿಯೆ ಆಕರ್ಷಿಸಿ ಆತನನ್ನು ತೊಂದರೆಯಲ್ಲಿ ಕೆಡವುತ್ತಾಳೆ. ಹೆಸ್ಟ್‌ನಾದರೊ ಒಬ್ಬ ನಿರ್ಬಲನೂ ಸೋತವನೂ ಆದ ದೇವದೂತ (messiah) ಅಥವಾ ಆ್ಯಡಮ್‌ನಾಗಿರುತ್ತಾನೆ. ಇನ್ನು ಆತನ ಬೆನ್ನುಹತ್ತಿಬಂದಿರುವ ಮೂರುಜನರು ಸಾಮೂಹಿಕವಾಗಿ ಅನಿಷ್ಟಶಕ್ತಿಯನ್ನು ಸಾಂಕೇತಿಸುತ್ತಾರೆ. ಜೋನ್ಸ್‌ನು ಅನಿಷ್ಟದ ಕರಾಳದೇವತೆಯಂತಿದ್ದು ದುರ್ಬಲನಾದ ದೇವದೂತನಂತಿದ್ದ ಹೆಸ್ಟ್‌ನನ್ನು ಸೋಲಿಸುತ್ತಾನೆ. ಆದ್ದರಿಂದಲೆ ಕಾನ್ರಾಡ್

ಆತನನ್ನು ಭಯಾನಕವಾದ ಸಾವಿನ ಪ್ರತಿಮೆಗಳ ಮೂಲಕ ಚಿತ್ರಿಸುತ್ತಾನೆ. ರಿಕಾರ್ಡೋ ಈಡನ್ ಉದ್ಯಾನವಲ್ಲಿಯ ಹಾವಿನಂತೆ ಹೆಸ್ಟ್‌ನ ಪ್ರೇಯಸಿಯಾದ ಅಲ್ಮಾಳನ್ನು ವ್ಯಭಿಚಾರಕ್ಕೆ ಎಳೆಯಲಿಚ್ಛಿಸುತ್ತಾನೆ. ಆದ್ದರಿಂದ ಕಾನ್ರಾಡ್ ಆತನನ್ನು ಹಾವು ಮತ್ತಿತರ ಸರೀಸೃಪಗಳ ಪ್ರತಿಮೆಗಳ ಮೂಲಕ ಚಿತ್ರಿಸಿದ್ದಾನೆ. ಇನ್ನು ಪೆಡ್ರೊ ಒಬ್ಬ ಕಾಡುಮನುಷ್ಯನಂತಿದ್ದು ಪ್ರಬಲವಾದ ಆದಿಶಕ್ತಿಯನ್ನು ಸಾಂಕೇತಿಸುತ್ತಾನೆ. ಕಾನ್ರಾಡ್‌ನು ಆತನನ್ನು ಮಂಗನ ಪ್ರತಿಮೆಗಳ ಮೂಲಕ ಚಿತ್ರಿಸುತ್ತಾನೆ. ಲೀನಾಳ ವ್ಯಕ್ತಿತ್ವದಲ್ಲಿ ಬೈಬಲ್ಲಿನಲ್ಲಿ ಚಿತ್ರಿತವಾಗಿರುವ ಹೆಣ್ಣಿನ ಎರಡೂ ಮುಖಗಳು ಕಾಣಿಸಿ ಕೊಳ್ಳುತ್ತವೆ. ಉದಾಹರಣೆಗೆ ಅವಳಿಗೆ ಅಲ್ಮಾ ಮತ್ತು ಮ್ಯಾಗ್ಡಾಲೀನ್ ಎಂಬ ಎರಡೂ ಹೆಸರುಗಳಿವೆ. 'ಅಲ್ಮಾ' ಎಂಬಿದು ಅವಳ ನಿರ್ಮಲತೆಯನ್ನೂ ಪ್ರತಿನಿಧಿಸಿದರೆ 'ಮ್ಯಾಗ್ಡಾಲಿನ್' ಎಂಬುದು ಅವಳ ಐಹಿಕತೆಯನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಅವಳು ಸಾರ್ವತ್ರಿಕವಾದ ಮತ್ತು ಸಾರ್ವಕಾಲಿಕವಾದ ಸ್ತ್ರೀ ತತ್ವವನ್ನು ಸಾಂಕೇತಿಸ್ತುತ್ತಾಳೆ. ತಮ್ಮಿಬ್ಬರಿಗೂ ತನ್ನಿಂದಾಗಿಯೆ ಅಂದರೆ ತಾನೊಂದು ಹೆಣ್ಣಾದುದರಿಂದ ಅಂದರೆ ತಾನೊಬ್ಬ ಮೋಹಿನಿಯಾದುದರಿಂದಲೆ ಕಷ್ಟವನ್ನನುಭವಿಸಬೇಕಾಯಿತು ಮತ್ತು ವ್ಯಭಿಚಾರವೆಂಬ ಪಾಪಕ್ಕೆ ಶಿಕ್ಷೆಯನ್ನನುಭವಿಸಬೇಕಾಯಿತು ಎಂಬುದು ಅವಳ ಅರಿವಿಗೆ ಬರುತ್ತದೆ. ಅಲ್ಲಿ ಬಂದ ಮೂವರು ಅವರ ಪಾಪಕ್ಕೆ ತಕ್ಕ ಶಿಕ್ಷೆಕೊಡಲಿಕ್ಕಾಗಿಯೆ ದೇವರಿಂದ ಕಳಿಸಿಕೊಟ್ಟ ಧೂತರಂತೆ ಅನ್ನಿಸುತ್ತಾರೆ.

ಕಾನ್ರಾಡನು ಈ ಕಾದಂಬರಿಯಲ್ಲಿ 'ಪ್ರೇಮಿಗಳ ಪಲಾಯನ' ದಂಥ ಸರ್ವಸಾಮಾನ್ಯವೂ ಪತ್ತೇದಾರಿಯೂ ಆಗಿರುವಂಥ ಕಥಾವಸ್ತುವನ್ನೆ ತೆಗೆದುಕೊಂಡು ಅದರ ಮೂಲಕ ಮೂಲಭೂತವಾದ ಹಾಗೂ ಸಾರ್ವತ್ರಿಕವಾದ ನೈತಿಕ ಹಾಗೂ ಧಾರ್ಮಿಕ ಸಮಸ್ಯೆಗಳನ್ನು ಅತ್ಯಂತ ಕಲಾತ್ಮಕವಾಗಿ ಚಿತ್ರಿಸುವುದರಿಂದ ಆತನ ಪ್ರತಿಭೆ ಮೊದಲ ದರ್ಜೆಯದಾಗಿದ್ದು ಆತ ಆಂಗ್ಲ ಸಾಹಿತ್ಯ ಸಂಪ್ರದಾಯ ನಿರ್ಮಾತೃಗಳಲ್ಲಿ ಅತ್ಯಂತ ಅಗ್ರಗಣ್ಯನಾಗಿದ್ದಾನೆ.

ಶಾಂತರಸರ ಕತೆಗಳಲ್ಲಿ ಸಾಮಾಜಿಕ-ಭಾಷಾಶೈಲಿ ಪ್ರಭೇದಗಳು

● ಡಾ. ವಿ. ಶಿವಾನಂದ

ಕನ್ನಡದಲ್ಲಿ ಕೆಲವೊಂದು ಸಾಹಿತ್ಯ ಕೃತಿಗಳ ಭಾಷಿಕ ಅಧ್ಯಯನ ನಡೆದಿದ್ದರೂ. ವರ್ಣನಾತ್ಮಕ ಭಾಷಾವಿಜ್ಞಾನದ ಚೌಕಟ್ಟನ್ನು ಮೀರಿ ಸಾಮಾಜಿಕ ಭಾಷಾನುಸಂಧಾನದ ಕಡೆಗೆ ಇದುವರೆಗೆ ಗಮನ ಹರಿಸಿದಂತಿಲ್ಲ. ಉಪಭಾಷೆಗಳನ್ನು ಈ ದೃಷ್ಟಿಯಿಂದ ಗಮನಿಸಬಹುದಾದರೂ ಅಲ್ಲಿಯೂ ಸಹ ಸಾಮಾಜಿಕ ವಿಶ್ಲೇಷಣೆಗಿಂತ ಪ್ರಾದೇಶಿಕ ಪ್ರಭೇದಗಳ ಕಡೆಗೆ ಮಾತ್ರ ಲಕ್ಷ್ಯ ಪೂರವಿಸಿದಂತಿದೆ.

ತೀರ ಇತ್ತೀಚೆಗೆ ಆಧುನಿಕ ಭಾಷಾವಿಜ್ಞಾನದ ಅನ್ವಯಿಕ ಶಾಖೆಗಳಲ್ಲಿ ಒಂದಾದ ಸಾಮಾಜಿಕ-ಭಾಷಾವಿಜ್ಞಾನವು[1] ಭಾಷೆ–ಸಮಾಜಗಳ ಸಂಬಂಧವನ್ನು ಅತ್ಯಂತ ನಿಕಟವಾಗಿಸುತ್ತದೆಯಲ್ಲದೆ, ಸಾಹಿತ್ಯ ಕೃತಿಗಳ ಶೈಲಿಯ ಅಧ್ಯಯನ (Stylistics) ದೃಷ್ಟಿಯಿಂದಲೂ ಅದರ ಮಹತ್ವ ಹೆಚ್ಚಿದೆ. ಆದರೆ ಇಲ್ಲಿ 'ಪದಶೈಲಿ ಅಧ್ಯಯನ'ದ ಪ್ರತ್ಯೇಕ ಆಲೋಚನೆಗೆ ತೊಡಗದೆ. ಸಾಮಾನ್ಯವಾಗಿ 'ಸಾಮಾಜಿಕ ಭಾಷಾವಿಜ್ಞಾನ'ದಲ್ಲಿ ಅನ್ವಯವಾಗುವ ಶೈಲಿಯ ಪ್ರಭೇದಗಳ (Stylistic Variations) ಬಗೆಗೆ ಮಾತ್ರ ವಿವರಿಸುವ ಪ್ರಯತ್ನವಿದೆ. ಸೌಥ್‌ವರ್ಥ್ ಕೆಳಗಿನಂತೆ ಈ ಪ್ರಭೇದ ಕುರಿತು ವ್ಯಾಖ್ಯಾನಿಸುತ್ತಾನೆ.

---

1. ವಿಲಿಯಂ ಲೆಬೊವ್ (1966) ಫಿಲಿಪ್ ಕೆ. ಬಾಕ್ (1968) ವಿಲಿಯಂ ಬ್ರೈಟ್ (1964) ಡೆಲ್ ಹೈಮ್ಸ್ (1972) ಮುಂತಾದವರ ಸಾಮಾಜಿಕ-ಭಾಷಾನ್ವೇಷಣೆ. ಪರಿಸೂತ್ರಗಳು. ಶ್ರೇಣಿಯ ಕಲ್ಪನೆ ಇವುಗಳಿಂದ ಈ ಕ್ಷೇತ್ರ ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ. ಫಿಲಿಪ್ ಕೆ. ಬಾಕ್‌ನು ಹೇಳುವಂತೆ 'ಸಾಮಾಜಿಕ ಭಾಷಾವಿಜ್ಞಾನ' (Socio-Linguistics) ಸಾಮಾಜಿಕ ರಚನೆ (Social Structure) ಮತ್ತು ಭಾಷಿಕ ರಚನೆ (Linguistic Structure) ಗಳೆರಡರ ಸಾದೃಶ್ಯವನ್ನು ರೂಪಿಸುತ್ತದೆ. (1968) The Sociology of Language - J. A. Fishman (Ed) Mounton the Hague. ವಿಲಿಯಂ ಲೆಬೊವ್‌ನ ಪ್ರಕಾರ ಇದು 'ಸಾಮಾಜಿಕ ಶ್ರೇಣಿ (Social Stratification)' ಮತ್ತು ಭಾಷಿಕ ಶ್ರೇಣಿ (Linguistic Stratification) ಇವೆರಡರ ಪರಸ್ಪರ ಸಂಬಂಧಗಳ ವೈಜ್ಞಾನಿಕ ಅಧ್ಯಯನವಾಗಿದೆ. Mounton the Hague paris. _'Socio-Linguistic Patterns'.

"Stylistic Variation-difference in the speech of the same individual or group that correlate with differences in the social situation".

South Worth (1971)

"ವಿಭಿನ್ನ ಸಾಮಾಜಿಕ ಸನ್ನಿವೇಶಗಳಿಗೆ ಅನುಗುಣವಾಗಿ ಒಬ್ಬನೇ ವ್ಯಕ್ತಿ ಅಥವ ಒಂದು ವಾಕ್ಸಮುದಾಯದವರಾಡುವ ವಿಭಿನ್ನ ಮಾತಿನ ರೂಪಗಳೇ ಶೈಲಿ ಪ್ರಭೇದಗಳು".

ಹೈದ್ರಾಬಾದು ಕನ್ನಡ ಪ್ರದೇಶದ ಹೆಸರಾಂತ ಲೇಖಕ, ಪ್ರಗತಿಬಂಡಾಯ ಮುಂತಾದ ಧೋರಣೆಯ ಪುರಸ್ಕರ್ತ ಹಾಗೂ ಸಮಾಲೋಚಕರಾದ ಶಾಂತರಸರ ಇತ್ತೀಚಿನ ಕೃತಿ 'ಬಡೇಸಾಬು ಪುರಾಣ'ದ ಕತೆಗಳಲ್ಲಿ ಆಯಾ ಪಾತ್ರಗಳು ವಿಭಿನ್ನ ಸಾಮಾಜಿಕ ಸನ್ನಿವೇಶಗಳಿಗನುಗುಣವಾಗಿ ಹೇಗೆ ವಿಭಿನ್ನ ಶೈಲಿಗಳನ್ನು ಪ್ರತಿನಿಧಿಸುತ್ತವೆ ಎಂಬುದನ್ನು ಸಾಮಾಜಿಕ-ಭಾಷಾವಿಜ್ಞಾನದ ತಂತ್ರಗಳ ಹಿನ್ನೆಲೆಯಲ್ಲಿ ಪರಿಶೀಲಿಸುವ ಉದ್ದೇಶದಿಂದ ಮೇಲಿನ ಹಿನ್ನೆಲೆಯನ್ನು ಕೊಟ್ಟಿದೆ.

ಶಾಂತರಸರ ಸಣ್ಣಕತೆಗಳಲ್ಲಿನ ಸಾಮಾಜಿಕ ಶೈಲಿ ಪ್ರಭೇದಗಳನ್ನು ಈ ಕೆಳಗಿನ ಮೂರುಸ್ತರಗಳಲ್ಲಿ ಗುರುತಿಸಬಹುದಾಗಿದೆ.

(1) ಸಾಮಾಜಿಕ ಸನ್ನಿವೇಶ ಸ್ತರ (Social-Situation Level)
(2) ಸಾಮಾಜಿಕ ವಿಷಯ ಸ್ತರ (Social-Topic Level)
(3) ಸಾಮಾಜಿಕ ಶ್ರೇಣಿ ಸ್ತರ (Social Stratification Level)

ಸಾಮಾಜಿಕ ಸನ್ನಿವೇಶ :-

ಬ. ಪು. ದ. ವ್ಯಕ್ತಿಗಳು ವಿಭಿನ್ನ ಸನ್ನಿವೇಶಗಳಲ್ಲಿ (Social Situation or contexts) ಪರಸ್ಪರ ಸಂಧಿಸುತ್ತಾರೆ. ಈ ಸನ್ನಿವೇಶಗಳನ್ನು ಅವರು ಸಂಧಿಸುವ ಸ್ಥಳ ನಿವೇಶನ ಅಥವ ಆವರಣಗಳಲ್ಲಿ ಗುರುತಿಸಬಹುದು. ಇಲ್ಲಿ ಇವನ್ನು ಹೀಗೆ ಪಟ್ಟಿಮಾಡಹಬುದು.[2]

2. ಎರ್ವಿನ್ ಟ್ರಿಪ್ 'Socio-Linguistic Rules of Address' ಕುರಿತು ವಿವರಿಸುತ್ತ 'ನ್ಯಾಯಾಲಯ' 'ಸಂಕಾಯ' (Faculty) ಹಾಗೂ ಪರಿಷದ್ ಗೋಷ್ಠಿಗಳಲ್ಲಿ ಕ್ರಮವಾಗಿ 'your honour', 'Mr. Chairman', 'Mr. President' ಗಳು ಬಳಕೆಯಿರುವದಾಗಿ ಹೇಳಿ ಇದು 'ಸನ್ನಿವೇಶ' ಗಳಲ್ಲಿನ ಅಂತರದ ಪ್ರಭಾವವೆಂದು ಹೇಳುತ್ತಾರೆ. ಈ ಸನ್ನಿವೇಶಗಳು ಸ್ಥಾನಮಾನಕ್ಕನುಗುಣವಾಗಿಯೂ ಬದಲಾಗುತ್ತವೆ. (Status Markers) Holmes (Ed) 1973. Socio-Linguistics.

'ಮಾಯೆಯೆಂದರೆ ಮಾಯೆ'	:	ಬಚ್ಚಲಮನೆ, ಮಡದಿ, ಪಡಶಾಲೆ, ಜಾತಿಗೇರ
(ಮಾ. ಮಾ.)	:	ಮನೆ, ಕಿರಾಣಿಅಂಗಡಿ, ತೋಟ.
'ಕಿಡಿ'	:	ಇಸ್ಪೀಟುಕಟ್ಟೆ, ಹೆಂಡದ ಕೇರಿ. ಸಾಲೆ. ಹೊಲದ ಬದು. ಪಂಚಾಯತಿ. ಚಾವಡಿ.
'ಮಲ್ಲಮ್ಮ'	:	ಸೇದೆ ಭಾವಿ, ಅಂಗಡಿ, ಮನೆ,
'ರೋಗಿ'	:	ಆಸ್ಪತ್ರೆ, ಕ್ಲಬ್ಬು, ಯಾತ್ರಾಸ್ಥಳ, ದೇವಸ್ಥಾನ.
'ಬಡೇಸಾಬು ಪುರಾಣ'	:	ಪಡಸಾಲೆ. ಮಾಪರಕೇರಿ. ಕಿರಾಣಿ ಅಂಗಡಿ, ಹೆಂಡದಂಗಡಿ, ಚಾವಡಿ, ಮಸೀದೆ, ಗೌಡರ ಮನೆ, ಮುಂ.

ಸಾಮಾಜಿಕ ವಿಷಯ :-

ಮಾ. ಮಾ........	:	ದಾಂಪತ್ಯ ಸುಖ, ಪ್ರೇಮ, ವೇದಾಂತ.
ಕಿಡಿ	:	ಹೆಣ್ಣಿನ ಹಂಬಲು, ವ್ಯಭಿಚಾರ, ಸಾಲೆಯ ವಿದ್ಯೆ, ನ್ಯಾಯ, ತಕರಾರು.
ಮಲ್ಲಮ್ಮ	:	ಸಾಲದ ಹೊರೆ. ಹೆಣ್ಣಿನ ಅಪವಾದ. ಶೋಷಣೆ.
ರೋಗಿ	:	ಉಪಚಾರ. ಆಟ. ನಾಟಕ. ಸಂಗೀತ. ಯಾತ್ರೆ, ಮನಃಕ್ಷೋಭೆ.
ಬಡೇಸಾಬು ಪುರಾಣ	:	ಇಟ್ಟುಕೊಳ್ಳುವಿಕೆ. ಜಾತೀಯತೆ. ಬಣ. ಅತ್ಯಾಚಾರ, ವ್ಯಭಿಚಾರ, ಪ್ರತಿಭಟನೆ, ಕ್ರಾಂತಿ.

ಸಾಮಾಜಿಕ ಶ್ರೇಣಿ :-

'ಬಡೇಸಾಬು ಪುರಾಣ'ದ ಒಟ್ಟು ಪಾತ್ರಗಳನ್ನು ಗಮನಿಸಿದರೆ ಸಮಾಜದಲ್ಲಿನ ಈ ಕೆಳಗಿನ ಶ್ರೇಣಿ (Social Hierarchical ordering) ವ್ಯವಸ್ಥೆ ಕಂಡು ಬರುತ್ತದೆ.

ಜಾತೀಯ ಶ್ರೇಣಿ

ಹಿಂದೂ ಅನುಶ್ರೇಣಿ :

I. ಹಿರೇಮಠ

II. ಲಿಂಗಾಯತ

[ಬಣಜಿಗ
ಒಕ್ಕಲಿಗ]

III. [ಪಂಚಾಳ
ಹಡಪಿಗ
ಅಗಸ
ಉಪ್ಪಾರ
ಕುರುಬ
ಕಪ್ಪೇರ
ಕಟುಕ
ಜಾತಿಗೇರ
ಮಾದಿಗ
ಹೊಲೆಯ]

ಮುಸ್ಲೀಮ ಅನುಶ್ರೇಣಿ :

[ಮುಲ್ಲಾ
ಕಾಫಿರ್
ಪಠಾನ್]

ಅಧಿಕಾರ ಶ್ರೇಣಿ

[ಸಿಪೆಸಲಾರ್
ಅಮೀನ್
ಗೌಡ
ಕುಲಕರ್ಣಿ
ತಳವಾರ
ಬೇಗಾರ]

ಸಾಮಾಜಿಕ ಭಾಷಾವಿಜ್ಞಾನದಲ್ಲಿ ಕಾಳಜಿಪೂರ್ವಕವಾಗಿ ಗಮನಿಸಬೇಕಾದ ಅಂಶವೆಂದರೆ ಭಾಷಿಕ ಪರಿಸರಗಳಿಗೆ ಸಾಮಾಜಿಕ ಘಟಕಗಳು (Social parameters) ಕಾರಣವಾಗುವವನ್ನು ಸೂತ್ರಗಳಲ್ಲಿ ಕಂಡು ಹಿಡಿಯುವದು. ಇಲ್ಲಿ ಈ ಕೆಳಗಿನ ಸೂತ್ರದ ಮೂಲಕ ಶೈಲಿಯ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು.

$$(V) \longrightarrow \begin{bmatrix} V_1 \\ V_2 \\ V_3 \end{bmatrix} \Big/ \begin{bmatrix} SE_1 \\ SE_2 \\ SE_3 \end{bmatrix} + \begin{bmatrix} SP_1 \\ SP_2 \\ SP_3 \end{bmatrix}$$

(ವಿವರಣೆ : (V)—Variable rule ( ) ವಿಭೇದಕ ಸೂತ್ರ. V-Variable ವಿಭೇದಗಳು. S. E. ಶೈಲಿಯ ಪರಿಸರ (Stylistic Environment) SP = Social parameters ಸಾಮಾಜಿಕ ಘಟಕಗಳು.)

ಶೈಲಿಪ್ರಭೇದಗಳು :-

'ಶೈಲಿ'ಗೆ ಸಾಮಾಜಿಕ ಭಾಷಾವಿಜ್ಞಾನಗಳಲ್ಲಿ ಒಂದೊಂದು ಸಂದರ್ಭದಲ್ಲಿ ಒಂದೊಂದು ಅರ್ಥ ನಿರೂಪಿತವಾಗಿದ.[3] ಆದರೆ ಇಲ್ಲಿ ಆ ಸಂದಿಗ್ಧವಾದ ವಿಚಾರಗಳನ್ನು ಪ್ರಸ್ತಾಪಿಸದೆ, ಮುಖ್ಯವಾಗಿ ಬಹುಮತದಿಂದ ಒಪ್ಪಿತವಾದ ಶೈಲಿ ಪ್ರಭೇದಗಳಿಗೆ ಮಾತ್ರ ಶಾಂತರಸರ ಕತೆಗಳನ್ನು ಉಪಲಕ್ಷ್ಯವಾಗಿಸಿಕೊಂಡಿದೆ. ಮುಖ್ಯವಾಗಿ ಇಲ್ಲಿ 'ವಿಲಿಯಂ ಲೆಬೊವ್' ಸಾಮಾಜಿಕ ಭಾಷಾಪ್ರವೃತ್ತಿಗಳನ್ನು ಸೂತ್ರಗಳಲ್ಲಿ ಹೇಳುವಾಗ ಅನುಸರಿಸಿರುವ ಶೈಲಿಪ್ರಭೇದಗಳನ್ನು ಶಾಂತರಸರ ಕತೆಗಳಿಗೆ ಅನ್ವಯಿಸಿಕೊಂಡಿದೆ. ವಿಲಿಯಂ ಲೆಬೊವ್‌ನ ಪ್ರಕಾರ ಶೈಲಿಗಳಲ್ಲಿ 3 ವಿಧ. (1) ಔಪಚಾರಿಕ ಶೈಲಿ Careful Style (2) ಅನೌಪಚಾರಿಕ ಶೈಲಿ (Casual Style) (3) ಕೀಳು ಶೈಲಿ (Low Style) ಇವುಗಳ ಜೊತೆಗೆ ಪದಕೋಶ (Wordlist) ಕನಿಷ್ಠಯುಗ್ಮ (Minimal pairs) ಹಾಗೂ ದ್ವಿಭಾಷಿಕತೆ (Bi-Lingualism) ಗಳನ್ನು ಸಹ ಭಾಷಾವಿಭೇದಕ ಸೂತ್ರಗಳಲ್ಲಿ ಸೇರಿಸಿಕೊಳ್ಳಬಹುದು. ಇವೆಲ್ಲದರ ನೆಲೆಯಲ್ಲಿ ಮೇಲೆ ವಿವರಿಸಿದ ಸಾಮಾಜಿಕ ಸನ್ನಿವೇಶ, ವಿಷಯ ಮತ್ತು ಸಾಮಾಜಿಕ ಶ್ರೇಣಿಗಳು ಬರುತ್ತವೆ. ಇವೆರಡರ ಅನ್ಯೋನ್ಯಾಶ್ರಯದಿಂದ (Correlation) ನಮಗೆ ಸಾಮಾಜಿಕ ಶೈಲಿಯ ಮುಖಗಳು ಹೇಗೆ ವಿಭಿನ್ನವಾಗುತ್ತವೆ ಮತ್ತು ಪ್ರತಿಯೊಂದು ಶೈಲಿಯಲ್ಲೂ ಸಾಮಾಜಿಕ ನಿಯಮ ಮತ್ತು ಭಾಷಾನಿಯಮಗಳು ಹೇಗೆ ಸ್ಪಂದಿಸುತ್ತವೆ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಇವನ್ನೀಗ ಅನುಕ್ರಮವಾಗಿ ವಿವರಿಸಿದೆ.

ಔಪಚಾರಿಕ ಶೈಲಿ :-

'ಔಪಚಾರಿಕ'ವನ್ನೇ 'ಕಾಳಜಿಪೂರ್ವಕ', 'ಪ್ರಾಜ್ಞಿಕ', 'ಶಿಷ್ಟ', 'ಸಾರ್ವಜನಿಕ' ಎಂದು ಕರೆಯಲಾಗುತ್ತದೆ.[4] ಮಾರ್ಟಿನ್ ಜೂಸ್ ಹೇಳುವಂತೆ, 'ಇಲ್ಲಿ ವೈಯಕ್ತಿಕ

---

3. ಫರ್ಗುಸನ್ ಮತ್ತು ಜಾನ್‌ಗುಂಪರ್ಝ್‌ರವರು ಇದನ್ನು 'ಉಪಭಾಷೆ' (Dialect) ಯೊಂದಿಗೂ (1960 : 11) ಹಾಲಿಡೇ ಇದನ್ನು ನಮೂದಿತ ಭಾಷಿ (Register) ಯೊಂದಿಗೂ ಅನ್ವಯಿಸುತ್ತಾರೆ. ಆದರೆ ಇದನ್ನು ನಿರ್ದಿಷ್ಟ ಪ್ರಭೇದಗಳೊಂದಿಗೆ ಗುರುತಿಸಿದ ಸಾಮಾಜಿಕ ಭಾಷಾವಿಜ್ಞಾನಿಗಳೆಂದರೆ ಜೂಸ್ (1962) ಜೆ. ಎ. ಫಿಶ್‌ಮನ್ (1960)

ಮುಂದುವರೆದಿದೆ

4. ಈ ಕೆಳಗಿನ ಪಟ್ಟಿಯಲ್ಲಿ 'ಔಪಚಾರಿಕ', 'ಅನೌಪಚಾರಿಕ' ಶೈಲಿಗಳ ಪರ್ಯಾಯ ಪದಗಳನ್ನು ಕೊಟ್ಟಿದೆ.

Kenyon J. S.	(1958)	Formal—Familiar
Sjoberg Andree	(1962)	Informal

ಮುಂದುವರೆದಿದೆ

ಶೈಲಿಯ ನಿರಸನವಿದ್ದು 'ವ್ಯಕ್ತಿಮಾತನಾಡುವ 'ವಸ್ತು'ವಿಚಾರಕ್ಕೆ ಪ್ರಾಧಾನ್ಯವಿರುತ್ತದೆ. 'ವಕ್ತಾರ'ನು ಒಂದು ಪೂರ್ವ ನಿಯೋಜಿತ ಉತ್ತರವನ್ನೀಯುವಂತೆ ಇಲ್ಲಿನ ಶೈಲಿಯನ್ನು ಬಳಸುತ್ತಾನೆ. ಸಾಮಾನ್ಯವಾಗಿ ಔಪಚಾರಿಕ ಶೈಲಿಯನ್ನು ಹೆಚ್ಚು ಶಿಷ್ಟ ಪರಿಸರದಲ್ಲೂ ಪ್ರಾಜ್ಞಿಕ ಅಥವ ವೈಚಾರಿಕ ಮಟ್ಟದಲ್ಲೂ ನಾವು ಕಾಣುತ್ತೇವೆ. ಇಲ್ಲಿ ಕೇವಲ ಒಂದು 'ಸುದ್ದಿ'ಯ ಬಿತ್ತರಣೆಯಿರದೆ. ಸುಸಂಬದ್ಧವಾಗಿ ನಿರೂಪಿಸುವ ಕ್ರಮಕ್ಕೆ ಹಾಗೂ ಶಾಬ್ದಿಕ ಸಾಷ್ಟವಕ್ಕೆ ಮಹತ್ವವಿರುತ್ತದೆ. ಎಂ. ಗ್ಯಾಸಮ್ (1980) ಅವರನ್ನಿಲ್ಲಿ ಉಲ್ಲೇಖಿಸಿದೆ.

"The expressions which are not informations but verbal efforts to convince the hearer or to create a respectful good Image of the Speaker in the hearer's mind are in careful style. ನಿದರ್ಶನಕ್ಕೆ ಈ ಕೆಳಗಿನ ವಾಕ್ಯಗಳನ್ನು ಸಾಮಾಜಿಕ ಸನ್ನಿವೇಶ, ವಿಷಯ ಮತ್ತು ಶ್ರೇಣಿ ಇವುಗಳ ಹಿನ್ನೆಲೆಯಲ್ಲಿ ಗಮನಿಸಬಹುದು.

(1) "ನಿಜಕ್ಕೂ ನಾಟಕ ಬಹಳ ಚೆನ್ನಾಗಿತ್ತು, ನಿಮ್ಮ ಅಭಿನಯವಂತೂ ಸುಪರ್ಬ: ಎಕ್ಸಲೆಂಟ್. ನಿಜಕ್ಕೂ ನೀವು ನಾಟ್ಯ ಸರಸ್ವತಿ" (ರೋಗಿ).

(2) "ಗಂಡ ಅಂದ್ರೆ ಸಂಸಾರದ ಗಂಡ ಅಲ್ಲ ಈ ಗಂಡಗಂಜೋದು ಅಲ್ಲ. ಗಂಡ ಅಂದ್ರೆ ಲಿಂಗಪತಿ ದೇವರು ಆತನಿಗೆ ಅಂಜಿ ಅಂದ್ರೆ ಭಕ್ತಿ ಮಾಡಿ ಬದುಕ್ ಮಾಡಬೇಕು. ಅಂದ್ರೆ ಅನುಭಾವ ಮಾಡಬೇಕು" (ಮಾ. ಮಾ.).

ಹಿಂದಿನ ಪುಟದಿಂದ

3. ವಿಲಿಯಂ ಲೆಬೊವ್ (1966) ಹೆಪ್ಪೆಸೆಕ್ ಮುಂತಾದವರು. ಜೂಸ್ 5 ವಿಧದ ಶೈಲಿಗಳನ್ನು ಹೇಳಿದ್ದಾನೆ. (1) Intimate (2) Casual (3) Consultative (4) Formal (5) Frozen. ಹಾಲಿಡೇ ಹೇಳುವ Style of discourse ನ್ನು ವಿಲಿಯಂ ಲೆಬೊವ್ 3 ವಿಧವಾಗಿ ವಿಂಗಡಿಸುತ್ತಾನೆ.

ಹಿಂದಿನ ಪುಟದಿಂದ

4.

Libov William	(1972)	Careful—Casual
Voegelin	(1972)	Non—Casual
Bergs Land and Vogt	(1972)	Concious—Unconcious
Haugen Einar	(1972)	Public—Private

(3) "ಅದೆಲ್ಲ ದೊಡ್ಡ ಪುರಾಣ ಗೌಡ್ರೇ" ಈ ದೇಶ ಸಮ್ರುದ್ಧಾಗ್ತದ ಮುಸಲ್ಮಾನ ರಾಜ್ಯ ಆಗ್ತದ ನೀ ಬೇಕಾದ್ ಮಾಡ್ ನಡೀತದ ಹೊಡಿ, ಬಡಿ, ದೋಚು ನಾವು ಗೆದಿತೀವಿ ಅಂಜಬ್ಯಾಡ ಅಂತ ಹೇಳಿದ್ರು, ಬಂದೂಕ ಕೊಟ್ರು, ಭರ್ಚಿಕೊಟ್ರು; ಹಣಕೋಟ್ರು ಅವರ ಮಾತು ಕೇಳಿ ಕುಣದಾಡಿದೆ. (ಬ. ಪು.)

ಮೇಲಿನವುಗಳಲ್ಲಿ ಮೊದಲನೆಯದು 'ಶಿಷ್ಟ', 'ಔಪಚಾರಿಕ' ಎಂಬುದು ಸ್ಪಷ್ಟ ಆದರೆ ಎರಡನೆಯದು ಆಡುಮಾತಿನ ಪ್ರಯೋಗದಲ್ಲೇ ಇದ್ದರೂ ಅಲ್ಲಿ ಹೇಳುವ 'ವಿಷಯ'ಕ್ಕೆ ಮಹತ್ವ. ಮೂರನೆಯದರಲ್ಲಿ 'ವಿವರಣೆ' (Manner)ಗೆ ಮಹತ್ವ. ಕಾರಣ ಇವೆರಡೂ ಔಪಚಾರಿಕ ಶೈಲಿಯ ಒಂದೊಂದು ಪ್ರಭೇದಗಳೇ ಆಗುತ್ತವೆ.

ಔಪಚಾರಿಕ ಶೈಲಿಯನ್ನು ನಾವು 'ವಿಷಯ', 'ವಿವರಣೆ', ಸಾರ್ವಜನಿಕ ಅಥವ 'ಶಿಷ್ಟ' ಪರಿಸರ ವರ್ಗ ನೆಲೆಯಲ್ಲಿ ಗುರುತಿಸುವಂತೆ 'ಲಿಖಿತ ಪಾಠ' (Reading passages) 'ಪದಕೋಶ' (Wordlist) ಹಾಗೂ ಕನಿಷ್ಠ ಯುಗ್ಮ (Minimal pair) ಗಳಲ್ಲೂ ತಿಳಿಯಬಹುದು.

ಲಿಖಿತ ಪಾಠ :-

(1) 'ನೋಡು ಸಖಿ ಬೆಳಗುತಿದೆ ಪರಯ ಪ್ರಕಾಶದ ಜ್ಯೋತಿ। ಈಡ ಪಿಂಗಳ ಮಧ್ಯದಿ ಗುರುಕರಣ ಪ್ರಖ್ಯಾತಿ॥ (ಮಾ. ಮಾ.).

(2) 'ನಾನಿನಗೆ ನೀನನಗೆ ಜೇನಾಗುವಾ। ರಸದೇವ
ಗಂಗೆಯಲಿ ಮೀನಾಗುವಾ॥ (ರೋಗಿ)

ಸಾಮಾಜಿಕ ಶ್ರೇಣಿ ಸ್ತರಗಳಲ್ಲಿ ಮೊದಲನೆಯದನ್ನು ಸಮಾಜದ ಕೆಳವರ್ಗದ ಓರ್ವ ಹೆಂಗಸು 'ಚಂದವ್ವ' ಹಾಡುತ್ತಾಳೆ. ಎರಡನೆಯದನ್ನು ಮೇಲುವರ್ಗದ ಸುಶಿಕ್ಷಿತ ಹಾಗೂ ಓರ್ವ ಅಧಿಕಾರಿಯ ಹೆಂಡತಿಯಾದ ಸಾವಿತ್ರಿ ಹೇಳುತ್ತಾಳೆ. ಇಲ್ಲಿ ಇವೆರಡೂ ಲಿಖಿತವಾದ ಪಾಠಗಳಿರುವದರಿಂದ ಇವರಿಬ್ಬರಲ್ಲೂ ಈ ಸ್ಥಳದಲ್ಲಿ ಯಾವುದೇ ಶೈಲಿಯ ವ್ಯತ್ಯಾಸ ಕಂಡುಬರವದಿಲ್ಲ. ಅದೇ ರೀತಿ ಪದಕೋಶ (Wordlist) ದಲ್ಲೂ ಸಹ ಸಮಾಜದ ಯಾವುದೇ ಶ್ರೇಣಿಯ ವ್ಯಕ್ತಿಗಳು ಹೆಚ್ಚು ಪ್ರಜ್ಞಾಪೂರ್ವಕವಾಗಿ ಕೋಶದ ಮಟ್ಟದ ಪದಗಳನ್ನು ಅವುಗಳ ರೂಪ ವ್ಯತ್ಯಯ ವಾಗದಂತೆ ಬಳಸುವದು ಕಂಡುಬರುತ್ತದೆ.

ಪದಕೋಶ (Wordlist) :-

ಪಾತ್ರಗಳು :	**ಪದಕೋಶ :**
ಡಾಕ್ಟರ್	"ಪಾತಾಳಗಂಗೆ"

ಸಾವಿತ್ರಿ	"ಶ್ರೀಶೈಲ"
ಗೌಡ	"ಸುಷ್ಮುಮ್ನದ್ವಾರ"
ಅಮರಯ್ಯ	"ಪರಬ್ರಹ್ಮ"
ಪೋಲಿಸಗೌಡ	"ಅಹವಾಲು"
ಬಡೇಸಾಬು	"ಜೆದಾದ್"
ನರಸನಗೌಡ	"ಮಾಮ್ಲಾ"
ಕಾಶಪ್ಪ	"ಶಿವೋಹರಿ"
ನಾಗೇಶ	"ಬ್ಲಡ್‌ಪ್ರೆಶರ್"

ಮೇಲಿನಂತೆಯೇ ನಾವು ಕನಿಷ್ಠಯುಗ್ಮಗಳನ್ನು ಅವಲೋಕಿಸಿದಾಗ ಹೆಚ್ಚು ಕಾಳಜಿ ಅಥವ ಔಪಚಾರಿಕ ಶೈಲಿ ಅಲ್ಲಿ ಪ್ರಧಾನವಾಗಿರುವದನ್ನು ತಿಳಿಯುತ್ತೇವೆ. ನಿದರ್ಶನಕ್ಕೆ ಯಾವದೇ ಪಾತ್ರಗಳು ಭಾಷೆಯನ್ನು ಬಳಸುವಾಗ ಅರ್ಥ ವೈದೃಶ್ಯವಿರುವ ಕಡೆಗಳಲ್ಲಿ ಆಯಾಧ್ವನಿಗಳ ಕಡೆಗೆ ಅವುಗಳ ಉಚ್ಚಾರಣೆ ಮತ್ತು ಸ್ಥಾನಗಳ ಕಡೆಗೆ ಲಕ್ಷವಹಿಸುತ್ತಾರೆಂಬುದು ಸ್ಪಷ್ಟವಾಗುತ್ತದೆ.

ಉದಾ : /ಚ್/ ÷ /ಜ್/ ಚೇಲ 'ಶಿಷ್ಯ', ಜೇಲ 'ಕಾರಾಗೃಹ'
/ಪ್/ ÷ /ಹ್/ ಪರಡಿ 'ತಕ್ಕಡಿ', ಹರಡಿ 'ವ್ಯಾಪಕಗೊಳ್ಳು'
/ಡ್/ ÷ /ಡ್ಡ/ ಬುಡು 'ಬಿಡು', ಬುಡ್ಡಪ್ಪ 'ಬಡೇಸಾಬು' (ನಾ)

ಅನೌಪಚಾರಿಕ ಶೈಲಿ :-

ಇದು 'ಖಾಸಗಿ' 'ವ್ಯಾವಹಾರಿಕ', 'ಅಪ್ರಜ್ಞಾಪೂರ್ವಕ', 'ಕಾಳಜಿರಹಿತ' ವಾಗಿರುವ ಶೈಲಿ. ಶಿಷ್ಟವಲ್ಲದ ಯಾವುದೇ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಗಳು ಪರಸ್ಪರರನ್ನು ಸಂಧಿಸುವಾಗ ನಡೆಸುವ ಮಾತುಕತೆಗಳನ್ನು ಇಲ್ಲಿ ಪಟ್ಟಿ ಮಾಡಬಹುದು. ಪರಸ್ಪರ ಪರಿಚಯ, ಸ್ನೇಹ, ಪ್ರೇಮಕೂಟ, ಸಲ್ಲಾಪ, ಗ್ರಾಮಚಾವಡಿ, ಹೆಂಡದ ಕೇರಿ, ಸೇದೆಭಾವಿ, ಹೊಲ-ಮನೆ, ಅಂಗಡಿ–ಕುಲಕಸಬು, ಕಿರಾಣಿ ಅಂಗಡಿ ಯಾವುದೇ ಸನ್ನಿವೇಶಗಳಲ್ಲಿನ ಭಾಷೆಯ ಬಳಕೆ ಇಂತಹ ಅನೌಪಚಾರಿಕ ಶೈಲಿಯನ್ನು ಪ್ರತಿನಿಧಿಸ ಬಲ್ಲುದು. ಇಲ್ಲಿ ಶಿಷ್ಟರಾಗಲಿ, ಸಾಮಾನ್ಯರೇ ಆಗಲಿ ಅವರ ಮಾತಿನಶೈಲಿಯಲ್ಲಿ ಧ್ವನಿಗಳ ಸ್ವಚ್ಛಂದ ವ್ಯತ್ಯಯ ಶ್ರುತಿಗಳ ಪರಿಮಿತ, ಗ್ರಾಮ್ಯೋಕ್ತಿಗಳು, ನುಡಿಗಟ್ಟು, ನಾಣ್ಣುಡಿ, ಸಾಮತಿಗಳು, ಬೈಗುಳ ಪದಗಳು, ಗಮನಸೂಚಕ ಅವ್ಯಯ (Attention Callers) ಕೌಟುಂಬಿಕ ಪದಗಳು ಅತಿ ಪರಿಷ್ಕೃತರೂಪ ಮುಂ. ಹೆಚ್ಚು ಸ್ಪಷ್ಟವಾಗಿ ತೋರುತ್ತವೆ,

ಸ್ವಚ್ಛಂದ ವ್ಯತ್ಯಯಗಳು :-

ಅ/ಯ್	:	ಅಪ್ಪ/ಯಪ್ಪ
ಅ/ಆ	:	ಅವನು/ಆತ, ವಸದ/ವಸಾದ
ಆ/ಏ	:	ಜಾತಿಗಾರ/ಜಾತಿಗೇರ
ಇ/ಉ	:	ಇರ್ಲಿ–ಬಿಡ್ಲಿ/ಇರ್ಲಿಬುಡ್ಲಿ
ಇ/ಏ	:	ಕಬ್ಬಿಗೆ/ಕಬ್ಬೇರ
ಓ/ಅ	:	ಉಟಗೊಂಡ/ಉಟಗಂಡೆ
ಒ/ಎ	:	ಮುಚಿಗೊಂಡ/ಮುಚಿಗೆಂಡೆ
ಭ್/ಬ್	:	ಭೋಗ್ಸಬೇಕು/ಬೋಗ್ಸಬೇಕು
ಹ್/∅	:	ಹೊಡದನಪೋ ಹೊಡ್ದ/ಒಡ್ದನಪೋ ಒಡ್ದ

ಅತಿಪರಿಷ್ಕರಣ ದೋಷ (Hyper Corrections)

ತ್/ಥ್	:	'ಪಾವನ ತುಲಾಭರಣ'/ಪಾವನ ಥುಲಾಭರಣ
ಪ್/ಫ್	:	
ಭ್/ಬ್	:	

ಸ್ವರಾಘಾತಿ ಹಾಗೂ ಶ್ರುತಿ :-

ವಾಕ್ಯಗಳಲ್ಲಿ ಮಾತನಾಡುವ ವ್ಯಕ್ತಿಯ ಸ್ವರದ ಅವಧಾರಣತ್ವ ಆಯಾ ಸನ್ನಿವೇಶಕ್ಕೆ ತಕ್ಕಂತೆ ಇಲ್ಲಿ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ಈ ಕೆಳಗೆ ಪಾತ್ರಗಳು ಮಾತನಾಡುವ 3 ಸ್ವರಾಘಾತಿ ಪ್ರಭೇದಗಳನ್ನು /1 2 3/ ಎಂಬುದಾಗಿ ನಿರ್ದೇಶಿಸಿದೆ.

(1) .... ²ಇಂಥ ಹೆಣ್ಗ್ಳು ಸಿಕ್ರ ಬಿಟ್ಟಿಯಾ?³ /2. 3./

(2) ... . ¹ಕಟ್ರೆಲೆ ಮೊದಲವಸ ಕಂಬಕ್ಕ¹ /1. 1./

(3) .... ³ಆ ಮ್ಯಾಲ ಬಾರಂತ್ಲೇಳು ಹೋಗಲೇ³ /3 3/

ಇದೇ ರೀತಿ ಶ್ರುತಿಗಳಲ್ಲಿ ಪ್ರಶ್ನಾರ್ಥಕ ರೂಪಗಳಿರುವಲ್ಲಿ ಉದಾತ್ತ /↑/ ಶ್ರುತಿಯನ್ನೂ, ಜುಗುಪ್ಸೆ, ವಿಸ್ಮಯ ಸೂಚಕಗಳಲ್ಲಿ ಅನುದಾತ್ತ ಶ್ರುತಿ /↓/ ಯನ್ನೂ ಉದ್ಧರಿತಗಳಿರುವಲ್ಲಿ ಸಮಸ್ವರ ಶ್ರುತಿ /→/ ಯನ್ನು ನಾವು ಕಾಣುತ್ತೇವೆ.

ಉದಾ : 'ಯಾಕಲೇ'? /↑/
'ಛೆ ಛೆ'! /↓/
'ಯೆಲ್ಲ ಸಾಬರದೇ ರಾಜ್ಯ' /→/

ನಿಜನಾಮಗಳು :-

ವ್ಯಕ್ತಿಗಳ ನಿಜನಾಮ, ಅಡ್ಡನಾಮಗಳಲ್ಲಿ ಅವನು ಸಂಬೋಧಿಸುವಾಗ ಆಯಾ ನಾಮಗಳಿಗೆ ಸಾಮಾಜಿಕ ಸನ್ನಿವೇಶ, ಇಲ್ಲವೆ ಸಾಮಾಜಿಕ ಅಂತಸ್ತು ಅಥವ ಶ್ರೇಣಿಗಳು ಆ ಪದಗಳ ಬಳಕೆಯನ್ನು ನಿರ್ದಿಷ್ಟ ಪಡಿಸುತ್ತವೆ. ಇಲ್ಲಿ ಒಟ್ಟು ನಾಮಗಳನ್ನು ಅವುಗಳ ಪ್ರಯೋಗ ಸಹಿತ ಕೊಟ್ಟಿದೆ.

ನಿಜನಾಮ :-

(1) 'ವೆಂಕನಗೌಡ', **'ಸಾವಿತ್ರಿ'**, **'ಬಡೇಸಾಬು'**, – **ಸಾಮಾಜಿಕ ಸ್ಥಾನಮಾನ**
(2) 'ಪರಮಯ್ಯ' > 'ಪರಮ್ಯಾ'. ಮುಂ – ಸ್ನೇಹ-ಸಲಿಗೆ.
(3) **ರಾಚಮ್ಮ > ರಾಚೀ** – ಗಂಡಹೆಂಡತಿಯರಲ್ಲಿ.

ಅಡ್ಡನಾಮ/ಕುಲನಾಮಗಳು :-

'ಹಿರೇಮಠ', 'ಮಠಪತಿ' ಮುಂ ಗಳಲ್ಲಿ ಬದಲಾವಣೆಯಿಲ್ಲದ್ದಕ್ಕೆ ಕಾರಣ ಸಾಮಾಜಿಕವಾಗಿ ಅವುಮೇಲು ಶ್ರೇಣಿಯಲ್ಲಿರುವದು. ಕಬ್ಬಲಿಗ/ಕಬ್ಬೀಗ, ಕುರುಬ, ಜಾತಿಗೇರ ಇವು ಕೆಳಶ್ರೇಣಿಯಲ್ಲಿಯ ಗೌರವ ರಹಿತವಾಗಿ ಸೂಚಿತವಾಗುತ್ತವೆ. 'ಹಿರೇಮಠ'ಕ್ಕೆ ಬದಲಾಗಿ 'ಜಂಗಮ', 'ಅಯ್ಯ' ಪದಗಳನ್ನು ಬಳಸಿದಲ್ಲಿ ಅದು ಕೀಳು ಬೋಧನೆ. ಅದೇ ರೀತಿ 'ಮುಸಲ್ಮಾನ'ಕ್ಕೆ ಪರ್ಯಾಯವಾದ 'ತುರುಕ' ಪದ ಕುಲನಾಮದಲ್ಲಿ ಕೀಳು ಎಂದೆನ್ನಿಸುತ್ತದೆ.

ಉದಾ : ಜಂಗಮ – 'ಬಾರ್ಲೇ ಜಂಗಮ'
'ಬಾರ್ಲೇ ಅಯ್ಯ ಅಲ್ಲಿಗೆ (ಕಿಡಿ)
ತುರುಕ – 'ಬೇಪಾರ್ಶಿ ತುರುಕರವ್ನ ಕೂಡ ಇರದಂದ್ರೇನು?' (ಬಪ್ಪ)

ಗಮನ ಸೂಚಕ ಪದಗಳು (Attention Callers)

ಒಬ್ಬ ವ್ಯಕ್ತಿ, ಇನ್ನೊಬ್ಬನೊಡನೆ ಮಾತಿಗೆ ಆರಂಭಿಸುವಲ್ಲಿ ಶ್ರೋತಾರನ ಗಮನ ಸೆಳೆಯಲು ಉಪಯೋಗಿಸುವ ಪದಗಳೇ ಗಮನ ಸೂಚಕಗಳು. ಇಲ್ಲಿನ ಪದಗಳಲ್ಲಿ ಸಾಮಾಜಿಕ ಶ್ರೇಣಿ, ಅಂತಸ್ತು, ವೃತ್ತಿ ಲಿಂಗಭೇದ ಮುಂತಾದವು ನಿರ್ದಿಷ್ಟ ಪರಿಸರಗಳಾಗುತ್ತವೆ. ಇವನ್ನು ಮುಖ್ಯವಾಗಿ ಕೌಟುಂಬಿಕ (Kinship) ಮತ್ತು ಕೌಟುಂಬಿಕೇತರ (Non-Kinship) ಗಳೆಂದು ವಿಂಗಡಿಸಬಹುದು.

ಕೌಟುಂಬಿಕ ಗಮನ ಸೂಚಕಗಳು :-

ಗ್ರಾಮೀಣ ಪರಿಸರದಲ್ಲಿ 'ಕುಟುಂಬ'ವು ಪ್ರಧಾನ ಸಾಮಾಜಿಕ ಸಂಸ್ಥೆಯಾಗಿದು, ವ್ಯಕ್ತಿಗಳು ಒಂದೇ ಕುಟುಂಬದ ಸದಸ್ಯರಂತೆ ವರ್ತಿಸುವದು ರೂಢಿಯಾಗಿರುತ್ತದ್ದೆ

ಆ ಕಾರಣದಿಂದ ಕೌಟುಂಬಿಕ ಪದಗಳ ಬಳಕೆ ಇಡೀ ಗ್ರಾಮ ಸಮಾಜದ ಸದಸ್ಯರಿಗೂ ಸಹ ಅವರವರ ಸಂಬಂಧಗಳ ಮೇಲೆ ಆರೋಪವಾಗುತ್ತವೆ. ನಿದರ್ಶನಕ್ಕೆ :

ಅಣ್ಣ — 'ಸಿದ್ಲಿಂಗಣ್ಣ ಹೊತ್ತು ಮುಳುಗುದರೊಳಗ ಕರಾ ಬುಟ್ಟಾ' (ಮಾ. ಮಾ.)
ಯವ್ವ — **'ಯವ್ವ ಗೌಡಸಾನಿ'** (–,,–)
ಅಪ್ಪ — '**ಅಪ್ಪ** ಏನ ವಿಳ್ಯಾಸಪ್ಪಾ' (–,,–)
ಮಾವಾ— 'ಇದೇನು ಸಣ್ಣ ಮಾತೇ **ಮಾವ**' (ಬಪ್ರ)
ಅವ್ವ — 'ಯಾಕವ್ವ ಇವತ್ತ ಹತ್ತಿ ಬಿಡಿಸಾಕ ಹೋಗಿಲ್ಲೇನು?' (ಮ)

ಕೌಟುಂಬಿಕೇತರ :-

ನಮಸ್ಕಾರ	—	'ನಮಸ್ಕಾರ ಡಾಕ್ಟ್ರೇ'	(ಶಿಷ್ಟವರ್ಗ)	(ರೋಗಿ)
ಹಲ್ಲೋ	—	'ಹಲ್ಲೋ ಡಾಕ್ಟರ್'	(–,,–)	(,,)
ನೋಡ್ರೀ	—	'ನೋಡ್ರೀ ಸಾಬ್ರ'	(ಕೆಳವರ್ಗ)	
ದ್ಯಾವ್ರು	—	'ದ್ಯಾವ್ರು ಸಾಕ್ಷಿ ಏಳವ್ರು ಆರ	(–..–)	(ಕಿಡಿ)
ಏ	—	'ಏ: ಸುವರ್'	(ಗಂಡಸರಲ್ಲಿ)	(ಕಿ)
ಏಲೊ,ಅಲೇ.ಏನಲೇ	—	'ಅಲೇ ಬುದ್ಧಿಗೇಡಿ'	(–..–)	(ಮಾಮಾ)
ಏನ್	—	'ಏರೆಪೇನಲೇ ಸಬ್ಜೇಲಿ'	(–,,–)	(ಕಿ)
ಥೂ	—	'ಥೂ ಬುದ್ಧಿಗೇಡಿ ಅಯ್ಯ'	(–,,–)	(ಕಿ)
ಅಯ್ಯss	—	'ಅಯ್ಯ ತಗೀ'	(ಹೆಂಗಸರಲ್ಲಿ)	(ಮಾಮಾ)
ಅಲೋ	—	'ಯಾಕಲೋ'	(–,,–)	(ಬ ಪ್ರ)
ಅಂಗೇ	—	'ನೋಡಂಗೆ ಬಸ್ಸವ್ವ'	(–,,–)	(ಕಿ)
ಸಾನಿ	—	'ಗೌಡಸಾನಿ'	(–,,–)	)ಮಾಮಾ)

ಇವುಗಳ ಜೊತೆಗೆ 'ಹೌದು' 'ಇರ್ಲಿ'. 'ಅಗ್ಲಿ' 'ಜೀ' (ಉರ್ದು) ಪದಗಳ ಪ್ರಚುರತೆಯೂ ಕಾಣಸುತ್ತದೆ.

ವಚನ ನಿರ್ದೇಶನ :-

'ಏಕ' 'ಬಹು'ವಚನ ಪ್ರಯೋಗಗಳು ವ್ಯಾಕರಣದಲ್ಲಿ ನಿರ್ದೇಶಿತವಿದ್ದರೂ. ಸಾಮಾಜಿಕ ಮಟ್ಟದಲ್ಲಿ 'ಗೌರವ ಸೂಚಕ' ಬಹುವಚನ (Honour) ಹಾಗೂ ಸಾಮಾಜಿಕ ಶ್ರೇಣಿ ಅನ್ವಯ ವಚನಗಳಲ್ಲಿ ಪಲ್ಲಟ ಪ್ರಕ್ರಿಯೆ ಸ್ವಾಭಾವಿಕವಾಗಿ ಉಳಿದುಕೊಂಡಿದೆ.

ಮಠಸ್ಥನಾದ ಪರಮಯ್ಯನನ್ನು ಸೂಗಮ್ಮ ಭಕ್ತವರ್ಗದ ಒಕ್ಕಲಿಗ ಜಾತಿಗೆ ಸೇರಿದವಳು. ಗೌರವದಲ್ಲೂ ಗೌಡನಿಗೆ ಇತರ ಗ್ರಾಮ ಸಮಾಜದವರೂ ಸಹ ಅಂತೆಯೇ ಗೌರವಪೂರ್ವಕವಾಗಿಯೂ ಮಾತನಾಡಿಸುತ್ತಾರೆ. ನಿದರ್ಶನಕ್ಕೆ

'ಹೋಗ್ತೀನಿ ಸೂಗಮ್ಮ' ಪರಮಯ್ಯ	(ಮಠಸ್ಥ)
'ಕುಂದರ್ರೆಲಾ ಚಾಮಾಡ್ತೀನಿ' ಸೂಗಮ್ಮ	(ಒಕ್ಕಲಿಗ)
'ಗೌಡ್ರ: ರಜಾಕಾರ್ನ ಹಿಡಿಕಂಡ್ ಬರ್ತೀವಿ'	(ಊರಜನ-ಗೌಡನಿಗೆ)
'ಬನ್ನಿಡಾಕ್ಟ್ರೇ' ಸಾವಿತ್ರಿ	(ಸುಶಿಕ್ಷಿತ ಸಮಾಜ)
'ಸಾಬ್ರೇ' ಪರಮಯ್ಯ	(ಅಧಿಕಾರಿಗೆ)
'ಅವ್ರು ಸಾವಕಾರ್ ಸಕ್ರಿಪನವ್ರು ಗೌಡ	(ಗೌಡ ಸಾಹುಕಾರ)

ಬೈಗುಳ ಪದಗಳು :-

ಕಾಳಜಿರಹಿತ ಅಥವ ಅನೌಪಚಾರಿಕ ಶೈಲಿಯಲ್ಲಿ ಇವು ಸಹಜ ಸ್ವಾಭಾವಿಕವಾಗಿ ಕಾಣುವ ಪದಗಳು. ಇಲ್ಲಿ ವ್ಯಕ್ತಿಗಳ ಪರಸ್ಪರ ಕಲಹ ಅಥವ ವೈಮನಸ್ಸು ಪ್ರಚೋದಕ ವಾಗಿರುತ್ತವೆ.

ಗಂಡಸರ ಬೈಗುಳಗಳು	:	ಸೂಳೇಮಗ, ಸುವ್ವರ್, ಹಜಾಮ, ಕುರುಬ, ಸೇಂಗ್ಯಾ. ಲೌಡಿಮಗ, ಬಾನಚೋತ್ ಪರಾಮ್ ಜಾದೆ, ಅಡಿಬಿಟ್ಟಿ.
ಹೆಂಗಸರ ಬೈಗುಳಗಳು	:	ಭಾಡ್ಯಾ, ಭಾಡಖಾವ್, ಸನ್ಯಾಸಿ, ಕರಗಾಲ ರಂಡಿ, ಮೂಳ, ಅಸಿಷ್ಟಸೂಚಕಗಳಲ್ಲಿ, ಇವ್ನ ಸಂತಾರ, ಚಟ್ಗಿ ಮುರಿ, ಬಾಯಾಗ ಮಣ್ಣಾಕ.
ಅನ್ಯೋಕ್ತಿಗಳು(Allegery)	:	'ಗುರುಪುತ್ರ', 'ಗುರುಪುತ್ರಿ', ಶಿಷ್ಯಮಕ್ಳು, 'ಚೇಲ'.

ನುಡಿಗಟ್ಟುಗಳು :-

'ಒಂದೇ ಗಂಗಾಳದಾಗತಿನ್ನು', 'ರಾಮರಗತಾಗು', 'ಬುಟ್ಟಿಯಲ್ಲಿ ಬೀಳು', 'ಸಾವಾಕಾರ್ನಗೂಟ', 'ಬುಲಾವ್', 'ಚಾರ್ಸು', 'ಮದ್ವಿಮಾಡು', 'ಮಂಗಳಹಾಡು', 'ನಾಯಿಮುಟ್ಟಿದ ಗಡಿಗಿ', 'ಕಂಬಕ ಕಟ್ಟು'.

ಸಾಮತಿಗಳು :-

'ಬಾಣ ಬಿಡು'. 'ಬಡೇಸಾಬು–ಪುರಾಣ', 'ಮೈಗುಗ್ಗರಿಗೆಟ್ಟು', 'ಅಸೆ-ಚಿಗುರು', 'ಕೈಲಾಸ ಕಣ್ಣುಂದ', 'ಕಿಡಿಪಾರು', 'ಟೇಸ' (ಮುಂ).

ನಾಣ್ಣುಡಿ–ದೃಷ್ಟಾಂತಗಳು :-

"ಜಂಗಮ ಜಗಂಮ ಜ್ಯೋತಿ ಚಿಟ್ಟಿ ಗಡಗ್ಯಾಗ ಮೋತಿ" ಕುರುಬಗ ಹೂ ಕೊಟ್ರ .... , 'ಮಾಯಿ ಅಂದ್ರ ಮಾಯಿ'.

'ನುಡಿಯೊತ್ತು' (Code Switching)

'ನುಡಿಯೊತ್ತು'[5] ಶಾಂತರಸರ ಕತೆಗಳಲ್ಲಿ ವಿಶೇಷವಾಗಿ 'ಬಡೇಸಾಬು-ಪುರಾಣ'ದಲ್ಲಿ ಕಾಣಿಸುವ ಗಮನಾರ್ಹವಾದ ಒಂದು ಶೈಲಿಯ ಪ್ರಭೇದ. ಈ ಕತೆಯ ಆವರಣ ಹೈದ್ರಾಬಾದು ಕನ್ನಡ ಪ್ರದೇಶದಲ್ಲಿ ಕ್ರಿ. ಶ. 1948 ರ ಅವಧಿಯಲ್ಲಿ ನಡೆದ ರಜಾಕಾರರ ಆಕ್ರಮಣದಿಂದ ಆರಿಸಿಕೊಂಡುದು. ಈ ಕಾಲದಲ್ಲಿ ರಾಜಕೀಯ. ಸಾಂಸ್ಕೃತಿಕ. ದಬ್ಬಾಳಿಕೆಯೊಂದೇ ಅಲ್ಲದೆ ಭಾಷಾ ಆಕ್ರಮಣವೂ ನಡೆದಿದೆ. ಅಧಿಕಾರ ವರ್ಗದ ಎಲ್ಲರೂ 'ಉರ್ದು' ವಿನಲ್ಲೇ ಮಾತನಾಡುವದು ಅವರಂತೆ ಉರ್ದುವಿನಲ್ಲಿ ಶಿಕ್ಷಣ ಪಡೆದರೂ ಸಹ ಅದೇ ಭಾಷೆಯಲ್ಲಿ ಮಾತನಾಡುವದು ಗೌರವ ಸಂಕೇತವೆಂದು ಪರಿಭಾವಿಸಿರುವಂತೆ ತೋರುತ್ತದೆ. ಇಲ್ಲಿನ ನುಡಿಯೊತ್ತುಗಳ ಬಳಕೆ ಈ ವರ್ಗೀಕರಣ ಕ್ರಮವನ್ನು ಅನುಸರಿಸುತ್ತದೆ. ಇದು ಮುಖ್ಯವಾಗಿ ಭಾಷೆಯಲ್ಲಿನ 'ದ್ವಿಭಾಷಿಕತೆ'ಗೆ ಸಂಬಂಧಿಸಿದ್ದಾಗಿದ್ದು. ಸಾಮಾಜಿಕ ಸ್ತರದಲ್ಲಿ ಈ ಕೆಳಗಿನ ಮಟ್ಟದಲ್ಲಿ ವ್ಯವಹರಿಸುತ್ತದೆ.

ನುಡಿಯೊತ್ತು

- ಅಶಿಕ್ಷಿತ
  - ಮತೀಯ (+ಸಂಘಟಕ)
  - ಜಾತೀಯ (–ಸಂಘಟಕ)
- ಸುಶಿಕ್ಷಿತ
  - ವೃತ್ತೀಯ (-ಸಾಂಸ್ಥಿಕ)
  - ಶೈಕ್ಷಣಿಕ (+ಸಾಂಸ್ಥಿಕ)


ಬಡೇಸಾಬು ಪುರಾಣದ ಅಧಿಕಾರ ವರ್ಗದಲ್ಲಿ ಮುಸ್ಲೀಮರು ಬಂದು 'ಮತೀಯ' ಪ್ರಾತಿನಿಧ್ಯವನ್ನು ಹಾಗೂ ಆಡಳಿತದ ಮೇಲ್ಪದವಿಗಳನ್ನು ಹೊಂದಿದ್ದು

5. ಎ. ರಿಚಾರ್ಡ್ ಡೈಬೋಲ್ಡ್ (1968) 'ನುಡಿಯೊತ್ತು' ಕುರಿತು ಒದಗಿಸುವ ವ್ಯಾಖ್ಯೆ "By code switching is usually meant the successive alternate use of two different languages codes within the same discource". Code switching in Greek-English Bilingual Speech Washington D. C. Georgetown Univ. Press (1968).

ಅವರು ಉರ್ದುವಿನಲ್ಲೆ ಮಾತನಾಡುತ್ತಾರೆ. 'ಬ. ಪು.'ದ ಅಮೀನನ 'ಚಲ್‌ಹಟ್' 'ಖಾಮೋಶ್' 'ಖಡೆಹೋ ಹರಾಮ್ಕೋ' ಬಡೇಸಾಬು ರಜಾಕಾರನಾದ ಮೇಲೆ ಆಡುವ ಮಾತುಗಳು 'ಕರೋ ಕರೋ' ಇಲ್ಲಿ ನಿದರ್ಶನವಾಗುತ್ತದೆ. ಹಿಂದುಗಳಲ್ಲಿ ವಿವಿಧ ಜಾತಿಯವರು ಯಾವುದೇ ಸಂಘಟನೆಯಲ್ಲಿ ಕಾಣಿಸದೆ ಕೇವಲ ಮೇಲಾಧಿಕಾರಿಗಳಿಗೆ ಒಪ್ಪಿಗೆ ಸೂಚಿಸುವ 'ಜೀಹುಜೂರ್' ಮುಂತಾದ ಪದಗಳನ್ನು ಮಾತ್ರ ಬಳಸುತ್ತಾರೆ. ಸ್ವಾತಂತ್ರ್ಯೋತ್ತರ ಕಾಲದ 'ರೋಗಿ' ಕತೆಯಲ್ಲಿ ಮಾತ್ರ 'ಹೈದ್ರಾಬಾದಿ ಉರ್ದು' ವಿನಲ್ಲಿ ಮಾತನಾಡುವದು. ಶೈಕ್ಷಣಿಕ ಪ್ರಭಾವದಿಂದಲೂ, 'ಗಜಲ್' ಮುಂತಾದ ಹಾಡುಗಳಿಂದಾಗಿಯೂ ಅದನ್ನು ಬಳಸುವಲ್ಲಿ ಇನ್ನೂ 'ಸಭ್ಯತೆ' ಉಳಿದಿರುವದಾಗಿ ತೋರುತ್ತದೆ.

ಧ್ವನಿಮಾಮಟ್ಟದಲ್ಲಿ ಸಾಮಾಜಿಕ ಶ್ರೇಣಿ :–

ಕತೆಗಾರರ ಭಾಷೆ ರಾಯಚೂರ ಕನ್ನಡದ ಉಪಭಾಷಾ ಪ್ರಭೇಧವಾಗಿದೆ. ಇದಕ್ಕವರು ತಮ್ಮ ಹಳ್ಳಿಯನ್ನೇ 'ದತ್ತ' (Data) ವಾಗಿ ಸ್ವೀಕರಿಸಿರುವದಾಗಿಯೂ ಹೇಳಿದ್ದಾರೆ.[6] ಇಲ್ಲಿನ ಮಾತಿನ ಶೈಲಿಯಲ್ಲಿ ಈ ಭಾಷೆಗೆ ವಿಶಿಷ್ಟವೆನ್ನಿಸುವ ಕೆಲ-ವೊಂದು ಧ್ವನಿಮಾ ಹಾಗೂ ಧ್ವನಿವ್ಯತ್ಯಾಸಗಳನ್ನು ಲೇಖಕರು ಸಮರ್ಥನೀಯವಾಗಿ ಅನ್ವಯಿಸಿಕೊಂಡಿದ್ದಾರೆ. ಆದರೆ 'ಸಾಮಾಜಿಕ ಶ್ರೇಣಿ'ಗಳ ಕಾರಣದಿಂದ ಇಲ್ಲಿನ ಧ್ವನಿಗಳಲ್ಲಿ ನಿಯಂತ್ರಣವಿದೆ. 'ಇರ್ಲಿ **ಬುಡು**' 'ಉಪಾಸ ಯಾಕ್ **ಬುಳ್ತಿದ್ದಿ**', 'ಈಗ **ಬುಟಾಕಿ** ಬುಡ್ತಿನಿ ನಿನ್ ಬಾಕಿ', 'ಹೋಗಿ ಬಾಯಾಗ **ಬುಳ್ತಿದ್ದೆ**' ಈ ಕಡೆ



6. ಲೇಖಕರ ಒಂದೆರಡು ಮಾತುಗಳು : ಬಪು.

ಗಳಲ್ಲಿ ಶಿಷ್ಟಧ್ವನಿ /ಇ/ → /ಉ/ ಆಗುವ ಪ್ರವೃತ್ತಿ ಇಲ್ಲಿನ ಒಂದು ವೈಶಿಷ್ಟ್ಯವಾಗಿದೆ. ಆದರೆ ಮೇಲಿನ ಶೈಲಿಯ ಪ್ರಭೇದಗಳನ್ನು ಸಾಮಾಜಿಕ ಸನ್ನಿವೇಶ/ಶ್ರೇಣಿ/ವ್ಯವಸ್ಥೆಗಳ ಹಿನ್ನಲೆಯಲ್ಲಿ ಗುರುತಿಸಿದಾಗ /ಇ/ ಧ್ವನಿಯು ಸಾಮಾಜಿಕ-ಭಾಷಾ ವಿಜ್ಞಾನ ಮಟ್ಟ ದಲ್ಲಿ ಪ್ರತಿ ಶತ. ಈ ಕೆಳಗಿನ ವ್ಯತ್ಯಾಸಗಳನ್ನು ಅನುಸರಿಸುತ್ತದೆ. ಇದನ್ನು ಪರಿಮಾಣಾತ್ಮಕ ವಿಧಾನ (quantitative pattern) ಅನ್ವಯ ಹಿಂದಿನ ಪುಟದಲ್ಲಿ ಸೂಚಿಸಿದೆ.

ಮೇಲಿನ **ಲಂಬರೇಖೆ** ಸಾಮಾಜಿಕ ಶ್ರೇಣಿಯುದು. **ಸಮಸ್ತರ ರೇಖೆ** ಶೈಲಿ ಪ್ರಭೇದ ಕುರಿತಾದುದು /ಇ/ ಶಿಷ್ಟಧ್ವನಿಯು ಸಾಮಾಜಿಕ ಶ್ರೇಣಿ ಅನೌಪಚಾರಿಕ ಶೈಲಿಯಲ್ಲಿ ಪ್ರತಿಶತ 0% ದಿಂದ 20% ರಷ್ಟು ಉಳಿದಿದೆ. ಎಂದರೆ ಇಲ್ಲಿ ಅನೌಪಚಾರಿಕ ಶೈಲಿಯಲ್ಲಿ ಎಲ್ಲರೂ ಇದನ್ನು /ಉ/ ಉನ್ನತ ಪಶ್ಚಸ್ವರವಾಗಿಯೇ ಬಳಸುತ್ತಾರೆ. ಇದರ ಪ್ರಮಾಣವು 'ಔಪಚಾರಿಕ ಶೈಲಿ'ಯಲ್ಲಿ ಪ್ರತಿಶತ 40% ಕ್ಕೂ, 'ಲಿಖಿತಪಾಠ'ದಲ್ಲಿ 60% ಕ್ಕೂ 'ಪದಕೋಶ' ಮಟ್ಟದಲ್ಲಿ 80% ಕ್ಕೂ ಹಾಗೂ ಕನಿಷ್ಟ ಯುಗ್ಮಗಳಲ್ಲಿ ಸಂಪೂರ್ಣವಾಗಿಯೂ ಉಳಿದಿರುವದೆಂದು ಹೇಳಬಹುದು.

ಇದುವರೆಗಿನ ಅವಲೋಕನೆಯಿಂದ ಸಾಹಿತ್ಯ ಕೃತಿಗಳಲ್ಲಿ ಪಡಿ ಮೂಡುವ ಭಾಷೆ ಎಷ್ಟರ ಮಟ್ಟಿಗೆ ಸಾಮಾಜಿಕ ಸಂದರ್ಭಗಳಲ್ಲಿ ಕೆಲವೊಂದು ವೈಲಕ್ಷಣ್ಯಗಳನ್ನು ಉಳಿಸಿಕೊಳ್ಳಬಲ್ಲದು. ಇದರಲ್ಲಿ ಲೇಖಕ ಕೇವಲ ಸೃಜನಾತ್ಮಕ ಪ್ರತಿಭೆಯೊಂದನ್ನೇ ಅಲ್ಲದೆ, ಸಾಮಾಜಿಕ ಭಾಷೆಯ ಸಂದರ್ಭದಲ್ಲಿ ತಾನು ಹೊಂದಿಕೊಂಡಿರುವ ಸಂಸ್ಕೃತಿ, ಸಾಮಾಜಿಕ ವ್ಯವಸ್ಥೆ ಹಾಗೂ ಆವರಣಗಳ ಮೂಲಕ ತನ್ನದೇ ಆದ ಶೈಲಿಯನ್ನು ಹೇಗೆ ರೂಪಿಸಿಕೊಂಡಿರಲು ಸಾಧ್ಯ ಎಂಬುದು ನಮಗೆ ಮನವರಿಕೆಯಾಗುತ್ತದೆ. ಶಾಂತರಸರು ಕೇವಲ ಹೈದ್ರಾಬಾದು ಕನ್ನಡ ಪ್ರದೇಶದ ಉಪಭಾಷೆಯನ್ನು ಮಾತ್ರ ತಿಳಿದವರಲ್ಲ; ಜೊತೆಗೆ ಇಲ್ಲಿನ ಸಾಮಾಜಿಕ ಭಾಷಾ ಶೈಲಿಯ ಹದವನ್ನೂ ಅರಿತವರೆಂಬುದನ್ನಿಲ್ಲಿ ನಾವು ಗುರುತಿಸಬಹುದಾಗಿದೆ. Style of discoveries ಗಳ ಅಧ್ಯಯನಕ್ಕೆ ಹೈದ್ರಾಬಾದು ಕನ್ನಡ ಪ್ರದೇಶದ ಸಾಹಿತ್ಯ ತಕ್ಕ ಸಾಮಗ್ರಿಯನ್ನು ಒದಗಿಸಬಲ್ಲದೆಂಬುದಕ್ಕೆ ಅವರ ಕತೆಗಳು ನಿದರ್ಶನವಾಗಿವೆ.

ಇತ್ತೀಚಿನ ಕನ್ನಡ ಸಾಹಿತ್ಯದ ಧೋರಣೆ-ದೃಷ್ಟಿಕೋನಗಳು

● ಡಾ. ಎಂ. ಬಿ. ಕೊಟ್ರಶೆಟ್ಟಿ

ಸ್ವಾತಂತ್ರ್ಯೋತ್ತರದ ಸುಮಾರು ಮೂರುವರೆ ದಶಕಗಳ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಅವಲೋಕಿಸಿದರೆ ಮಹತ್ವದ ಸ್ಥಿತ್ಯಂತರವಾದದ್ದು ಎದ್ದು ಕಾಣುದ ಅಂಶವಾಗಿದೆ. ಈ ಅವಧಿಯಲ್ಲಿ ಕನ್ನಡದಲ್ಲಿ ಹಲವು ಪ್ರಮುಖ-ಅಪ್ರಮುಖ ಸಾಹಿತ್ಯಮಾರ್ಗಗಳು ಹುಟ್ಟಿಕೊಂಡಿದ್ದರಿಂದ ಇದೊಂದು ನಿರಂತರ ಪ್ರಯೋಗಗಳ ಚಟುವಟಿಕೆಯ ಕಾಲವಾಗಿದೆ. ಪಾಶ್ಚಾತ್ಯ ಜೀವನದಲ್ಲಿ ಕಾಣಿಸಿಕೊಂಡ ನವಜೀವನ-ಧೋರಣೆ "Modernity" ಯು ಸ್ವಾತಂತ್ರ್ಯೋತ್ತರ ಭಾರತ ಅಂತೆಯೇ ಕರ್ನಾಟಕದ ಸಂಸ್ಕೃತಿಯಲ್ಲಿಯೂ ಪ್ರಾದುರ್ಭವಿಸಿ ಪರಂಪರಾಗತವಾದ ಜೀವನ ಮೌಲ್ಯಗಳನ್ನು ಪರಿವರ್ತಿಸುವ, ಪುನಃ ಸೃಷ್ಟಿಸುವ ಚಾಲಕಶಕ್ತಿಯಾಯಿತು. ವಿ. ಕೃ. ಗೋಕಾಕ ಹಾಗೂ ಗೋಪಾಲಕೃಷ್ಣ ಅಡಿಗರಿಂದ ಪ್ರಾರಂಭವಾದ ನವ್ಯಪರಂಪರೆ ಆಧುನಿಕ ಕನ್ನಡ ಸಾಹಿತ್ಯದ ಒಂದು ಗಟ್ಟಿ ಪರಂಪರೆಯಾಗಿ ಅನೇಕ ಹಿರಿಕಿರಿಯ ಸಾಹಿತಿಗಳಿಗೆ ಪ್ರೇರಕವಾಗುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ನವ್ಯತೆಗೆ ಚಾಲನೆಯನ್ನಿತ್ತಿತು. ಇತ್ತೀಚೆಗೆ ಕನ್ನಡ ಕಾವ್ಯದಲ್ಲಿ ಪ್ರಯೋಗಗೊಳ್ಳುತ್ತಿರುವ ಅಡಿಗೋತ್ತರ. ಬಂಡಾಯ, ದಲಿತಧೋರಣೆಗಳಲ್ಲಿಯೂ ನವ್ಯತೆಯ ಸ್ವರೂಪ ಲಕ್ಷಣಗಳು ಗೋಚರಿಸದೆ ಇಲ್ಲ. ಜಗತ್ತಿನ ಇತರ ಭಾಷೆಗಳ ಸಾಹಿತ್ಯದಲ್ಲಿ ಎಂತೋ ಅಂತೆ ಕನ್ನಡದಲ್ಲಿ ನವ್ಯತೆ-ಪಾಶ್ಚಾತ್ಯರ ಧೋರಣೆಯಿಂದಲೇ ಪ್ರಭಾವಿತವಾದುದು ಐತಿಹಾಸಿಕ ಸತ್ಯವಾಗಿದೆ. ಟಿ. ಎಸ್. ಎಲಿಯಟ್‌ನ 'ವೇಸ್ಟ್‌ಲ್ಯಾಂಡ್' ದಂತಹ ಕಾವ್ಯ ಹಾಗೂ ವಿಮರ್ಶೆಯ ವಿಚಾರಗಳು ಜಗತ್ತಿನ ಸಾಹಿತ್ಯದ ದಿಕ್ಕನ್ನೇ ಬದಲಿಸು-ವಷ್ಟು ಪ್ರಬಲವಾಗಿದ್ದವು. ಇದರೊಂದಿಗೆ ಏಟ್ಸ್. ಆಡೆನ್, ಸಿಟ್‌ವೆಲ್, ಮೆಲಾರ್ಮೆ, ಡಿಲನ್‌ಥಾಮಸ್ ಮೊದಲಾದವರ ನವ್ಯ ಪ್ರಯೋಗಗಳು ಈ ಯುಗದ ಕನ್ನಡ ಕವಿಗಳಿಗೆ 'ಮಾಡೆಲ್' ಆದವು.

ಪಾಶ್ಚಾತ್ಯ ದೇಶಗಳಲ್ಲಿ – ಮುಖ್ಯವಾಗಿ ಇಂಗ್ಲೆಂಡಿನಲ್ಲಿ ಈ ಶತಮಾನದ ಪ್ರಾರಂಭದಲ್ಲಿಯೇ ನವ್ಯತೆಯ ಲಕ್ಷಣಗಳು ತಲೆದೋರಹತ್ತಿದವು. ವೈಚಾರಿಕಕ್ಷೇತ್ರಗಳಲ್ಲಿ ಹೊಸ ಕ್ರಾಂತಿ ಕಾಣಿಸಿಕೊಂಡ ಕಾಲವಿದಾಗಿದೆ. ಡಾರ್ವಿನ್ನನ ವಿಕಾಸವಾದ. ಮಾರ್ಕ್ಸನ ಆರ್ಥಿಕಸಿದ್ಧಾಂತ ಹಾಗೂ ಫ್ರಾಯಿಡನ ಮನೋವೈಜ್ಞಾನಿಕ ವಿಶ್ಲೇಷಣೆ-

ಗಳು ಪರಂಪರಾಗತವಾದ ಜೀವನಮೌಲ್ಯಗಳಿಗೆ ಆಹ್ವಾನವನ್ನೊಡ್ಡಿ ಹೊಸ ಸಾಮಾಜಿಕ ಸಂಘರ್ಷಗಳಿಗೆ ಹುಟ್ಟು ಹಾಕಿದವು. ಇದರಿಂದ ಹಳೆಯ ಸಾಮಾಜಿಕ ವ್ಯವಸ್ಥೆ ಕೊನೆಗೊಂಡು ಆಧುನಿಕ ಯಂತ್ರನಾಗರಿಕತೆ ತಲೆಯೆತ್ತಿತು. ಇದರಲ್ಲಿ ಮಾನವನು ಜೀವನದ ಸಹಜತೆಯನ್ನು ಕಳೆದುಕೊಂಡು ಯಾಂತ್ರಿಕನಾಗುತ್ತಿರುವ ಚಿತ್ರವು Aldus Huxley ಹಾಗೂ D. H. Lawrence ಅವರ ಕಾದಂಬರಿಯಲ್ಲಿ ನಿರೂಪಣೆಗೊಂಡಿದೆ. ಸಾಹಿತಿಗೆ ವ್ಯಕ್ತಿಸ್ವಾತಂತ್ರ್ಯ ಹಾಗೂ ಸ್ವೋಪ್ರಜ್ಞತೆಗಳೇ ಮುಖ್ಯವೆಂದು ಸಾರಿದ ರೋಮ್ಯಾಂಟಿಕ್ ದೃಷ್ಟಿಕೋನವು ಅಪೂರ್ಣವೆಂಬ ಭಾವನೆ ಟಿ. ಎಸ್. ಎಲಿಯಟ್‌ನ ಮನಸ್ಸಿನಲ್ಲಿ ಮೂಡಿ ಅವನು ಸಮಷ್ಟಿಧೋರಣೆಯ ವ್ಯಕ್ತಿನಿರಪೇಕ್ಷ ದೃಷ್ಟಿಯನ್ನು ಪ್ರತಿಪಾದಿಸಿದ್ದಾನೆ. ಮಾನವನು ಯಾಂತ್ರಿಕವಾಗುತ್ತ ಏಕಾಕಿತನವನ್ನು ಅನುಭವಿಸುವ ಆಧುನಿಕ ನಾಗರಿಕ ಜೀವನದ ದುರಂತ ಚಿತ್ರವು ಎಲಿಯಟ್‌ನ Hollowman ಹಾಗೂ "ವೇಸ್ಟಲ್ಯಾಂಡ" ಕವಿತೆಗಳಲ್ಲಿ ಅನನ್ಯ ರೀತಿಯಲ್ಲಿ ಅಭಿವ್ಯಕ್ತಗೊಂಡಿದೆ. ಆಧುನಿಕ ಧೋರಣೆಯನ್ನು ಅಭಿವ್ಯಕ್ತಿಗೆ ತರುವಲ್ಲಿ ನಾಗರಿಕ ಜೀವನದಿಂದೆತ್ತಿದ ಪ್ರತಿಮೆ, ಪ್ರತೀಕ. ಸಂಕೇತಾತ್ಮಕ ನವ್ಯತಂತ್ರವನ್ನು ಪ್ರಚುರಪಡಿಸಿದ ಕೀರ್ತಿ ಎಲಿಯಟ್‌ನ ಕಾವ್ಯಕ್ಕಿದೆ. ರೋಮಾಂಟಿಕ್ ಕಾವ್ಯದ ಸರಳ ಅಭಿವ್ಯಕ್ತಿ-ಮಾರ್ಗವನ್ನು ಬಿಟ್ಟು ಐತಿಹಾಸಿಕ ಪ್ರಜ್ಞೆಯ ಬೆಳಕಿನಲ್ಲಿ ಜಗತ್ತಿನ ಪುರಾಣಪ್ರತೀಕಗಳ ಪುನಃಸೃಷ್ಟಿಯಲ್ಲಿ ನವ್ಯಕಾವ್ಯವು ಸಂಕೀರ್ಣ (Complex) ಸ್ವರೂಪವನ್ನು ಪಡೆಯಿತೆಂಬುದು ಎದ್ದು ಕಾಣುವ ಲಕ್ಷಣವಾಗಿದೆ.

1951ರಷ್ಟು ಹಿಂದೆಯೇ ಗೋಕಾಕರು ಮುಂಬಯಿ ಸಾಹಿತ್ಯ ಸಮ್ಮೇಲನದಲ್ಲಿ ಕನ್ನಡದಲ್ಲಿ ಕೂಡಾ ನವ್ಯಮಾರ್ಗವು ಪ್ರಚುರಗೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದ್ದರಿಂದ ಅವರೇ ಕನ್ನಡದಲ್ಲಿ ನವ್ಯಮಾರ್ಗದ ಪ್ರಥಮಲಾಕ್ಷಣಿಕರಾಗಿದ್ದಾರೆ. ನವ್ಯಮಾನವು ಆಧುನಿಕ ಸಾಹಿತ್ಯದ ಸಹಜ ಹಾಗೂ ಅನಿವಾರ್ಯ ಬೆಳವಣಿಗೆಯೆಂದು ಅಭಿಪ್ರಾಯ ಪಟ್ಟಿದ್ದು ಗಮನಾರ್ಹ ಅಂಶವಾಗಿದೆ. ಬರಿ ಶೂನ್ಯವಾದವೇ ನವ್ಯತೆಯೆಂದಾಗಲಿ ಇಲ್ಲವೆ ಐಂದ್ರಿಯಿಕ ಜೀವನದ ವಿಕೃತಿಯನ್ನು ತೋರಿಸುವ ಚಿತ್ರಸೃಷ್ಟಿ-ನೂತನರ ಮಾರ್ಗವೆಂದಾಗಲಿ ನಾವು ತಿಳಿಯದಿರೋಣ. ಒಂದು ಕಾವ್ಯದ ನವ್ಯತೆಯು ಅದರ ವಿಶಾಲ ದರ್ಶನದಲ್ಲಿದೆ. ವಿಕೃತಿಯ ಪ್ರದರ್ಶನದಲ್ಲಿಲ್ಲ ಎಂಬ ಅವರ ಮಾತುಗಳು ಪಾಶ್ಚಾತ್ಯ ನವ್ಯಸಾಹಿತ್ಯದಲ್ಲಿ ಪ್ರಬಲವಾಗಿ ವ್ಯಕ್ತವಾದ ಪೆಸಿಮಿಸ್ಟಿಕ್ ಅಂದರೆ ನಿರಾಸೆಯ ದೃಷ್ಟಿಯನ್ನು ಎತ್ತಿ ಆಡುವುದರೊಂದಿಗೆ ಕನ್ನಡ ನವ್ಯಸಾಹಿತ್ಯದಲ್ಲಿ ಅದೇ ಪ್ರಬಲವಾಗದಿರಲಿ ಎಂದು ಎಚ್ಚರಿಕೆ ಕೊಟ್ಟಂತಿದೆ. ಅವರೆ ಗೋಕಾಕರ ನವ್ಯಕಾವ್ಯ ವಿಚಾರಗಳ ದೌರ್ಬಲ್ಯಕ್ಕೆ ಮುಖ್ಯಕಾರಣವೆಂದರೆ- ವಿಮರ್ಶಕರು ಎತ್ತಿತೋರಿದಂತೆ- ಕಾವ್ಯಕ್ಕಿಂತ ಮೊದಲು ಲಕ್ಷಣಶಾಸ್ತ್ರವು ಹುಟ್ಟಿಕೊಂಡಿರುವುದೇ ಆಗಿದೆ. ಗೋಕಾಕರ 'ಸಮುದ್ರಗೀತಗಳು' ಹಾಗೂ ನವ್ಯ ಕವಿತೆಗಳು- ಈ ಕಲನಗಳಲ್ಲಿ ಅನೇಕ ಸಾರ್ಥಕ

ಪ್ರಯತ್ನಗಳನ್ನು ಮಾಡಿ ನವ್ಯ ಧೋರಣೆಗೆ ಚಾಲನೆಯನ್ನೀತ್ತಿದ್ದಾರೆ ಎಂಬುದನ್ನು ಮರೆಯುವಂತಿಲ್ಲ.

ಕನ್ನಡ ನವಕಾವ್ಯ ಚರಿತ್ರೆಯಲ್ಲಿ ಗೋಪಾಲಕೃಷ್ಣ ಅಡಿಗರಿಗೆ ಬಹು ಎತ್ತರದ ಸ್ಥಾನವಿದೆ. ನವೋದಯ ಕಾವ್ಯಧೋರಣೆಯಲ್ಲಿ ಕಾವ್ಯರಚನೆ ಪ್ರಾರಂಭಿಸಿದ ಇವರು ಬರಬರುತ್ತ ಅದಕ್ಕೆ ತೀವ್ರವಾದ ವೈಯಕ್ತಿಕ ಪ್ರತಿಕ್ರಿಯೇ ತೋರಿದರು. "ಚಂಡಮುದ್ದಳೆ" "ಭೂಮಿಗೀತ" "ವರ್ಧಮಾನ" ಇವು ಅವರ ನವ್ಯಕಾವ್ಯ ಸಂಗ್ರಹಗಳು. ಈ ಮೂರು ಕವನಸಂಗ್ರಹಗಳ ಒಟ್ಟು ಕವನಗಳ ಸಂಖ್ಯೆ ಕೇವಲ ಇಪ್ಪತ್ತೈದರಷ್ಟಾದರೂ ಇವುಗಳ ಸಾಹಿತ್ಯಿಕ ಹಾಗೂ ತಾಂತ್ರಿಕ ಗುಣಮಟ್ಟವು ಅನನ್ಯರೀತಿಯುದಾಗಿದೆ. ಕನ್ನಡದಲ್ಲಿ ನವ್ಯಕಾವ್ಯವು ಒಂದು ಐತಿಹಾಸಿಕ ಅವಶ್ಯಕತೆಯಾಗಿ ಬಂದಿದೆಯೆಂದು ಪ್ರತಿಪಾದಿಸಿದವರಲ್ಲಿ ಇವರು ಅಗ್ರಗಣ್ಯರು. ನಮ್ಮ ಜೀವನದಲ್ಲಾದ ಬದಲಾವಣೆ ಹಾಗೂ ಹಿಂದಿನ ಕಾವ್ಯದ ಸತ್ವವು ತೀರಿಹೋದುದು. ನವ್ಯಕಾವ್ಯದ ಪ್ರಾದುರ್ಭಾವಕ್ಕೆ ಮುಖ್ಯಕಾರಣಗಳೆಂದು ಪ್ರತಿಪಾದಿಸಿದ್ದಾರೆ. 1952ರಲ್ಲಿ "ನಡೆದು ಬಂದ ದಾರಿ" ಎಂಬ ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಅವರು ನಮ್ಮ ದೇಶಕ್ಕೆ ಸ್ವಾತಂತ್ರ ಬರುವ ತನಕ ಇದ್ದ ವಾತಾವರಣ ಈಗ ಸಮೂಲಪರಿವರ್ತನೆಗೊಂಡಿದೆ. ಮೋಡವಾಗಿ ಮೇಲೆರಿದ್ದ ಮನಸ್ಸು ಮಳೆಯಾಗಿ ಮತ್ತೆ ಹಳ್ಳಕೊಳ್ಳಗಳಲ್ಲಿ ತುಂಬಿಹೋಗಿದೆ. ತಳದಲ್ಲಿ ಕೂಡಿದ್ದ ಕೊಳೆ ಕಸರಾಡಿಯೆಲ್ಲ ಈಗ ಮತ್ತೆ ಮೇಲೆದ್ದು ಬಂದು ಕನ್ನಡಿಯಂಥ ನೀರು ಕಲಕಿದೆ ಎಂದು ಸ್ವಾತಂತ್ರ್ಯನಂತರದ ಜೀವನ ದೃಷ್ಟಿಯ ಸ್ಥಿತ್ಯಂತರವನ್ನು ಸ್ಪಷ್ಟಗೊಳಿಸಿದ್ದಾರೆ. ಹೊಸ ತಲೆಮಾರಿನ ಒಂದು ಜನಾಂಗದ ಜಾಣತನ, ಕಿಡಿಗೇಡಿತನ, ಪ್ರತಿಭಟನೆಯ ಧೋರಣೆಗೆ ಸೃಷ್ಟ್ಯಾತ್ಮಕ ಅಭಿವ್ಯಕ್ತಿ ನೀಡುವ ಸಾಹಸಕ್ಕೆ ಕೈಹಾಕಿದರು. ಆಧುನಿಕ ಜೀವಂತ ಜನಾಂಗದ ಸಂವೇದನೆಗಳನ್ನು ಇವರು ಅಭಿವ್ಯಕ್ತಗೊಳಿಸಿದ ರೀತಿ ಅನನ್ಯವಾದರಿಯದಾಗಿದೆ. ಹೊಸ ಪ್ರತಿಮೆ. ರೂಪಕ, ಪ್ರತೀಕ ಹಾಗೂ ಸಂಕೇತಗಳ ನವ್ಯತಂತ್ರವೊಂದನ್ನು ಪ್ರಯೋಗದಲ್ಲಿ ತಂದರು. ಕಾವ್ಯವು ಅಭಿವ್ಯಕ್ತಿಯಲ್ಲಿ ಅನೇಕ ರೂಪಕ, ಪ್ರತೀಕ, ಸಂಕೇತಗಳ ಸೃಷ್ಟಿಯಿಂದ ಒಂದು 'ಸಾವಯವ ಸಮಗ್ರೀಕರಣ' ವ್ಯವಸ್ಥೆಯಾಗಿ ತಂತ್ರದಲ್ಲಿ ಪ್ರತಿಮಾನಿಷ್ಠ ರಚನೆಯಾಯಿತು. ನವ್ಯ ಸಾಹಿತ್ಯಕ್ಕೆ ಸಂವಾದಿಯಾಗಿ ನವ್ಯವಿಮರ್ಶೆಯ ಸಂಥವೊಂದು ಹುಟ್ಟಿಕೊಂಡಿತು. ನವ್ಯವಿಮರ್ಶೆಯಲ್ಲಿ ವ್ಯಾಪಕ ಪ್ರಚಾರ ಪಡೆದ ಪ್ರತಿಮಾನಿಷ್ಠತೆ, ಸಾಂಕೇತಿಕತೆ, ಸಂಕೀರ್ಣತೆ, ಸಮಕಾಲೀನ ಪ್ರಜ್ಞೆ. 'ಸಾವಯವ ಸಮಗ್ರೀಕರಣ' – ಇವೇ ಮೊದಲಾದ ವಿಮರ್ಶಕ ಮೌಲ್ಯಗಳಿಗೆ ಸರಿದೊರೆಯಾಗಿ ತೂಗಬಲ್ಲ ತಾಕತ್ತು ಅಡಿಗರ ಕಾವ್ಯಕ್ಕೆ ಇದ್ದದ್ದು ಅವರ ಕಾವ್ಯದ ಯಶಸ್ಸಿಗೆ ನಿದರ್ಶನವಾಗಿದೆ.

ನವೋದಯ ಕಾವ್ಯದ ಧೋರಣೆಯಲ್ಲಿ ಬರೆಯುತ್ತಿದ್ದ ಕೆ. ಎಸ್. ನರಸಿಂಹ ಸ್ವಾಮಿ, ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿಯಂಥವರು ನವ್ಯಕಾವ್ಯರಚನೆಗೆ

ಕೈ ಹಾಕಿದರು. ರೋಮ್ಯಾಂಟಿಕ್ ಭಾವ ಹಾಗೂ ಆದರ್ಶಗಳ ಸಂಟಿನೊಂದಿಗೆ ನವ್ಯಧೋರಣೆಯನ್ನು ಸಮನ್ವಯಗೊಳಿಸುವ ದಿಸೆಯಲ್ಲಿ ಇವರು ಪ್ರಯತ್ನಶೀಲ-ರಾದದ್ದರಿಂದ ಇವರನ್ನು 'ಸಮನ್ವಯ ಪಂಥದವರು' ಎಂದು ಹೆಸರಿಸಲಾಯಿತು. ಆದರೆ ಕಾವ್ಯದ ಪರಿಭಾಷೆ ಹಾಗೂ ಅಭಿವ್ಯಕ್ತಿಯ ರೀತಿ ವಿನ್ಯಾಸಗಳು ಸಂಪೂರ್ಣವಾಗಿ ಬದಲಾದ ವಿಚಿತ್ರ ಸನ್ನಿವೇಶದಲ್ಲಿ ಈ ಸಮನ್ವಯವಾದಿಗಳ ಕಾವ್ಯವು ಅರ್ಥಪೂರ್ಣ-ವೆನ್ನಿಸಲಿಲ್ಲವೆಂದೇ ಹೇಳಬೇಕು. ಅಡಿಗರ ಕಾವ್ಯಕ್ಕಿರುವ ತೀವ್ರ ಸಂವೇದನಾಶಕ್ತಿ, ವೈಚಾರಿಕ ಸಂಕೀರ್ಣತೆ, ಪ್ರಚಂಡ ಪ್ರತಿಭೆಯ ವಿನ್ಯಾಸಗಳು ಕಾವ್ಯಕ್ಕೆ ಒದಗದಿದ್ದುದೇ ಇವರ ಸೋಲಿಗೆ ಪ್ರಮುಖ ಕಾರಣವಾಗಿದೆ.

ಅಡಿಗರ ಪ್ರಭಾವದಿಂದ ಪ್ರೇರಿತರಾಗಿ ಅನೇಕ ಕಿರಿಕಿರಿಯ ಕವಿಗಳು ನವ್ಯಕಾವ್ಯ ಕೃಷಿಗೆ ಕೈಹಾಕಿದರು. ರಾಮಚಂದ್ರ ಶರ್ಮ. ನಿಸಾರ ಅಹಮದ್, ಚಂದ್ರಶೇಖರ ಕಂಬಾರ. ಪಿ. ಲಂಕೇಶ, ರಾಮಾನುಜನ್ ಮೊದಲಾದವರು ಇವರಲ್ಲಿ ಗಮನಾರ್ಹರು. ಅಂದಿನ ತರುಣರಿಗೆ ನವ್ಯತಂತ್ರ ಹಾಗೂ ಧೋರಣೆಗಳು ಒಂದು ಸಿದ್ಧಶೈಲಿಯ ರೂಪದಲ್ಲಿ ದೊರೆತವು. ಅಡಿಗರನ್ನು ನವ್ಯಕಾವ್ಯದ ಪ್ರವರ್ತಕರೆಂದು ಭಾವಿಸಿ ಅವರ ಆದರ್ಶವನ್ನೇ ಅನುಕರಿಸಿದರು. ಅಡಿಗರನ್ನು ಒಂದು ಜನಾಂಗದ ಕಣ್ಣು ತೆರೆಯಿಸಿದ ಕವಿ ಎಂದು ಕೊಂಡಾಡುವಷ್ಟು ಮುಂದೆ ಹೋದದ್ದು ಒಂದು ವಿಶೇಷ. ಅಡಿಗರ ಕಾವ್ಯದ ಆತ್ಮಪರಿಶೋಧನೆಯ ರೀತಿ. ಆದರ್ಶ ಮತ್ತು ವಾಸ್ತವಿಕತೆಗಳ ನಡುವಿನ ನಿರಂತರ ಘರ್ಷಣೆಯ ಕಾಣ್ಕೆಗಳು. ಕಾವ್ಯದಲ್ಲಿ ಎಂತೋ ಅಂತೆಯೇ ಕಾದಂಬರಿ, ನಾಟಕ. ಸಣ್ಣಕತೆ ಮೊದಲಾದ ಗದ್ಯಪ್ರಕಾರಗಳಲ್ಲಿಯೂ ಕಾಣಿಸಿಕೊಳ್ಳಹತ್ತಿದವು.

ಅಡಿಗರ ಕಾವ್ಯದಲ್ಲಿ ಬರುವ ಸಮಕಾಲೀನತೆಯು ಆಧುನಿಕ ನಾಗರಿಕತೆಯ ವೈಪರೀತ್ಯದಲ್ಲಿ ಅರ್ಥ ಕಳೆದುಕೊಂಡು ಶೂನ್ಯಸ್ಥಿತಿತಲುಪಿಸಿದ ಮಾನವನ ವ್ಯಕ್ತಿತ್ವಕ್ಕೆ ಮೌಲ್ಯಪ್ರಧಾನ ಮಾಡುವ ಉದ್ದೇಶದಿಂದ ಪ್ರೇರಿತವಾದದ್ದರಿಂದ ಅದು ಸನಾತನ ಅರ್ಥೀಯ ಮೌಲ್ಯಗಳ ಪುನಃ ಪ್ರತಿಷ್ಠಾಪನೆ ಮಾಡುವ ದಿಸೆಯಲ್ಲಿ ಪ್ರವರ್ತಿತ-ವಾಯಿತು. ಸಮಕಾಲಿನ ರಾಜಕೀಯ. ಆರ್ಥಿಕ. ಸಾಮಾಜಿಕ ಜ್ವಲಂತಸಮಸ್ಯೆಗಳಿಂದ ಪ್ರತ್ಯೇಕಿಸಿಕೊಳ್ಳುವ ಧೋರಣೆಯನ್ನು ಯುವಜನಾಂಗದ ಕವಿಗಳು ಪ್ರತಿಭಟಿಸಹತ್ತಿ-ದರು. ಇದರಿಂದ ಕನ್ನಡದಲ್ಲಿ ಬಂಡಾಯದ ಧೋರಣೆ ಪ್ರಬಲವಾಯಿತು. ಪ್ರತಿಷ್ಠಾ-ಪಿತ ಮೌಲ್ಯಗಳ ವ್ಯವಸ್ಥೆಯನ್ನು ಎಂದರೆ ಜಾತಿವರ್ಣ ವ್ಯವಸ್ಥೆಯನ್ನು ಒಡೆದು ಪುಡಿ ಪುಡಿ ಮಾಡುವ ಕ್ರಿಯಾಶೀಲ ಆಯಾಮ ನವ್ಯಕಾವ್ಯಕ್ಕೆ ಸಾಧ್ಯವಿಲ್ಲವೆಂಬ ಅರಿವಿನೊಂದಿಗೆ ಕೆಲವು ಕಿರಿಯ ಸಾಹಿತಿಗಳು ಅದನ್ನು ನಿರಾಕರಿಸಿದರು. ಕನ್ನಡ ಕಾವ್ಯದಲ್ಲಿ ಇಂದು ಪ್ರಬಲ ಆಂದೋಲನಗಳಾಗಿ ರೂಪುಗೊಳ್ಳುತ್ತಿರುವ ಬಂಡಾಯ ಹಾಗೂ ದಲಿತ ಧೋರಣೆಗಳಿಗೆ ಆಧುನಿಕ ಸಮಾಜದಲ್ಲಿ ನಡೆಯುತ್ತಿರುವ ವರ್ಣ-

ಸಂಘರ್ಷ ಹಾಗೂ ಜಾತಿ ಸಂಘರ್ಷಗಳೇ ಪ್ರೇರಕವಾಗಿವೆ. ಶತಶತಮಾನಗಳಿಂದ ವರ್ಣಭೇದನೀತಿಗೆ ಬಲಿಯಾಗಿ ಅಪಮಾನ, ಅತ್ಯಾಚಾರಗಳಿಗೊಳಗಾದ ನಿಗ್ರೋ–ಜನಾಂಗವು ಸಿಡಿದೆದ್ದು ಬಿಳಿಯ ನಾಗರಿಕ ವ್ಯವಸ್ಥೆಯಲ್ಲಿ ಕರಿಯರಿಗೂ ಸಮಪಾಲು ಬೇಕೆಂದು ಅಮೇರಿಕೆಯ ನಿಗ್ರೋ ಸಂಘಟನೆ "ಬ್ಲ್ಯಾಕಪ್ಯಾಂಥರ್ಸ ಮೂವ್ಮೆಂಟ್" ಹೋರಾಟಕ್ಕೆ ಅಣಿಯಾಗಿದೆ. ಕಪ್ಪು ಜನಾಂಗದ ಸಿಡಿದೆದ್ದ ಪ್ರಜ್ಞೆಯ ಪ್ರತಿಧ್ವನಿ ಜಗತ್ತಿನಾದ್ಯಂತ ಅಂತಹವೇ ದಬ್ಬಾಳಿಕೆಗೊಳಗಾದ ದಲಿತರಲ್ಲಿ ಹೊಸ ಸಾಮಾಜಿಕ ಆರ್ಥಿಕ–ಸಂಘರ್ಷಕ್ಕೆ ಹುಟ್ಟುಹಾಕಿದೆ. ವರ್ತಮಾನ ಭಾರತದಲ್ಲಿ ಮಹಾರಾಷ್ಟ್ರ, ಆಂಧ್ರ. ಬಂಗಾಳದಲ್ಲಿ ದಲಿತರು ಸಂಘಟಿತ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ಸಾಹಿತ್ಯವು ಸಾಮಾಜಿಕ ಪರಿವರ್ತನೆಗೆ ಚಾಲನೆಯನ್ನೊದಗಿಸುವ ಪ್ರಬಲ ಸಾಧನವಾಗಬಲ್ಲುದೆಂಬ ಆಶಯ ಹಾಗೂ ದಲಿತರ ನೋವು ನರಳಿಕೆಗಳಿಗೆ ನೇರ ಅಭಿವ್ಯಕ್ತಿ ದೊರಕಿಸುವ ಧ್ಯೇಯಗಳೊಂದಿಗೆ ಕರ್ನಾಟಕದಲ್ಲಿ ದಲಿತವೇದಿಕೆ ಸಂಘಟಿತವಾಗಿದೆ. ಸಮಾಜದ ದುರ್ವ್ಯವಸ್ಥೆ ದುರಾಡಳಿತಗಳಿಗೆ ಕ್ರಿಯಾಶೀಲ ಪ್ರತಿಭಟನೆ ವ್ಯಕ್ತಪಡಿಸುವುದೇ ಬಂಡಾಯ ಹಾಗೂ ದಲಿತ ವೇದಿಕೆಗಳ ಪ್ರಧಾನ ಆಶಯವಾಗಿದೆ. ದಲಿತವೇದಿಕೆ, ಕೇವಲ ದಲಿತರ ಸಮಸ್ಯೆಗಳಿಗೆ ಸೀಮಿತವಾಗಿದ್ದರೆ ಬಂಡಾಯ ವೇದಿಕೆ, ಇಡೀ ಸಮಾಜವನ್ನೇ ಎದುರಿಸುವ ಧೋರಣೆಹೊಂದಿರುವುದರಿಂದ ಹೆಚ್ಚು ವ್ಯಾಪಕವಾಗಿದೆ. ಈ ಧೋರಣೆಯಲ್ಲಿ ಸೃಷ್ಟಿಗೊಳ್ಳುತ್ತಿರುವ ಸಾಹಿತ್ಯದಲ್ಲಿ ಇಂದು ಅಕ್ರೋಶ ಚಿತ್ಕಾರಗಳೇ ಕೇಳಿ ಬರುತ್ತಿವೆ. ಅಕ್ರೋಶ ಪ್ರತಿಭಟನೆ ತೀವ್ರ ಸಂವೇದನೆಯಾಗಿ ಕಲಾತ್ಮಕ ಅಭಿವ್ಯಕ್ತಿಯಲ್ಲಿ ಸಾರ್ಥಕತೆ ಪಡೆಯುವ ಆರೋಗ್ಯ ಪೂರ್ಣ ಲಕ್ಷಣಗಳು ನಿಮ್ನ ವರ್ಗದ ಲೇಖಕರಲ್ಲಿ ಕಂಡುಬರುತ್ತಿರುವದು ಮುಂದಿನ ಕನ್ನಡ ಸಾಹಿತ್ಯಕ್ಕೆ ದಿಕ್ಸೂಚಿಯಾಗಿದೆ.

ಎಕ್ಕಲಮ್ಮ-ಎಲ್ಲಮ್ಮ

● ಡಾ. ಎಂ. ಎಂ. ಕಲಬುರ್ಗಿ

ಸುಪ್ರಸಿದ್ಧ ಸವದತ್ತಿ ಎಲ್ಲಮ್ಮದೇವತೆಯ ಮೂಲ ಇತಿಹಾಸ, ಹೆಸರಿನ ನಿಷ್ಪತ್ತಿ ಇತ್ಯಾದಿಗಳ ಬಗ್ಗೆ ಇನ್ನೂ ಸಂದೇಹ ಉಳಿದುಕೊಂಡಿದೆ. ಇವಳನ್ನು ಶಿಷ್ಟರು ರೇಣುಕೆ ಎಂದು ಕರೆದರೆ ಜನಪದರು ಮಾತ್ರ "ಎಲ್ಲಮ್ಮ" ಎಂದೇ ಕರೆಯುತ್ತಿದ್ದು, 'ಎಲ್ಲರ ಅಮ್ಮ' ಎಂದು ಇದನ್ನು ಸರಳವಾಗಿ ಅರ್ಥೈಸಿದವರೇ ಹೆಚ್ಚು. ಇತ್ತೀಚೆ 'ಎಲ್ಲೆಯ ಅಮ್ಮ' ಅಂದರೆ ಸೀಮೆಯ ದೇವತೆಯೆಂದೂ ಅರ್ಥ ಹೇಳುತ್ತಲಿದ್ದಾರೆ.

ಒಂದು ಮುಂಜಾನೆ ಬೀದಿಯಲ್ಲಿ ತಿರುಗುತ್ತಲಿದ್ದ ಎಲ್ಲಮ್ಮನ ಜೋಗತಿಯೊಬ್ಬಳು ನನ್ನ ಮನೆಗೂ ಬಂದು "ಎಕ್ಕಲದೋ ಉಧೋ" ಎಂದು ನುಡಿದಳು. ಎಲ್ಲಮ್ಮನ ಭಕ್ತೆಯ ಬಾಯಿಯಿಂದ ಬಂದ 'ಎಕ್ಕಲದೋ' ಪದ, ಕಾವ್ಯ-ಶಾಸನಗಳಲ್ಲಿ ನಾನು ಓದಿದ್ದ 'ಎಕ್ಕಲದೇವಿ'ಯ ನೆನಪು ತಂದುಕೊಟ್ಟು, ಎಕ್ಕಲದೇವಿಯೇ ಎಲ್ಲಮ್ಮ ನಾಗಿರಬಹುದೇ? ಎಂಬ ಆಲೋಚನಗೆ ತೊಡಗಿಸಿದುದರ ಫಲ ಈ ಲೇಖನ.

ಎಕ್ಕಲದೇವಿ, ಎಕ್ಕಲವಿರಿ, ಎಕ್ಕನಾದಿ, ಯಕನಾತಿ, ಏಕನಾಥಮ್ಮ ಹೆಸರುಗಳು ಕಾವ್ಯ-ಶಾಸನಗಳಲ್ಲಿ, ಎಲ್ಲಮ್ಮ, ಎಲ್ಲಾಯಿ ಹೆಸರುಗಳು ಜನಪದರ ಮಧ್ಯದಲ್ಲಿ ತೋರಿಬರುವುದು ಹೆಚ್ಚು. ಹೀಗಾಗಿ ಮೊದಲ ಗುಂಪಿನ ಕಾವ್ಯಪ್ರಸಿದ್ಧ ಹೆಸರು ಜನರ ಮಧ್ಯ ಏಕೆ ಕೇಳಿಬರುವುದಿಲ್ಲ? ಎರಡನೆಯ ಗುಂಪಿನ ಜನಪ್ರಸಿದ್ಧ ಹೆಸರು ಕಾವ್ಯಗಳಲ್ಲಿ ಏಕೆ ದಾಖಲಾಗಿಲ್ಲ? ಎಂಬ ಪ್ರಶ್ನೆ ಸಹಜ ಏಳುತ್ತದೆ. ಬಹುಶಃ ಎಕ್ಕಲದೇವಿ, ಎಲ್ಲಮ್ಮ ಎರಡೂ ಒಂದೇ ಆಗಿದ್ದು ಕಾವ್ಯ-ಶಾಸನಗಳಲ್ಲಿ ಒಂದು ಹೆಸರಿನಿಂದ, ಜನತೆಯಲ್ಲಿ ಇನ್ನೊಂದು ಹೆಸರಿನಿಂದ ಈ ದೇವತೆ ಪ್ರಚಾರ ಪಡೆದಿರ-ಬಾರದೇಕೆ? ಎಂಬ ಅನುಮಾನ ಹುಟ್ಟುತ್ತದೆ.

ಕನ್ನಡ ಕಾವ್ಯಗಳಲ್ಲಿ ಈಕೆ ಜಾನಪದ ಕ್ಷುದ್ರದೇವತೆಯಾಗಿ ಹೀಗೆ ಕಂಡು ಬರುತ್ತಾಳೆ.

1. "ನೆಲನೆಲ್ಲಂ ಕೊಂಡಾಡುವೆಕ್ಕಲವಿರಿಯುಂ ಬನವಬ್ಬೆಯುಂ" (ಧರ್ಮಾಮೃತ 9-101)

2. "ಎಕ್ಕಲದೇವಿಗೆ ಮಾಮಾಲಕ್ಕನಿಗಂ ಬನದ ಬಳರಿಗಂ ಮೈಲಾರಂಗಳ್ಕದೆ ಜಾತ್ರೆಯು ಮಾಳ್ಪಂ" (ಸಮಯಪರೀಕ್ಷೆ 4-123)

3. "ಎಲ್ಲಿ ಎಕ್ಕನಾದಿ ಹುಲಿಗೆ ಹೊಸೂರಿ ಸತ್ತವರು ಹೆತ್ತವರು ಇಂತೀ ಪಲವು ಪಿಶಾಚಿಗಳ ಹೆಸರಿನಿಂದ" (ಮಡಿವಳ ಮಾಚಿದೇವನ ವಚನ).

4. ಪುರದ ಮಸಣಿಗಿಂದುಪುರದೆಕ್ಕನಾತಿಗೆ ಪಿರಿಯ ಭೈರವದೇವರಿಗೆ ವರವೀವ ಮೈಲಾರಗೆಂದವಜಿರ್ಘಮನಿರುಳು ಪಗಲು ತೂನುತಿಹರು (ಅಂಜನಾಚರಿತೆ 3-129).

5. ಎಕ್ಕನಾತಿಯುರ ಕಾಟ ಜಕ್ಕಿಯರು ಕನ್ನೆಯರು ಸೊಕ್ಕಿನಿಂದ ಸೊಂಟಮುರುಕ ಭೈರೇದೇವರು (ಕನಕದಾಸ 142-1).

6. ಎಲ್ಲಾಯಿ, ಯಕನಾತಿ, ಬನದಶಂಕರಿ, ಮಲ್ಲಗ, ಜಟ್ಟಿಂಗ, ಮಾಳಿಗೆ, ಮನಿದೇವಿ (ವಿಜಯದಾಸರ ಸುಳಾದಿ)

7. ನಾರಸಿಂಹನ ಪಿಡಿದು ತಹುದೇನರಿದು. ವೈಷ್ಣವ ಪಡೆಸಹಿತ ತಂದೊಪ್ಪಿಸುವೆ ನೆಂದಳೆಕನಾತಿ (ಶಂಕರದಾಸಿಮಯ್ಯನ ಪುರಾಣ 12-44).

8. ಅಕ್ಕ ಗಿರಿಜೆ ಕೇಳ್ ಮರ್ಕಟ ಗುಣವವಳೆ ಎಕ್ಕಲ ಜೋಗಿತಿಯ ಮಗಳೆ (ಗಂಗೆಗೌರಿ ಸಂವಾದ. ಪು. 70).

ಇಲ್ಲಿ ಮಡಿವಳ ಮಾಚಿದೇವ, ವಿಜಯದಾಸರು ಎಲ್ಲಮ್ಮ ಬೇರೆ ಎಕ್ಕನಾತಿ ಬೇರೆಯೆಂದು ಸೂಚಿಸುತ್ತಾರೆ. ಇವರಲ್ಲಿ ವಿಜಯದಾಸರು ತೀರ ಈಚಿನವರು: ಮಡಿವಳ ಮಾಚಿದೇವನ ವಚನ ಬಂಧ-ಭಾಷೆಗಳಿಂದಾಗಿ ಪ್ರಕ್ಷಿಪ್ತವೆನಿಸುತ್ತದೆ. ಹೀಗಾಗಿ ಇವರ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. ಆದರೆ ಇಲ್ಲಿಯ ಎಕ್ಕನಾದಿ, ಎಕ್ಕನಾಥಿ, ಎಕ್ಕನಾಥಮ್ಮ ರೂಪಗಳು ಎಕ್ಕಲದೇವಿಯನ್ನು ನಾಥಪಂಥಕ್ಕೆ ತಿರುಗಿಸಿಕೊಂಡುದರ ಪರಿಣಾಮವೋ, ಈ ದೇವತೆ ಮೂಲತಃ ನಾಥಪಂಥಕ್ಕೆ ಸೇರಿದುದೋ ವಿಚಾರಿಸಬೇಕು. (ಲಜ್ಜಾಗೌರಿ ವಿಗ್ರಹಗಳಿಗೆ ಯಲ್ಲಮ್ಮ ಎಂದು ಕರೆಯುವ ರೂಢಿಯಿದೆ. ಈ ಗೌರಿ ಕೌಲರು ಪೂಜಿಸುವ ವಿಗ್ರಹವಾಗಿರಬಹುದು).

ಹಿಂದೆ ಹೇಳಿದಂತೆ 'ಎಕ್ಕಲ್ಬೋ ಉಧೋ' ಎಂಬುದರ ಮೂಲರೂಪ 'ಎಕ್ಕಲ ದೇವಿ ಉಧೋ' ಎಂದು ಸಹಜವಾಗಿಯೇ ಹೇಳಬಹುದು. ಭಿಕ್ಷಾ ಪ್ರಸಂಗದಲ್ಲಿ 'ಎಕ್ಕಲ್ಬೋ ಜೋಗವ್ವ' ಎಂದು ಭಕ್ತೆಯರೂ 'ಎಕ್ಕಲ್ಬೋ ಜೋಗಪ್ಪ' ಎಂದು ಭಕ್ತರೂ ಕರೆದುಕೊಳ್ಳುವಲ್ಲಿ ತಾವು 'ಎಕ್ಕಲದೇವಿಯ ಜೋಗವ್ವ' 'ಎಕ್ಕಲದೇವಿಯ ಜೋಗಪ್ಪ' ಎಂದು ಇವರು ತಮನ್ನು ಸೂಚಿಸಿಕೊಳ್ಳುವಂತೆ ತೋರುತ್ತದೆ. ಈ

'ಏಕ್ಕಲದೇವಿ' ಎಂಬುದೇ ಎಕ್ಕಲಮ್ಮ > ಏಕ್ಲಮ್ಮ > ಎಲ್ಲಮ್ಮ ಆಗಿರಬಹುದು. ಇದು ಇನ್ನೊಂದು ಬಗೆಯಲ್ಲಿ ಎಕ್ಕವ್ವೆಯೆಂದಾಗಿ, ಆಮೇಲೆ ಜನರ ಬಾಯಿಯಲ್ಲಿ ಏಕ್ಕಯ್ಯ ಎಂದು ಪುರುಷನಾಮಕ್ಕೆ ತಿರುಗಿ, ಏಕ್ಕಯ್ಯ-ಜೋಗಯ್ಯರ ಕಾಲ್ಪನಿಕ ಕಥೆಗಳನ್ನು ಹುಟ್ಟಿಸಿಕೊಂಡಂತೆ ತೋರುತ್ತದೆ.

ಎಕ್ಕಲದೇವಿಗೆ ಎಕ್ಕಲವಿರಿ ಎಂಬ ಇನ್ನೊಂದು ಹೆಸರು ಧರ್ಮಾಮೃತದಲ್ಲಿ ಕಂಡುಬರುತ್ತದೆ. ಬರೆವಣಿಗೆ ಪ್ರಸಂಗದಲ್ಲಿ ಪ್ರಾಚೀನ ಹಸ್ತಪ್ರತಿಗಳಲ್ಲಿ ಪ್ರತ್ಯೇಕ ದೀರ್ಘವನ್ನು ಬಳಸುತ್ತಿರಲಿಲ್ಲ. ಕಾರಣ ಇದರ ನಿಜರೂಪ ಏಕ್ಕಲವೀರಿ ಇರುವ ಸಾಧ್ಯತೆಯಿದೆ. ಎಲ್ಲಮ್ಮನು ಏಕವೀರಾ ಎಂಬ ಹೆಸರಿನಿಂದ ಈಗಲೂ ಬೇರೆ ಪ್ರಾಂತಗಳಲ್ಲಿ ಪೂಜಿಸಿಕೊಳ್ಳುತ್ತಾಳೆ ಎಂದು ವಿದ್ವಾಂಸರು ಹೇಳುತ್ತಾರೆ. ಆದುದರಿಂದ ಎಕ್ಕಲದೇವಿ–ಎಲ್ಲಮ್ಮ–ಎಕ್ಕಲವಿರಿ–ಏಕವೀರಾ ಒಂದೇ ಎಂದು ಹೇಳಬಹುದಾಗಿದೆ.

ಪರಿಷತ್ತಿನ ನಿಘಂಟುವಿನಲ್ಲಿ 'ಏಕ್ಕಲದೇವಿ' ಎಂಬುದಕ್ಕೆ 'ರೇಣುಕೆ' 'ಎಲ್ಲಮ್ಮ' ಎಂದು ಅರ್ಥಹೇಳಿ ಬೇಂದ್ರೆಯವರ ಅರಳು ಮರಳು ಕಾವ್ಯದಿಂದ "ಏಕ್ಕಲದೇವಿ! ಜೋಗಮಾಯಿ! ಉಧೋ ಉಧೋ ಉಧೋ" ಎಂದು ಉದಾಹರಣೆ ಕೊಡಲಾಗಿದೆ. ಶ್ರೀ ಪಿ. ಕೆ. ರಾಜಶೇಖರ ಅವರು "ಯಕ್ಷಿಣಿ ಉಧೋ ಜಯ > ಏಕ್ಕಲಿ ಉಧೋ ಜಯ > ಏಕ್ಕಲ್ಬೋ ಜಯ" ಎಂಬ ರೂಪ ವ್ಯತ್ಯಾಸಗಳನ್ನು ಹೇಳಿ 'ಯಕ್ಷಿಣಿ'ಯೆಂಬುದೇ ಎಲ್ಲಮ್ಮ ಆಯಿತೆಂದು ಊಹಿಸಿದ್ದಾರೆ.[1] ಈ ಲೇಖನ ಬರೆದ ಮೇಲೆ ನನ್ನ ಗಮನಕ್ಕೆ ಬಂದ ಈ ಎರಡು ಅಭಿಪ್ರಾಯಗಳಲ್ಲಿ ಪರಿಷತ್ತಿನ ನಿಘಂಟು ನೇರವಾಗಿ ನನ್ನ ನಿರ್ಣಯವನ್ನು ಪೋಷಿಸುತ್ತದೆಯೆಂಬುದು ಗಮನಿಸಬೇಕಾದ ಅಂಶ. ಒಟ್ಟಿನಲ್ಲಿ ಕಾವ್ಯಪ್ರಸಿದ್ಧ ಏಕ್ಕಲದೇವಿಯೇ ಇಂದು ಅನೇಕ ಊರುಗಳಲ್ಲಿರುವ ಎಲ್ಲಮ್ಮದೇವಿ ಎಂದು ಹೇಳಬಹುದಾಗಿದೆ.

ಕ್ರಿ. ಶ. 1095ರ ಹಾಲೇಬೇಲೂರು (Ec. V Mj 18) ಶಾಸನದಲ್ಲಿ 'ಬನವಾಸಿ ಪುರವರಾಧೀಶ್ವರ'ನಾದ ಕದಂಬ ಅರಸು ಜಯಸಿಂಹನೃಪನನ್ನು 'ಶ್ರೀಮದೇಕ್ಕಲದೇವಿ ಲಬ್ಧವರ ಪ್ರಸಾದ' ಎಂದು ಹೆಸರಿಸಲಾಗಿದೆ. ಕ್ರಿ. ಶ. 1145 ರ ಉದ್ರಿಗ್ರಾಮದ ಶಾಸನದಲ್ಲಿ (Ec. VIII ಸೊರಬ 138) ರಾಜಧಾನಿ ಉದ್ದರೆಯಿಂದ ಬನವಾಸಿ ನಾಡಿನ ಜಿಡ್ಡುಳಿಗೆ ಪ್ರಾಂತವನ್ನಾಳುತ್ತಿದ್ದ 'ಏಕ್ಕಲದೇವ' ಹೆಸರಿನ ಅರಸನಿಗೆ 'ಏಕ್ಕಲದೇವಿ ವರಪ್ರಸಾದೋತ್ಪನ್ನ' ಎಂದು ಕರೆಯಲಾಗಿದೆ.[2] ಪ್ರಾಚೀನ

---

1. ಚೌಡಿಕೆ ಕಾವ್ಯಗಳು (ಸಂ. ನಾರಾಯಣಗೌಡ) ಈ ಗ್ರಂಥಕ್ಕೆ ಶ್ರೀ ಪಿ. ಕೆ. ರಾಜಶೇಖರ ಬರೆದ ಮುನ್ನುಡಿ XXXV.
2. ಈ ಅರಸು ಮನೆತನದ ಶಾಸನಗಳು EC VIII ಸೊರಬ 132, 138, 140. 147, 149, 233, ರಲ್ಲಿ ಕಂಡುಬರುತ್ತವೆ.

ಕಾಲದಲ್ಲಿ ಈ ಹೆಸರನ್ನು ವ್ಯಕ್ತಿಗಳಿಗೆ ಇಡುತ್ತಿದ್ದರೆಂಬುದೂ ಈ ಎಕ್ಕಲದೇವನು ಜೈನನೆಂಬುದೂ ಇಲ್ಲಿ ಗಮನಿಸತಕ್ಕ ಅಂಶಗಳಾಗಿವೆ. ಜೈನರಿಗೂ ಪೂಜ್ಯಳೆನಿಸಿದ್ದ ಈ ದೇವತೆ ಬನವಾಸಿಯಲ್ಲಿ ಇಲ್ಲವೆ ಆ ಪರಿಸರದಲ್ಲಿ ಇರುವ ಸಾಧ್ಯತೆಯಿದೆ. (ಬಹುಶಃ ಈಕೆ ಬನವಾಸಿ ಸಮೀಪದ ಚಂದ್ರಗುತ್ತಿ ಎಲ್ಲಮ್ಮನಿರಬಹುದು ಇಲ್ಲವೆ ಹುಮ್ಮಚದ ಜೈನಯಕ್ಷಿ ಪದ್ಮಾವತಿಯಾಗಿರಬಹುದು).

ಸವದತ್ತಿಯ ಎಕ್ಕಲದೇವಿ ಯಾರು? ಇವಳು ಪುರಾಣದೇವತೆಯೆ? ಹಿಂದೂ ಅಥವಾ ಅಹಿಂದೂ ದೇವತೆಯೆ? ಎಂಬುದು ಇನ್ನೊಂದು ಪ್ರಶ್ನೆ. ಸವದತ್ತಿ ಎಲ್ಲಮ್ಮ-ನದು ಮೂಲತಃ ಜೈನ ಯಕ್ಷಿಯ ವಿಗ್ರಹವೆಂದು ಈಗಾಗಲೇ ವಿದ್ವಾಂಸರು ಸಂದೇಹಿಸಿ-ದ್ದಾರೆ. ಇದಕ್ಕೆ ಆಧಾರವಾಗಿ ಮುಖ್ಯ ದೇವಾಲಯದ ಹೊರಮೈ ಗೋಡೆಯಲ್ಲಿ ಎಡಕ್ಕೆ ಮತ್ತು ಹಿಂದೆ ತೀರ್ಥಂಕರನ ಕುಳಿತ ಭಂಗಿಯ ಎರಡು ಸಣ್ಣ ವಿಗ್ರಹಗಳಿರು-ವುದನ್ನು ಈಗಲೂ ನೋಡಬಹುದು. ಶಿಖರದ ಮೇಲಿನ ಸಣ್ಣ ಕೋಣೆಯ ಒಳಗಿನ ಬಾಗಿಲ ಮೇಲೆಯೂ ತೀರ್ಥಂಕರನ ವಿಗ್ರಹವಿದೆ. ಗರ್ಭಗುಡಿಯ ಬಾಗಿಲ ಮೇಲೆ ಇದ್ದ ತೀರ್ಥಂಕರನ ವಿಗ್ರಹವನ್ನು ಈಗ ಲೋಹದ ತಗಡಿನ ಗಣಪತಿ ವಿಗ್ರಹದಿಂದ ಮುಚ್ಚಲಾಗಿದೆ. ಈ ತಗಡು ಹೊದಿಸುವ ಮೊದಲು ತೆಗೆಸಿದ ಹಳೆಯ ಫೋಟೋ-ಗಳಲ್ಲಿ ಇಂದಿಗೂ ಆ ಜಿನವಿಗ್ರಹವನ್ನು ಕಾಣಬಹುದು. ಇಂಥ ಒಂದು ಹಳೆಯ ಫೋಟೋ ರೇಣುಕಾ ದೇವಾಲಯದ ಟ್ರಸ್ಟಕಮಿಟಿಯ ಮೀಟಿಂಗ್ ಹಾಲ್‌ದಲ್ಲಿ ಈಗಲೂ ಇದೆ. ಇದರಿಂದ ಈ ದೇವಾಲಯ ಮೂಲತಃ ಜೈನಬಸದಿಯಾಗಿದ್ದಿತೆಂದು ಸ್ಪಷ್ಟವಾಗುತ್ತದೆ. ಮತೀಯ ಸಂಘರ್ಷದಲ್ಲಿ ತೀರ್ಥಂಕರನನ್ನು ಭಗ್ನಗೊಳಿಸಿ ಆತನ ಯಕ್ಷಿಯನ್ನೇ ಮಧ್ಯದಲ್ಲಿ ಪ್ರತಿಷ್ಠಾಪಿಸಿ ಎಲ್ಲಮ್ಮ ಹೆಸರಿನಿಂದ ಹಿಂದುಗಳು ಪೂಜಿಸು-ತ್ತಿರಬಹುದು. ಸವದತ್ತಿ ರಟ್ಟ ನಾಲ್ಕನೆಯ ಕಾರ್ತವೀರ್ಯನ ಆಸ್ಥಾನದಲ್ಲಿ ಪಾರ್ಶ್ವ ಹೆಸರಿನ ಕವಿ ಇರುವುದೂ ಈತನು ಪಾರ್ಶ್ವನಾಥ ಪುರಾಣ ಬರೆದುದೂ (ಕನ್ನಡದಲ್ಲಿ ಪಾರ್ಶ್ವನಾಥನನ್ನು ಕುರಿತ ಪುರಾಣ ಇದೊಂದೇ ಎಂಬುದನ್ನು ನೆನೆಯಬೇಕು) ಆ ಊರಿನಲ್ಲಿ ಪಾರ್ಶ್ವನಾಥನ ಬಸದಿಯಿದ್ದುದನ್ನು ಧ್ವನಿಸುತ್ತದೆ. ಈ ಪಾರ್ಶ್ವನಾಥನ ಯಕ್ಷಿ ಪದ್ಮಾವತಿ. ರಟ್ಟ ಕಾರ್ತವೀರ್ಯನ ತಂದೆ ಲಕ್ಷ್ಮಣನ ಆಸ್ಥಾನ ಕವಿಯಾಗಿದ್ದ ನೇಮಿಚಂದ್ರನ ಲೀಲಾವತಿಯಲ್ಲಿ ಅನೇಕಸಲ ಔಚಿತ್ಯ ಮೀರಿ ಪದ್ಮಾವತಿಯಕ್ಷಿಯ ಪ್ರಸ್ತಾಪ ಬರುತ್ತದೆ. ಇದಕ್ಕೆ ಸವದತ್ತಿಯಲ್ಲಿ ಪಾರ್ಶ್ವನಾಥನ ಯಕ್ಷಿ ಪದ್ಮಾವತಿ ಸುಪ್ರಸಿದ್ಧ ದೇವತೆಯಾಗಿದ್ದುದೇ ಕಾರಣವಾಗಿರಬಹುದು. ಒಟ್ಟಿನಲ್ಲಿ ಇದು ಪಾರ್ಶ್ವ-

ನಾಥ ತೀರ್ಥಂಕರನ ಬಸದಿ. ಈಗಿನ ಎಲ್ಲಮ್ಮ ಆಗಿನ ಪದ್ಮಾವತಿಯಾಗಿರಬಹುದು.[3] ಪದ್ಮಾವತಿಯ ವಾಸಸ್ಥಾನ ಲೊಕ್ಕಿಯಗಿಡ. ಇಂದಿಗೂ ಎಲ್ಲಮ್ಮನ ವಿಗ್ರಹದ ಹಿಂದೆ ಒಂದು ಕಂಟಿ ಇರುವುದಾಗಿ ಹೇಳುತ್ತಾರೆ.[4] ದೇವಿಯ ಮೂರ್ತಿಯನ್ನು ಸಾರ್ವಜನಿಕರಿಗೆ ಹೋಗಲಿ; ವಿದ್ವಾಂಸರಿಗೂ ಅರ್ಚಕರು ತೋರಿಸುವುದಿಲ್ಲ. ಹರಕೆ ಹೊತ್ತ ಭಕ್ತರ ಹೆಸರಿನಲ್ಲಿ ದೇವಿಯನ್ನು ನಗ್ನಗೊಳಿಸಿ ಅಭಿಷೇಕ ಮಾಡುವಾಗ ಗರ್ಭಗುಡಿಯ ತೈಲದೀಪ ಮತ್ತು ವಿದ್ಯುತ್‌ದೀಪ ಆರಿಸಿ ಕತ್ತಲೆ ಮಾಡುವುದು ನಮಗೆ ಮತ್ತಷ್ಟು ಸಂದೇಹ ಹುಟ್ಟಿಸುತ್ತದೆ.

ಈ ಯಕ್ಷಿಯೇ ಜಕ್ಕಿ > ಜಕ್ಕಲೆ > ಎಕ್ಕಲೆ > ಎಕ್ಕಲದೇವಿಯೆಂದು ರೂಪಾಂತರಗೊಂಡು, ಈ ಎಕ್ಕಲದೇವಿಯೇ ಎಕ್ಕಲಮ್ಮ > ಎಕ್ಲಮ್ಮ ಆಗಿ. ಅಪರಿಚಿತ ಪದವನ್ನು ಪರಿಚಿತ ಪದವನ್ನಾಗಿಸುವ ತತ್ವದಂತೆ "ಎಲ್ಲಮ್ಮ" ಆಗಿರಬಹುದು.

ಸವದತ್ತಿ ಯಲ್ಲಮ್ಮನ (ಎಕ್ಲಮ್ಮನ) ದೇವಾಲಯ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಧಿಸಿದುದೆಂದು ಅಂದರೆ 11-12ನೆಯ ಶತಮಾನದ ಜೈನ ಕಟ್ಟಡವೆಂದು ವಾಸ್ತುದೃಷ್ಟಿಯಿಂದ ಹೇಳಬಹುದು. ಇದು ಈ ದೇವಾಲಯದ ಇತಿಹಾಸದಲ್ಲಿ ಮೊದಲ ಘಟ್ಟ, ಜೈನಘಟ್ಟ. ಬಹುಶಃ ಪಾರ್ಶ್ವಪಂಡಿತನು ಪಾರ್ಶ್ವನಾಥ ಪುರಾಣ ಬರೆಯುವ ವರೆಗೂ (ಕ್ರಿ. ಶ. 1220) ಇದು ಜೈನ ಬಸದಿಯಾಗಿಯೇ ಇದ್ದಿತೆಂದು ತೋರುತ್ತದೆ.

ಈ ದೇವಾಲಯ ಕ್ರಿ. ಶ. 1220ರ ತರುವಾಯ ಎಲ್ಲಮ್ಮನ (ಎಕ್ಲಮ್ಮನ) ದಾಗಿ ಪರಿವರ್ತನಗೊಳ್ಳುವಲ್ಲಿ ಇದರ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ.

---

3. ಜೈನ ಬಸದಿಯು ಎಲ್ಲಮ್ಮನ ದೇವಾಲಯವಾಗುವ ಮೊದಲು ಇಲ್ಲಿಂದ ಎರಡು ಕಿಲೋ ಮೀಟರ್ ಅಂತರದಲ್ಲಿರುವ ಜೋಗಳಬಾವಿಯೇ ಎಲ್ಲಮ್ಮನ ಚಟುವಟಿಕೆಯ ಕೇಂದ್ರವಾಗಿರಬಹುದು. ಈ ಬಾವಿಯ ದಂಡೆಯ ಮೇಲೆ ದೇವಾಲಯವಿದ್ದ ಸ್ಪಷ್ಟ ಕುರುಹುಗಳಿವೆ. ಮೂಲತಃ ಇಲ್ಲಿಯೇ ಇದ್ದ ಎಕ್ಕಲಮ್ಮನನ್ನು ಈಗಿನ ಎಲ್ಲಮ್ಮನ ದೇವಾಲಯಕ್ಕೆ ಸ್ಥಳಾಂತರಿಸಿರುವ ಸಂಭವವೂ ಇದೆ—ಪಾರ್ಶ್ವನಾಥ ತೀರ್ಥಂಕರನನ್ನೂ. ಈತನ ಯಕ್ಷಿ ಪದ್ಮಾವತಿಯನ್ನೂ ಭಗ್ನಗೊಳಿಸಿ. ಒಟ್ಟಿನಲ್ಲಿ ಎಲ್ಲಮ್ಮನ ಮೂರ್ತಿಯನ್ನು ಸರಿಯಾಗಿ ಪರೀಕ್ಷಿಸುವ ವರೆಗೂ ಇದು ಪದ್ಮಾವತಿಯಕ್ಷಿಯೋ, ಜೋಗುಳಬಾವಿಯಿಂದ ಸಾಗಿಸಿರಬಹುದಾದ ಹಿಂದೂ ಎಕ್ಕಲಮ್ಮನ ಮೂರ್ತಿಯೋ ಸ್ಪಷ್ಟವಾಗಿ ಹೇಳುವಂತಿಲ್ಲ. ಈಗಿನ ಎಲ್ಲಮ್ಮನ ದೇವಾಲಯ ಜೈನಬಸದಿ ಎಂಬಲ್ಲಿ ಮಾತ್ರ ಸಂದೇಹವೇ ಇಲ್ಲ.

4. "ಎಕ್ಕದ ಗಿಡದಿಂದ ಯಕ್ಕಮ್ಮ ಅಥವಾ ಯಕ್ಕಲಾದೇವಿ (ಅರ್ಕೇಶ್ವರಿ)ಗೆ" ಹೆಸರು ಬಂದಿರಬಹುದು. (ಕೆ. ಎಸ್. ರಾಮಚಂದ್ರರಾವ್-ಮೂರ್ತಿಶಿಲ್ಪ : ನೆಲೆ, ಹಿನ್ನೆಲೆ. ಪು. 167). ಇಲ್ಲಿಯೇ ಪುಟ 168 ರಲ್ಲಿ ಮಾರಮ್ಮನ ಇನ್ನೊಂದು ಹೆಸರು ಯಕ್ಕಲದೇವಿಯೆಂದು ಹೇಳಲಾಗಿದೆ.

ಸವದತ್ತಿ ರಟ್ಟ ಮನೆತನದ ರಾಜನೊಬ್ಬ ಜೈನದಿಂದ ಹಿಂದೂ ಮತಕ್ಕೆ ಪರಿವರ್ತಿತ ನಾದ ಸಂದರ್ಭದಲ್ಲಿ ಅಥವಾ ಇಡಿಯಾಗಿ ಈ ಮನೆತನದ ಪತನಾನಂತರದಲ್ಲಿ ಈ ಜೈನ ಬಸದಿ ಹಿಂದೂ ದೇವಾಲಯವಾಗಿ ಪರಿವರ್ತನಗೊಂಡಿರಬೇಕು. ಇದು ಈ ದೇವಾಲಯದ ಇತಿಹಾಸದಲ್ಲಿ 2ನೆಯ ಘಟ್ಟ. ಈ ಘಟ್ಟದಲ್ಲಿ ಇಲ್ಲಿಯ ಜೈನ ರಟ್ಟಕಾರ್ತವೀರ್ಯನನ್ನು ಹಿಂದೂ ಪುರಾಣದ ಕಾರ್ತವೀರ್ಯಾರ್ಜುನನೊಂದಿಗೆ ಸಮೀಕರಿಸಿದರೆಂದು ತೋರುತ್ತದೆ. ಆಗ ಸಹಜವಾಗಿಯೇ ಹಿಂದೂ ಪುರಾಣ ಕಾರ್ತವೀರ್ಯಾರ್ಜುನನ ಭಕ್ತರಾದ ಸೋಮವಂಶ ಕ್ಷತ್ರಿಯರು ಈ ಎಲ್ಲಮ್ಮನ ಭಕ್ತರಾದರು. ಈಗ ಪುರಾಣ ಕಾರ್ತವೀರ್ಯಾರ್ಜುನನ ಭಕ್ತರಾದ ಸೋಮವಂಶ ಕ್ಷತ್ರಿಯರ (ಸಾಳೇರು, ಪಟ್ಟೇಗಾರರು) ಸಂಖ್ಯೆ ಸವದತ್ತಿ ಪ್ರದೇಶದ ಹುಬ್ಬಳ್ಳಿ ಗದಗಗಳಂಥ ಪಟ್ಟಣಗಳಲ್ಲಿ ವಿಶೇಷವಾಗಿರುವುದೂ, ಇವರು ತಪ್ಪದೇ ಎಲ್ಲಮ್ಮನ ಭಕ್ತರಾಗಿರುವುದೂ ಲಕ್ಷಿಸತಕ್ಕ ಸಂಗತಿಯಾಗಿದೆ. ಇಂದು ಯಲ್ಲಮ್ಮನ ದೇವಾಲಯದ ಪೂಜಾರಿಗಳು ಲಿಂಗವಂತರಾಗಿದ್ದರೂ ಎಲ್ಲಮ್ಮನಿಗೆ ಜೋಗತಿಯಾಗುವ ಸ್ತ್ರೀಯರಿಗೆ ದೇವಿಯ ಎದುರಿನಲ್ಲಿ ಕುಳ್ಳಿರಿಸಿ ದೀಕ್ಷೆ ಕೊಡುವ ಮುಖ್ಯ ಹಕ್ಕನ್ನು ಈ ಕ್ಷತ್ರಿಯರೇ ಉಳಿಸಿಕೊಂಡು ಬಂದಿದ್ದಾರೆ. ತಾವು ಎಲ್ಲಮ್ಮನ ವಂಶಜರೆಂದೂ ಇವರು ಹೇಳಿಕೊಳ್ಳು - ತ್ತಾರೆ. ಇಲ್ಲಿ ಅವಶ್ಯ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಈ ಕ್ಷತ್ರಿಯ- ರಿಗೆ 'ತಾನಿಕ' ಎಂದು ಕರೆಯುವುದು. ಇದು ಪ್ರಾಚೀನ ಶಾಸನಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ 'ಸ್ಥಾನಿಕ' ದ ತದ್ಭವ. ಪ್ರಾಚೀನ ಕಾಲದಲ್ಲಿ 'ಸ್ಥಾನಿಕ' ನೆಂದರೆ ದೇವಾಲಯದ ಅರ್ಚಕ, ಒಡೆಯನೆಂದು ಅರ್ಥ. ಹೀಗಾಗಿ ಎಕ್ಕಲದೇವಿ, ಹಿಂದೂ ಪುರಾಣದ ಕಾರ್ತವೀರ್ಯಾರ್ಜುನ, ಕ್ಷತ್ರಿಯ ಸಮಾಜ–ಇಷ್ಟು ಎರಡನೆಯ ಘಟ್ಟದ ಬೆಳವಣಿಗೆಗಳೆಂದು ಹೇಳಬಹುದು.

ಬಹುಶಃ ಎರಡನೆಯ ಘಟ್ಟದಲ್ಲಿ ರಟ್ಟಕಾರ್ತವೀರ್ಯನ ಹೆಸರು ಪುರಾಣ ಕಾರ್ತವೀರ್ಯಾರ್ಜುನನೊಂದಿಗೆ ಸಮೀಕರಣಗೊಂಡುದೇ ಕಾರಣವಾಗಿ, ಮುಂದೆ ಮೂರನೆಯ ಘಟ್ಟದಲ್ಲಿ ಪುರಾಣ ಕಾರ್ತವೀರ್ಯಾರ್ಜುನ ಘಟನೆಯ ಪ್ರಧಾನ ಸ್ತ್ರೀಯಾದ ರೇಣುಕೆಯೊಂದಿಗೆ ಎಕ್ಕಲಮ್ಮ (ಎಲ್ಲಮ್ಮ) ನನ್ನು ಸಮೀಕರಿಸಿದರೆಂದು ತೋರುತ್ತದೆ. ಆಗ ಸಹಜವಾಗಿಯೇ ರೇಣುಕೆಯ ಗಂಡ ಜಮದಗ್ನಿ. ಮಗ ಪರಶುರಾಮ ಮೊದಲಾದ ಆರ್ಯವ್ಯಕ್ತಿಗಳು ಈ ಕಥಾಪರಿವಾರದಲ್ಲಿ ಸೇರಿಕೊಂಡರು. ಎಲ್ಲಮ್ಮನ ಗುಡ್ಡದ ಪರಿಸರದಲ್ಲಿರುವ ಪರಶುರಾಮ,ಜಮದಗ್ನಿ ಗುಡಿಗಳು 15ನೆಯ ಶತಮಾನಕ್ಕೆ ತರುವಾಯದವಾದುದರಿಂದ ಎಕ್ಕಲಮ್ಮನನ್ನು ರೇಣುಕೆಯನ್ನಾಗಿಸಿದ ಅಂದರೆ ಆರ್ಯೀಕರಣಗೊಳಿಸಿದ ಘಟನೆ 15ನೆಯ ಶತಮಾನದ ಸುಮಾರಿಗೆ ನಡೆದಿರುವ ಸಾಧ್ಯತೆಯಿದೆ. ಇಂದು ಎಲ್ಲಮ್ಮನ ಪೂಜಾರಿಗಳು ಲಿಂಗವಂತರಾಗಿದ್ದರೂ ನೂರಿ- ನ್ನೂರು ವರ್ಷಗಳ ಹಿಂದೆ ಬ್ರಾಹ್ಮಣರು ಪೂಜಾರಿಗಳಾಗಿದ್ದರೆಂದು ತಿಳಿದುಬರುತ್ತದೆ.

ಬಹುಶಃ ಯಾವುದೋ ಕಾರಣದಿಂದ ಕ್ಷತ್ರಿಯ (ಸ್ಥಾನಿಕ) ರನ್ನು ತಳ್ಳಿ ಬ್ರಾಹ್ಮಣರು ಅರ್ಚಕರಾಗಿದ್ದ ಕಾಲದಲ್ಲಿ ರೇಣುಕೆ, ಜಮದಗ್ನಿ, ಪರಶುರಾಮರ ಕಥೆ ಸೇರಿಕೊಂಡಿ–ರಬೇಕೆನಿಸುತ್ತದೆ.

ಆಮೇಲೆ ನಾಲ್ಕನೆಯ ಘಟ್ಟದಲ್ಲಿ ರೇಣುಕೆಯ ಕಥೆ ಇತ್ಯಾದಿಗಳನ್ನು ಇಟ್ಟು–ಕೊಂಡು, ಬ್ರಾಹ್ಮಣರನ್ನು ಮಾತ್ರ ತಳ್ಳಿ ಲಿಂಗವಂತರು ಅರ್ಚಕರಾಗಿದ್ದಾರೆ. ಈಗ ಈ ನಾಲ್ಕೂ ಘಟ್ಟಗಳ ವಿವರಗಳನ್ನು ಹೀಗೆ ಸಂಗ್ರಹಿಸಬಹುದು.

1. **ಜೈನಘಟ್ಟ :** ಪಾರ್ಶ್ವನಾಥ ಬಸದಿ. ಪದ್ಮಾವತಿಯಕ್ಷಿ.
2. **ಕ್ಷತ್ರಿಯಘಟ್ಟ :** ಎಕ್ಕಲದೇವಿ ದೇವಾಲಯ, ಎಕ್ಕಲದೇವಿ, (ಯಕ್ಲಮ್ಮ–ಯಲ್ಲಮ್ಮ), ಹಿಂದೂ ಪುರಾಣ ಕಾರ್ತವೀರ್ಯಾರ್ಜುನ ಕಥಾಪ್ರವೇಶ.
3. **ಬ್ರಾಹ್ಮಣಘಟ್ಟ :** ರೇಣುಕಾದೇವಾಲಯ. ರೇಣುಕಾದೇವಿ. ಹಿಂದೂ ಪುರಾಣ ಕಾರ್ತವೀರ್ಯಾರ್ಜುನನ ಕಥೆ ಮುಂದುವರಿದು, ಜಮದಗ್ನಿ. ಪರಶುರಾಮರ ಕಥಾಪ್ರವೇಶ–ಪ್ರಸಾರ
4. **ಲಿಂಗಯುತಘಟ್ಟ :** ರೇಣುಕಾದೇವಾಲಯ, ರೇಣುಕಾದೇವಿ. ಹಿಂದೂ ಪುರಾಣ ಕಾರ್ತವೀರ್ಯಾರ್ಜುನನ ಕಥೆ ಮುಂದುವರಿದು. ಜಮದಗ್ನಿ. ಪರಶುರಾಮರ ಕಥಾ ಪ್ರವೇಶ–ಪ್ರಸಾರ.

* * * * * *

ಇಲ್ಲಿ ಇನ್ನೂ ಕೆಲವು ಸಂಗತಿಗಳನ್ನು ಚರ್ಚಿಸಬಹುದು.

1. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ "ಎಕ್ಕಲಗಾಣ" ಎಂಬ ಪದ ಅಲ್ಲಲ್ಲಿ ಸಿಗುತ್ತದೆ. "ಒಂಟಿಗಾಯಕ" ಎಂದೋ "ಯಕ್ಷಗಾನ" ಎಂದೋ ಇದಕ್ಕೆ ಈ ವರೆಗೆ ಅರ್ಥಹಚ್ಚಲಾಗಿದೆ. ಬಹುಶಃ ಇದು "ಎಕ್ಕಲ+ದೇವಿ"ಗೆ ಸಂಬಧಿಸಿದ ಗಾಯನ ಅಂದರೆ ಚೌಡಕೆ ಹಾಡು ಆಗಿರಬಹುದೇ? ವಿಚಾರಿಸಬೇಕು.

2. ಎಲ್ಲಮ್ಮನ ಸಂಪ್ರದಾಯದಲ್ಲಿ ಸ್ತ್ರೀಯರು ಪುರುಷ ವೇಷ ತೊಡುವುದು. ಪುರುಷರು ಸ್ತ್ರೀವೇಷ ತೊಡುವುದು ಸಾಮಾನ್ಯ. ಇದರ ಪ್ರಾಚೀನ ಉಲ್ಲೇಖ ಸಮಯಪರಿಕ್ಷೆಯಲ್ಲಿ ಹೀಗೆ ಬರುತ್ತದೆ.

ಗಂಡುಡೆಯುಡಿಪರ್ಪೆಣ್ಣಂ।
ಗಂಡುಮನೋರಂಪದಿಂದೆ ಪೆಣ್ಣುಡೆಯುಡಿಪ।
ರ್ತಂಡದೆ ತಿರಿವಕರ್ಜುತ್ತಂ।
ಗೊಂಡು ಬರ್ದುಂಕಿದೊಡೆ ದೇವಿ ಕಾವಳೆನುತ್ತುಂ। (9-122)

ಸ್ತ್ರೀದೇವತೆಯ ಹೆಸರಿನಲ್ಲಿ ಸ್ತ್ರೀ–ಪುರುಷರು ವೇಷಪಲ್ಲಟಮಾಡಿಕೊಳ್ಳುವ ಸಂಪ್ರ–ದಾಯ ಸುಮಾರು 12ನೆಯ ಶತಮಾನದಷ್ಟು ಪೂರ್ವದ್ದೆಂದು ಈ ಪದ್ಯ ತಿಳಿಸುತ್ತದೆ.

3. ಎಲ್ಲಮ್ಮನನ್ನು ಕುರಿತು ಅನೇಕ ಹಾಡುಗಳಲ್ಲಿ, ಓರುಗಲ್ಲಿನ ಕಾಕತೀಯ ಅರಸು ಪ್ರತಾಪರುದ್ರ ಸೀರೆಯುಟ್ಟು ಈ ದೇವಿಯ ಭಕ್ತನಾದ ವಿಷಯ ಬರುತ್ತದೆ. ಬಹುಶಃ ರುದ್ರಮದೇವಿ ಗಂಡುಡುಗೆಯುಟ್ಟು ಇಲ್ಲವೆ ಪ್ರತಾಪರುದ್ರ ಹೆಣ್ಣುಡುಗೆ-ಯುಟ್ಟು ರಾಜ್ಯವಾಳಿದುದನ್ನು ಕೇಳಿದ ಜಾನಪದರು ಅದನ್ನು ಈ ದೇವಿಯ ಸಂಪ್ರದಾಯದಲ್ಲಿರುವ 'ಬಟ್ಟೆ ಪಲ್ಲಟಿಸುವ ಪದ್ಧತಿ'ಗೆ ಜೋಡಿಸಿಕೊಂಡಿರಬೇಕು.

4. ಎಲ್ಲಮ್ಮನ ಸಂಪ್ರದಾಯದಲ್ಲಿ ಕೊಡಹೊತ್ತು ಕುಣಿಯುವುದು ವಿಶಿಷ್ಟ ಪದ್ಧತಿ. ಅಲ್ಲಮನ

ಉವಕವ ಕೊಡನ ಹೊತ್ತಾಡುವ ಗೊರವಿತಿಯು ಕೈಯಲ್ಲಿ ಕಂಕಣ,
ಉಲಿವಗೆಜ್ಜೆ ಚರಣದಲ್ಲಿ
ಉರಿಯು ಗೊರವನ ನೆರವ ಭರವಸದಿಂದ ಬಂದಿರಲು, ಬಹಳ
ಮುಳ್ಳಡ್ಡವಾದುವಲ್ಲಾ!
ಕಂಕಣದುಲುಹು ನಂದಿ, ಕಣ್ಣದೆರೆದಾ ಮುಳ್ಳಳಿಯಲು, ಕಾಡುಗಿಚ್ಚೆದ್ದು
ಕರಡವ ಸುಟ್ಟಂತೆ,
ಪ್ರಾಣಗುಣ ಪ್ರಧ್ವಂಸಕಂಗೆ ಅನ್ಯೋನ್ಯ ಭಾವತ್ರಯವುಂಟೆ? ಶರಣಲಿಂಗಕ್ಕೆ
ಸಂದಿಲ್ಲ ಗುಹೇಶ್ವರಾ!

ಎಂಬ ವಚನ ಈ ಸಂಪ್ರದಾಯವನ್ನು ಸೂಚಿಸುವ ಪ್ರಾಚೀನ ದಾಖಲೆಯಾಗಿದೆ. ಜನ್ನನ ಅನಂತನಾಥ ಪುರಾಣದಲ್ಲಿ ಬರುವ "ಉಟ್ಟುತೊಟ್ಟು ಪೆಣ್ಬಚ್ಚವೊಡಂಬಡಂ ಪಡೆಯ ಪ್ಯೆಲೆಯ ನಚ್ಚನೆಯಂತೆ" ಎಂಬ ವಾಕ್ಯವೂ ಸ್ತ್ರೀವೇಷತೊಟ್ಟು ಕುಣಿಯುವ ಸಂಪ್ರದಾಯವನ್ನೇ ಸೂಚಿಸುತ್ತಿರಬೇಕು. ಭರತೇಶ ವೈಭವದಲ್ಲಿ ಬರುವ

ಗಾನಮದ್ದಳೆ ತಾಳಲಯಕೆ ನರ್ತಿಪ ಮಂದ ।
ಯಾನೆಗೆ ಶಿರದ ಕುಂಭದೊಳು ।
ಧ್ಯಾನವಿರ್ಪಂತೆ ರಾಜ್ಯದೊಳಿರ್ದು ಮುಕ್ತಿಸಂ ।
ಧಾನದೊಳಗೆ ನಿನ್ನ ನೆನಹು ।

ಎಂಬ ಪದ್ಯವಂತೂ ಈ ಸಂಪ್ರದಾಯವನ್ನು ನೇರವಾಗಿ ಸೂಚಿಸುತ್ತದೆ.

ಎಲ್ಲಮ್ಮನನ್ನು ಕುರಿತು ವ್ಯಕ್ತಪಡಿಸಿದ ಮೇಲಿನ ಅಭಿಪ್ರಾಯಗಳನ್ನು ವಿದ್ವಾಂಸರು ಒರೆಹಚ್ಚಿನೋಡುವುದು ಅವಶ್ಯವಿದೆ.

ಮಾನಸೋಲ್ಲಾಸದಲ್ಲಿ ವನಮಹೋತ್ಸವ

● ಮಹಾದೇವ ಜೋಶಿ

ಕನ್ನಡ ನಾಡಿಗೆ ಅಜರಾಮರವಾದ ಕಾಣಿಕೆಯನ್ನು ಸಲ್ಲಿಸಿದ ಕಲ್ಯಾಣ ಚಾಲುಕ್ಯ ವಂಶದ ತಿಲಕಪ್ರಾಯವಾದ, ಸರ್ವವಿದ್ಯಾ ವಿಶಾರನಾದ. ಅನೇಕ ಬಿರುದಾಂಕಿತಧಾರಿಯಾದ ಶ್ರೀ ಭೂಲೋಕಮಲ್ಲ ಸೋಮೇಶ್ವರ III ನು ಬರೆದ "ಮಾನಸೋಲ್ಲಾಸ" ಅಥವಾ ಅಭಿಲಕ್ಷಿತಾರ್ಥ ಚಿಂತಾಮಣಿ ಗ್ರಂಥದಲ್ಲಿ ಸ್ವಾರಸ್ಯಮಯವಾಗಿಯೂ, ವೈಜ್ಞಾನಿಕಮಯವಾಗಿಯೂ ಗಿಡಮರಗಳ ವಿಚಾರವು ಅಡಕವಾಗಿದೆ.

ಆರನೆಯ ವಿಕ್ರಮಾದಿತ್ಯನ ಮಗನಾದ ಸೋಮೆಶ್ವರನು ಸಾರ್ವಭೌಮನಾಗಿದ್ದರೂ ವೈಭವ ವಿಲಾಸಾದಿಗಳಿಗೆ ಅಷ್ಟೊಂದು ಮಹತ್ವಕೊಡದ ಎಲ್ಲ ತರಹದ. ಎಲ್ಲ ರೀತಿಯ ಜನರಿಗೆ ಯಾವಾಗಲೂ ಉಪಯೋಗವಾಗಲೆಂದು ಸ್ವತಃ ಕೆಲವೊಂದು ಸಂಗತಿಗಳನ್ನು ಅಭ್ಯಾಸಮಾಡಿ, ಜೊತೆ ಜೊತೆಗೆ ಪ್ರಯೋಗಮಾಡಿ ತಿಳಿದುಕೊಂಡು ಮತ್ತೆ ಕೆಲವನ್ನು ಪಂಡಿತೊತ್ತಮರಿಂದ ಸಂಗ್ರಹಿಸಿ, ಇನ್ನು ಕೆಲವು ಸಂಗತಿಗಳನ್ನು ಅದೇ ವೃತ್ತಿಯಲ್ಲಿರುವವರನ್ನು ಕಂಡು ಕೇಳಿ ವಿಚಾರಿಸಿ ಬಲು ಸೊಗಸಾದ ಸಂಸ್ಕೃತ ಸಾಹಿತ್ಯದಲ್ಲಿಯೇ ಹೊಸದಾದ ಕೋಶಗ್ರಂಥ (Encyclopaedia) ರೀತಿಯನ್ನು ತಿಳಿಸಿ ಬೆಳೆಸಿದವನಾಗಿರುವನು.

ಮಾನಸೋಲ್ಲಾಸ ಗ್ರಂಥವು ಒಂದು ಸರಿಯಾದ, ವ್ಯವಸ್ಥಿತವಾದ ನೀತಿ ಸಂಹಿತೆಯಾಗಿದೆ ಎಂದರೆ ತಪ್ಪಾಗದು. ಇದು ಐದು ಪ್ರಕರಣಗಳಲ್ಲಿ ವಿಭಾಗವಾಗಿದ್ದು. ಪ್ರತಿಯೊಂದು ಪ್ರಕರಣದಲ್ಲಿ ಮತ್ತೆ ಅನೇಕ ಅಧ್ಯಾಯಗಳನ್ನು ವಿವರಿಸುತ್ತದೆ. ಅಧ್ಯಾಯಗಳಲ್ಲಿ ಬೇರೆ ಬೇರೆ ತರಹದ ವಿಷಯಗಳನ್ನು ಅವುಗಳ ಶಕ್ತಿ ಸಾಮರ್ಥ್ಯಾದಿಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವಿವೇಚಿಸುತ್ತದೆ.

ಹಿಂದೂ ಸಮಾಜದಲ್ಲಿ ರಾಜಮಹಾರಾಜರಿಗೆ ವೈಭವದ ಅನುಕೂಲತೆಯನ್ನು ಒದಗಿಸಿದರೂ ಅವರು ತಮ್ಮ ಪ್ರಜೆಗಳನ್ನು ಸ್ವಂತ ಮಕ್ಕಳಂತೆ ಕಾಪಾಡಬೇಕೆಂದು ಪ್ರತಿಯೊಂದು ರಾಜಕೀಯ, ಧಾರ್ಮಿಕ, ವೈದ್ಯಕೀಯ ಗ್ರಂಥಗಳಲ್ಲಿ ತಿಳಿಸಲಾಗಿದೆ. ಇಂತಹ ವೈಭವಪೂರಿತ ಅನುಕೂಲತೆಗಳ ಪ್ರಯೋಜನೆಯು ಪ್ರತಿಯೊಬ್ಬ ಪ್ರಜೆಗೂ ದೊರೆಯಬೇಕು. ಆದುದರಿಂದಲೇ ಲಿಂಗ, ವಯಸ್ಸು, ಜಾತಿ, ಪಂಥಗಳ ಆಧಾರ

ಗಳನ್ನು ಗಮನಿಸದೇ ಎಲ್ಲರೂ ಸಾಮರ್ಥ್ಯಕ್ಕೆ ತಕ್ಕಂತೆ ಜವಾಬ್ದಾರಿಯುತ ಕಾರ್ಯ ಮಾಡಬೇಕೆಂದು ಸೋಮೇಶ್ವರನ ಹೇಳಿಕೆ ಇದೆ. ಅದನ್ನು ಸ್ಪಷ್ಟವಾಗಿಯೂ ಗ್ರಂಥದಲ್ಲಿ ಉಲ್ಲೇಖಿಸಿರುವನು. ಆದುದರಿಂದಲೇ 'ಕ್ಷಿತಿತಲದಲ್ಲಿಯೇ ಕಲ್ಯಾಣದಂತಹ ನಗರ ಹಿಂದಿಲ್ಲ. ಮುಂದಿರಲಾರದೆಂದು' ಜ್ಞಾನೇಶ್ವರನು ತಿಳಿಸಿರುವನು.

ಇಂದಿನ ನಮ್ಮೀ ಭಾರತವು ಈ ಹಿಂದೆ ಪಡೆದ ಸಮೃದ್ಧಿ, ಶಾಂತಿ, ಸುವ್ಯವಸ್ಥೆಯನ್ನು ಮತ್ತೆ ಪಡೆಯಲು ಹವಣಿಸುತ್ತಿರುವುದು ಸರ್ವವಿದಿತ. ಆದರೆ ಅದಕ್ಕೆ ಅನೇಕ ಅಡತಡೆಗಳುಂಟು. ಶೀಘ್ರಗಾಮಿ ಮಾನವ ಬೆಳವಣಿಗೆಯಲ್ಲಿ ಎಲ್ಲಿ ಯಾವುದು ವೇಗ ಉಗಮವಾಗಿ ಅನುಕೂಲಕ್ಕೋ ಅನಾನುಕೂಲಕ್ಕೋ ಕಾರಣವಾಗುವುದೆಂಬುದನ್ನು ಯಾವ ಸಮಯಕ್ಕೂ ನಿಶ್ಚಿತವಾಗಿ ತಿಳಿಸಲುಬಾರದು. ಮಾನವನು ತನ್ನ ಸ್ವಾರ್ಥಕ್ಕಾಗಿ ನಿಸರ್ಗವನ್ನು ಹಾಳು ಮಾಡುವುದಲ್ಲದೆ ಅದನ್ನೇ ತನ್ನ ನಿಯಂತ್ರಣದಲ್ಲಿ ಪಡೆಯಲು ಹೊರಟಿದ್ದಾನೆ. ಆದರೆ ಮಾನವ ಜನಾಂಗವು ಪ್ರಕೃತಿಯಲ್ಲಿರುವ ಶುದ್ಧ ಹವೆ, ಸ್ವಚ್ಛನೀರು, ಉತ್ತಮ ಆಹಾರ ಇವುಗಳಿಲ್ಲದೇ ಒಂದು ಕ್ಷಣವೂ ಜೀವಿಸಲು ಸಾಧ್ಯವಿಲ್ಲ. ಇವುಗಳಿಂದಲೇ ಪ್ರಾಚೀನ ಚರಾಚರ ಜೀವಿಗಳು ಬದುಕಿ ಬೆಳವಣಿಗೆ ಹೊಂದಿ ಇಂದಿನ ನಾಗರೀಕತೆಗೆ ಒಂದು ರೀತಿಯ ಮೆರಗನ್ನು ತಂದು ಕೊಟ್ಟಿದೆ. ಇಂತಹ ಅತ್ಯವಶ್ಯಕ ಪ್ರಕೃತಿ ಕೊಡುಗೆಗಳಾದ ಇವುಗಳ ಬಗ್ಗೆ ನಾವು ಮತ್ತೆ ಆಸಕ್ತಿ ತೋರಿಸುವುದಕ್ಕೆ ಕಾರಣವೆಂದರೆ ಅವುಗಳಿಂದ ವೈಪರಿತ್ಯವಲ್ಲದೇ ಇನ್ನೇನು?

ಪ್ರಕೃತಿಯಲ್ಲಿ ಮಾನವನಿಗೆ ಅನಾನುಕೂಲವಾಗದಿರಲೆಂದು ಮುಂದಾಲೋಚನೆಯಿಂದ ಭಾರತೀಯ ಶಾಸ್ತ್ರಕಾರರು ವೃಕ್ಷಾಯುರ್ವೇದ ಇತ್ಯಾದಿ ಗ್ರಂಥಗಳಿಂದ ಒಳ್ಳೆಯ ಉಪಾಯಾದಿಗಳನ್ನು ಸೂಚಿಸಿದ್ದನ್ನಾದರೂ ಗಮನಕ್ಕೆ ತಂದರೆ ಎಷ್ಟೋ ಪಾಲು ಅವರಿಗೆ ನಾವು ಚಿರಋಣಿಯಾದಂತೆ. ಅವರು ತಿಳಿಸಿದಂತೆ ನಡೆದರಂತೂ ನಮ್ಮ ಜನಾಂಗದ ಬಾಳಿಕೆ ಸುಖ, ಶಾಂತಿ, ಸಮೃದ್ಧಿ ನಿಶ್ಚಿತ. ಇಂದು ಅನೇಕ ರೀತಿಯಲ್ಲಿ ವನಮಹೋತ್ಸವಾದಿ ಮೂಲಕ ಗಿಡಮರಗಳನ್ನು ನೆಡಬೇಕೆಂದು ಅವುಗಳಿಂದ ಮಳೆ, ಬೆಳೆ, ಆಹಾರ, ಸ್ವಚ್ಛವಾದ ಹವೆ. ಮುಂತಾದವು ದೊರೆಯುವವೆಂದು ಸರಕಾರವು ಪ್ರಕಟನಾದಿ ಪ್ರಚಾರಗಳಿಂದ ಜನತೆಯಲ್ಲಿ ತಿಳಿಹೇಳುತ್ತಲಿದೆ. ಈ ಇಂದಿನ ವಿಚಾರವನ್ನು ಕನ್ನಡ ಮಾತೃಭಾಷೆಯುಳ್ಳ ಕನ್ನಡಿಗನಾದ ಚಾಲುಕ್ಯ ವಂಶ ಸೋಮೇಶ್ವರನು 12ನೆಯ ಶತಮಾನದಲ್ಲಿಯೇ 'ವನಮಹೋತ್ಸವ'ದ ಬಗ್ಗೆ ವಿಚಾರಿಸಿ ಗಿಡ–ಮರಗಳನ್ನು ಹೇಗೆ ನಾಟಿಸಬೇಕು. ಅವುಗಳನ್ನು ಹೇಗೆ ರಕ್ಷಿಸಬೇಕು. ಅವುಗಳಿಂದ ಪ್ರಯೋಜನವೇನು ಮುಂತಾದ ವಿಚಾರಗಳನ್ನು ಬಹಳ ಸುಂದರವಾಗಿ. ಸಲೀಸಾಗಿ ವೈಜ್ಞಾನಿಕ ರೀತಿಯಲ್ಲಿಯೇ ಸರಳ, ಮಧುರ ಸಂಸ್ಕೃತ ಶ್ಲೋಕಗಳಿಂದ ಗ್ರಂಥದ ಐದನೆಯ ಪ್ರಕರಣದಲ್ಲಿ ತಿಳಿಸಿರುವನು.

'ಭೂಧರ ಕ್ರೀಡಾ' ಎಂಬ ನಾಮಾಂಕಿತದೊಡನೆ ಪ್ರಾರಂಭಿಸಿದ ಸೋಮೇಶ್ವರ ಮಹೀಪಾಲನು ಇಪ್ಪತ್ತು ವಿನೋದಗಳಲ್ಲಿ ರಾಜನಿಗೆ ಭೂಧರ ಕ್ರೀಡಾ ವಿನೋದವು ಸುಂದರವೂ, ಮನೋಹರವು ಆರೋಗ್ಯಕರವು ಎಂದಿದ್ದಾನೆ. ಗ್ರಂಥಕರ್ತನು ಈ ಕ್ರೀಡೆಗೆ ರಾಜನನ್ನು ಕುರಿತು ಹೇಳುತ್ತಾ, ಅನೇಕಾನೇಕ ತರಹದ ಗಿಡ-ಮರಗಳಿಂದ ಯುಕ್ತವಾದ ಮಧ್ಯಸ್ಥಳಗಳಲ್ಲಿ ಆಸನಾದಿಗಳನ್ನು ಹೊಂದಿದ, ಪರ್ವತ ಪ್ರಾಂತದೊಡನೆ ಸುಂದರ, ರಮ್ಯ, ಮತ್ತು ವಿಶಾಲವಾದ ವನವನ್ನೇ ರಾಜನು ಆಯ್ದುಕೊಳ್ಳಬೇಕೆಂದು ತಿಳಿಸಿರುವನು. ಇದರಿಂದ ಅಂದಿನ ರಾಜ ಮಹಾರಾಜರು ವನಕ್ಕೋಸ್ಕರವಾಗಿಯೂ, ಗಿಡ-ಮರಗೋಸ್ಕರವು ಗಮನ ಹರಿಸುತ್ತಿದ್ದರೆಂದು ವಿದಿತವಾಗುವುದು. ರಾಜ ಪರಿವಾರದೊಡನೆ ಈ ಕ್ರೀಡೆಯನ್ನು ಭೂಪಾಲನು ಆಡಬೇಕಾದರೆ ವನವನ್ನು ಪ್ರವೇಶಿಸುವ ಮೊದಲು ವನದಲ್ಲಿರುವ ಬೇರೆ ಬೇರೆ ಹಣ್ಣುಗಳಿಂದ ಯುಕ್ತವಾದ ಗಿಡಮರಗಳನ್ನು ಮತ್ತು ಈಗತಾನೇ ಬೆಳೆಯುತ್ತಿರುವ ಸಣ್ಣಪುಟ್ಟ ವೃಕ್ಷಗಳನ್ನು ಮಕ್ಕಳಂತೆ ರಕ್ಷಿಸಬೇಕೆಂದು ಸೂಚಿಸುತ್ತಾನೆ.

ಅನ್ಯ ಪತ್ರಾನ್ಯಫಲಕಾಃ ಪುತ್ರವತ್‌ಪರಿಪಾಲಿತಾಃ ।

ಕ್ರೀಡೆಯಾದರೂ ಅದು ಶಿಸ್ತುಬದ್ಧವಾಗಿರಬೇಕೆಂದು ಸೋಮೇಶ್ವರ ತಿಳಿಸಿರುವಂತಿದೆ. ಗಿಡಗಳ ಬಗ್ಗೆ ತಿಳಿಸುತ್ತಾ ಬಹಳ ಹಣ್ಣುಗಳಿಂದ ತುಂಬಿದ ಎಲ್ಲ ಕಾಲದಲ್ಲಿಯೂ ಫಲಭರಿತವಾದ, ಗಿಡ್ಡವಾದ ಬೊಡ್ಡೆಯಿಂದ್ಯುಕ್ತವಾದ, ಎಲ್ಲೆಡೆ ವಿಸ್ತಾರ ಹೊಂದಿದ, ಪ್ರಶಸ್ತವಾಗಿ ಬೆಳೆದು ಭೂಮಿಯೆಡೆ ಬಾಗಿದ ಗಿಡಗಳು ರಾಜರಿಗೆ ಭೂಧರ ಕ್ರೀಡೆಗೆ ಒಳ್ಳೆಯವು. ಇವುಗಳಿಂದ ಭೂಧರ ಕ್ರೀಡಾನಂದ ರಾಜನಿಗೂ, ಪರಿವಾರಕ್ಕೂ ದೊರೆಯುವುದೆಂದಿದ್ದಾನೆ. ಗ್ರಂಥ ಕರ್ತನು ಹೀಗೆ ತಿಳಿಸುತ್ತಾ ವೃಕ್ಷಗಳ ಬೆಳವಣಿಗೆ ಅವುಗಳ ವ್ಯವಸ್ಥೆಯ ಬಗ್ಗೆ ಬಹಳ ಸ್ವಾರಸ್ಯವಾಗಿ ಸತರ್ಕವಾಗಿ ಆಧಾರಪೂರ್ವಕ ವಿವರಿಸುತ್ತಾನೆ.

ಬೀಜಸಂಸ್ಕಾರದ ಬಗ್ಗೆ ವಿವರಿಸುತ್ತಾ ಸೋಮೇಶ್ವರನು–

ಸ್ವಭಾವಪಕ್ವಫಲಿನಃ ನಿರ್ದೋಷಂ ಶುಷ್ಕಮಾತಪೆ ।
ಫಲಬೀಜಂ ಸಮಾಲಿಪ್ತಂ ಗೋಮಯೆ ದಿನಪಂಚಕಮ್ ॥

ಯಾವ ದೋಷಗಳಿಂದಲೂ ಕೂಡದ ಮತ್ತು ಸ್ವಾಭಾವಿಕವಾಗಿಯೇ ಪಕ್ವವಾದ ನೇರ ಸೂರ್ಯ ಕಿರಣಗಳಿಂದಲ್ಲದೇ ಒಣಗಿದ ಹಣ್ಣನ್ನು ತೆಗೆದುಕೊಂಡು ಅವರಲ್ಲಿರುವ ಬೀಜವನ್ನು ಐದು ದಿನಗಳವರೆಗೆ ಗೋಮಯದಿಂದ ಲೇಪಿಸಿಡಬೇಕು' ಎಂಬುವಾಗಿ ತಿಳಿಸುವನು. ಈ ವಿಧಿಯನ್ನು ಇಂದಿಗೂ ಕೆಲವೆಡೆ ಅನುಸರಿಸುತ್ತಿರುವುದು ಗಮನಾರ್ಹವಾಗಿದೆ.

ಸಂಸ್ಕರಿಸಿದ ಬೀಜವನ್ನು ಹೇಗೆ ಯಾವ ರೀತಿಯಲ್ಲಿ ನೆಡಬೇಕೆಂಬುದನ್ನು ವಿವರಿಸುತ್ತಾ ಕಲ್ಲುಗಳಿಂದಯುಕ್ತವಲ್ಲದ, ಮೃದುವಾದ ಮಣ್ಣಿನಲ್ಲಿ ಮಡಿಗಳನ್ನು ಸಿದ್ಧಗೊಳಿಸಬೇಕು. ಅವು ಹದಿನಾರು ಹಸ್ತವಾಗಲಿ ಅಥವಾ ಹನ್ನೊಂದು ಹಸ್ತವಾಗಲಿ, ಅಥವಾ ಎಂಟು ಹಸ್ತವಾಗಲಿ ಇರಬೇಕು. ಗಿಡಗಳಲ್ಲಿ ದೊಡ್ಡ ಮಧ್ಯಮ ಮತ್ತು ಕನಿಷ್ಠ ಗಿಡಗಳನ್ನು ತಿಳಿದುಕೊಂಡು ಆ ಮಡಿಗಳಲ್ಲಿ ಬದಲಾವಣೆ ಮಾಡಿಕೊಳ್ಳ ಬೇಕೆಂದು ವೃಕ್ಷವಿಜ್ಞಾನಿಗಳು ವಿಕಲ್ಪದಿಂದ ಹೇಳುವರು ಎಂಬುದಾಗಿ ಸೋಮೇಶ್ವರನು ತಿಳಿಸುವನು. ಅಲ್ಲದೇ ಪ್ರತ್ಯೇಕವಾಗಿ ಅಶೋಕವೃಕ್ಷ, ಲಿಂಬ. ಸಂಪಿಗೆ, ನಾಗಸಂಪಿಗೆ, ನಾಗಕೇಸರ. ಶಿರಿಷ. ತಿಲಕ, ಇವೇ ಗಿಡಿಗಳ ಸಸಿಗಳನ್ನು ಹೇಗೆ ಮಾಡಬೇಕೆಂದು ತಿಳಿಸುತ್ತಾ ನಾಲ್ಕು ಹಸ್ತವಾಗಲಿ. ಇಲ್ಲವೆ ಸ್ಥಳಕ್ಕೆ ಅನುಕೂಲವಾಗಿ ಸ್ವಲ್ಪ ಹೆಚ್ಚು-ಕಡಿಮೆ ಮಾಡಿಕೊಂಡು ಚೌರಸವಾಗಿ ಅಷ್ಟೇ ಆಳವಾಗಿ ತಗ್ಗನ್ನು ನಿರ್ಮಿಸಬೇಕು. ಆ ತಗ್ಗಿನಲ್ಲಿ ಗೋಮಯದಿಂದ ಮಾಡಿದ ಕುಳ್ಳನ್ನು (ಕರೀಷ) ಹಾಕಿ ಚೆನ್ನಾಗಿ ದಹಿಸಬೇಕು. ಬಳಿಕ ಅದರ ಎಲ್ಲ ಬೂದಿಯನ್ನು ಹೊರತೆಗೆದು ಆ ಸ್ಥಳದಲ್ಲಿ ಉಸುಕನ್ನು ಮಣ್ಣನ್ನು ಸೇರಿಸಿ ಹಾಕಬೇಕು. ಜೊತೆಗೆ ಹೋತಿನ ಮಾಂಸ ಮತ್ತು ಅದರಿಂದ ಬಂದ ನೀರನ್ನು ಸೇರಿಸಿ ಅದರಲ್ಲಿ ಹಾಕಬೇಕು. ಈ ರೀತಿ ಸಿದ್ಧವಾದ ಸ್ಥಳದಲ್ಲಿ ಸಂಸ್ಕರಿಸಿದ ಬೀಜಗಳನ್ನು ಬಿತ್ತಿದರೆ ಅವು ಉತ್ತಮವಾದ ಗಿಡಗಳಿಂದ ಅಂಕುರಿಸುವವು. ಅಥವಾ ಬೇರು ಸಹಿತ ಬೇರೆಡೆಯಿಂದ ತಂದಂಥ ಸಸಿಗಳನ್ನು ಈ ಮಡುವಿನಲ್ಲಿ ನಾಟಿಸಿದರೆ ಅವು ಕೂಡ ಬಹಳ ಉತ್ತಮ ರೀತಿಯಲ್ಲಿ ಬೆಳೆಯುವವೆಂದು ಹೇಳುವನು.

ಈ ವಿಷಯುವನ್ನು ಇಂದಿಗೂ ಕೂಡ ಭಾರತ ಸರಕಾರದ ಒಕ್ಕಲುತನ ವಿಭಾಗದ ಅಧಿಕಾರಿ ವರ್ಗವು. ವಿಜ್ಞಾನಿಗಳು, ಒಕ್ಕಲಿಗರೂ ಪಾಲಿಸುವುದನ್ನು ಕಾಣುತ್ತೇವೆ. ಮೊನ್ನೆ ತಾನೆ ನಡೆದ ಕೃಷಿಕ ಮೇಳದಲ್ಲಿ (ಕೃಷಿ ವಿಶ್ವವಿದ್ಯಾಲಯ ಧಾರವಾಡ) ಅನೇಕ ವಿದ್ವಾಂಸರನ್ನು ಕಂಡು ಈ ವಿಷಯ ಬಗ್ಗೆ ವಿಚಾರಿಸಲು ಅವರೂ ಕೂಡ ಇವೆಲ್ಲ ವಿಷಯುಗಳು ಸಮರ್ಥನೀಯವೆಂದೂ ಆದರೆ ಅಂದು ದೊರೆಯುವ ಸಂಪನ್ಮೂಲಗಳು ಮನುಷ್ಯನಿಗೇ ಇಂದು ದೊರೆಯುವುದಿಲ್ಲ ಅಂಥಲ್ಲಿ ಗಿಡಮರಗಳಿಗೆ ಮೀನಮಾಂಸ, ಇಂಗು, ಮೆಣಸು ಇತ್ಯಾದಿ ಪೂರೈಸುವುದು ಹೇಗೆ ? ಎಂದಿರುವರು. ಹನ್ನೆರಡನೆಯ ಶತಮಾನದಲ್ಲಿ ಸೋಮೇಶ್ವರನು ವೈಜ್ಞಾನಿಕವಾಗಿ ಮತ್ತು ಲೋಕೋಪಕಾರಕ್ಕಾಗಿ ಮಾನಸೊಲ್ಲಾಸ ಗ್ರಂಥವನ್ನು ರಚಿಸಿರುವುದಾಗಿ ಅವನೇ ಹೇಳಿಕೊಂಡಿದ್ದು ಅತಿಶ-ಯೋಕ್ತಿ ಎನಿಸದು.

ಬಹುಪ್ರಾಚೀನ ಕಾಲದಿಂದಲೂ ಪ್ರಜೆಗಳ ಕಲ್ಯಾಣವೇ ರಾಜನ ಕಲ್ಯಾಣ ಕ್ಕಿಂತಲೂ ಪ್ರಮುಖವಾದ್ದರಿಂದ ಅದನ್ನೇ ಅನುಸರಿಸುತ್ತ ಬಂದ ಸೋಮೇಶ್ವರನು ರಾಜರನ್ನು ಕುರಿತ ಸುಖವನ್ನು ಪಡೆಯಲು, ಆರೋಗ್ಯವನ್ನು ಕಾಪಾಡಲು, ಯಶ-ಸ್ಸನ್ನು ಹೆಚ್ಚಿಸಲು, ಸಂಪತ್ತನ್ನು ಬೆಳೆಸಲು ವಿಜಯವನ್ನು ದೊರಕಿಸಲು ಎಲ್ಲದಕ್ಕೂ

ಸೌಭಾಗ್ಯಕಾರಕವಾದ ಜನಹಿತ ಕಾರ್ಯಕ್ಕೆ ಗಿಡ–ಮರಗಳನ್ನು ನೆಡಸಬೇಕೆಂದು ಹೇಳುವುದು ಅವನ ಆಂತರಿಕ ಮನಸ್ಸಿನ ಮುಂದಾಲೋಚನೆ ಜನಹಿತಾಕಾಂಕ್ಷೆ ಎಷ್ಟಿತ್ತೆಂಬುದು ವಿದಿತವಾಗುವುದು.

ಸುಖಾರೋಗ್ಯಯಶೋವೃದ್ಧಿ ಲಕ್ಷ್ಮೀವಿಜಯ ವೃದ್ಧಯೇ ।
ಸೌಭಾಗ್ಯಾರ್ಥಮಿಮೇ ವೃಕ್ಷಾಃ ಕರ್ತವ್ಯಾ ಭೂಭೃತಾ ವನೆ ॥

ಈ ವೃಕ್ಷವಿಷಯ ಚಿಂತನೆಯಲ್ಲಿ ಸೋಮೇಶ್ವರನು ಅವುಗಳ ವರ್ಗೀಕರಣ. ಉಪಯೋಗ, ಪ್ರಯೋಜನ, ನಿಸರ್ಗವಿಕೋಪದಿಂದ ರಕ್ಷಣೆ ಇತ್ಯಾದಿ ಉಪಾಯಾದಿ-ಗಳನ್ನು ಬಹಳ ಸ್ವಾರಸ್ಯವಾಗಿ, ತರ್ಕಬದ್ಧವಾಗಿ ವಿವೇಚಿಸಿದ್ದಾನೆ. ಮಡಿ ಮಾಡಿ ಬೆಳಿಸಿದ ಸಸಿಗಳ ಬಗ್ಗೆ ವಿಚಾರಿಸುತ್ತಾ ಅವುಗಳಿಗೆ ನೀರನ್ನು ಹೇಗೆ ಪೂರೈಸಬೇಕೆಂದು ತಿಳಿಸುತ್ತಾನೆ. ಹೇಮಂತ ಮತ್ತು ಶಿಶಿರ ಋತುಗಳಲ್ಲಿ ಪ್ರತಿ ಎರಡು ದಿನಕ್ಕೊಂದಾ-ವರ್ತಿ ನೀರನ್ನು ಉಣಿಸಬೇಕು. ವಸಂತ–ಗ್ರೀಷ್ಮ ಋತುಗಳಲ್ಲಿ ಪ್ರತಿದಿನವು ಪ್ರಾತಃ ಕಾಲದಲ್ಲಿ ನೀರೆರೆಯಬೇಕು. ವರ್ಷಾ–ಶರತ್ ಋತುಗಳಲ್ಲಿ ಮಡಿ ಮಾಡಿದ ಭೂಮಿಯು ಒಣಗಿದರೆ ಮಾತ್ರ ಅಂತಹ ಗಿಡಗಳ ಮಡಿಗಳಿಗೆ ನೀರನ್ನು ಹಾಕಬೇಕೆಂದು ತಿಳಿಸಿರು-ವನು. ಮಡಿಯಾದ ಭೂಮಿಯನ್ನು ಆಧರಿಸಿ ಎಷ್ಟು ನೀರೆರೆಯಬೇಕೆಂದು ಬಹಳ ಸುಸಂಬದ್ಧ ರೀತಿಯಲ್ಲಿ ವೈಜ್ಞಾನಿಕ ದೃಷ್ಟಿ ಕೋನದಿಂದ ತಿಳಿಸುತ್ತಾನೆ.

ಅಲವಾಲಸ್ಥಿತಂ ತೋಯಂ ಶೋಷಂ ನ ಭಜತೆ ಯದಾ ।
ಅಜೀರ್ಣಂ ತದ್ವಿಜಾನಿಯಾನ್ನದೆಯಂ ತಾದೃಶಂ ಜಲಮ್ ॥

ಎಲ್ಲಿಯವರೆಗೆ ಮಡಿಯಲ್ಲಿ ನಿಂತ ನೀರು ಇಂಗುವುದಿಲ್ಲವೋ ಆವಾಗ ನೀರು ಹೆಚ್ಚಾಗಿದೆ ಎಂದು ತಿಳಿಯಬೇಕು. ಹಾಗೆ ಅಜೀರ್ಣವಾಗುವಂತೆ ನೀರನ್ನು ಪೂರೈಸ-ಬಾರದು ಎಂದು ಮಿತ್ರಸಮ್ಮಿತದಂತೆ ತಿಳಿಸುವನು. ಹೀಗೆ ಅಜೀರ್ಣವಾಗಿದೆ ಎಂದು ತಿಳಿದು ಬಂದರೆ ಅದಕ್ಕೆ ಉಪಾಯ ತಿಳಿಸುತ್ತಾ ಗಿಡಗಳನ್ನು ಸರಿಯಾಗಿ ಬೆಳೆಸಬೇಕೆಂಬ ಇಚ್ಛೆಯುಳ್ಳವನು ಹಾಗೆ ಅಜೀರ್ಣವಾದ ಸ್ಥಿತಿಯಲ್ಲಿ ಆ ಭೂಮಿಯನ್ನು ಮತ್ತೆ ಅಗೆದು ನಿಂತ ನೀರನ್ನು ಇಂಗುವಂತೆ ಮಾಡಬೇಕು. ಬಳಿಕ ಕೆಲವು ದಿನದ ಪರ್ಯಂತರ ನೀರನ್ನು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಪೂರೈಸಬೇಕು. ಈ ರೀತಿಯಲ್ಲಿ ಸರಿಯಾಗಿ ಮತ್ತು ಸಮರ್ಥ ರೀತಿಯಲ್ಲಿ ಬೆಳೆಸಿದ ಗಿಡ–ಮರಗಳನ್ನು ಹೇಗೆ ಮತ್ತು ಯಾವ ಪ್ರಸಂಗಗಳಿಂದ ಸಂರಕ್ಷಿಸಬೇಕೆಂದು ಗ್ರಂಥಕರ್ತನು ತಿಳಿಸುತ್ತಾನೆ.

ನಿಹಾರಾಚ್ಚಂಡತಾಪಾಚ್ಚ ಧೂಮಾದ್ವೈಶ್ವಾನರಾತ್ತಥಾ ।
ಜಾಲಕಾರಾತ್ ಪ್ರಯತ್ನೇನ ರಕ್ಷಣೀಯಾಃ ಕ್ಷಮಾರುಹಃ ॥

"ಬಹಳ ಪರಿಶ್ರಮದಿಂದ ಬೆಳೆಸಿದ ಗಿಡಗಳನ್ನು ಹಿಮದಿಂದ, ಪ್ರಖರವಾದ ಬಿಸಿಲಿನಿಂದ, ಹೊಗೆಯಿಂದ, ಅಗ್ನಿಯಿಂದ, ಮತ್ತು ಮೋಸಗಾರರಿಂದ ರಕ್ಷಿಸಬೇಕೆಂದು

ಸೂಚಿಸುವನು" ಇಂದು ಮಾನವನ ಕೆಲವೊಂದು ಪ್ರವೃತ್ತಿಗಳಲ್ಲಿ ಒಂದು ಪ್ರವೃತ್ತಿ ಯಾವ ಅತ್ಯಮೂಲ್ಯ ಗಿಡಮರಗಳನ್ನು ಸ್ವಾಧೀನ ಪಡಿಸಿಕೊಂಡು ಸ್ವಂತಸ್ವಾರ್ಥಕ್ಕೆ ಹಾಳುಮಾಡುವಂತೆ ಈ ಹಿಂದೆಯೂ ಅಂತಹ ಮೋಸಗಾರರಿದ್ದು ಅರಣ್ಯದಲ್ಲಿ ನೆಲದಲ್ಲಿ ಬೆಳೆಸಿದ ಅತ್ಯಮೂಲ್ಯ ಗಿಡ–ಮರಗಳನ್ನು ಮೋಸದಿಂದ ತಮ್ಮ ಸ್ವಾರ್ಥಕ್ಕೆ ಹಾಳುಮಾಡುವರಿದ್ದರು. ಅಂಥವರಿಂದ ಪ್ರತಿಯೊಬ್ಬರು ಜಾಗರೂಕರಾಗಿರಬೇಕು. ಅಂತಹ ಶಕ್ತಿಯನ್ನು ದಂಡಾಧಿಕಾರದಿಂದಲೇ ಸಂಪೂರ್ಣ ತೆಗೆಯಲು ಬರುವುದೆಂದು ಹೇಳಿ ಉಳಿದ ಕೆಲವು ರಕ್ಷಣೋಪಾಯಗಳನ್ನು ಸೂಚಿಸುತ್ತಾನೆ.

ಪ್ರಾರಂಭಕ್ಕೆ ಬೆಳೆಯುತ್ತಿರುವ ಗಿಡಗಳ ಅಡಿಗಳಲ್ಲಿರುವ ಸ್ಥಳದಲ್ಲಿ ಮತ್ತಿತರ ಯಾವುದೇ ಹುಲ್ಲು. ಕಂಬಿ, ಬಳ್ಳಿ ಇತ್ಯಾದಿಗಳನ್ನು ಬೆಳಗೊಡಬಾರದು, ಬೆಳೆದರೆ ಬೇರು ಸಹಿತ ಕಿತ್ತಬೇಕೆಂದು ಹೇಳುವನು. ಇದು ಬಹಳ ಸರಳ ಮತ್ತು ಸಣ್ಣ ವಿಷಯವೆಂದೂ ಪ್ರತಿಯೊಬ್ಬ ಕೃಷಿಕ ಕುಟುಂಬದ ಸದಸ್ಯರಿಗೆ ತಿಳಿದ ವಿಷಯವೆಂದು ಹೇಳಿದರೂ, ಸೋಮೇಶ್ವರನು ಇದನ್ನು ತಿಳಿಸದೇ ಹೋಗಿದ್ದರೆ ಅವನ ಅಂತಸ್ಥಿಕೆಗೆ ಕಳಂಕವಾಗಬಹುದಿತ್ತು. ಇಂತಹ ಸಣ್ಣ ವಿಷಯವೇ ಹೇಳಿದ ಅವನು ಎಂತಹವನು? ಎಂಬುವ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾಗಬಹುದಿತ್ತು. ಆದರೆ ಪ್ರತಿಯೊಂದನ್ನು ಬಹಳ ಸೂಕ್ಷ್ಮವಾಗಿ ಬುದ್ಧಿವಂತಿಕೆಯಿಂದ ತಿಳಿಸುತ್ತಾ ಸೋಮೇಶ್ವರನು ಮುನ್ನಡೆಯುತ್ತಿದ್ದಾನೆ. ಹಿಮದಿಂದ ಗಿಡಗಳನ್ನು ರಕ್ಷಿಸಬೇಕೆಂಬ ಇಚ್ಛೆಯುಳ್ಳವನು ಬೇರೆಡೆ ಸಿಡಿಲಿನ ಬಾಧೆ ಹೊಂದಿದ ಗಿಡದ ಅಡಿಯಲ್ಲಿರುವ ಭೂಮಿಯ ಮಣ್ಣನ್ನು ತೆಗೆದುಕೊಂಡು ನಮಗೆ ಬೇಕಾದ ಗಿಡಗಳ ಅಡಿಯಲ್ಲಿ ಹಾಕಿದರೆ ಅಂಥಹ ಗಿಡಗಳು ಹಿಮದಿಂದ ಬಾಧೆ ಪಡೆಯುವುದಿಲ್ಲವೆಂದು ತಿಳಿಸುವನು. ಆಣೇಕಲ್ಲಿನ ಮಳೆಯ ಬಾಧೆ ತಡೆಯಲು ಬಿಳಿಯ ಅಕ್ಕಿಯ ಅನ್ನದಲ್ಲಿ ಮೊಸರು–ಉಪ್ಪನ್ನು ಬೆರಸಿ ಗಿಡಗಳಡಿಯಲ್ಲಿ ಹಾಕಿದರೆ ಇದರಿಂದ ಆಣೇಕಲ್ಲಿನ ಮಳೆಯ ಬಾಧೆಯು ಆ ಗಿಡಗಳಿಗಾಗದೆಂದು ಹೇಳುವನು.

ಹೀಗೆ ಚರ್ಚಿಸಿದ ಗ್ರಂಥಕರ್ತನು ಮುಂದೆ ಬೆಳೆದ ಗಿಡಗಳು ಫಲ–ಪುಷ್ಪಗಳನ್ನು ಕೊಡುವಲ್ಲಿ ಅಶಕ್ತವಾದರೆ ಅವಕ್ಕೆ ಉಪಾಯವನ್ನು ತಿಳಿಸುತ್ತಾ ವಾಯುವಡಂಗ, ಸಾಸಿವೆ. ಅರ್ಜುನ ವೃಕ್ಷದ ಹೂ ಇವುಗಳಿಂದ ಮತ್ತು ಮೀನದ ಮಾಂಸದಿಂದ ಸರಿಯಾಗಿ ಧೂಪವನ್ನು ಹಾಕಿದರೆ ಫಲಪುಷ್ಪಗಳು ಸಮೃದ್ಧಿಯಾಗಿ ಬೆಳೆಯುವವೆನ್ನು ವನು. ಅದಲ್ಲದೆ ಬೆಳೆದ ಗಿಡಗಳಿಗೆ ಕಟ್ಟಿಗೆ ಕೊರೆಯುವ ಹುಳ, ಎಲೆಯನ್ನು ತಿನ್ನುವ ಹುಳ, ಗಿಡಕ್ಕೆ ತಗುಲಿದ ರೋಗ ಇವುಕೂಡ ಸಂಪೂರ್ಣವಾಗಿ ನಾಶವಾಗುವುವೆಂದು ಹೇಳುವನು. ಹೀಗೆ ಮೇಲ್ಭಾಗಕ್ಕೆ ಉಪಾಯ ಹೇಳಿದ ಬಳಿಕ ಬೇರುಗಳಿಗೆ ಆಕ್ರಮಿಸಿದ ಕ್ರಿಮಿಕೀಟಗಳ ಬಗ್ಗೆ ಉಪಾಯ ವಿವರಿಸುತ್ತಾನೆ. ವಾಯುವಡಂಗ, ಇಂಗು. ಮೆಣಸು. ಉಪ್ಪು, ಅತಿವಿಷ, ಬಜೆ. ಕೇರು, ಮತ್ತು ಕೋಣದ ಕೋಡು ಇವೆಲ್ಲ ಪದಾರ್ಥಗಳಿಂದ

ಸಮಪ್ರಮಾಣದಲ್ಲಿ ಸೇರಿಸಿ ಪುಡಿಮಾಡಿದ ಚೂರ್ಣವು ಬಾಧೆಯಿಂದ ಯುಕ್ತವಾದ ಗಿಡಗಳ ಬೇರುಗಳಿಗೆ ಚಿಮುಕಿಸಿದರೆ ಅವೆಲ್ಲವೂ ಈ ಬಾಧೆಯಿಂದ ಸಂಪೂರ್ಣವಾಗಿ ಮುಕ್ತವಾಗುವವೆಂದು ಹೇಳಿದ್ದಾನೆ. ಕಾಲಾಮಾಸಾನ್ವಯ ಗಿಡಗಳಿಗೆ ಇಪ್ಪತ್ತು ವರುಷದ ವರೆಗೂ ನೀರನ್ನು ಪೂರೈಸಬೇಕೆಂದು ರಾಜನ ಹೇಳಿಕೆಯಾಗಿದೆ.

ಸಮಾನಂ ವಿಂಶತಿರ್ಯಾವತ್ ತತ್ಸೈನ್ಯೈವ ಮಾನತಃ ।
ಜಲಂ ದೇಯಂ ಪ್ರಯತ್ನೇನ ಯಥಾ ಕಾಲಂ ಮಹೀರುಹಾವ್ ॥

ಹೀಗೆ ಮಾಡಿದರೆ ಋತುವಿನ ಪ್ರಕಾರ ಪ್ರತಿಯೊಂದು ಗಿಡವು ಹಣ್ಣು, ಹೂ, ಕಾಯಿಯನ್ನು ಸಮೃದ್ಧವಾಗಿ ಪ್ರತಿಫಲಿಸುವುದೆಂದು ನುಡಿಯುವನು.

ಕೆಲವೊಂದು ಗಿಡಗಳ ಬಗ್ಗೆ ವಿವರಿಸುತ್ತಾ ಗ್ರಂಥಕರ್ತನು ದ್ರಾಕ್ಷಾಬಳ್ಳಿಯು ಅಧಿಕ ಪ್ರತಿಫಲ ಕೊಡಬೇಕೆಂದರೆ ಹುಂಜ ಅಥವಾ ಕೋಳಿ ಇವುಗಳ ಮಲವನ್ನು ಮತ್ತು ಮೀನದ ಮಾಂಸ ಅವರ ನೀರು ಇವನ್ನು ಬೆರಸಿ ಅದಕ್ಕೆ ಹಾಕಿದರೆ ದ್ರಾಕ್ಷಿಫಲವು ರುಚಿಕರವು ಅಧಿಕ ಇಳುವರಿಯೂ ಆಗುವುದಾಗಿ ಹೇಳುತ್ತಾನೆ. ದಾಳಿಂಬರೆಯ ಗಿಡಕ್ಕೆ ಚಿಗರೆ, ಆನೆ, ಬೆಕ್ಕು, ಹಂದಿ, ಇಲ್ಲವೇ ಶಕುನ ಪಕ್ಷಿ ಇವುಗಳಲ್ಲಿ ಯಾವುದಾದರೊಂದರ ಮಾಂಸ, ಮೇಧಸ್ಸು ಸೇರಿಸಿ ನೀರಿನಲ್ಲಿ ಬೆರಸಿ ಗಿಡದಡಿಯಲ್ಲಿ ಹಾಕಿದರೆ ದಾಳಿಂಬ ಫಲವು ಬಹಳ ರುಚಿಯಾಗಿಯೂ ಬಹಳವಾಗಿಯೂ ಬಿಡುವುದು. ಅದರಂತೆ ಸಂತ್ರಿಯ ಗಿಡಗಳಿಗೆ ಮೇಲೆ ಹೇಳಿದ ಯಾವುದಾದರೊಂದು ಪ್ರಾಣಿಯ ಮಾಂಸವನ್ನು ಬೆಲ್ಲಮಿಶ್ರಿತ ಆಕಳ ಹಾಲಿನಲ್ಲಿ ಸೇರಿಸಿ ಆ ಗಿಡದಡಿಯಲ್ಲಿ ಹಾಕಿದರೆ ಅವಾಗ ಅದು ಮತ್ತೆ ಫಲಭರಿತವಾಗುತ್ತಾ ಹೋಗುವುದೆಂದಿದ್ದಾನೆ. ಮಾಮರಕ್ಕೆ ಜೇನುತುಪ್ಪ, ಹಂದಿಯ ಮೇಧಸ್ಸು. ಇವುಗಳಿಂದ ಯುಕ್ತವಾದ ಕಂಕೊಳ ಬೇರನ್ನು ಕುದಿಸಿದ ನೀರಿನಿಂದ ಪೂರ್ಣವಾಗಿ ಅಡಿಯಲ್ಲಿ ಹಾಕಿದರೆ ಆಗ ಮಾಮರವು ಸಾಕಷ್ಟು ಮತ್ತು ರುಚಿಕಟ್ಟಾದ ಪ್ರತಿಫಲವನ್ನೀಯುವುದೆಂದು ಸೋಮೇಶ್ವರನು ತಿಳಿಸುವನು. ಇದರಿಂದ ಹಲಸು, ತೆಂಗು. ನೆಲ್ಲಿಗಿಡ. ಬಾಳೆ. ಬಾರಿಗಿಡ. ನಾಗ. ಪುನ್ನಾಗ. ಕೆನರಾದಿ ಮುಂತಾದ ಹಣ್ಣನ್ನು ಹೂಗಳನ್ನು ಕೊಡುವ ಗಿಡಮರಗಳ ಬಗ್ಗೆ ಲೇಖಕನು ವಿವರಿಸುತ್ತಾನೆ.

ಒಂದೇ ಹೂವಿನಲ್ಲಿ ಏಳು ವರ್ಣಗಳು ಇರುವವೆಂದೂ ಅದಕ್ಕೆ ಹುರಳಿಯ ಚೂರ್ಣ ಮತ್ತು ಜೇನು ತುಪ್ಪನ್ನು ಮಿಶ್ರಣಮಾಡಿ 'ಮಧುಕಸು' ಎಂಬ ಗಿಡಕ್ಕೆ ಬೆಳೆಯುವ ಮುನ್ನ ಮಣ್ಣಿನಲ್ಲಿ ಬೇರಿಗೆ ತಾಗುವಂತೆ ಬೆರಸಿದಲ್ಲಿ ಅದುವೇ ಏಳು ವರ್ಣದ ಹೂವನ್ನು ಸೃಷ್ಟಿಸುವುದೆಂದಿರುವನು. ಇದಕ್ಕೆ ಇಂದಿನ ಹೂ ತೋಟಗಾರಿಕೆ ವಿಭಾಗದಲ್ಲಿ ವಿಚಾರಿಸಿದರೆ ಅವರೂ ಕೂಡ ಹೀಗೆ ಒಂದೇ ಹೂವಿನಲ್ಲಿ

ಏಳು ಬಣ್ಣ ಆಗಬಹುದೆಂದು ಉತ್ತರಿಸಿದ್ದಾರೆ. ಈ ಹಿಂದೆ ವಿಲ್ಲವನ್ನರಿತ ಭಾರತೀ-ಯರಿಗೆ ಹೊಸದಾದ್ದ್ವವುದೆನಿಸದು. ಸೋಮೇಶ್ವರನು ರಾಜನಿಗೆ ಮತ್ತೆ ತಿಳಿಸುತ್ತಾ ಪಕ್ವವಾಗುವ ಪೂರ್ವದಲ್ಲಿಯೇ ಆ ಗಿಡದ ಹಣ್ಣುಗಳು ಬೇಡವೆಂದೆನಿಸಿದರೆ, ಅದಕ್ಕೆ ಕಪ್ಪಾದ ಹೋತಿನ ಚರ್ಮದಿಂದ ಗಿಡದ ಸಂಧಿಭಾಗಗಳಲ್ಲಿ ಬಿಗಿಯಾಗಿ ಕಟ್ಟಿದರೆ ಆ ಗಿಡದ ಹಣ್ಣುಗಳು ಪಕ್ವವಾಗದೇ ಕಾಯಿಯಾಗಿಯೇ ಉಳಿಯುವದೆಂದು ಹೇಳುತ್ತಾನೆ. ರಾಜನಿಗೆ ಬೇಕಾದ ಋತುವಿನಲ್ಲಿ ಹೀಗೆ ಮಾಡಿ ವನಕ್ರೀಡೆಯಲ್ಲಿ ಸಂತೋಷ ಪಡ ಬಹುದೆಂದು ನಿಸರ್ಗದಲ್ಲಿಯೇ ಕೃತ್ರಿಮತೆಯನ್ನು ರಾಜನು ಸೂಚಿಸಿದಂತಿದೆ. ಇದೊಂದು ಅಲ್ಲದೆ ಚಾಲುಕ್ಕ ಭೂಪಾಲನು ಕೃತಿಮಯವಾದ ಗಿಡದ ರಚನೆಯನ್ನು, ಸರೋವರಗಳ ನಿರ್ಮಾಣವನ್ನು ಚೆಟ್ಟು-ನದಿಗಳನ್ನು ಸಿದ್ಧಪಡಿಸುವಿಕೆಯನ್ನು ವನದಲ್ಲಿ ಹೇಗೆ ರಮಣೀಯವಾಗಿ ನಿಸರ್ಗದಿಂದ ಪಡೆದಂತೆಯೇ ಕೃತ್ರಿಮತೆಯನ್ನು ಮಾಡಿ ಆನಂದ ಪಡಲು ಸಾಧ್ಯವೆಂದು ತಿಳಿಸಿದ್ದಾನೆ. ವೈಭವರೀತಿಯಲ್ಲಿ ಜೀವನ ಸಾಗಿಸಿದ ಸೋಮಭೂಪಾಲನು ಎಲ್ಲರಿಗೂ ಅನ್ವಯಿಸುವಂತೆ ಚರ್ಚಿಸಿ ಕನ್ನಡ ನಾಡಿನ ಕೀರ್ತಿ ಯನ್ನು ಹೆಚ್ಚಿಸುವುದರೊಂದಿಗೆ ಗ್ರಂಥದ ಬಗ್ಗೆ ತಿಳಿಸುತ್ತಾ ಇದು ಎಲ್ಲರಿಗೂ ಉಪ ಕಾರಿಯಾಗಿದ್ದು, ಎಲ್ಲ ವಿಷಯಗಳನ್ನು ತಿಳಿಸುವ ವಿಶಿಷ್ಟವಾದದ್ದು, ಅಭ್ಯಾಸಕ್ಕೆ ಯೋಗ್ಯವು ಎಂಬುದಾಗಿ ನುಡಿಯುವ ಮಾತು ಸಂಪೂರ್ಣ ಸಮಂಜಸವೆಂದು ತಿಳಿಯಬಹುದಲ್ಲವೆ!

> ಕುರುತೆ ಮಾನಸೊಲ್ಲಾಸಶಾಸ್ತ್ರಂ ವಿಶ್ವೋಪಕಾರಕಮ್ ।
> ಶಿಕ್ಷಕಂ ಸರ್ವವಸ್ತೂನಾಂ ಜಗದಾಚಾರ್ಯಪುಸ್ತಕಃ ॥

ದೇವನಾಗರಿ ಲಿಪಿಯನ್ನು ಅರಿಯದ ಸಂಸ್ಕೃತ ಪ್ರೇಮಿ ಕನ್ನಡಿಗರಿಗೆ ಕನ್ನಡ ನಾಡಿನ ಕೀರ್ತಿವಂತರಾದ ಮಹಾಮಹಿಮರ ಕೊಡುಗೆಗಳನ್ನು ಅವರ ಸದಸದ್ ವಿಚಾರಾದಿಗಳನ್ನು ಸುಲಭವಾಗಿ ತಿಳಿಯಲು ಇಂತಹ ಸಣ್ಣ–ಪುಟ್ಟ ಲೇಖನಗಳು ಉಪಯುಕ್ತವೆಂದು ಭಾವಿಸಿ ಅತ್ಯಕತೆ ಪ್ರಯತ್ನಿಸಲಾಗಿದೆ.

ಜಂಗಮತತ್ತ್ವ : ಒಂದು ಅಧ್ಯಯನ

● ಡಾ. ಬಿ. ಸಿ. ಜವಳಿ

೧

ಬಸವಣ್ಣನವರು ಮಾಡಿದ ಕ್ರಾಂತಿ 'ಕಲ್ಯಾಣಕ್ರಾಂತಿ'ಯೆಂದೇ ಇತಿಹಾಸದಲ್ಲಿ ಪ್ರಸಿದ್ಧ. ಅದು ಕಲ್ಯಾಣನಗರಕ್ಕೆ ಸೀಮಿತವಾಗಿದ್ದರೂ, ಕರ್ನಾಟಕದ ಜನತೆಯ ಮೇಲೆಲ್ಲ ಪ್ರಭಾವ ಬೀರಿದೆ. ಅದು 'ಸಮಗ್ರಕ್ರಾಂತಿ' ಅಲ್ಲದಿದ್ದರೂ ಬಹುಮುಖಿಯಾಗಿತ್ತು. ಆ ಕ್ರಾಂತಿಗೆ ಕಾರಣರು ಯಾರೇ ಇರಲಿ, ಕಾರಣಗಳು ಹಲವು ಇವೆ. ಅನುಭಾವಿಗಳಾದ ಶಿವಶರಣರು ಸಾಮಾಜಿಕ, ಆರ್ಥಿಕ, ಧಾರ್ಮಿಕ ಅನ್ಯಾಯಗಳನ್ನು ಸಹಿಸದೆ, ಶೋಷಣೆಯ ವಿರುದ್ಧ ಬಂಡೆದ್ದರು. ಈ ಶೋಷಣೆಗೆ ಒಳಗಾಗಿದ್ದವರೆಂದರೆ : ಕೃಷಿಕರು, ಅಜ್ಞರು, ಕೀಳುಕುಲದವರು, ಹಲವಾರು ಕಸಬಿನವರು, ಸ್ತ್ರೀಯರು–ಇವರೇ ಮೊದಲಾದವರು. ನಾನಾ ಉದ್ಯೋಗಗಳನ್ನು ಮಾಡಿ, ದೇಶದ ಪ್ರಗತಿ ಹಾಗೂ ಬೆಳವಣಿಗೆಗೆ ಕಾರಣರಾದ ಮೇದಾರ, ಮಾದಾರ, ಕುಂಬಾರ, ಮಡಿವಾಳ, ಜೇಡ, ಬೇಡ, ಪತ್ತಾರ, ಕಮ್ಮಾರ–ಇತ್ಯಾದಿ ಜನರೆಲ್ಲ: ಅಧಿಕಾರಿ ವರ್ಗ, ಸಿರಿವಂತ ವರ್ಗ, ವಿದ್ಯಾವಂತ ವರ್ಗದವರಿಂದ ಉಪೇಕ್ಷಿಸಲ್ಪಟ್ಟಿದ್ದರು. ದೇವರ ಮೂರ್ತಿ ಇಲ್ಲವೇ ಪ್ರತಿಮೆ ಮಾಡಿದವನಿಗಿಂತಲೂ ದೇವಾಲಯ ನಿರ್ಮಿಸಿದವರ ಹೆಸರೇ ಇತಿಹಾಸದಲ್ಲಿ ಉಳಿಯುತ್ತಿತ್ತು. ಆಯಾಯ ಕಾಯಕದವರಿಗೆ ಸಲ್ಲಬೇಕಾದ ಸ್ಥಾನಮಾನಗಳಲ್ಲದೆ ಪ್ರತಿಫಲವೂ ಕಡಿಮೆ ಇತ್ತು. 'ಧನವುಳ್ಳವನೇ ಕುಲೀನ': 'ಸರ್ವೇಗುಣಾಃ ಕಾಂಚನಮಾಶ್ರಯಂತಿ': 'ಹಣವಿಲ್ಲದವನು ಹೆಣಕ್ಕಿಂತ ಕಡೆ'–ಎಂಬ ಅಭಿಪ್ರಾಯ ನಾಡಿನಲ್ಲಿ ಪ್ರಚಲಿತವಿದ್ದಾಗ, ಕಡಿಮೆ ಆದಾಯದವರಿಗೆ ಮಾನ, ಮರ್ಯಾದೆ ಹೇಗೆ ಸಿಗಬೇಕು? ಈ ಚಿಂತೆ ಜನತೆಯಲ್ಲಿ ಆವರಿಸಿ, ಬಸವಣ್ಣನ ನಾಯಕತ್ವದಲ್ಲಿ ಬಂಡೇಳಲು ಜನತೆ ಕಾಯುತ್ತಿತ್ತು. ಶಿವಶರಣರ ಕಾಯಕತತ್ತ್ವದ ಹಿನ್ನೆಲೆಯು, ಕೂಲಿಕಾರವರ್ಗಕ್ಕೆ, ದುಡಿಮೆಗಾರರಿಗೆ ಹೆಚ್ಚಿನ ಆದಾಯ ತರುವುದೂ, ಆರ್ಥಿಕ ಸ್ಥಿತಿ ಸುಧಾರಿಸುವುದೂ ಆಗಿತ್ತು. ಧಾರ್ಮಿಕ ಒಡೆತನವಲ್ಲ, ಚತುರ್ವರ್ಣದಲ್ಲಿ ಬ್ರಾಹ್ಮಣರಿಗೇ ಮೀಸಲಾಗಿದ್ದಿತು. "ವರ್ಣಾನಾಂ ಬ್ರಾಹ್ಮಣೋ ಗುರುಃ" ಎಂಬುದು ಸ್ವೀಕೃತ ಅಭಿಪ್ರಾಯವಾಗಿತ್ತು. ದೇವಾಲಯಗಳಲ್ಲಿ ಅರ್ಚಕ ಹುದ್ದೆ, ಮದುವೆ, ಯಜ್ಞಯಾಗ ಮೊದಲಾದ ಸಮಾರಂಭಗಳಲ್ಲಿ ಪೌರೋಹಿತ್ಯವು ಬ್ರಾಹ್ಮಣರಿಗೇ ಮೀಸಲಾಗಿದ್ದಿತು. ಈ ಧಾರ್ಮಿಕ ವ್ಯವಸ್ಥೆಯಲ್ಲಿ, ಶೂದ್ರನಿಗೆ ಆವನ ಉದ್ಧಾರಕ್ಕೆ ಯಾವ ಸಂಸ್ಕಾರವೂ ಇರಲಿಲ್ಲ: ಅದಕ್ಕೆ ಅವಕಾಶವೂ ಇರಲಿಲ್ಲ. ಆದುದರಿಂದ ಈ

ಧಾರ್ಮಿಕ ವ್ಯವಸ್ಥೆಯ ವಿರುದ್ಧ ಶೂದ್ರರು ಬಂಡೇಳಲು ಸಮಯ ಕಾಯುತ್ತಿದ್ದರು. ಗುಣಕ್ಕೆ ಅಗ್ರ ಪ್ರಾಶಸ್ತ್ಯ ಕೊಟ್ಟು. ಶೂದ್ರರಿಗೆಲ್ಲ ಸಮಾನತೆಯ ಆಧಾರದ ಮೇಲೆ ಬಸವಣ್ಣನವರು ಅನುಭವ ಮಂಟಪದಲ್ಲಿ ಪ್ರವೇಶ ನೀಡಿದುದು. ಬ್ರಾಹ್ಮಣ ವರ್ಗದ ಮೇಲ್ಮೆಯನ್ನು ಶರಣರೆಲ್ಲ ಖಂಡಿಸಿದುದು, ಕ್ರಾಂತಿಗೆ ಎಡೆಮಾಡಿಕೊಟ್ಟವು. ಬಸವಣ್ಣನವರು. ಬಿಜ್ಜಳನಲ್ಲಿ ಮುಖ್ಯ ಹುದ್ದೆಗಳಲ್ಲಿದ್ದು, ಆ ಸ್ಥಾನವನ್ನು ಧಾರ್ಮಿಕ ಪ್ರಚಾರಕ್ಕೆ ವಿನಿಯೋಗಿಸಿಕೊಂಡರೆಂದೂ. ಹಣವನ್ನು ಅಪಹರಿಸಿದ್ದಾರೆಂದೂ ಆಪಾದಿಸಿ. ಮಂತ್ರಿ ಮೊದಲಾದ ಅಧಿಕಾರಿ ವರ್ಗ ಅವರ ವಿರುದ್ಧ ದಂಗೆ ಎಬ್ಬಿಸಲು ಸಮಯ ಕಾಯುತ್ತಿತ್ತು. ಬಸವಣ್ಣನವರು ಹಿರಿಯ ಮಂತ್ರಿಗಳನ್ನೆಲ್ಲ ಮೀರಿ ಮೇಲೆ ಬಂದುದು. ಕೆಲವರಿಗಾದರೂ ವೈಮನಸ್ಸನ್ನುಂಟುಮಾಡಿತ್ತು. ಅಲ್ಲಿಯ ವರೆಗೂ ಪ್ರಬಲವಾಗಿದ್ದ ಜೈನ ಧರ್ಮಕ್ಕೂ ಶರಣರು ವಿರೋಧ ಒಡ್ಡಿದ್ದರಿಂದ. ಅಧಿಕಾರಿ ವರ್ಗದಲ್ಲಿದ್ದ ಅನೇಕ ಜೈನರು, ಬಸವಣ್ಣನ ಧಾರ್ಮಿಕ ಕ್ರಾಂತಿಯ ವಿರುದ್ಧ ಸಿಡಿದೆದ್ದಿರಬೇಕು. ಅಲ್ಲದೆ ಶಿವಶರಣರು ಏಕದೇವೋಪಾಸನೆ. ಶಿವಾಧಿಕ್ಯದ ನೆಪದಲ್ಲಿ ಇತರರ ದೇವತೆಗಳಾದ ವಿಷ್ಣು, ಅರುಹಂತ. ಬುದ್ಧ–ಮೊದಲಾದವರನ್ನು ಖಂಡಿಸಿದುದರಿಂದ ಅವರಾ ಕೆಲವು ಅನುಯಾಯಿಗಳಾದರೂ ಕ್ರಾಂತಿ ಪ್ರಚೋದನೆ ನೀಡಿದರು. ಅಲ್ಲಿಯವರೆಗೂ. ಹಿಂದುಳಿದವರಿಗೆ, ವಿದ್ಯಾಭ್ಯಾಸದ ಸಾರ್ವತ್ರಿಕ ಅವಕಾಶವಿಲ್ಲದುದರಿಂದ. ಬಹುಜನ ನಿರಕ್ಷರಿಗಳೂ ಅವಿದ್ಯಾವಂತರೂ ಆಗಿದ್ದರು. ಬಸವಣ್ಣನವರು, ಅವರಿಗೆ ವಿದ್ಯಾಭ್ಯಾಸ, ಓದುವ ಹಾಗೂ ಬರೆವ. ತಿಳಿದುದನ್ನು ಅಭಿವ್ಯಕ್ತಗೊಳಿಸುವ ಸ್ವಾತಂತ್ರ್ಯವಿತ್ತುದರಿಂದ. ದಲಿತವರ್ಗದ ಅನೇಕ ಸ್ತ್ರೀ ಪುರುಷರು. ವಚನಕಾರ್ತಿಯರೂ, ಸಾಹಿತಿಗಳೂ, ಅನುಭಾವಿಗಳೂ ಆಗಿದ್ದಾರೆ. ಶೈಕ್ಷಣಿಕ ದೃಷ್ಟಿಯಿಂದ ಇದೊಂದು ಕ್ರಾಂತಿಯೇ. ಇದೂ ಸಹ ಅನೇಕರಿಗೆ ಸರಿಬಂದಂತಿಲ್ಲ. ಕಿವಿಯಿದ್ದೂ ಕಿವುಡರಾಗಿ. ಕಣ್ಣಿದ್ದೂ ಕುರುಡರಾಗಿ. ಬಾಯಿದ್ದೂ ಮೂಕರಾಗಿದ್ದ ಅನೇಕರಿಗೆ ಕಿವಿಬಂದು. ಕಣ್ಣುಬಂದು. ಬಾಯಿಬಂದಂತಾದುದು ಸಾಮಾನ್ಯ ಸಂಗತಿಯಲ್ಲ: ಇದು ಪವಾಡವೇ. ಇದು ಶರಣರು ಮಾಡಿದ ಕ್ರಾಂತಿ–ಯಾದರೆ ಇದಕ್ಕೆ ಹಿತಾಸಕ್ತಿಯುಳ್ಳ ಸ್ವಾರ್ಥಿಗಳು ಒಡ್ಡಿದ ವಿರೋಧ. ಅದರ ದುಷ್ಪರಿಣಾಮ. ಬಸವಣ್ಣನು ನಿರ್ಮಿಸಬೇಕೆಂದಿದ್ದ 'ಕಲ್ಯಾಣರಾಜ್ಯ'ದ ಕನಸನ್ನು ಭಗ್ನಗೊಳಿಸಿದವು. ವೈಚಾರಿಕ ಕ್ರಾಂತಿಯು ರಕ್ತಪಾತದಲ್ಲಿ ಪರ್ಯವಸಾನಗೊಂಡಿತು. ಶರಣರ ಬಹುಮುಖಿ ಕ್ರಾಂತಿಯು ಎಷ್ಟೊಂದು ಉತ್ತಮ ಫಲ ನೀಡಬಹುದಾಗಿತ್ತೋ, ಅಷ್ಟೊಂದು ಉತ್ತಮ ಫಲ ನೀಡಲಿಲ್ಲ. ಆದರೆ ಶರಣರು ಬಿತ್ತಿದ ಕ್ರಾಂತಿಯ ಬೀಜಗಳು ನಾಡಿದುದ್ದಕ್ಕೂ ಹರಡಿ. ಅವು ಕಾಲಪಕ್ವವಾದಂತೆಲ್ಲ ಮೊಳೆದೋರಿ. ಪಲ್ಲವಿಸಿ, ಫಲಿಸಲಾರಂಭಿಸಿದುದನ್ನು ಮುಂದೆ ಕನ್ನಡನಾಡಿನಲ್ಲಿ ಉದಿಸಿದ ಅನೇಕ ಕವಿಗಳು, ವಚನಕಾರರು ಈ ಶರಣರ ವಿಚಾರಧಾರೆಯನ್ನು ಪ್ರಸಾರ ಮಾಡಿದುದರಲ್ಲಿ ಕಾಣುತ್ತೇವೆ.

೨

ಈ ಹಿಂದೆ ತಿಳಿಸಿದಂತೆ, ಈ ನಾಡಿನಲ್ಲಿ ಶರಣರು, ಅನೇಕ ವಿಧಾಯಕ ಕಾರ್ಯಗಳ ಮೂಲಕ ಜನತೆಯಲ್ಲಿ ವೈಚಾರಿಕ ಕ್ರಾಂತಿಯೆಸಗಲು ಪ್ರಯತ್ನ ಮಾಡಿದ್ದರೆ ಅದು ಹೇಗೆ ನಡೆಯಿತು? ಯಾರ ಮೂಲಕ ನಡೆಯಿತು ಎಂಬುದು ವಿಚಾರಣೀಯ ಅಂಶವಾಗಿದೆ. ಬಸವಣ್ಣನು ಇದಕ್ಕಾಗಿ ನಿಷ್ಠಾವಂತ ಅನುಯಾಯಿಗಳ ತಂಡವನ್ನೇ ನಿರ್ಮಿಸಬೇಕಾಯಿತು. ಆ ತಂಡದಲ್ಲಿ ಎಲ್ಲ ಜಾತಿಯಿಂದಲೂ ಬಂದವರಿದ್ದು ಅವರೆಲ್ಲ ಲಿಂಗೋಪಾಸನೆಯ 'ಭಕ್ತಿಪಕ್ಷ'ದ ಹೆಸರಿನಲ್ಲಿ ತಾವೆಲ್ಲ ಸರಿಸಮಾನರೆಂಬ ಭಾವವನ್ನು ತಳೆದವರಾಗಿದ್ದರು; ಅದರಂತೆ ಆಚರಿಸಿ ತೋರಿಸಿದರು. ಇಂತಹ ತಂಡದಲ್ಲಿ ಕೆಲವರಾದರೂ ವೇಷಗಾರರು: ಉದರಪೋಷಕರು, ಕುಹಕಿಗಳು ಸೇರಿಕೊಂಡಿದ್ದರೆ ಯಾರೂ ಅಚ್ಚರಿಪಡಬೇಕಿಲ್ಲ. ಎಲ್ಲ ಸಂಘಟನೆಗಳಲ್ಲೂ ಹೀಗೆ ನಡೆಯುವುದು ಸ್ವಾಭಾವಿಕ. ಇಂತಹರು ಸೇರಿಕೊಂಡುದರಿಂದ ಚಳುವಳಿಗೆ ಒಸ್ನೇಟು ಉಂಟಾಗಿದ್ದರೂ ಮೊದಲು ಜನರು ಹೀಗೆಯೇ ಇರತ್ತಾರೆಂದು ಹೇಳುವುದು ಬಲುಕಷ್ಟ. ಶರಣರಿಗೂ ಇಂತಹರನ್ನು ಗುರುತಿಸುವುದು ಕಷ್ಟವಾಯಿತು. ಅವರಿಗೆ ತಾವು ಕೈಕೊಂಡಂತಹ ಧಾರ್ಮಿಕ–ಆರ್ಥಿಕ–ಸಾಮಾಜಿಕ ಸುಧಾರಣೆಗೆ ಸಾವಿರಾರು ನಿಸ್ಪೃಹ ವ್ಯಕ್ತಿಗಳು ಬೇಕಾಗಿದ್ದರು. ಅವರು ಈ ಕಾಯಕವನ್ನು ಕೈಕೊಳ್ಳಬೇಕಾದರೆ ಅವರಿಗೆ ಉಚಿತ ಊಟ, ವಸತಿಯ ಏರ್ಪಾಡು, ಅನುಭವ ಮಂಟಪದಲ್ಲಿ, ಬಸವಣ್ಣನ ಮಹಾಮನೆಯಲ್ಲಿ ನಡೆದಂತೆ ಗೋಚರಿಸುತ್ತದೆ. ಇದೇ 'ದಾಸೋಹ'ವೆಂಬ ಹೆಸರಿನಿಂದ ಪ್ರಸಿದ್ಧವಿದೆ. ಆರ್ಥಿಕವಾಗಿ. ದುರ್ಬಲರಿಗೆ ಕಾಯಕತತ್ವದ ಉಪದೇಶ, ಧಾರ್ಮಿಕವಾಗಿ ಹಿಂದುಳಿದವರಿಗೆ ಧಾರ್ಮಿಕ ಸಂಸ್ಕಾರ ನೀಡುವುದು, ಅಜ್ಞರಿಗೆ ಶಿಕ್ಷಣ ನೀಡುವುದು ಈ ಅನುಭವ ಮಂಟಪದ ಕರ್ತವ್ಯಗಳಾಗಿದ್ದವು. ಸಾಹಿತ್ಯ ಪ್ರಸಾರಕರ ತರಬೇತಿಯೂ ಇಲ್ಲಿಯೇ ನಡೆಯುತ್ತಿತ್ತು. ಇದಕ್ಕೆಲ್ಲ ನಿಸ್ವಾರ್ಥಿಗಳ. ಧರ್ಮಿಷ್ಠರ ಹಾಗೂ ದೈವಕ್ಕೆ ಸರಿಯಾಗಿ ನಡೆವವರ ತಂಡವನ್ನೇ ನಿರ್ಮಿಸುವುದು. ಅನುಭವ ಮಂಟಪದಲ್ಲಿ ಅವರನ್ನು ತರಬೇತಿಗೊಳಿಸುವುದು. ಅನುಭವ ಮಂಟಪ–ದಲ್ಲಿಯೇ ಅಂತಹರಿಗೆ ಆದರ್ಶ ಮಾದರಿಗಳನ್ನೊದಗಿಸುವುದೂ ಶರಣರ ಗುರಿಯಾಗಿದ್ದವು. ಅನುಭವ ಮಂಟಪದಲ್ಲಿ ಭಾಗವಹಿಸಿದ ಶರಣರನ್ನು ಪ್ರಾತಿನಿಧಿಕವೆಂದು ತಿಳಿದರೆ, ಡೋಹರ ಕಕ್ಕಯ್ಯ. ಮಡಿವಾಳ ಮಾಚಯ್ಯ. ಮೋಳಿಗೆಯ ಮಾರಯ್ಯ. ಮೇದಾರ ಕೇತಯ್ಯ, ಆಯ್ದಕ್ಕಿ ಮಾರಯ್ಯ. ಬಸವಣ್ಣ. ಚನ್ನಬಸವಣ್ಣ, ಅಲ್ಲಮಪ್ರಭುದೇವ, ಅಕ್ಕಮಹಾದೇವಿ ಇತ್ಯಾದಿಯವರು ಎಲ್ಲ ವರ್ಗಗಳ ಪ್ರತಿ–ನಿಧಿಗಳೆನ್ನಬಹುದು. ಲೌಕಿಕ ಪಾರಮಾರ್ಥಗಳೆರಡರಲ್ಲೂ. ಅವರು. ವ್ಯಕ್ತಿಗಳನ್ನು. ಸಂತೃಪ್ತರನ್ನಾಗಿಸಲು ಬೋಧಿಸುತ್ತಿದ್ದರು. ಈ ಕಾರ್ಯವನ್ನು ಮಾಡಿದವರೆಲ್ಲ ಶರಣರೇ. ಹಾಗಾದರೆ ಅವರೆಲ್ಲ ಜಂಗಮರೇ? ಜಂಗಮರೆಂದರೆ ಯಾರು? ಅವರ ಕರ್ತವ್ಯಗಳಾವುವು ? ಶರಣ ಸಾಹಿತ್ಯವು ಅವರ ಬಗೆಗೆ ತಾಳಿದ ಧೋರಣೆಗಳಾವುವು ಈಗ ವಿಚಾರಿಸೋಣ.

೩

ಹಿಂದೆ ಕೀಳು ಜಾತಿಯವರೆಂದು ತಿಳಿದವರಿಗೆ ಸಂಸ್ಕಾರವನ್ನು ಒದಗಿಸಲು ಯಾವ ಉಪದೇಶ. ಸಂಸ್ಕಾರಗಳನ್ನೂ ಕೊಡುತ್ತಿರಲಿಲ್ಲ. ಆ ಕಾಲದಲ್ಲಿ ದೇವಾಲಯಗಳಲ್ಲಿ ಹಿಂದುಳಿದವರಿಗೆ ಪ್ರವೇಶವಿರಲಿಲ್ಲ: ದೇವರ ದರ್ಶನಕ್ಕಾಗಿ ಜನತೆ ಬಲು ಹಾತೊರೆಯುತ್ತದೆ. ಇಂದಿಗೂ ಸಹ ಪ್ರಸಿದ್ಧ ದೇವಾಲಯಗಳಲ್ಲಿ ಪ್ರವೇಶಕ್ಕೆ ಕರಪಟ್ಟಿ ಇವೆ. ಕೆಲವರಿಗಂತೂ ಹಿಂದೆ ಪ್ರವೇಶವೇ ಇರಲಿಲ್ಲ. ಕನಕದಾಸರಂತಹ ವೈಷ್ಣವ ಸಂತರೂ ಕವಿಗಳೂ ಆದವರಿಗೆ ಉಡುಪಿಯಲ್ಲಿ ಪ್ರವೇಶ ದೊರೆಯಲಿಲ್ಲ ವೆಂಬುದು ಪ್ರಸಿದ್ಧವಿದೆ. ಎಂದಮೇಲೆ ಅದಕ್ಕೂ ಹಿಂದೆ ಹೋದರೆ ಹಿಂದುಳಿದವರಿಗೆ ದೇವರ ದರ್ಶನವೊದಗಿಸುವುದು ಎಷ್ಟೊಂದು ಕಷ್ಟವಿತ್ತೆಂಬುದನ್ನು ಹೇಳಲು ಸಾಧ್ಯವಿಲ್ಲ: ಹೀಗಿದ್ದಾಗ ಹಿಂದುಳಿದವರ ಉದ್ಧಾರಕ್ಕೆ ಲಿಂಗದೀಕ್ಷೆ. ಲಿಂಗಧಾರಣೆ, ಲಿಂಗಪೂಜೆ ನೆರವೇರಿಸಲು ಬಸವಣ್ಣನವರು ಧಾರ್ಮಿಕರ ತಂಡಗಳನ್ನೇ ನಿರ್ಮಿಸಬೇಕಾಗಿದ್ದಿತು. ದೇವಾಲಯಗಳು ಶೂದ್ರರಿಗೆ ಅವಕಾಶ ನೀಡದ್ದರಿಂದ, ಅವು ಸ್ವಾರ್ಥಿಗಳ ಕಪಿಮುಷ್ಟಿಯಲ್ಲಿದ್ದುದರಿಂದ, ಕಲ್ಲು. ಮಣ್ಣು, ಕಟ್ಟಿಗೆ, ಲೋಹಗಳಿಂದ ನಿರ್ಮಿತವಾದ ಪ್ರತಿಮೆಗಳನ್ನು ಪೂಜಿಸಬಾರದೆಂದು ಶರಣರು ದೇವಾಲಯಗಳನ್ನೇ ತ್ಯಾಗಮಾಡಿದರು. ಅವುಗಳ ಸ್ಥಳದಲ್ಲಿ ಸಜೀವ ದೇವರನ್ನು ನೆಲೆಗೊಳಿಸಬೇಕಾಯ್ತು. ಆತ್ಮಲಿಂಗದ ಆರಾಧನೆಯಿಂದ ಶರೀರವೇ ದೇವಾಲಯವಾಗುತ್ತದೆ. ಅದು ಸ್ಥಿರವಾದ ದೇವಾಲಯವಾಗುತ್ತದೆ. ಯಾರ ದಾಳಿಗೂ ಒಳಗಾಗಿ ನಾಶವಾಗಲಾರದು– ಎಂದು ಬಸವಾದಿ ಶರಣರು ಬೋಧಿಸಿದರು "**ಸ್ಥಾವರಕ್ಕೆ** ಅಳಿವುಂಟು. **ಜಂಗಮಕ್ಕೆ** ಅಳಿವಿಲ್ಲ" ಎಂದು ಹೇಳಿದುದರಿಂದ, **ಸ್ಥಾವರದ** ಬದಲು **ಜಂಗಮ**ವನ್ನು ಸ್ಥಾಪಿಸಿದರೆಂಬುದು ಸುಸ್ಪಷ್ಟ. ಇಲ್ಲಿ ಜಂಗಮ ಎಂದರೆ ಯಾವನು ಆತ್ಮಲಿಂಗವನ್ನು ಪೂಜಿಸಿ ಅಮರನಾಗಿದ್ದಾನೋ ಅವನೇ ಜಂಗಮ ಅಥವಾ ಶರಣ ಎಂದು ಹೇಳಿದಂತಾಯಿತು. ಶರಣಸ್ಥಲ ಹೊಂದಿದ ಯಾವುದೇ ವ್ಯಕ್ತಿ ಜಂಗಮನೇ. ಯಾವನು ಪೂಜೆಗೊಳ್ಳಲು ಯೋಗ್ಯನೋ ಅವನೇ ಜಂಗಮ. ಕಲ್ಲುಮಣ್ಣುಗಳಲ್ಲಿ ದೇವರನ್ನು ಕಾಣುವ ಕಣ್ಣುಗಳಿಗೆ ಲಿಂಗವ ಪೂಜಿಸಿ. ಲಿಂಗವೇ ಆದವನಲ್ಲಿ ದೇವರನ್ನು ಕಾಣುವುದು ಅಸಾಧ್ಯವೇ? ಉಣ್ಣದ ಲಿಂಗಕ್ಕೆ ಎಡೆಯಿಡುವುದಕ್ಕಿಂತ 'ಉಣ್ಣುವ ದೇವರಾದ ಜಂಗಮ'ಕ್ಕೆ ನಾವು ನೀಡಬೇಕು–ಎಂದರೆ ಈಶ್ವರನಿಗೆ ತೃಪ್ತಿಯಾಗುತ್ತದೆಯೆಂದು ಶರಣರು ಬೋಧಿಸಿದರು. **ಮೂರ್ತಿಪೂಜೆಯ ಬದಲು ಜೀವಂತ ಮೂರ್ತಿಗಳಾದ ಗುರು-ಜಂಗಮರ ಪೂಜೆ**ಯನ್ನು ಈ ಕಾರಣಕ್ಕಾಗಿ ಶರಣರು ಬಲವಾಗಿ ಪ್ರತಿಪಾದಿಸಿದರು. ಹೀಗಾಗಿ ಶರಣರಿಗೆ ಗುರು. ಲಿಂಗ. ಜಂಗಮ–ಆರಾಧ್ಯ ದೈವಗಳಾದವು. ಅಷ್ಟಾವರಣಗಳಲ್ಲೊಂದಾದ ಜಂಗಮಕ್ಕೆ ಮೂರನೆಯ ಸ್ಥಾನವಿದೆ. ಜೀವನು ಶಿವನಾಗಲು ಜಂಗಮವು ಒಂದು ಸಾಧನ. ಗುರು ಇನ್ನೊಂದು ಸಾಧನ. ಲಿಂಗವು ಮೂರನೆಯ ಸಾಧನ. ಕಣ್ಣಿಗೆ ಕಾಣುವ ಗುರು. ಜಂಗಮರ ಮೂಲಕ ಕಾಣಲಾರದ ಈಶ್ವರನನ್ನು ಸಾಕ್ಷಾತ್ಕಾರ ಮಾಡಿಕೊಂಡು ಈಶ್ವರನಾಗುವುದು. ಈಶ್ವರನಲ್ಲಿ ಬೆರೆಯುವುದು ಇದೇ

ವೀರಶೈವರ ಗುರಿ. ನಿರಾಕಾರ ಶಿವನು. 'ಭಕ್ತೋದ್ಧಾರ'ಕ್ಕಾಗಿ ಗುರುಜಂಗಮ ಸ್ವರೂಪ ತಾಳುತ್ತಾನೆಂದು ವೀರಶೈವ ಸಾಹಿತ್ಯವು ಹೇಳುತ್ತದೆ. ಕಾಣುವುದರ ಮೂಲಕ ಕಾಣಬಾರದುದನ್ನು ಸಾಧಿಸುವುದೇ ಇವರ ಗುರಿ. ಸಾಮಾನ್ಯನಿಗೆ ಗುರು ಜಂಗಮರು ಹೆಚ್ಚಿನವನ್ನು ಸಾಧಿಸಿದವರೇ ಇರುತ್ತಾರೆ. ಆದುದರಿಂದ ಇವರು ಭಕ್ತೋದ್ಧಾರಕ್ಕಾಗಿ ಲೀಲಾಮೂರ್ತಿಗಳಾಗಿ ಕಂಗೊಳಿಸಿದವರೆನ್ನುತ್ತಾರೆ–ಶರಣರು. ಈ ಭಕ್ತೋದ್ಧಾರ ಮಾಡುವುದನ್ನು ಗುರು-ಜಂಗಮ-ಇವರಿಬ್ಬರೂ ಕೈಕೊಳ್ಳುತ್ತಾರೆ. ಭಕ್ತರಿಗೆ ಇಹಪರಗಳಲ್ಲಿ ಸದ್ಗತಿಯನ್ನುಂಟು ಮಾಡಲು ಗುರುವು ಶಿಷ್ಯನಲ್ಲಿ ದೈವಭಾವನೆ ಜಾಗ್ರತಗೊಳಿಸುತ್ತಾನೆ. ಭವದ ಬಾಧೆಯ ಬಗೆಗೆ ತಿಳಿಸುತ್ತಾನೆ: ಕಾಲ ಕರ್ಮಗಳ ನಿವಾರಣೆಗೆ ದೈವಭಾವ. ದೈವಾರಾಧನೆ. ದೈವಚಿಂತನೆಗೆ ಲಿಂಗದೀಕ್ಷೆ ಮಾಡುತ್ತಾನೆ. ಇವನೇ ಗುರು ಪಶುವಿನಂತಿದ್ದ ನರನಲ್ಲಿ ಶಿವತತ್ವವನ್ನು ಉದ್ದೀಪನಗೊಳಿಸುತ್ತಾನೆ. ಪಶುತ್ವದಿಂದ ಮಾನವತ್ವಕ್ಕೆ ತರುತ್ತಾನೆ: ಅನೀತಿಯಿಂದ ನೀತಿಯತ್ತ ತಿರುಗಿಸುತ್ತಾನೆ; ಅಧ್ಯಾತ್ಮಿಕ ಮೌಲ್ಯಗಳನ್ನು ಅವನಿಗೆ ತಿಳಿಸುತ್ತಾನೆ. ಇವನ ಮಾರ್ಗ ತಾಯಿ ಶಿಶುಗಳಿಗೆ ಬುದ್ಧಿ ಹೇಳುವಂತಿರುತ್ತದೆ. ಬಸವಣ್ಣನವರು ಗುರುವನ್ನು 'ಭವರೋಗವೈದ್ಯ' ಎಂದು ಕರೆದರೆ. ಜಂಗಮನನ್ನು 'ಶಸ್ತ್ರವೈದ್ಯ' (surgeon) ಎಂದು ಕರೆದಿದ್ದಾರೆ. ಭವರೋಗದಲ್ಲಿ ಬಿದ್ದು ಬಳಲುವ ಜೀವಿಯ ರೋಗದ (root) ಮೂಲವನ್ನೇ ಕತ್ತರಿಸುವ ಕಾರ್ಯಮಾಡುತ್ತಾನೆ ಜಂಗಮ.. ಅವನ ಬೋಧೆ ಭಕ್ತನ ಹಿತಕ್ಕಾಗಿಯೇ ಇರುತ್ತದೆ. ಗುರು–ಜಂಗಮರ ವ್ಯತ್ಯಾಸವು ಕರ್ತವ್ಯ ಭಿನ್ನತೆಯಿಂದಿದ್ದುದರಿಂದ ಈಮಧ್ಯೆ ಗೆರೆ ಎಳೆಯುವುದು ದುಸ್ಸಾಧ್ಯ. ಜಂಗಮನ ಕಾರ್ಯವನ್ನು ಗುರುವೂ. ಗುರುವಿನ ಕಾರ್ಯವನ್ನು ಜಂಗಮನೂ ಮಾಡಲು ಬರುತ್ತದೆಯೆಂಬುದನ್ನು ಮರೆಯುವಂತಿಲ್ಲ: 'ಗುರು' ಎಂದು ಕರೆದಮಾತ್ರಕ್ಕೇ ಗುರು ಆಗಲಾರನು. ಅದರಂತೆಯೇ 'ಜಂಗಮ' ಎಂದು ಕರೆದಮಾತ್ರಕ್ಕೇ ಜಂಗಮ ಆಗಲಾರನು. ಪುರಾತನ ಶೈವರಲ್ಲಿದ್ದ ಗುರು ಜಂಗಮರನ್ನೇ ಇಲ್ಲಿಯೂ ಉಳಿಸಿಕೊಳ್ಳಲಾಗಿದೆ. ಗುರುಗಳು ಸಾಮಾನ್ಯವಾಗಿ ಎಲ್ಲ ಧರ್ಮದಲ್ಲೂ ಕಾಣಬರುತ್ತಾರೆ. ಜಂಗಮರು ಶೈವ–ವೀರಶೈವರಲ್ಲಿ ಮಾತ್ರ ಇದ್ದಂತೆ ಕಂಡುಬರುತ್ತದೆ: ಹಿಂದೆ. ಅನೇಕ ಬೌದ್ಧ ಸನ್ಯಾಸಿಗಳು. ಸಂಘಗಳನ್ನು ಸ್ಥಾಪಿಸಿಕೊಂಡು ಊರೂರಿಗೆ ಅಲೆದು. ಅದರಂತೆ ಜೈನ ಯತಿಗಳೂ ಅಲೆದು. ಧರ್ಮಪ್ರಸಾರ ಮಾಡುತ್ತಿದ್ದರು. ಅವರಿಗೆ ನಿಶ್ಚಿತ ಊರೆಂಬುದೇ ಇರುತ್ತಿರಲಿಲ್ಲ. ಅಂತೆಯೇ ವೀರಶೈವರಲ್ಲಿಯೂ ಈ ಜಂಗಮದ ಕಲ್ಪನೆ. ಧಾರ್ಮಿಕ ಪ್ರಸಾರಕ್ಕೆ ವ್ಯಕ್ತಿಗಳು ಬೇಕಾದ ಹಿನ್ನೆಲೆಯಲ್ಲಿ ಬೆಳೆದು ಬಂದಿರಬೇಕು. ಸಿದ್ಧರಾಮೇಶ್ವರನು ಒಂದು ವಚನದಲ್ಲಿ ಗುರು–ಲಿಂಗ–ಜಂಗಮದ ಲಕ್ಷಣಗಳನ್ನು ಹೀಗೆ ಹೇಳಿದ್ದಾನೆ :

"ಚರಿಸಿ ಜಂಗಮವೆನಿಸಿತ್ತಯ್ಯಾ ಲಿಂಗವು:
ನೆಲಸಿ ಲಿಂಗವೆನಿಸಿತ್ತಯ್ಯಾ ಲಿಂಗವು:

ಇವಜೀರವ ಅಜುಹಿದಲ್ಲಿ ಗುರುವೆನಿಸಿತ್ತಯ್ಯಾ ಲಿಂಗವು.
ಗುರುಲಿಂಗಜಂಗಮಕ್ಕೆ ತಿಲಾಂಶ ಭೇದವಿಲ್ಲ ..." (ಸಿ.ರಾ.ವ. 795).

ಜಂಗಮನು ಪರಸ್ತ್ರೀಯರನ್ನು ನೋಡುವಲ್ಲಿ ಅಂಧನೂ, ಪರಧನಕ್ಕೆ ಭೀತ್ರನೂ ಆಗಿರುತ್ತಾನೆ ಎಂದೂ ಸಿದ್ಧರಾಮನು ನುಡಿದಿದ್ದಾನೆ. (ಸಿ.ರಾ.ವ. 819) ಗುರು ಲಿಂಗ ಜಂಗಮದ ಅರಿವ ತಿಳಿಸುವವನೇ ಗುರು. ಚರಿಸುವುದೇ ಜಂಗಮತ್ವದ ಲಕ್ಷಣ. ಆತನಿಗೆ ಊರು ಕೇರಿಗಳಿಲ್ಲ. ನಿಂದ ನೆಲವೇ ಕ್ಷೇತ್ರ. ಯಾವ ಜಂಜಡವೂ ಇಲ್ಲದ ನಿರ್ಲೇಪನೀತ. ಮಾಯೆ, ಕಾಲ, ಕರ್ಮವ ಗೆದ್ದು, ಮಾಹೇಶ್ವರ ಸ್ಥಲದಿಂದ ಮೇಲಿನ ಸ್ತರಗಳಲ್ಲಿ ನೆಲೆ ನಿಂತವನೀತ. ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಬಸವಣ್ಣನನ್ನು ಗುರುವಿಗೂ ಚನ್ನಬಸವಣ್ಣನನ್ನು ಲಿಂಗಕ್ಕೂ, ಪ್ರಭುದೇವನನ್ನು ಜಂಗಮಕ್ಕೂ ಪ್ರಾತಿನಿಧಿಕವಾಗಿ ಹೇಳುತ್ತಾರೆ. ಈ ತತ್ವಕ್ಕನುಗುಣವಾಗಿ ಬಸವಣ್ಣ ಚನ್ನಬಸವಣ್ಣ ಒಂದೇ ಸ್ಥಳದಲ್ಲಿದ್ದು ಉಪದೇಶಿಸಿದರೆ. ಪ್ರಭುದೇವನು ಸಂಚಾರಿಯಾಗಿ ಉಪದೇಶಿಸಿದನೆಂದು ತಿಳಿಯಲಾಗಿದೆ. ಸಿದ್ಧರಾಮೇಶ್ವರನು ಸೊನ್ನಲಾಪುರವನ್ನೇ ತನ್ನ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡು ಅತ್ತಿತ್ತ ಚಲಿಸದೆ ಇದ್ದು 'ಜಗದ್ಗುರು' ಎಂದು ಪ್ರಖ್ಯಾತಿ ಪಡೆದಿದ್ದಾನೆ. ಸಿದ್ಧರಾಮನಂತಹ ಶಿವಯೋಗಿಗೆ ದೀಕ್ಷೆಕೊಟ್ಟು 'ಸದ್ಗುರು' ಎನಿಸಿದ್ದಾನೆ ಚನ್ನಬಸವಣ್ಣ. ಒಬ್ಬನೇ ವ್ಯಕ್ತಿ ಗುರು–ಲಿಂಗ–ಜಂಗಮ ವಾಗುತ್ತಾನೆ : "ತನುವ ಗುರುವಿತ್ತು ಗುರುವಾದನಯ್ಯಾ ಬಸವಣ್ಣನು: ಮನವ ಲಿಂಗಕ್ಕಿತ್ತು ಲಿಂಗವಾದನಯ್ಯಾ ಬಸವಣ್ಣನು: ಧನವ ಜಂಗಮಕ್ಕಿತ್ತು ಜಂಗಮ ವಾದನಯ್ಯಾ ಬಸವಣ್ಣನು." (ಸಿ.ರಾ.ವ. 906) ಅವರಿಂದ ಪ್ರಸಾದನ ಪಡೆದು ಗುರುಪ್ರಸಾದಿ. ಲಿಂಗಪ್ರಸಾದಿ. ಜಂಗಮಪ್ರಸಾದಿ ಎನಿಸಿಕೊಂಡ (ಸಿ.ರಾ.ವ. 911). ವೀರಶೈವ ಸಾಹಿತ್ಯದಲ್ಲಿ ಗುರು. ಲಿಂಗ. ಜಂಗಮ ತತ್ವಗಳು ಆರಾಧ್ಯವಾಗಿದ್ದರೂ ಅವಕ್ಕೂ ಕಾಯಕವನ್ನು ಕಡ್ಡಾಯಗೊಳಿಸಲಾಗಿದೆ. ಗುರುವಿನ ಕಾಯಕ ಶಿಷ್ಯನಿಗೆ ಉಪದೇಶಿಸಿ, ಶಿಷ್ಯನ ಬದುಕಿನ ರೀತಿಯನ್ನೇ ಬದಲಿಸುವುದು: ಲಿಂಗದ ಕಾಯಕ ಭಕ್ತನಿಗೆ ಫಲಗಳನ್ನು (ಇಷ್ಟಾರ್ಥ) ಒದಗಿಸುವುದು: ಜಂಗಮದ ಕಾಯಕ ಲಿಂಗ ಮಾರ್ಗದಲ್ಲಿ ನಡೆವವರ ಮನದ ಕತ್ತಲೆಯನ್ನು ಪರಿಹರಿಸುವುದು. ಅವರೆದುರು ಬಂದ ಚಿಂತ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡಿ, ಅವರನ್ನು ಪ್ರಾಣಲಿಂಗದ ಅನುಸಂಧಾನಕ್ಕೆ ಅಣಿಗೊಳಿಸುವುದು. ಗುರುವಿನ ಕರುಣೆಯಿಂದ ಲಿಂಗ. ಜಂಗಮ. ಪಾದೋದಕ. ಪ್ರಸಾದ ಲಭಿಸುತ್ತವೆ. ಶರಣರ ಮಹಿಮೆಯು ಅರಿವಾಗುತ್ತದೆ. ಪಂಚಾಚಾರಗಳಲ್ಲಿಯ ಸದಾಚಾರ, ಭೃತ್ಯಾಚಾರ. ಶಿವಾಚಾರ ಮೊದಲಾದ ಆಚರಣೆಗಳ ಅರಿವೂ. ಅಷ್ಟಾವರಣಗಳ ಅರಿವೂ ಆಗುತ್ತದೆ. ಭಕ್ತಿ. ಜ್ಞಾನ, ವೈರಾಗ್ಯಗಳ ಅರಿವಾಗುತ್ತದೆ. ಮಾಂಸ ಪಿಂಡ, ಮಂತ್ರ ಪಿಂಡ, ಅನ್ನ–ಪ್ರಸಾದಗಳ ಅರಿವಾಗುತ್ತದೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಗುರುವಿನಿಂದ ಶಿವಪಥದ ಅರಿವೇ ಆಗುತ್ತದೆ.

ನಮ್ಮ ಪುರಾತನ ಧರ್ಮಶಾಸ್ತ್ರಗಳಲ್ಲೂ ಗುರುವನ್ನು "ಗುರುದೇವ"ನೆಂದು ಕರೆದು. ಅವನನ್ನು ಬ್ರಹ್ಮ, ವಿಷ್ಣು, ಮಹೇಶ್ವರ ಎಂದು ತಿಳಿಸಿದ್ದಾರೆ. ಇದು ಸ್ಥೂಲವಾಗಿ ಗುರುತತ್ವದ ಮಹತಿ.—ಗುರುವಿನಿಂದಲೇ ಮನದಲ್ಲಿ ಲಿಂಗ ಭಾವವು ಜಾಗ್ರತವಾಗುತ್ತದೆ; ಲಿಂಗವು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಸ್ಥಾಪಿತವಾಗುತ್ತದೆ. ಲಿಂಗದೀಕ್ಷೆಯಿಂದ ಮನುಷ್ಯನು ಹೊಸ ಜನ್ಮವನ್ನು ಪಡೆಯುತ್ತಾನೆ. ಅಂದಿನಿಂದ ಅವನನ್ನು ಗುರುಪುತ್ರನೆಂದೆನ್ನುತ್ತಾರೆ. ಗುರು ಆದವನು ಗೃಹಸ್ಥನಾಗಿರಬಹುದು ಇಲ್ಲವೆ ವಿರಕ್ತನಾಗಿರಬಹುದು; ಯಾವುದೂ ಕಡ್ಡಾಯವಿಲ್ಲ. ಒಂದು ಊರಿನಲ್ಲಿ ನೆಲಸಿರಬಹುದು; ಸಂಚಾರಿಯಾಗಿರಬಹುದು. ತಾನು ಮಾಡಬೇಕಿದ್ದ ಕಾರ್ಯವನು ಮಾಡಿದರೆ ತೀರಿತು. ಅವನಿಗೆ ಭಿಕ್ಷೆ ಬೇಡುವ ಪ್ರಸಂಗವಿಲ್ಲ; ಶಿಷ್ಯನ ಉಪದೇಶದಿಂದ ಬರುವ ಪ್ರತಿಫಲವೇ ಅವನ ಸಂಪತ್ತು, ಕಾಯಕದ ಫಲ. ಅವನು ತನ್ನ ಕುಟುಂಬದ ಹಿತಕ್ಕೆ ಸಮಾಜದ ಹಿತಕ್ಕೆ ಅದನ್ನು ಬಳಸಬೇಕು. ಆದರೆ ಜಂಗಮತತ್ವ ಸ್ವರೂಪಿಯಾದ-ಜಂಗಮನು, ಲೋಕವನ್ನೇ ಕುಟುಂಬವೆಂದು ತಿಳಿಯಬೇಕಾದುದರಿಂದ ಅವನು ಪಡೆಯುವ ಕಾಯಕ ಫಲವನ್ನು ಸಮಾಜಕ್ಕೇ ವಿನಿಯೋಗಿಬೇಕಾಗುತ್ತದೆ; ಅತನು ಯಾವಾಗಲೂ ವೈರಾಗಿಯೇ. ಅವನಿಗೆ ಬೇರೆ ಬಂಜಡವಿಲ್ಲ, ಕುಟುಂಬವಿಲ್ಲ. ಅದುದರಿಂದ ಅವನನ್ನು 'ನಿರಂಜನ', 'ನಿರ್ಲೇಪ', 'ಪ್ರಣವಸ್ವರೂಪಿ' ಎಂದು ಮೊದಲಾಗಿ ಸಂಬೋಧಿಸಿದ್ದಾರೆ. ಅವನಿಗೆ ಸಮಾಜ ಸೇವೆಯೇ ಕಾಯಕ. ಅದುದರಿಂದ ತ್ರಿವಿಧ ದಾಸೋಹದಲ್ಲಿ 'ಜಂಗಮಕ್ಕೆ ಧನವ ಸವೆಸಲೇಬೇಕು'; 'ಜಂಗಮಕ್ಕೆ ಧನವ ನೀಡುವುದೇ ಜಂಗಮದಾಸೋಹ' ಎಂದು ವರ್ಣಿತವಾಗಿದೆ. ಭಕ್ತನ ಲಿಂಗಾರ್ಚನೆ ಜಂಗಮ ಮೆಚ್ಚುವಂತಿರಬೇಕು. ಜಂಗಮ ಬಂದಾಗ ಲಿಂಗಪೂಜೆಯನ್ನು ಮರೆತರೂ ನಡೆಯುತ್ತದೆ. 'ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ'; 'ಜಂಗಮಕ್ಕೆರೆದರೆ ಸ್ಥಾವರ ನನೆಯಿತ್ತು' ಎಂಬ ಬಸವಣ್ಣನವರ ಮಾತುಗಳನ್ನು ಸ್ಮರಣೆಯಲ್ಲಿರಿಸಿಕೊಳ್ಳಬೇಕು. ಗುರುವಿನ ಉಪಕಾರವನ್ನು ಅವನ ಸೇವೆಮಾಡಿ ತೀರಿಸಬಹುದು. ಆದರೆ ಜಂಗಮದ ಉಪಕಾರ ಧನತ್ಯಾಗದಿಂದಲೇ ನಡೆಯಬೇಕು. ಈ ಜಂಗಮನು ಶಿವಯೋಗಿಯಾಗಿರುತ್ತಾನೆ; ಮಹಾಜ್ಞಾನಿಯಾಗಿರುತ್ತಾನೆ. ಅವನು, ಜಡೆಗೆ ಹೆಜ್ಜೆ, ನುಡಿಗೆ ಸೂತಕವಿರದ ಶರಣನಾಗಿರುತ್ತಾನೆ. ಲೋಕಕ್ಕೆ ಅಂಟಿಯೂ ಅಂಟದ ಮಹಿಮನಾಗಿ ಸರ್ವಜ್ಞನಂತಿರುತ್ತಾನೆ. ಜಂಗಮನು ಭಕ್ತನಿಂದ ಹಣ ಸ್ವೀಕರಿಸುವಾಗ ಅದು ಅವನ ಸತ್ಯ ಶುದ್ಧ ಕಾಯಕದಿಂದ ಬಂದಿದ್ದರೆ ಮಾತ್ರ ಸ್ವೀಕರಿಸಬೇಕು; ಅದುಮಾತ್ರ ದಾಸೋಹಕ್ಕೆ ಸಲ್ಲುತ್ತದೆ. ಅಪವಿತ್ರ ಹಣ ಸ್ವೀಕರಿಸಲಾಗದು. ಜಂಗಮ ಹಣ ಪಡೆಯುವುದಾಗಲಿ, ಭಕ್ತನು ಕೊಡುವುದಾಗಲಿ ಅದು 'ಭಿಕ್ಷೆ'ಯಲ್ಲ. ಅದು ಸಮಾಜಕ್ಕೆ ನೀಡುವ ಸದ್ವಿನಿಯೋಗದ ಕೊಡುಗೆ, ಕೊಟ್ಟುದು ಶಿವಕಾರ್ಯಕ್ಕೆಂದು ಎಂದು ಹೇಳಿದಮೇಲೆ ಅದು ಸಲ್ಲುವುದೂ ಶಿವಕಾರ್ಯಕ್ಕೇ-ಯೇ. ಅವನು ಮಾಡುವ ಸೇವೆ ಮಹತ್ತರವೂ ಪವಿತ್ರವೂ ಲೋಕಹಿತಕಾರಿಯೂ

ಆದುದರಿಂದ. ಅವನು ಮಹಾಜ್ಞಾನಿಯೂ. ಪರಮವೈರಾಗ್ಯ ಮೂರ್ತಿಯೂ ಆಗಿರುವದರಿಂದ, ಅವನಲ್ಲಿ ಜಾತಿಯನ್ನು ಅರಸಬಾರದು. ಬಸವಣ್ಣನವರ ಪ್ರತಿಜ್ಞೆಗಳಲ್ಲಿ **ಜಂಗಮದಲ್ಲಿ 'ಜಾತಿಯನರಸೆ'** ಎಂಬೂದೂ ಒಂದು. ಜಂಗಮನಾದರೂ ಲೀಲಾ ಮೂರ್ತಿ. ಅವನಿಗೆ. ಸಮಾಜದವರು. ಅವನು ಬೇಡದೇ ನೀಡಬೇಕು: ಅವನಾದರೂ ಬೇಡದೇ ಪಡೆಯಬೇಕು. ಬಸವಣ್ಣನವರೇ "ಕಾಡುವ ಬೇಡುವ ಜಂಗಮಬಂದರೆ ನೀಡಲುಬಾರದು" ಎಂದಿದ್ದಾರೆ. ಕಾಡುವದು. ಬೇಡುವದು ಲೋಭಿಯಗುಣವೇ ವಿನಾ ಜಂಗಮನ ಗುಣವಲ್ಲ. ಸಮಾಜದ ಸಂಘಟನೆ. ಲೋಪದೋಷ ತಿದ್ದುವದು ಜಂಗಮರ ಪವಿತ್ರ ಕರ್ತವ್ಯ. ಅದಕ್ಕಾಗಿ ಜಂಗಮನು ವೀರಸನ್ಯಾಸಿಯಾಗಿ. ಮಹಾಶಿವಯೋಗಿ–ಯಾಗಿ. ಸಮಾಜದ ಪುರೋಭಿವೃದ್ಧಿಗೆ ಬದ್ಧ ಕಂಕಣನಾಗಬೇಕಾಗುತ್ತದೆ. ಹಿಂದೆ ಇಂತಹ ಜಂಗಮರ ಅನುಪಮ ಸೇವೆಯಿಂದಲೇ ವೀರಶೈವ ಧರ್ಮವು ಪ್ರಸಾರವಾಗಿದೆ: ಹಲವಾರು ಜನ ಮತಾಂತರ ಹೊಂದಿದ್ದಾರೆ. ಧರ್ಮವನ್ನು ಖಿಲವಾಗದಂತೆ ನಾಡಿನ ಹೊರಗೆ ಮತ್ತು ಒಳಗೆ ಅವರು ಸಂಚರಿಸಿ, ವೀರಶೈವವನ್ನು ಸಜೀವವಾಗಿರುವಂತೆ ನೋಡಿಕೊಳ್ಳುವುದೇ ಇವರ ಹೊಣೆ. ಆದುದರಿಂದಲೇ ಗುರು-ಲಿಂಗ–ಜಂಗಮರಲ್ಲಿ ಜಂಗಮವು ಲಿಂಗಕ್ಕಿಂತ ಶ್ರೇಷ್ಠವೆಂದಿದ್ದಾರೆ ಶರಣರು. ಲಿಂಗವು ಉಣ್ಣುವುದಿಲ್ಲ, ಮಾತನಾಡುವದಿಲ್ಲ, ಆದರೆ ಜಂಗಮವು ಉಣ್ಣುತ್ತದೆ. ಮಾತನಾಡುತ್ತದೆ. ಜಂಗಮದ ಪಾದೋದಕ ಪ್ರಸಾದಗಳನ್ನು ಲಿಂಗಕ್ಕೆ ಅರ್ಪಿಸುತ್ತಾರೆ. ಜಂಗಮನಲ್ಲಿ ಲಿಂಗವು ಅಡಕವಾಗಿರುತ್ತದೆ. ಜಂಗಮಕ್ಕೆ "ಜಂಗಮಮೂರ್ತಿ" ಎಂದು ಕರೆಯುತ್ತಾರೆ. ಸಿದ್ಧರಾಮೇಶ್ವರರು ಹೇಳುವ ಜಂಗಮಲಕ್ಷಣಗಳನ್ನೇ ಇಲ್ಲಿ ಉದಾಹರಿಸಬಹುದು. "ಸಮತೆಯೆಂಬ ಕಂಥೆಯ ಧರಿಸಿಪ್ಪ; ಅಮಿತವೆಂಬ ಭಸ್ಮವ ಧರಿಸಿಪ್ಪ; ಲಿಂಗವೆಂಬ ಕರ್ಪರದ ಕರಸ್ಥಲವಲ್ಲಿ ಧರಿಸಿರ್ಪ; ಸರ್ವಜೀವದಯಾಪಾರಿಯೆಂಬ ವಿಮಲ ರುದ್ರಾಕ್ಷಿಯ ಧರಿಸಿಪ್ಪ: ನಿರ್ಮೋಹವೆಂಬ ಕೌಪೀನವ ಧರಿಸಿಪ್ಪ: ನಿಸ್ಸಂಗವೆಂಬ ಮೇಖಲಾಪರಿಪೂರ್ಣ: ಸಮ್ಯಾನವೇ ಕಿರೀಟವಾಗಿ. ಶುದ್ಧಜ್ಞಾನವೇ ಮಕುಟವಾಗಿ. ನಿರಹಂಕಾರವೇ ಬಹಿರ್ವಾಸಿಯಾಗಿ. ದುರ್ವ್ಯಸನ. ದುರ್ಧರ್ಮ, ಹೃಷೀಕೋತ್ಪತ್ತ ವಿಜಯ ಶಿವಯೋಗವಾಗಿ ಚರಿಸುವವನು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾಜಂಗಮನು. ನೀರ ಕುಡಿದು ಅಗ್ನಿಯ ನುಂಗಿದವರ ಜಂಗಮವೆಂಬೆ: ಊರನೋಡಿ ಸೇರದವರ ಜಂಗಮವೆಂಬೆ......ಕಪಿಲಸಿದ್ಧಮಲ್ಲಿಕಾರ್ಜುನಾ": ಅವನು "ಸಕಲ ಪರಿಪೂರ್ಣನಾದುದರಿಂದ ಬಾಲಕನಂತೆ ತೋರುತ್ತಾನೆ: ವಿಧಿನಿಷೇಧಗಳಿಲ್ಲದರಿಂದ ಉನ್ಮತ್ತನಂತೆ ತೋರುತ್ತಾನೆ: ಜನರಂಜನ ಲಾಂಛನವಿಲ್ಲದರಿಂದ ಪೈಶಾಚಿಯಂತೆ ತೋರುತ್ತಾನೆ: ನಿಶ್ಶಬ್ದ ಬ್ರಹ್ಮವೇದ್ಯನಾದುದರಿಂದ ಮೂಕನಂತೆ ತೋರುತ್ತಾನೆ: ಸಕಲಾಗಮದ ಮೂರ್ತಿ ತಾನಾದುದರಿಂದ ವಿದ್ವಾಂಸರೊಳು ಚರಿಸುವವನು– ಇವನೇ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ಮಹಾಮೂರ್ತಿ ಜಂಗಮನು"(ಸಿ. ರಾ. ವ. 1167, 1168, 1169). ಜಂಗಮಕ್ಕೆ ಜನನಮರಣಗಳಿಲ್ಲ; ಕ್ಷುಧೆತೃಷೆ ಪ್ರಾಣಧರ್ಮಗಳಿಲ್ಲ. ಸುಖದುಃಖಗಳಿಲ್ಲ. ಇವೆಲ್ಲ ಗುಣ

ಗಳು ದೇಹಕ್ಕೆ. ಜಂಗಮನು ಲಿಂಗದಲ್ಲಿ ಸಮರಸನು. ಶಿವಯೋಗಿ ಸಚ್ಚಿದಾನಂದ (ಸಿ. ರಾ. 1217). "ನಿಂದಿಸಿದಲ್ಲಿ ಕುಂದುವನಲ್ಲ, ವಂದಿಸಿದಲ್ಲಿ ಆನಂದಮಯನಲ್ಲ. ಬಂದ ಉಪಚಾರದಲ್ಲಿ ಸಂದು ಗೊಳ್ಳುವನಲ್ಲ. ಬಂದಲ್ಲಿ ನೀಡಿದರೆ ಕ್ರೋಧಿಯಲ್ಲ- ಸಾಕ್ಷಾತ್ ಮಲ್ಲಿಕಾರ್ಜುನ" (ಸಿ.ರಾ.ವ. 1236). ಜಂಗಮವೇ ಪಾದೋದಕ ಪ್ರಸಾದ ವ ಕರುಣಿಸುವವನು- ಅಧ್ಯಾತ್ಮಿಕವಾಗಿ ದೀಕ್ಷೆ. ಉಪದೇಶಗಳನ್ನು ನೀಡಿ ಶಿಷ್ಯನನ್ನು ಅಧ್ಯಾತ್ಮಿಕ ಜೀವನದತ್ತ ತಿರುಗಿಸುವವನು ಗುರು. ಜಂಗಮನ ಕರ್ತವ್ಯವು, ಭಕ್ತನು ಸದಾಕಾಯಕ ಮಾಡಿ, ದಾಸೋಹ ನಡೆಸುವಂತೆ ನೋಡಿಕೊಳ್ಳುವುದು. ಒಂದು ವೇಳೆ ಭಕ್ತನು ದಾಸೋಹ ಮಾಡಲು ನಿಶ್ಯಕ್ತನಾದರೆ ಜಂಗಮನೇ ನಿಂತು ದಾಸೋಹವನ್ನು ಭಕ್ತನ ಮನೆಯಲ್ಲಿ ನಡೆಸಬೇಕು. ಚೆನ್ನಬಸವಣ್ಣನವರ ಈ ಒಂದು ವಚನವನ್ನು ನೋಡಿರಿ. "ಭಕುತಿಯಿಂದ ಮಾಡುವ ಭಕ್ತ ನಿರ್ಧನಿಕನಾದಡೆ ತನ್ನ ಧನವ ವೆಚ್ಚಿಸಿ, ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡಿ ಅವನ ದಾಸೋಹಕ್ಕೆ ನಿಲಿಸಿ, ತಾ ಕರ್ತನಾಗಿ ಬಂದು ಪರಿಣಾಮಿಸಬಲ್ಲಡೆ ಜಂಗಮ. ಅಂತಲ್ಲದೆ ಮುನ್ನ ಮಾಡಿ ಭೋ ಎಂದು ದೂರಿ. ಈಗ ಮಾಡಿ ಭೋ ಎಂದು ಜಱಿದು. ಝಂಕಿಸಿ ಹೋಹರ ಜಂಗಮವೆಂಬನೇ? ಎನ್ನನು ಅದೇನು ಕಾರಣವೆಂದೆಡೆ ಆತ ಸೂನೆಗಾಱ: ಆತ ಘಾತಕ: ಆತ ಭವಭಾರಿಕಾಣಾ. ಕೂಡಲ ಚೆನ್ನಸಂಗಮದೇವಾ" (ಚೆ. ಬ. ವ. 160). ಜಂಗಮನಿಗೆ ಭಕ್ತೋದ್ಧಾರವೇ ಮುಖ್ಯ: ಇದೇ ಈ ವಚನದ ಮೂಲ ಆಶಯ. ಜಂಗಮನ ಪಾದೋದಕದಿಂದ ಆಗಾಮಿ ಕರ್ಮ ನಷ್ಟವಾದರೇ, ಗುರುಪಾದೋದಕ, ಲಿಂಗಪಾದೋದಕಗಳಿಂದ ಸಂಚಿತಕರ್ಮ ಪ್ರಾರಬ್ಧ ಕರ್ಮಗಳು ನಷ್ಟವಾಗುತ್ತವೆ. ಭವವೇ ಇವೆಲ್ಲವುಗಳಿಂದ ಹರಿಯುತ್ತದೆ. **ಗುರುವಿಗೂ, ಲಿಂಗಕ್ಕೂ ಚೈತನ್ಯ ಸ್ವರೂಪವೇ ಜಂಗಮ** (ಚೆ. ಬ. ವ. 175). ಕಲ್ಲು, ಕಟ್ಟಿಗೆ. ಲೋಹ ಮೊದಲಾದ ಜಡವಸ್ತುಗಳಲ್ಲಿ ದೇವರನ್ನು ಕಾಣುವವರಿಗೆ ಗುರು-ಜಂಗಮ-ಭಕ್ತ-ಶರಣರಲ್ಲಿ ದೇವರನ್ನು ಕಾಣುವುದು ದುಸ್ತರವಾಗಲಾರದು. ಗುರು ಜಂಗಮರಾದರೂ ಮೂಲತಃ ಮಾನವರು: ಅವರಲ್ಲಿಯೂ ಮಾನವರ ದೌರ್ಬಲ್ಯಗಳಿ-ರುತ್ತವೆ. ಅರಿವಿನ ಜೊತೆಗೇ ಮರವು ಇರುವದರಿಂದ. ಎಂತೆಂತಹ ಸ್ಥಿತಿಯಲ್ಲಿಯೂ ಅಜ್ಞಾನವು ಆವರಿಸುತ್ತದೆ. ಆದುದರಿಂದ ಗುರು ಜಂಗಮರನ್ನು ದೇವರೆಂದು ಆರಾ-ಧಿಸಬೇಕೆಂದು ಶರಣಸಾಹಿತ್ಯವು ಹೇಳಿದ್ದರೂ ವಿಷಯಾಸಕ್ತರನ್ನು. ದುಷ್ಟರನ್ನು. ಹೊಟ್ಟೆಹೊರೆವವರನ್ನು. ವೇಷದ ಲಂಪಟರನ್ನು. ಡಂಭಕರನ್ನು ಆರಾಧಿಸಲು ಅದು ಹೇಳಿಲ್ಲ. ಅವರ ಕಳೆ. ಅವರ ಸೇವೆ. ಅವರ ಜ್ಞಾನಗಳನ್ನು ನೋಡಿ ಆರಾಧಿಸಬೇಕೆಂಬ ಎಚ್ಚರಿಕೆಯನ್ನೂ ಶರಣರು ನೀಡಿದ್ದಾರೆ. ಸತ್ಕ್ರಿಯೆಯಿಂದಲೇ ವ್ಯಕ್ತಿಯು ಜಂಗಮ-ನಾಗುತ್ತಾನೆ. ಹೀಗಾಗಿ "ಲಿಂಗವೆಂಬುದು ಜಂಗಮದ ಒಂದು ಅಂಗ" (ಚೆ. ಬ. ವ. 287) ಎಂದು ತಿಳಿಯಲಾಗಿದೆ. ಜಂಗಮಕ್ಕೆ ದಾಸೋಹ ಮಾಡುವುದೇ ಅತಿ ಶ್ರೇಷ್ಠ: ಜಂಗಮಕ್ಕೆ ಇದಿರುತ್ತರವ ಕೊಡುವುದು ಸಲ್ಲದು ಎಂಬುದು ಜಂಗಮದ ಸೇವೆಯ ಮಹತ್ವವನ್ನು ಎತ್ತಿತೋರಿಸುತ್ತದೆ. ಅವನ ಆಚಾರ ಅನುಕರಣೀಯ. ಜಾತಿ ಸೂತಕದ

ಪೂರ್ವಾಶ್ರಯುವ ಕಳೆದವನೇ ಜಂಗಮ. ಅವನು ಜ್ಞಾನದಲ್ಲಿ ತೊಳಗುವ ಸೂರ್ಯ: ಅನುಭಾವದಲ್ಲಿ ಸೂತಕವಿಲ್ಲದ ಶರಣ ಕಾಮಿಸದೇ ಕಲ್ಪಿಸದೇ, ಭಕ್ತನಿಗೆ ಉಪದೇಶವ ನೀಡಬಲ್ಲವ. ಇಂತಹ ಜಂಗಮನು ಸಾಕಾರಮೂರ್ತಿ ಶಿವನೇ. ಭಕ್ತನಿಗೆ ಸದಾ ಕಾರುಣ್ಯವನುಪದೇಶಿಸಿ ಉದ್ಧರಿಸುವವನು. ಈ ಧರೆಯಲ್ಲಿ ವೇಷಧಾರಿಗಳೇ ಬಹುಸಂಖ್ಯೆಯಲ್ಲಿ ಕಾಣುವಂತೆ ನಿಜ ಜಂಗಮರು ಕಾಣುವುದಿಲ್ಲ: ಶಿವಜ್ಞಾನಿಗಳು ಕಾಣುವದು ದುರ್ಲಭ. ಲೋಕೋದ್ಧಾರವೇ ಜಂಗಮನ ಜೀವನದ ಗುರಿ. ವೇಷಧಾರಿಯ ಗುರಿ ಉದರಪೋಷಣೆ ಲಾಂಛನ ಕೇವಲ ಕಾಂಚನಕ್ಕೆ ಮಾತ್ರ. ಲಾಂಛನ ಕಾಂಚನಕಾದರೆ ಜಂಗಮನ ಲಾಂಛನ ವೇಶಿಯ ವೇಷದಂತಾಗುತ್ತದೆ: ಸಂಸ್ಕಾರವಿಲ್ಲದ ಶಿಲೆ ಲಿಂಗವಲ್ಲ. ಸಂಸ್ಕಾರವಿಲ್ಲದ ನರರು ಗುರು–ಜಂಗಮರಾಗರು. ಬೇಡದೇ ನೀಡುವದು ಭಕ್ತನ ಲಕ್ಷಣವಾದರೆ ಹಾಡದೆ ಹೊಗಳದೇ ಬೇಡದೇ ಪಡೆವುದು ಜಂಗಮಲಕ್ಷಣ. ಬೇಡುವುದಾದರೆ ಅದು ತಿರಿಕೆಯಾಗುತ್ತದೆ. ಭಿಕ್ಷೆಯಾಗುತ್ತದೆ. 'ಜಂಗಮ'ವೆಂಬುದು ಗುಣವಾಚಕವೇ ವಿನಾ ಜಾತಿವಾಚಕವಲ್ಲ.

೪

ಗುರುವಿನಿಂದ ದೀಕ್ಷೆಪಡೆದ ಶಿಷ್ಯನು ಜಂಗಮನಾಗಿ ಗುರುವಿನ ಮಠಕ್ಕೆ ಬಂದಾಗ ಬಂದವನು ಶಿಷ್ಯನೆಂದು ತಿರಸ್ಕರಿಸಲಾಗದೆಂದು ಚೆನ್ನಬಸವಣ್ಣ ಒಂದು ವಚನದಲ್ಲಿ ತಿಳಿಸಿದ್ದಾನೆ. (ವ 453) ಸಕಲ ಕ್ಷೇತ್ರಗಳ ಫಲ, ಮೂಲ ಶಿವಸ್ಥಾನಗಳ ಫಲ, ಜಂಗಮ ತತ್ವದಲ್ಲಿಯೇ ಅಡಗಿದೆಯೆಂಬುದನ್ನು ಶರಣರು ಸಾರಿದ್ದಾರೆ. ಕಾಶಿ, ಕೇದಾರ, ಶ್ರೀಶೈಲ, ಹಂಪೆ ಮೊದಲಾದ ಸ್ಥಾನಗಳು ಜಂಗಮದ ಮುಂದೆ ಯಾವ ಫಲವನ್ನು ನೀಡುವವು ಎಂಬ ಭಾವನೆ ಶಿವಶರಣರದಾಗಿದ್ದಿತು. "ಹದಿನಾಲು ಲಕ್ಷದಮೇಲೆ ಐನೂಱು ದೇವರು ಕೂಡಿಕೊಂಡು ಒಬ್ಬ ಜಂಗಮಕ್ಕೆ ಮಾಡಿದ ಬೋನದ ಆರೋಗಣೆಯ ಮಾಡಲಱಿಯರು...ಎಂಬ ಚೆನ್ನಬಸವಣ್ಣನ ಮಾತಿನಲ್ಲಿ, ಜಂಗಮನ ಭವ್ಯತೆ, ಮಹಾನ್‌ಶಕ್ತಿ, ವಿರಾಟಸ್ವರೂಪಗಳ ಸ್ಪಷ್ಟಕಲ್ಪನೆಯಾಗುತ್ತದೆ. (ವ. 527). ಇಂತಹ ಜಂಗಮಕ್ಕೆ ಭಕ್ತನು ಏನೆಲ್ಲವನ್ನೂ ಅರ್ಪಿಸಬೇಕೆಂದು ಈ ಅರ್ಪಣೆ ದೈವಸಾಕ್ಷಾತ್ಕಾರಕ್ಕೆ ಲಿಂಗಾಂಗ ಸಾಮರಸ್ಯಕ್ಕೆ ಸಾಧನವೆಂದೂ ಶರಣರು ತಿಳಿಸಿದ್ದಾರೆ. ಈ ಜಂಗಮತತ್ವ ವ್ಯಕ್ತಿಗೆ ಪ್ರಾಪ್ತಿಸುವುದು ಜಾತಿಯಿಂದಲ್ಲ, ಜ್ಞಾನಸಾಧನೆಯಿಂದ, ಲೋಕಹಿತ ಕರ್ತವ್ಯದಿಂದ: ಅವನು ಸಮ್ಯಜ್ಞಾನ ಸಂಪನ್ನನಾಗಿದ್ದರೆ ಮಾತ್ರ ಪಾದೋದಕ ಪ್ರಸಾದ ಸ್ವೀಕರಿಸಲು ಯೋಗ್ಯನು. "ದುರ್ಮಾಗದಲ್ಲಿ ಆಚರಿಸುವಾತನಲ್ಲಿ ತ್ರಿಣೇತ್ರವಿದ್ದಡೆಯೂ ತೀರ್ಥಪ್ರಸಾದ. ಉಪದೇಶವ ಕೈಕೊಳ್ಳಲಾಗದು" (ಚ. ಬ. ವ. 625). ಕಲ್ಯಾಣದಲ್ಲಿ ಬಸವಣ್ಣನು, "ಲಕ್ಷದ ಮೇಲೆ ತೊಂಬತ್ತಾಱು ಸಾವಿರ ಜಂಗಮಕ್ಕೆ" ಪ್ರಸಾದದಿಂದ ತೃಪ್ತಿಪಡಿಸುತ್ತಿದ್ದನಂತೆ! ಎಂದ ಮೇಲೆ ಅಂದು ಅವರ ಆವಶ್ಯಕತೆ ಎಷ್ಟಿತ್ತೆಂಬುದು ವಿದಿತವಾಗುತ್ತದೆ. ಜಂಗಮ ಪ್ರಸಾದವು ವ್ಯಕ್ತಿಯಲ್ಲಿ ಧನಶುಚಿಯನ್ನುಂಟು ಮಾಡುತ್ತದೆ. ಧನದ ಮೇಲೆ ನಿರ್ಮೋಹವನ್ನುಂಟು ಮಾಡುತ್ತದೆ; ಭಾವಶುದ್ಧಿಯ–

ನ್ನೊದಗಿಸುತ್ತದೆ. ಜಂಗಮತ್ವವು ಜಾತಿಯಿಂದ ಬಂದುದಲ್ಲ: ಯಾವಜಾತಿಯವನಾದರೂ ಜಂಗಮನಾಗಬಹುದು— ಸಾಧನೆಯಿಂದ. ಗುರುವಿನಿಂದ ದೀಕ್ಷೆ ಪಡೆದವನೇ ನಂತರ ಜಂಗಮನಾಗಬಹುದು. ಆಗ ಆ ಜಂಗಮನು ಗುರುವಿನ ಮಠಕ್ಕೆ ಬಂದರೆ, ಗುರು ತನ್ನ ಶಿಷ್ಯನೆಂದು ಉದಾಸೀನ ಭಾವನೇ ತಾಳದೇ "**ಎನ್ನ ಪರಮಗುರುವೆಂದು**" ಪಾದಾರ್ಚನೆಯ ಮಾಡಬೇಕೆಂದು ಚೆನ್ನಬಸವಣ್ಣನವರು ಒಂದು ವಚನದಲ್ಲಿ ಹೇಳಿದ್ದಾರೆ. (ವ. 650). ಇದನ್ನು ನೋಡಿದರೆ **ಜಂಗಮತ್ವವು ಗುರುವಿನಿಂದ ಪೂಜೆಗೊಂಬುವಂತಹದು** ಎಂಬುದು ಸುಸ್ಪಷ್ಟ. ಗುರುವಿನಿಂದ ಪೂಜೆಗೊಂಬ ಜಂಗಮದ ಕಾರ್ಯವು ಎಷ್ಟು ಘನವಾದುದು ಮಹತ್ವದ್ದೂ ಎಂಬುದು ಇದರಿಂದ ವಿದಿತವಾಗುತ್ತದೆ. ಪಾದೋದಕ ಪ್ರಸಾದವನ್ನೀವ ಜಂಗಮನು ತನ್ನ ಉದರ ಪೋಷಣೆಗೆ ವೇಷವ ಧರಿಸಿ ಭಕ್ತರಿಂದ ಹಣಬೇಡಿದರೆ ಅವನು ಇತ್ತುದು ಪ್ರಸಾದವಲ್ಲ. ಪಾದೋದಕವಲ್ಲ. ಯಾಕೆಂದರೆ ಶಿವಶರಣರು ಜಂಗಮತತ್ವದಲ್ಲಿ ಅವನ ಸಾಮಾಜಿಕ ಕಾರ್ಯತತ್ಪರತೆಯನ್ನು ಎತ್ತಿ ಹೇಳಿದ್ದಾರೆ. ಅವನು ಕರುಣಾಮೂರ್ತಿಯಾಗಿ, ಅರಿವಿನ ಜ್ಞಾನಮೂರ್ತಿಯಾಗಿದ್ದು ಭಕ್ತೋದ್ಧಾರವೇ ಗುರಿಯಾಗಿರಬೇಕು. ಅವನು ನಿರಾಭಾರಿಯೂ. ನಿರ್ಲೇಪಿಯೂ ಆಗಿರುವದರಿಂದ ವೈರಾಗಿಯೇ ಆಗಿರುತ್ತಾನೆ. ಅವನು ಸರ್ವಜೀವಿಗಳಲ್ಲಿ ಅನುಕಂಪೆಯುಳ್ಳವನಾಗಿರುತ್ತಾನೆ. ಅವನ ಸತ್ಕ್ರಿಯೆಯೇ ಲಿಂಗವಾಗಿರುತ್ತದೆ. ಲಿಂಗದ ಸಾಕಾರ ಮೂರ್ತಿಯೇ ಅವನಾಗಿರುವದರಿಂದ, ಅವನ ತೃಪ್ತಿಯಲ್ಲಿ ಸಚರಾಚರ ತೃಪ್ತಿಯಿದೆಯೆಂದು ಶರಣರು ಹೇಳಿದ್ದಾರೆ. ಸಮಾಜ ಸೇವೆಯೇ ಜಂಗಮದ ಉಸಿರಾಗಿರುವಲ್ಲಿ ಆತನಿಗೆ ಬೇಡುವ ಮುನ್ನವೇ ನೀಡುವದು ಭಕ್ತನ ಕರ್ತವ್ಯವೆಂದು ವಿಧಿಸಲಾಗಿದೆ. ಜೀವನೋಪಾಯಕ್ಕೆ ಅಂಜಿ ಆಶೆಯ ಪಾಶದಲ್ಲಿ ಸಿಲುಕಿ. ಬೇಡುವದು ಜಂಗಮದ ಲಕ್ಷಣವಲ್ಲ. ನಿರ್ವಂಚನೆಯಿಂದ ಲೋಕಹಿತಕ್ಕಾಗಿ. ಶಿವಕಾರ್ಯಕ್ಕಾಗಿ ಸೇವೆಯನ್ನೇ. ಮುಖ್ಯ ಕಾಯಕವನ್ನಾಗಿ ಸ್ವೀಕರಿಸುವದರಿಂದ. ಎಲ್ಲರೂ ಆತನನ್ನು ಸಾಕ್ಷಾತ್ ಶಿವನೆಂದೇ ಗೌರವಿಸಬೇಕೆಂಬುದು ಬಸವಾದಿ ಶಿವಶರಣರ ಮತ. ಕಾಯವುಳ್ಳನಕ್ಕ ಜಂಗಮನು ಕಾಯಕ ಮಾಡಿಯೇ ಜೀವಿಸಬೇಕು. ಜಂಗಮನನ್ನು ಗುರುವಿನ ಗುರು (ಪರಮ ಗುರು) ಎಂದು ತಿಳಿಯುವದರಿಂದ, ಅವನು ಕೆಲವು ವೇಳೆ ಗುರುವಿನಕರ್ತವ್ಯಗಳನ್ನೂ ನೆರವೇರಿಸುತ್ತಾನೆ. ಭಕ್ತನು ನಿತ್ಯವೂ ಕಾಯಕ ದಾಸೋಹ ನಡೆಸುತ್ತಿರುವನೋ ಇಲ್ಲವೋ ಎಂಬುದನ್ನೂ ಸದಾ ನಿತ್ಯಾಚರಣೆಯಲ್ಲಿ ತೊಡಗಿರುವನೋ ಇಲ್ಲವೋ ಎಂಬುದನ್ನೂ ಪರೀಕ್ಷಿಸುವದು ಅವನ ಕಾಯಕ. ಅವನ ಆಚರಣೆಯ ಓರೆಕೋರೆಗಳನ್ನು ಪರೀಕ್ಷಿಸಿ ತಿದ್ದುವದೂ ಅವನ ಕೆಲಸ. ಜಂಗಮ ತೃಪ್ತಿಯಿಂದ ಲಿಂಗತೃಪ್ತಿಯಾಗುತ್ತದೆ. ಅರಿವಿನ ಮೂರ್ತಿ ಸಾಕಾರಲಿಂಗವೇ ಜಂಗಮ ಎಂಬುದು ಶರಣರ ಭಾವನೆಯಾಗಿತ್ತು. ಜ್ಞಾನಿಯು ಅಳಿದರೂ ಅಮರ. ಆದುದರಿಂದ ಜಂಗಮಕ್ಕೆ ಅಳಿವಿಲ್ಲ ಎಂದಿದ್ದಾರೆ ಬಸವಣ್ಣನವರು.

ಭಕ್ತನ ಮಠ (ಮನೆ)ದಲ್ಲಿ ಯಾವಾಗಲೂ ದಾಸೋಹ ನಡೆಯಲೇಬೇಕು. ಪ್ರತಿಯೊಬ್ಬ ವೀರಶೈವನಿಗೂ ಕಾಯಕ. ದಾಸೋಹಗಳು ಕಡ್ಡಾಯವಾಗಿ ಇರಲೇಬೇಕು. ಆದರೆ ಕೆಲವು ವೇಳೆ ಎಂದರೆ ಶರೀರವು ರೋಗಗ್ರಸ್ತವಾದರೆ, ಇಲ್ಲವೆ ಭಕ್ತನು ನಿರ್ಧನಿಕನಾದರೆ ಜಂಗಮನು ತನ್ನ ಕೈಯ ಧನವನ್ನು ವೆಚ್ಚಿಸಿ, ದಾಸೋಹ ಮಾಡಿಸಿ, ಆ ಭಕ್ತನ ಕೂಡಿಕೊಂಡು, ಲಿಂಗಾರ್ಚನೆಯ ಮಾಡಿ, ಅವನನ್ನು ದಾಸೋಹಕ್ಕೆ ನಿಲಿಸಿ, ತಾನು ಕರ್ತನಾಗಿ ನಿಂದು ಪರಿಣಾಮಿಸಬಲ್ಲಡೆ, ಜಂಗಮವೆಂಬೆ ಎಂದು ಚನ್ನಬಸವಣ್ಣನವರು ಒಂದು ವಚನದಲ್ಲಿ (ವ. 717) ಹೇಳಿದ್ದಾರೆ. 'ಷಟ್ಸ್ಥಲಶಾಸ್ತ್ರ ಪ್ರತಿಪಾದನಾಚಾರ್ಯ' ನೆಂದೆನಿಸಿದ ಚನ್ನಬಸವಣ್ಣನು, ಈ ಜಂಗಮ ತತ್ವದ ಬಗೆಗೆ ಇನ್ನೂ ಹಲವು ಮಾತುಗಳನ್ನಾಡಿದ್ದಾನೆ. ಇನ್ನೊಂದು ವಚನ ಹೀಗಿದೆ : "ಗತಿಪದಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ; ಜೀವನೋಪಾಯಕ್ಕೆ ಬೇಡುವಾತ ಜಂಗಮನಲ್ಲ: ಗತಿಪದ ಮುಕ್ತಿಸೂತಕವಿರಹಿತ ಭಕ್ತ: ಆಶಾಪಾಶವಿರಹಿತ ಜಂಗಮ: ಮಾಡುವಡೆ ಭಕ್ತ ಮಾಟದೊಳಗಿಲ್ಲದಿರಬೇಕು: ಮಾಡಿಸಿಕೊಂಬಡೆ ಜಂಗಮ ಕೊಂಬುದರೊಳಗಿಲ್ಲದಿರಬೇಕು. ದೇಹಗುಣವಿಲ್ಲದಾತ ಭಕ್ತ: **ಜೀವಗುಣವಿಲ್ಲದಾತ ಜಂಗಮ;** ಉಭಯಕುಳದ ಸಂದಳಿದಡೆ ಭಕ್ತ ಜಂಗಮವೆಂಬೆ. ಕೂಡಲ ಚೆನ್ನಸಂಗಮದೇವಾ" (ವಚನ 718). "ಸುಳಿವ ಜಂಗಮ. ಕಾಲಿಲ್ಲದೆ ಸುಳಿಯಬೇಕು; ಭಕ್ತನಾಗಿ ಒಕ್ಕುಮಿಕ್ಕುದನಿಕ್ಕಿ ಸಲಹಬೇಕು" (ವ 726): "ಗುರು ನಷ್ಟವಾದಡೆ ಜಂಗಮವೆ ಗುರುವಲ್ಲದೆ ಭಕ್ತ ಗುರುವಾಗಲಾರದು" "ಗುರುವಿನಗುರು ಪರಮಗುರು ಜಂಗಮವೆಂದೆನಿಸಿಕೊಂಡ ಬಳಿಕ ಗುರುವಾಗಿ ಉಪದೇಶವ ಮಾಡಲಾಗದು" (ವ. 990): "ಕೇಶ ಕಾಷಾಯಾಂಬರವನಿಕ್ಕಿದಡೇನು? ವಿಭೂತಿ ರುದ್ರಾಕ್ಷಿಯ ಮುಕುಟವ ಧರಿಸಿದಡೇನು? ಸಾಕಾರದಲ್ಲಿ ಸನ್ಮತರಲ್ಲ, ನಿರಾಕಾರದಲ್ಲಿ ನಿರತರಲ್ಲ: ಪರಮಾರ್ಥದಲ್ಲಿ ಪರಿಣಾಮಿಗಳಲ್ಲ: ಇದು ಕಾರಣ ಕೂಡಲ ಚೆನ್ನಸಂಗಮದೇವಾ. ತುಡುಗಾಗಲಿ, ಬೋಳಾಗಲಿ, ಜಡೆಯಾಗಲಿ, **ಅರುವುಳ್ಳಡೆ ಜಂಗಮ**" (ವ. 991): "ಸಂಸಾರಚ್ಛೇದನವುಳ್ಳಡೆ ಜಂಗಮಲಿಂಗವಹುದು" (ವಚನ 994): "ಜಂಗಮವೆಂತಹನೆಂದಡೆ ನಿರ್ಲೇಪಕ, ನಿರುಪಾಧಿಕ, ನಿರ್ವಿರೋಧಕ, ನಿರಾಶ್ರಿತ, ನಿಷ್ಕಾರಣ, ನಿರ್ಲಂಪಟ—ಈ ಷಡ್ಗುಣಭರಿತನಾದಡೆ ನಿರವಯ ಜಂಗಮ" (ವ. 995)—ಈ ಎಲ್ಲ ಜಂಗಮ ಲಕ್ಷಣಗಳನ್ನು ನೋಡಿದರೆ, ವಚನಕಾರರು ಜಂಗಮ ತತ್ವದ ಬಗೆಗೆ ಎಂತಹ ಆದರ್ಶಗಳನ್ನಿಟ್ಟುಕೊಂಡಿದ್ದರೆಂಬುದು ಸುಸ್ಪಷ್ಟ. ಅವನು ಸರ್ವಸಂಗ ಪರಿತ್ಯಾಗಿಯಾಗಿ, ವಿಶ್ವಕುಟುಂಬಿ: ಜೀವವೇ ಶಿವ, ಶಿವನೇ ಜೀವ ಎಂಬ ಅಭೇದ ಭಾವದಿಂದಿದ್ದವ: ಒಂದು ಊರವನಾಗದೆ ಎಲ್ಲ ಊರವನಾಗಿ, ನಿರ್ಲೇಪನಾಗಿ, ಹಲವು ಕಾಲುಗಳುಳ್ಳವನಾಗಿ ಸಂಚರಿಸಿ, ಲೋಕೋದ್ಧಾರ, ಭಕ್ತೋದ್ಧಾರ ಮಾಡುತ್ತ ಅನುಭಾವವೇ ಗುರಿಯಾಗಿ ಸಂಚರಿಸುವ ಮಹಾಜ್ಞಾನಿಯೀತ ಎಂಬುದು ವಿದಿತವಾಗುತ್ತದೆ. ಗುರು–ಜಂಗಮರು ಈ ರೀತಿ ಕಾರ್ಯ ಭೇದದಿಂದ ಭಿನ್ನರಾಗಿ

ಕಂಗೊಳಿಸುತ್ತಾರೆ. ಗುರುವಿನ ಕಾರ್ಯ ಜಂಗಮಕಾರ್ಯಗಳು ಭಿನ್ನವೆಂದು ತೋರಿದರೂ ಪರಸ್ಪರರಲ್ಲಿ ಕೆಲವು ಬಾರಿ ಸಮಾನ ಗುಣಗಳು ಕಂಡು ಬಂದಾಗ ವಿವಾದಕ್ಕೆಡೆಮಾಡಿಕೊಟ್ಟಿದೆ.

೫

ನಿರ್ಲೇಪನೂ, ನಿರಾಭಾರಿಯೂ, ಚರಮೂರ್ತಿಯೂ ಆದ ಜಂಗಮನು ಲೋಕೋದ್ಧಾರ, ಭಕ್ತೋದ್ಧಾರಕ್ಕಂದೇ ಕಂಕಣಬದ್ಧನಾಗಿರುವಾಗ—ಎಂದರೆ ಅವನು 'ಸಮಾಜ ಸೇವೆಯೇ ಕಾಯಕವೆಂದು ನಡೆವಾಗ. ಅವನಿಗೆ ಭಕ್ತನು ನೀಡುವುದು ನ್ಯಾಯವೇ. ಕಾಯಕವು ಸತ್ಯವೂ, ಶುದ್ಧವೂ, ಶ್ರಮದಿಂದ ಕೂಡಿದುದೂ ಆಗಿರಬೇಕೆಂಬುದನ್ನು ಶರಣರು ಹೇಳಿರುವಾಗ ಅಲ್ಲಿ ಉದರಪೋಷಣೆ, ವೇಷದ ಡಂಭಕತನ, ಮೋಸ, ವಂಚನೆ ಕಳವುಗಳಿಗೆ ಅವಕಾಶವಿಲ್ಲ. ಆದುದರಿಂದ ಜಂಗಮನು ಬೇಡುವುದನ್ನೇ ಕಾಯಕವನ್ನಾಗಿಸಿಕೊಂಡು ಉದರವ ಪೋಷಿಸಲಿಕ್ಕಾಗದು. "ಜಂಗಮದಜೀವ, ಬೇಡಿದಲ್ಲಿ ಹೋಯಿತ್ತು": "ಜಂಗಮಧನವೆಂಬನ ಬೇಡಿ ಕಿಡಿದಾಯಿತ್ತು" (ವಚನ 1099, 1104): ಜಂಗಮತತ್ವ, ಜಂಗಮದ ಲಕ್ಷಣ—ಈ ಎಲ್ಲವುಗಳನ್ನು ಚಾಮರಸನು 'ಪ್ರಭುಲಿಂಗಲೀಲೆಯಲ್ಲಿ' ವಿವರಿಸಿದ್ದಾನೆ. 'ಭಕ್ತನು ಭೃತ್ಯನಾಗಿ ವರ್ತಿಸಿದರೆ ಜಂಗಮನು ಕರ್ತನಾಗಿರಬೇಕು' ಜಂಗಮನ ನಡೆ. ಕರ್ತನ ನಡೆಯಾಗಿರುವುದರಿಂದ. ಗುರುಸೇವೆ, ಲಿಂಗಪೂಜೆಗಿಂತ ಜಂಗಮನಸೇವೆ ಅಧಿಕವೆಂದು ಹೇಳಲಾಗಿದೆ. (ಚೆ.ಬ.ವ. 1142): ನಿತ್ಯವೆಂಬ ಭಕ್ತನಮನೆಗೆ "ಘನ ಚೈತನ್ಯ" ವೆಂಬ ಜಂಗಮ ಬಂದಡೆ, ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿದಡೆ, ಆ ಪಾದೋದಕವೆ ಮಹಾಪಾದೋದಕವಯ್ಯಾ. "ಪಥವನರಿಯದೆ ಮಂಡೆಯ ಬೋಳಿಸಿ ಕೊಂಡಾತ ಜಂಗಮವಲ್ಲ: ಹಮ್ಮು, ಬಿಮ್ಮು, ಗಮನ ನಾಸ್ತಿಯಾದಡೆ ಜಂಗಮ". ಅಲ್ಲದೆ "ಬಿಳಿಯ ಬೋಳುಗಳೆಲ್ಲಾ ಜಂಗಮವೇ? ಜಡಜೀವಿಗಳೆಲ್ಲಾ ಜಂಗಮವೇ? ವೇಷಧಾರಿಗಳೆಲ್ಲ ಜಂಗಮವೇ? ಇನ್ನಾವುದು ಜಂಗಮವೆಂದಡೆ : ನಿರ್ಗಮನವೆ ಜಂಗಮ: ನಿಸ್ಸೀಮವೇ ಜಂಗಮ : ನಿರ್ದೇಹಿಯೇ ಜಂಗಮ : ನಿಜೈಕ್ಯವೆ ಜಂಗಮ. ಇಂಥ ಜಂಗಮದ ಸುಳುಹ ಕಾಣದೆ: ಕೂಡಲ ಚೆನ್ನಸಂಗಮದೇವ ತಾನೆ ಜಂಗಮವಾದ" (ಚೆ.ಬ.ವ. 1230) ಎಂದಿದ್ದಾರೆ. ಹೀಗೆ ಇರದೆ, "ಕಂಡಕಂಡವರ ಮನೆಯ ಹೊಕ್ಕು ಅರಸಿ, ವಿಷಯಕ್ಕಾಗಿ ಹುಸಿವೇಷವ ತೊಟ್ಟು, ಗಸಣಿಗೊಳಗಾವರೆ" ಎನಗೆ ಜಂಗಮವೇ ಬೇಡವೆಂದಿದ್ದಾರೆ ಅರಿವಿನ ಮಾರಿ ತಂದೆಗಳು. (ಅರಿವಿನ ಮಾರಿತಂದೆಗಳ ವಚನ 670. ಸಕಲ ಪುರಾತನರ ವಚನಗಳು ಭಾಗ-1) ಗುರುವಿನಲ್ಲಿ ಗುಣವ, ಲಿಂಗದಲ್ಲಿ ಲಕ್ಷಣವನರಸಿದರೆ "ಜಂಗಮದಲ್ಲಿ ವಿರಕ್ತಿಯನರಸಬೇಕು" ಎಂದು ಇನ್ನೊಂದು ವಚನ (ವ 673.) ದಲ್ಲಿ ಅವರೇ ಹೇಳಿರುವುದರಿಂದ, ಜಂಗಮಕ್ಕೂ ವಿರಕ್ತಿಗೂ ಸಂಬಂಧವಿದೆಯೆಂಬುದು ಸುಸ್ಪಷ್ಟ. ಚೆನ್ನಬಸವಪುರಾಣದಲ್ಲಿ ಜಂಗಮನ ಲಕ್ಷಣವನ್ನು ಇಂತು ಹೇಳಲಾಗಿದೆ : "ಜಂಗಮವೆನಲ್ ಜನನಮರಣವರ್ಜಿತಂ, ಜಂಗಮವೆನಲ್ ನಾವಬಂದು ಕಳೆಸಂ-

ಯುತಂ. ಜಂಗಮವೆನಲ್ ಸ್ವರ್ಗಮರ್ತ್ಯ ಪಾತಾಳಾದಿಸಕಲಭುವನಾಧಾರನು: ಜಂಗಮವೆನಲ್ ಸಚ್ಚಿದಾನಂದರೂಪಕಂ. ಜಂಗಮವೆನಲ್ ತ್ರಿವಿಧಮೂರ್ತಿಸ್ವರೂಪಕಂ ಜಂಗಮವೆನಲ್ ತ್ರಿವಿಧತತ್ವಾತ್ಮಕಂ ಸಿದ್ಧರಾಮೇಶ ಕೇಳೆಂದನು" (59–41). ಈ ಮಾತನ್ನು ಸಿದ್ಧರಾಮೇಶ್ವರನಿಗೆ ಚನ್ನಬಸವಣ್ಣನೇ ಹೇಳಿದನೆಂದು ವಿವರಿಸಲಾಗಿದೆ. ಜಂಗಮತತ್ವದ ಬಗೆಗೆ ಇಲ್ಲಿಯೂ ಎಂತಹ ಉನ್ನತಭಾವನೆ ಇದೆಯೆಂಬುದು ಗೋಚರಿಸುತ್ತದೆ. ಜನನ ಮರಣಗಳನ್ನು ಗೆದ್ದವನೂ ನಾದಬಿಂದು ಕಲಾಯುತನೂ, ಸ್ವರ್ಗಮರ್ತ್ಯ ಪಾತಾಳಾದಿ ಸಕಲಭುವನಕ್ಕೆ ಆಧಾರಸ್ವರೂಪನೂ, ಸಚ್ಚಿದಾನಂದ ಸ್ವರೂಪನೂ..... .. ಎಂದು ವರ್ಣಿಸಿದ ನುಡಿಗಳಲ್ಲಿ ಶಿವನಿಗೇ ಅನ್ವಯವಾಗುವ ನುಡಿಗಳಿವೆ. ಲಿಂಗವು ಒಂದು ಸ್ಥಿರಮೂರ್ತಿಯಾದರೆ, ಜಂಗಮವು ಒಂದು ಚರಮೂರ್ತಿ: ಒಂದು ನಿರಾಕಾರವಾದರೆ ಇನ್ನೊಂದು ಸಾಕಾರಮೂರ್ತಿ; ಸಾಕಾರ ಶಿವನೇ ಜಂಗಮ: ಅಳಿವಿಲ್ಲದ ಮೂರ್ತಿ. ವ್ಯಕ್ತಿಯು, ತನುವಿನ ಅಹಂಕಾರನಾಶಕ್ಕೆ ಗುರುಸೇವೆ. ಮನದ ಅಹಂಕಾರನಾಶಕ್ಕೆ ಲಿಂಗಾರ್ಚನೆ. ಲೋಭನಿವಾರಣೆಗೆ ಜಂಗಮ ದಾಸೋಹ ಕಡ್ಡಾಯವಾಗಿವೆ. ಸಂಗ್ರಹ ಪ್ರವೃತ್ತಿನಾಶಕ್ಕೂ ಜಂಗಮಸೇವೆಯನ್ನು ಶರಣರು ಕಡ್ಡಾಯಗೊಳಿಸಿದ್ದಾರೆ. ಮೂರರಲ್ಲೂ ಅಹಂಕಾರ ನಾಶವೇ ಮುಖ್ಯ. ಇದೇ ಈ ತ್ರಿವಿಧ ಭಕ್ತಿಯ ಗುರಿ. ಜಂಗಮನು ಒಂದೆಡೆ ಇರದೆ, ದುಃಖಗಳಿದ್ದಲ್ಲಿಗೆ ತಾನೇ ಹೋಗಿ. ಅವರ ಮನದ ಕಳವಳ ಇಲ್ಲವೇ ಕಾವಳವ ಕಳೆಯಬೇಕು. ಇದು ಈ ತತ್ವದ ಮುಖ್ಯಗುರಿ. ವ್ಯಕ್ತಿಯನ್ನು ಅಧ್ಯಾತ್ಮದ ಪರಮೌಲ್ಯಗಳತ್ತ ಗಮನ ಹರಿಸುವಂತೆ ನೋಡಿಕೊಳ್ಳಬೇಕು. ಆತನು ಈಮೇಲೆ ವಿವರಿಸಿದ ತತ್ವಗಳಿಗೆ ಜೀವಂತ ಪ್ರತೀಕ. ಅರಿವು, ಆಚಾರ. ಕ್ರಿಯೆ ಗಟ್ಟಿಗೊಂಡ ಮೂರ್ತಿ. "ಕ್ರೀಯ ಅವವನಜಿದಾತ ಜಂಗಮವೆಂಬೆ": 'ಆಚಾರಕ್ಕೂ ಅರಿವಿಂಗೂ ಪರಿಪುಷ್ಟವಿಲ್ಲವಾಗಿ ಆಚಾರವೇ ಕುಲ, ಅನಾಚಾರವೇ ಹೊಲೆ 'ಎಂದಿದ್ದಾನೆ ಏಲೇಶ್ವರದ ಕೇತಯ್ಯ—(ಸಕಲ ಪುರಾತನ ವಚನಗಳು ಭಾಗ–1, ವಚನ 1645). ತನ್ನ ಸಾಧನೆಯಿಂದ, ಅರಿವಿನಿಂದ, ಅವನು ಮಲತ್ರಯಗಳನ್ನು ನಾಶಪಡಿಸಿ ಕೊಂಡವನಾಗಿರುತ್ತಾನೆ. ಭಕ್ತನಾದರೂ ಜಂಗಮಕ್ಕೆ ಧನ ದಾನ ಮಾಡುವಲ್ಲಿ. ದಾನಮಾಡಿದ ದ್ರವ್ಯಕ್ಕೆ ಕೇಡೊದಗಬಾರದೂ ಎಂದು ಚಿಂತಿಸಬೇಕು. ಜಂಗಮಕ್ಕೆ ಮಾಡಿದ ಧನ ಸದ್ವಿನಿಯೋಗವಾದಲ್ಲಿ ಮಾತ್ರ ಅದಕ್ಕೆ ಕೇಡೊದಗದು. "ಕೊಟ್ಟಿದು ಕೆಟ್ಟಿತ್ತು" ಎಂಬ ಭಾವ ಬಂದರೆ ಭಕ್ತನು ಮಾಡಿದ್ದು. ಜಂಗಮಕೊಂಡದ್ದು —ಎಲ್ಲವೂ ವ್ಯರ್ಥ ಎಂಬ ಭಾವ ಶಿವಶರಣರದು. ಸತ್ತು. ಚಿತ್ತು, ಆನಂದ ಸ್ವರೂಪಗಳಲ್ಲಿ ಆನಂದ ಸ್ವರೂಪವೇ ಜಂಗಮ: ಚಿತ್ ಸ್ವರೂಪವೇ ಲಿಂಗ, ಸತ್ ಸ್ವರೂಪವೇ ಗುರು. ಹೀಗೆ ಸತ್, ಚಿತ್, ಆನಂದ ಸ್ವರೂಪಿಯೇ ಶಿವ ಆ ಶಿವನ ಮೂರು ಶಕ್ತಿಗಳೆಂದು ಗುರುಲಿಂಗ ಜಂಗಮಗಳನ್ನು ಪರಿಗಣಿಸಲಾಗಿದೆ. "ಲಿಂಗವು ಜಂಗಮದ ಕಾಯುವ ತೊಟ್ಟುಕೊಂಡು ಸುಳಿವ ಶಕ್ತಿ". ಲಿಂಗವಿಪ್ಪ ಸಜ್ಜೆ ಜಂಗಮದ ಪ್ರಾಣ; ಎಂಬಮೇಲೆ ಜಂಗಮವನ್ನು ಜಡಮನುಜನೆಂದು ಕರೆಯಲಾಗದು. ಆತ ದಿವ್ಯಮಾನವ.

ಆಯ್ದಕ್ಕಿ ಮಾರಯ್ಯಗಳು ಹೇಳುವ ಈ ವಚನವನ್ನು ಅವಲೋಕಿಸಿರಿ :

ಶಿವನೆ ಶಿವಭಕ್ತನಾಗಿ ಬಂದ **ಲೋಕ ಹಿತಾರ್ಥ;**
ಶಿವನೆ ಶಿವರಹಸ್ಯವ ಬೋಧಿಸಲೆಂದು **ಗುರುವಾಗಿ** ಬಂದು,
ಲಿಂಗದ ಕಳೆಯನರುಹಿದ **ಲೋಕ ಹಿತಾರ್ಥ;**
ಶಿವನೆ **ಚರವೇಷದಲ್ಲಿ** ಬಂದು ಅಂಗವೊಪಲು ಮನವೆ ಕಡೆಯಾದ
ಪದಾರ್ಥ
ದಾಸೋಹದಲ್ಲಿ ಸವೆಯಲೆಂದು ಬಂದ **ಲೋಕ ಹಿತಾರ್ಥ:**
ಶಿವನೆ ಮಂತ್ರ ತಂತ್ರ ಯಂತ್ರೋಪಕರಣವಾಗಿ ಬಂದ **ಲೋಕ ಹಿತಾರ್ಥ:**
ಇದರಂಗಸಂಗವ ಲಿಂಗಸಂಗಿಗಳು ಬಲ್ಲರು;
ಅನಂಗ ಸಂಗಿಗಳೆತ್ತಬಲ್ಲರಯ್ಯಾ.
ಅಮಲೇಶ್ವರಲಿಂಗದನುವನರಿದ ಸಂಗನಬಸವಣ್ಣಾ ?

(ಸಕಲಪುರಾತನರ ವಚನಗಳ ಭಾಗ 3 ಪುಟ 16 ಸಂಪಾದಕರು : ಡಾ. ಎಂ. ಎಸ್. ಸುಂಕಾಪುರ. ಎಂ.ಎ: ಪಿಎಚ್.ಡಿ. 1978). ಈ ವಚನ ಶರಣರು ತಿಳಿದ ಭಕ್ತ. ಗುರು. ಜಂಗಮ ಇತ್ಯಾದಿಗಳ ಬಗೆಗೆ ಸ್ಪಷ್ಟ ತಿಳಿವನ್ನು ನೀಡುತ್ತದೆ. ಭಕ್ತ. ಗುರು. ಜಂಗಮ, ಮಂತ್ರ—ಇವೆಲ್ಲ **ಶಿವನ ವಿವಿಧ ರೂಪಗಳು.** ಇವೆಲ್ಲ ತಲೆದೋರಿದುದು **'ಲೋಕಹಿತಾರ್ಥಕ್ಕಾಗಿ. ಆ ಲೋಕ ಹಿತವನ್ನು ಕಡೆಗಣಿಸಿ ನಡೆವುದೇ ಅಧರ್ಮ**— ಶರಣರ ಭಾವನೆಯಲ್ಲಿ. ಲೋಕದಲ್ಲಿ ಈಳೆ. ನಿಂಬೆ. ಮಾವು. ಮೊದಲಿಗಳು ಹುಳಿ ಇದ್ದು ಬೇರೆ ಬೇರೆ ಪ್ರಯೋಜನಕ್ಕೆ ಬರುವಂತೆ. ಮರುಗ. ಮಲ್ಲಿಗೆ. ಚಂಪಕ ನಾನಾ ಪರಿಮಳ ಪಡೆದಿರುವಂತೆ. ಶಿವನೇ ನಾನಾ ರೂಪಗಳನ್ನು ಹೊಂದಿ. ಬೇರೆ ಬೇರೆ ಕರ್ತವ್ಯ ನಿರ್ವಹಿಸುವುದೂ ಲೋಕಹಿತಾರ್ಥಕ್ಕಾಗಿಯೇ. ಎಂದಮೇಲೆ ಮೇಲು ಕೀಳು ಆಗುವುದಾದರೂ ಹೇಗೆ ? ಲಭ್ಯತೆಯನ್ನು ಗಮನದಲ್ಲಿರಿಸಿಕೊಂಡು ಮನುಷ್ಯನು ವಸ್ತುಗಳಿಗೆ ಬೆಲೆ ಕಟ್ಟಿದರೆ ಅದು ಆ ವಸ್ತುವಿನ ನಿಜವಾದ ಬೆಲೆಯೇ? ಹಾಗೆ ಪ್ರಪಂಚದಲ್ಲಿ ಭಕ್ತ. ಗುರು. ಲಿಂಗ. ಚರ—ಇವೆಲ್ಲ ತಮ್ಮ ತಮ್ಮ ಕರ್ತವ್ಯ ನೆರವೇರಿಸಬೇಕಾದವರು: ಪ್ರಪಂಚದಲ್ಲಿ ಪ್ರಯೋಜನ ಪಡೆದವರು. ಎಂದಮೇಲೆ ಇಲ್ಲಿ ಮೇಲು ಕೀಳು ಎಂಬ ಭಾವವೇತ ತಲೆದೋರದು. "ವರ್ತನೆ ತಪ್ಪಿದವರೆ. ಭಕ್ತಿ, ವಿರಕ್ತಿ, ಮೋಕ್ಷತ್ವಗಳು ಯಾರಿಗೂ ಲಭ್ಯವಿಲ್ಲ"ವೆಂಬ ಎಚ್ಚರಿಕೆಯನ್ನು ಕಾಯಕದ ಮುಕ್ತನಾಥಯ್ಯಗಳು ಒಂದು ವಚನದಲ್ಲಿ (ವಚನ 7. ಸ.ಪು.ವ. ಭಾಗ–3) ತಿಳಿಸಿದುದನ್ನು ನೋಡಿದರೆ ಇವರೆಲ್ಲರಿಗೂ "**ವರ್ತನೆ**" ಮುಖ್ಯವಾದುದು ಎಂಬುದು ಗೊತ್ತಾಗುತ್ತದೆ.

ಮುಗ್ಧ. ಮೂಢ. ಹಾಳ—ಮೂಳರನ್ನು ಅನಾಚಾರಿಗಳನ್ನು ಶರಣರು ಗುರುವೆಂದು. ಚರವೆಂದು ಕರೆಯುವಿಲ್ಲ. ಮಂಚದ ಪರಿಹರಿಸಿಕೊಂಡು. ಆಸೆಗಳನ್ನು

ಗಳೆಂದು, ತನ್ನಂತೆಯೇ ಇತರರನ್ನೂ ಉದ್ಧರಿಸಲು ಶಕ್ತರಾದವರನ್ನು ಗುರುಗಳೆಂದು, ಚರರೆಂದು ಕರೆದಿದ್ದಾರೆ. ಸರ್ವಸಂಗ ಪರಿತ್ಯಾಗಮಾಡಿ. ಪರಮವಿರಕ್ತರೆಂದು ಖ್ಯಾತಿಗಳಿಸಿ. ಲೋಕ ಕಲ್ಯಾಣವನ್ನೇ ಕಾಯಕವನ್ನಾಗಿರಿಸಿಕೊಂಡ ಜಂಗಮನನ್ನು ಸಾಮಾನ್ಯ ಮಾನವನೆಂದು ಭಾವಿಸಲಾರದು. "ಗುರುವಾದಡೆ ಭೃತ್ಯರ ಚಿತ್ತವನರಿಯ ಬೇಕು: ಲಿಂಗವಾದಡೆ ಅರ್ಚಕನ ಚಿತ್ತದಲ್ಲಿ ಅಚ್ಚೊತ್ತಿದಂತಿರಬೇಕು: ಜಂಗಮವಾದಡೆ ಉತ್ಪತ್ತಿ ಸ್ಥಿತಿ ಲಯದ ಗೊತ್ತುಮುಟ್ಟದೆ ನಿಶ್ಚಿಂತನಾಗಿರಬೇಕು" ಎಂದಿದ್ದಾನೆ—ಶರಣ ಬೊಕ್ಕಸದ ಚಿಕ್ಕಣ್ಣ. ಈ ಮಾತಿನಿಂದಲೂ ಜಂಗಮನೆಂದರೆ ಸಾಮಾನ್ಯ ಮಾನವನಲ್ಲ ವೆಂಬ ಭಾವ ಸುಸ್ಪಷ್ಟವಿದೆ. (ಸ.ಪು.ವ-3, ಪುಟ 166). ಭಕ್ತೋದ್ಧಾರದಲ್ಲಿ ಗುರು—ಜಂಗಮರಿರ್ವರೂ ತಂದೆ—ತಾಯಿಗಳಿದ್ದಂತೆ. ಇವರ ಸಂಬಂಧದಿಂದಲೇ ಲಿಂಗ ಸಾಹಿತ್ಯ ದೊರೆವುದೆಂದು ಮರುಳು ಶಂಕರದೇವರ ಅಭಿಮತ (ಮ.ಶಂ.ದೇ. ವ 2-ಸ.ಪು.ವ-ಭಾಗ 3. ವ. 386). ಸಾತ್ವಿಕ ಸದ್ಗುರು ಲಭ್ಯವಾದಮೇಲೆಯೇ ವ್ಯಕ್ತಿಗೆ ಲಿಂಗ ಜಂಗಮಗಳ ಅರಿವು. ಎಂದಮೇಲೆ ಗುರುವಿನ ಮಹತ್ವವನ್ನೂ ಕಡೆಗಣಿಸಲಿಕ್ಕಾಗದು. ವ್ಯಕ್ತಿಯನ್ನು ಶಿವಾನುಭಾವದತ್ತ ರೂಪಿಸುವಲ್ಲಿ ಗುರು— ಜಂಗಮರ ಪಾತ್ರವೂ ಅತಿ ಹಿರಿದು. "ಆವ ಕಾಯಕವಾದಡೂ ಸ್ವಕಾಯಕವ ಮಾಡಿ. ಗುರು ಲಿಂಗ ಜಂಗಮದ ಮುಂದಿಟ್ಟು. ಒಕ್ಕುದ ಹಾರೈಸಿ. ಮಿಕ್ಕುದ ಕೈಕೊಂಡು. ವ್ಯಾಧಿ ಬಂದಡೆ ನರಳು. ಬೇನೆ ಬಂದಡೆ ಒರಲು, ಜೀವ ಹೋದಡೆ ಸಾಯಿ"—ಎಂದು ಒಬ್ಬ ವಚನಕಾರ್ತಿ ಹೇಳಿದ್ದಾಳೆ. (ಸ.ಪು.ವ. ಭಾಗ-3 ಪುಟ 265). ಎಲ್ಲವೂ ಗುರು ಲಿಂಗ—ಜಂಗಮ ಸಾಕ್ಷಿಯಾಗಿಯೇ ನಡೆಯಬೇಕೆಂಬ ಭಾವವು ಇಲ್ಲಿ ವ್ಯಕ್ತವಾಗಿದೆ. ಇದರಿಂದ ಗುರು—ಜಂಗಮರ ಮಹತ್ವದ ಅರಿವು ನಮಗಾಗುತ್ತದೆ.

ಮೈಲಾರದ ಬಸವಲಿಂಗ ಶರಣರು 'ಜಂಗಮ'ವನ್ನು ಹೀಗೆ ವಿವರಿಸಿದ್ದಾರೆ :

> "ಮುನ್ನ **ಅನಾದಿಯ ಪರಾತ್ಪರನಿರಂಜನ ಶರಣ** ತನ್ನ ಹೃತ್ಕಮಲದ
> ಪರಂಜ್ಯೋತಿ ಲಿಂಗವನು, ಭಿನ್ನವಿಲ್ಲದೆ ವಾಮಕರಕುಂಜದೊಳ್ ಪಿಡಿದು
> **ತನ್ನ ತಾನರ್ಚಿಸುತಿಹ, ಚಿನ್ನಸತ್ಕ್ರಿಯೆಯ ಸಮ್ಯಕಜ್ಞಾನ ಜಂಗಮವ**
> ಬನ್ನಪಂಗೈದು, ಬಜಯುಂಗೈಸಿಕೊಂಡೊಯ್ದು, ತನ್ನ ಇಷ್ಟಲಿಂಗವೆಂದು
> ಅನವರತ ಭಜಿಪ ಸಂಪನ್ನ ಸದ್ಭಕ್ತನಧಿಕಂ:
> ವೇದಶಾಸ್ತ್ರಾಗಮತೀತ ಜಂಗಮವು: ಚಿನ್ನಾದ ಚಿದ್ಬಿಂದು ಚಿತ್ಕಳೆಯ
> ಜಂಗಮವು: ಭಕ್ತಾದಿಮಾಹೇಶಪ್ರಸಾದಿಯಸುಲಿಂಗಿ ಶರಣೈಕ್ಯ ಷಟ್ಸ್ಥಲ
> ಜಂಗಮಂ: ಸಾಧಿಸುವೆನೆಂಬರಿಗಸಾಧ್ಯವಹ ಜಂಗಮವು:
> ಭೇದಿಸುವನೆಂಬರಿಗಸಾಧ್ಯವಹ ಜಂಗಮವು:
> ಮೂದೇವತಾರಾಧ್ಯಗತ್ತತ್ತ ಜಂಗಮವ ದಾಸೋಹಿ ಸದ್ಭಕ್ತನಧಿಕಂ;

ಆದಿ ಸ್ಥಾವರದ ಮಸ್ತಕದ ಪೂಜೆಯಾಗಲ್ಕೆ. ಅನಾದಿ ಜಂಗಮದ ಪಾದವೆ ಪೂಜೆಯಹುದು;
ಸದ್ಬೋಧಗುರುಲಿಂಗವೆರಡರ ಹರಣ ಜಂಗಮದ ಪಾದವೇ ಪರಬ್ರಹ್ಮವು
ಪಾದವನು ಭಜಿಸಿ ಪರವನು ಕಂಡುಭಕ್ತಂಗೆ;
ವೇದ ಪದವಿಗಳು ಕೈಜೋಡಿಸಿಪ್ಪರದ ಕಂಡು. ಪಾದವನು ಬಿಟ್ಟು
ಪರವನ್ನು ಕಂಡುದಿಲ್ಲವೆಂಬ ಆಗಮವ ಶಿವನೋದಿದಂ"

ಇಲ್ಲಿ "ಜಂಗಮ" ಎಂಬ ಪದವನ್ನು ವ್ಯಕ್ತಿವಾಚಕವಾಗಿ ತೆಗೆದುಕೊಳ್ಳದೆ. ತತ್ತ್ವವಾಚಕವಾಗಿ ತೆಗೆದುಕೊಂಡಿರುವುದು ಗಮನಾರ್ಹ. ಮೂರ್ತಿಪೂಜೆಗೆ ಮಹತ್ವಕೊಡದ ಶಿವಶರಣರ ಆ ಮೂರ್ತಿಪೂಜೆಯ ಸ್ಥಳದಲ್ಲಿ 'ಜಂಗಮ' ತತ್ತ್ವಸ್ವರೂಪದ ವ್ಯಕ್ತಿಯನ್ನು ಇರಿಸಿ, ಗುರು ಲಿಂಗ ಜಂಗಮಗಳಲ್ಲಿ ಜಂಗಮತತ್ತ್ವಕ್ಕೆ ಅಧಿಕ ಪ್ರಾಶಸ್ತ್ಯವಿತ್ತಿದ್ದಾರೆ. ಮೊದಲು ತತ್ತ್ವ—ನಂತರ ಆ ತತ್ತ್ವವನ್ನು ಪ್ರತಿನಿಧಿಸುವ ವ್ಯಕ್ತಿ—ನಾವು ಗಣಿಸಬೇಕಾದ ಅಂಶಗಳು ಇಲ್ಲಿ. ಪೂಜೆಗೊಂಬಾತ ಜಂಗಮವೆಂದಮೇಲೆ. ಆ ಪೂಜೆಗೆ ಅರ್ಹತೆ ಪಡೆಯಬೇಕಾದರೆ, ಅಲ್ಲಿ ಇರಬೇಕಾದ ಗುಣಗಳು ಮುಖ್ಯವಲ್ಲವೇ? "ಗುಣಾಃ ಗುಣೇಷು ಪೂಜ್ಯಂತೆ, ನ ಚಲಿಂಗಂ. ನ ಚವಯ :" — ಎಂಬ ತತ್ತ್ವಕ್ಕೆ ಅನುಗುಣಯಾಗಿ ಜಂಗಮದಲ್ಲಿ ಈ ಕೆಳಗಿನ ಲಕ್ಷಣಗಳನ್ನು ಹೇಳಲಾಗಿದೆ :

1. ಜಂಗಮ ಎಂದರೆ ಅನಾದಿನಿರಂಜನ ಶರಣನು ತನ್ನ ಹೃತ್ಕಮಲದ ಪರಂಜ್ಯೋತಿ ಲಿಂಗವನು ಭಿನ್ನವಿಲ್ಲದೆ ಎಡಗೈಯಲ್ಲಿ ಹಿಡಿದು ತನ್ನನ್ನೇ ತಾನು ಅರ್ಚಿಸುವವನು;

2. ಸತ್ಕ್ರಿಯೆ ಸಮ್ಯಕ್ ಜ್ಞಾನವುಳ್ಳವನು:

3. ಜಂಗಮತತ್ತ್ವವು ವೇದ ಶಾಸ್ತ್ರ ಆಗಮಗಳಿಗೂ ಅತೀತವಾದುದು:

4. ಚಿತ್‌ನಾದ, ಚಿತ್‌ಬಿಂದು. ಚಿತ್ಕಳೆಯುಳ್ಳದು:

5. ಷಟ್‌ಸ್ಥಲವುಳ್ಳುದು:

6. ಸಾಧಿಸುವವರಿಗೆ. ಭೇಧಿಸುವವಂಗೆ ಅಸಾಧ್ಯವೂ. ಅಭೇದ್ಯವೂ ಆದುದು

7. ಬ್ರಹ್ಮ ವಿಷ್ಣು ಮಹೇಶ್ವರರಿಗೂ ಮೀರಿನಿಂತಂತಹುದು:

8. ಅನಾದಿ ಜಂಗಮವಾದರೆ ಆದಿ ಸ್ಥಾವರ: ಸ್ಥಾವರದ ಮಸ್ತಕಪೂಜೆಯಾದರೆ ಜಂಗಮಕ್ಕೆ ಪಾದಪೂಜೆಯಾಗಬೇಕು:

9. ಜಂಗಮವೆಂದರೆ ಗುರು–ಲಿಂಗಗಳ ಪ್ರಾಣಸ್ವರೂಪ:

10. ಜಂಗಮುವ ಪಾದವೇ ಪರಬ್ರಹ್ಮ ... ಈ–ಮಾತುಗಳಲ್ಲಿ ಮೈಲಾರದ ಬಸವಲಿಂಗ ಶರಣರು ಜಂಗಮತತ್ತ್ವವನ್ನು ಚೆನ್ನಾಗಿ ವಿವರಿಸಿದ್ದಾರೆಂದು ಹೇಳಬಹುದು.

ಪ್ರತಿಯೊಬ್ಬ ವೀರಶೈವನೂ ಆರಾಧಿಸುವ ತ್ರಿಮೂರ್ತಿ ಗುರು–ಲಿಂಗ–ಜಂಗಮರಲ್ಲಿ ಜಂಗಮ ತತ್ತ್ವವೂ ಒಂದು: ಅದು ಯಾವ ಕಾರಣಕ್ಕೂ ಜಾತಿವಾಚಕವಲ್ಲ : ವ್ಯಕ್ತಿವಾಚಕ. ಆದುದರಿಂದ ಇತರ ವೃತ್ತಿಕಾರರು ಒಂದೊಂದು ಜಾತಿಯವರೆನಿಸಿದಂತೆ ಜಂಗಮವೂ ಇಂದು ಜಾತಿವಾಚಕವಾಗಿದೆ: ಆದರೆ ಜಂಗಮರ ಜಾತಿಗಿಂತ ಗುರುಗಳ ಜಾತಿಯೊಂದು ಪ್ರತ್ಯೇಕವಾಗಿ ಕಾಣದಿದ್ದುದು ಆಶ್ಚರ್ಯವೇ ಸರಿ. 'ಜಂಗಮ' ಜಾತಿವಾಚಕವಾಗಿದ್ದುದು ಕೇವಲ ಈಗ ಮಾತ್ರವಲ್ಲ ಬಹು ಪುರಾತನಕಾಲದಿಂದಲೇ ನಡೆದು ಬಂದುದನ್ನು ಅದನ್ನು ಶರಣರು ಖಂಡಿಸಿದುದನ್ನೂ ನಾವು ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ಬಸವಣ್ಣನವರೇ ತಮ್ಮ ವಚನದಲ್ಲಿ "ಲಿಂಗದಲ್ಲಿ "ಕಠಿಣವುಂಟೆ ? ಜಂಗಮದಲ್ಲಿ ಕುಲವುಂಟೆ ? ಎಂದಿದ್ದಾರೆ. (ಬ. ವ. 285. ವಿಶ್ವವಿದ್ಯಾಲಯದ ಪ್ರಕಟನೆ 1968). ಬಸವಣ್ಣನು ತಿಳಿದಂತೆ. 'ಜಂಗಮ ಸಂಗಯ್ಯನ ಒಂದು ರೂಪು'. (ವಚನ 395). ಈ ಜಂಗಮದಲ್ಲಿ ಉತ್ತಮ. ಮಧ್ಯಮ. ಕನಿಷ್ಠ ಎಂಬ ತರತಮ ಭಾವವಿರಬಾರದು (ವಚನ 400): 'ಮನೆಯ ಜಂಗಮ' 'ಬೇರೂರ ಜಂಗಮ' ಎಂದು ಹಿರಿ ಕಿರಿಯ ಭಾವವನ್ನೂ ಹೊಂದಬಾರದು (ವ. 410) ; 'ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮ ವಿಶೇಷವೆಂದು ಗೌರವಿಸುವದು. ಕಂಥೆ ಬೊಂತೆಯ ಜಂಗಮ ಕನಿಷ್ಠವೆಂದು ತಿರಸ್ಕರಿಸುವುದು'— ಭಕ್ತರಿಗೆ ಯೋಗ್ಯವಲ್ಲವೆಂದು ತಿಳಿಸಿದಂತೆ. ಜಂಗಮ ತತ್ತ್ವದ ಆಚರಣೆ ಮಾಡಬೇಕಾದ ಜಂಗಮರಲ್ಲಿಯೂ ಕಂಡ ದೋಷಗಳನ್ನು ಅಂದಿನ ಶರಣರೇ ಎತ್ತಿ ತೋರಿಸಿದ್ದಾರೆ. ಉದಾಹರಣೆಗೆ, ಕೆಲವು ಜಂಗಮರು ಹಣಕ್ಕಾಗಿ ಜನರನ್ನು ಅರಿಸಿಕೊಂಡು ಉಪದೇಶಿಸುತ್ತಿದ್ದುದನ್ನು ಬಸವಣ್ಣನವರು ಹೀಗೆ ವಿಡಂಬಿಸಿದ್ದಾರೆ:

1. "ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿಯರಸಿ
   ಭೋಧಿಸಲು ಪ್ರಾರ್ಥಿಸಲು ನಾನಂಜುವೆನಯ್ಯಾ"(ವಚನ 412)ಎಂದು.
   ಅಲ್ಲಮಪ್ರಭುದೇವರು ಹೀಗೆ ನುಡಿದಿದ್ದಾರೆ :

2. ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಮನೆ ಮನೆ ತಪ್ಪದೆ
   ತಿರಗುವ '**ತುಡುಗುಣಿ**' ಯಂತೆ ಕಾಡಲಾಗದು ಭಕ್ತನ.
   ಬೇಡಲಾಗದು ಭವಿಯ **ಕಾಡಿ, ಬೇಡಿ,** ಒಡಲ ಹೊರೆವಡೆ
   ಬೇಂಟೆಯ ಶ್ವಾನ. ಮೊಲಕ್ಕೆ ಬಾಯ್ದೆರೆದಂತೆ ಗುಹೇಶ್ವರಾ

3. ಇಷ್ಟಲಿಂಗವ ತೋಱಿ ವ್ಯಾಖ್ಯಾನವ ಹೊಡೆವವಂಗೆ
ಇಷ್ಟಾರ್ಥ ಸಿದ್ಧಿಯದೆಲ್ಲಿಯದೋ ? ...
ಅಲ್ಲಿದಾಟವನಾಡಿ ಮುಂದುಗೆಟ್ಟರು, ಗುಹೇಶ್ವರಾ.

4. 'ನಿಸ್ಸಂಗಿ ಚ ನಿರಾಭಾರಿ ನಿಸ್ಸೀಮ ನಿರುಪಾಧಿಕಂ
ನಿರ್ದೇಹಂ ನಿರ್ಮಲಂ ನಿತ್ಯಂ ಸತ್ಯಂ ಜಂಗಮಲಕ್ಷಣಂ' —

ಇಂತೆಂಬ ಶ್ರುತಿಗೊಳಗಾಗದೆ, ಹೊನ್ನು ಹೆಣ್ಣು ಮಣ್ಣಿನಾಸೆಯಂ ಬಿಟ್ಟು. ಕೋಪ ತಾಪಮಂ, ಬಿಟ್ಟು, ಬ್ರಾಂತಿ ಭ್ರಮೆಯಂ ಬಿಟ್ಟು. ಜಂಗಮವಾಗಬೇಕು. ಇಂತೀ ಷಡುಲೋಭದ ರುಚಿ ಹಿಂಗಿ ಜಂಗಮವಾದಲ್ಲದೆ ಭವ ಹಿಂಗದು ಗುಹೇಶ್ವರಾ.

5. ಕೌಪ್ರ ಕಾಷಾಂಬರವ ಕಟ್ಟಿ ಮಂಡೆ ಬೋಳಾದರೆನಯ್ಯ ಮನದಲ್ಲಿ
ನಿಜವಿಲ್ಲದನ್ನಕ್ಕರ ?
ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೊಱೆದರೇನಯ್ಯ ಮನದಲ್ಲಿ
ವ್ರತಿಯಾಗದನ್ನಕ್ಕರ ?
ಹಸಿವು ತೃಷೆ ವ್ಯಸನಾದಿಗಳ ಬಿಟ್ಟರೇನಯ್ಯ,
ಅರ್ಥದಿಚ್ಛೆ ಮನದಲ್ಲಿ ಹಿಂಗದನ್ನಕ್ಕ ?
ಅನು ಜಂಗಮವೇ. ಅನು ಹಿರಿಯನಾದೆನಲ್ಲದೆ. ಅನು ಜಂಗಮವೇ ?
......ಗುಹೇಶ್ವರಾ ?

6. ಒಡಲಕಕ್ಕುಲತೆಗೆ ಅಶನವನುಂಡು, ವ್ಯಸನದ ಕಕ್ಕುಲತೆಗೆ ಹಣವ ಬೇಡಿ
ಕೊಟ್ಟಡೆ ಕೊಂಡಾಡಿ, ಕೊಡದಿರ್ದರೆ ದೂರಿಕೊಂಡು ಹೋಹಾತ
ಜಂಗಮವಲ್ಲ.
ಸುಳುಹಿನ ಸೂತಕ ಮೈದೋರದೆ. ಒಡಲಕಳವಳದ ರುಚಿಗೆ ಹಾರೈಸದೆ
ಅಱಿವೆ ಅಂಗವಾಗಿ, ಅಪ್ಯಾಯವನೇ ಭಕ್ತಿಯಾಗಿ,
ಕಿಂಕುರ್ವಾಣವೆಂಬ ಶಿವಮಂತ್ರಕ್ಕೆ ನಮೋ ನಮೋ ಎನಬಲ್ಲರೆ ಆತ
ಜಂಗಮ.
ಜಂಗಮಸ್ಥಲಕ್ಕೆ ಲಕ್ಷಣವಾವುವೆಂದರೆ ಹೇಳಿಹೆ ಕೇಳಿರಣ್ಣ.
ಮೂಱಱ ಹೊಲಿಗೆಯ ಬಿಚ್ಚಿ. ಆಱ ಮಾಡಬೇಕು:
ಆಱಱ ತಿರುಳ ತೆಗೆದು, ಒಂದಱೊಳಗೆ ನಿಲಿಸಬೇಕು:
ಐದರ ಮುಸುಕನುಗಿದು. ಐದರ ಕಳೆಯ ಕೆಡಿಸಿ.
ಐದರ ನಿಹೆವನಡಗಿಸಿ. ಮೂಱಱ ಮುದ್ರೆಯನೊಡೆದು.
ನಾಲ್ಕಱೊಳಗೆ ನಿಲ್ಲದೆ. ಮೂಱರ ಮುಖ ಒಂದಾಗಿರಬೇಕು.
ಈ ಭೇದವನಱಿಯದೆ ಸುಳಿವವರಕಂಡು ಬೆರಗಾದೆನು
ಕಾಣಾ ಗುಹೇಶ್ವರಾ

(ಅಲ್ಲಮನ ವಚನವ ಚಂದ್ರಿಕೆ : ವಚನಗಳು 468, 473, 726, 895 1009 ಮತ್ತು 471; ಸಂಪಾದಕರು : ಡಾ. ಎಲ್. ಬಸವರಾಜು 1960)

ಈ ಎಲ್ಲ ವಚನಗಳಲ್ಲಿ ಜಂಗಮರು ಕಾಡಿ. ಬೇಡಿ, ಅಲ್ಲವಾಟವನಾಡಿ, ಲೋಭ ಕ್ಕೊಳಗಾಗಿ, ಮುಂಮುಗಟ್ಟು. ಜನರ ನಿಂದೆಗೆ ಗುರಿಯಾದುದನ್ನು ಕಾಣುತ್ತೇವೆ. ವಚನಕಾರರು : ಮಡಿವಾಳಯ್ಯ, ಅಂಬಿಗರಚೌಡಯ್ಯ ಮೊದಲಾದವರು ಅಂತಹ ಜಂಗಮರನ್ನು ಕಟುವಾಗಿ ಟೀಕಿಸಿದ್ದಾರೆ: ಸಮಾಜದ ಉದ್ಧಾರಕ್ಕಾಗಿಯೇ ವೇಷವನ್ನು ಧರಿಸಿ, ವಿರಕ್ತರಾದ ಜಂಗಮರು, ಭೋಗಕ್ಕೆ ಇಳಿದಾಗ, ಹೀಗಾಗುವುದು ಸ್ವಾಭಾವಿಕವೇ. ಯಾವುದೇ ಧರ್ಮದಲ್ಲೂ ಉನ್ನತ ತತ್ವಗಳನ್ನು, ಆದರ್ಶಗಳನ್ನು, ಪ್ರತಿನಿಧಿಸುವ ವ್ಯಕ್ತಿಗಳೆಲ್ಲ. ತಮ್ಮ ಮೂಲತತ್ವದಿಂದ ಪತಿತರಾದಾಗ ಆ ಧರ್ಮವು ಅಂತಹರಿಂದ ಕೆಟ್ಟು ಹೋಗುವುದು ಸ್ವಾಭಾವಿಕ. ಇಲ್ಲಿಯೂ ಹಾಗಾಗಿದೆಯೆಂಬುದನ್ನು ಇಲ್ಲಿಯ ಅಧ್ಯಯನದಿಂದ ಹೇಳಬಹುದಾಗಿದೆ. ಲೋಕೋದ್ಧಾರದ ಬದಲು ಸ್ವಹಿತ ಬಂದಾಗ ಜಂಗಮ ತತ್ವವು ಅರ್ಥವನ್ನು ಕಳೆದುಕೊಂಡಿದೆ.*

---

* ಚೆನ್ನಬಸವಣ್ಣ, ಸಿದ್ಧರಾಮೇಶ್ವರರ ವಚನಗಳು, ಬಸವಣ್ಣನವರ ವಚನಗಳು ಕ. ವಿ. ವಿ. ಧಾರವಾಡ-- ಇವರಿಂದ ಪ್ರಕಟಣೆಗೊಂಡ ಕೃತಿಗಳಿಂದ ವಚನಗಳು ಆಯ್ದುಕೊಳ್ಳಲ್ಪಟ್ಟಿವೆ.

ಜಾತ್ರೆಗಳು ಮತ್ತು ಕಲೆ

● ಡಾ. ದೇವೇಂದ್ರಕುಮಾರ ಹಕಾರಿ

'ಜನಾ ಸೇರಿದರೆ ಜಾತ್ರಿ' ಎನ್ನುವದು ಜನಪದದಲ್ಲಿ ಕೇಳಿಬರುವ ಒಂದು ಸರ್ವ ಸಾಮಾನ್ಯ ನುಡಿಗಟ್ಟು. 'ಜನಮರುಳೋ ಜಾತ್ರೆಮರುಳೋ' ಎನ್ನುವದು ಅಂಥದೇ ಮತ್ತೊಂದು. ಯಾವುದೋ ಒಂದು ಜಗಳ ದೊಂಬಿಯಾದಾಗ ಜನ ಕೂಡುವುದು ಬೇರೆ; ತಮ್ಮ ವೃಂದ ಅಥವಾ ಗ್ರಾಮದೇವತೆಯ ಉತ್ಸವಕ್ಕಾಗಿ ಜನ ಸೇರುವುದು ಬೇರೆ. ದೇವತೆಯ ಉತ್ಸವಕ್ಕಾಗಿ ಜನ ಸೇರಿದಾಗ ಆ ಕ್ಷೇತ್ರದಲ್ಲಿ ಅನೇಕ ಬಗೆಯ ಆಚರಣೆಗಳು, ಕುಣಿತ, ಹಾಡು ಇತ್ಯಾದಿಗಳು ಜರಗುವುದು ಬೇರೆ. ದೇವತೆಗೆ ತಮ್ಮ ಕಾಣಿಕೆಗಳನ್ನು ಅರ್ಪಿಸಲು, ಅದರ ಅಂಗವಾಗಿ ನಡೆಯುವ ಅರ್ಚನಾ ವಿಧಾನ. ಆಚರಣಾ ಕ್ರಮಗಳಲ್ಲಿ ಭಾಗವಹಿಸಲು ಜನಸಮುದಾಯ ಕೂಡುವುದು: ಈ ಹಿನ್ನೆಲೆ 'ಜನಾ ಸೇರಿದರೆ ಜಾತ್ರಿ' ಎನ್ನುವುದಕ್ಕಿದೆ. ದೇವತೆಯ ಉತ್ಸವದ ಆಚರಣೆಗೆ ಯಾವ ಸಂಬಂಧವೂ ಇಲ್ಲದ ರೀತಿಯಲ್ಲಿ ಎಂಥೆಂಥದೋ ಮೋಜಿನ ತಮಾಷೆಯ ಆಟ, ಕುಣಿತ ಇತ್ಯಾದಿಗಳು ನಡೆದರೆ ಅದನ್ನೂ ನೋಡಲು ಸೇರುವ ಜನಸಮುದಾಯವನ್ನು ಕಂಡು 'ಜನಮರುಳೋ ಜಾತ್ರೆಮರುಳೋ' ಎಂದೂ 'ಹತ್ತರಗೂಡ ಹನ್ನೊಂದು, ಹರಸೀ ಕೂಡ ಗೋವಿಂದ' ಎಂದೂ ಹೇಳುವುದುಂಟು. ಅದೇನೇ ಇದ್ದರೂ ಜನ ಸೇರುವವಕ್ಕೂ ಜಾತ್ರೆಗೂ ಒಂದು ಸಹಜ ಸಂಬಂಧವಿದೆ ಎನ್ನುವುದು ವಾಸ್ತವ ಸತ್ಯ. ಜನಪದ ಬದುಕಿಗೂ ಜಾತ್ರೆಗೂ ಇರುವ ಸಂಬಂಧದ ಮಹತ್ವದ ಕೊಂಡಿ ಎಂದರೆ ಜನಪದ ಶ್ರದ್ಧೆ. ಧರ್ಮ ಮತ್ತು ಅದಕ್ಕೆ ಸಂಬಂಧಿಸಿದ ಹಬ್ಬಗಳು.

ಧರ್ಮ ಮತ್ತು ಹಬ್ಬಗಳಿಗೆ ಇರುವ ಗಾಢ ಸಂಬಂಧವೇ ಮುಂದುವರೆದು ಜಾತ್ರೆಗಳಲ್ಲಿ ವ್ಯಕ್ತಗೊಂಡಿದೆ. ಧರ್ಮ ಎಂದು ನಾವು ಇಂದು ಬಳಸುತ್ತಿರುವುದು ಒಂದು ವ್ಯವಸ್ಥಿತ ಸಮಾಜದ ಪರಿಕಲ್ಪನೆ. ಆದಿಮಾನವ ಕಾಲದಿಂದ ಬಂದ ಜನಪದ ವೃಂದಗಳದ್ದು ಒಂದು ವ್ಯವಸ್ಥೆಗೆ ಒಳಪಡದ. ಅನಿಯಂತ್ರಿತವಾಗಿ ಬೆಳೆದುಬಂದ ವಿಭಿನ್ನ ಸಂಸ್ಕೃತಿಗಳ ಬಹುಮುಖಿ ಸಮಾಜದಾಗಿರುವದರಿಂದ. ವ್ಯವಸ್ಥಿತ ಸಮಾಜದ ಈ ಪರಿಕಲ್ಪನೆಯನ್ನು ನೇರವಾಗಿ ಜನಪದ ಸಮಾಜಕ್ಕೆ ಅನ್ವಯಿಸಲು ಬಾರದು. ಆದರೆ ಅದೇ ಕಾಲಕ್ಕೆ ಶಿಷ್ಟಪದ ಸಮಾಜದ 'ಧರ್ಮ' ಪರಿಕಲ್ಪನೆಗೆ ಆಧಾರವಾಗಿರುವ ಜನಪದ ನಡುವಳಿಕೆಗಳಲ್ಲಿ ತೊಡಗಿ ಪರಿಚಲನೆಗೊಳ್ಳುತ್ತ ಬಂದ ನಂಬಿಕೆ. ಆಚರಣೆ

ಸಂಜ್ಞೆ. ಸಂಕೇತ. ದೇವತೆ. ಕುಲದೇವತೆಗಳು. ಪಂಥ, ಆರಾಧನೆ. ಉತ್ಸವ. ಹಬ್ಬ ಜಾತ್ರೆ. ಧಾರ್ಮಿಕ ಕಟ್ಟುಕಟ್ಟಳೆ, ವಿಧಿಕ್ರಿಯೆಗಳು, ಮಂತ್ರ, ಮಾಟ, ಕಾರ್ಣಿಕ, ಅರ್ಚಕ, ಗೊರವ. ಪುರವಂತ. ಗೊಂದಲಿಗ, ವೇಷಗಾರ. ಬಯಲಾಟ. ಯಕ್ಷಗಾನ ಇತ್ಯಾದಿ ವಿವಿಧ ಮಾದರಿಗಳಲ್ಲಿ ಜನಪದ ಧರ್ಮ ಮತ್ತು ಅದರ ಒಡಲಲ್ಲಿ ಗರಿಗೆದರಿದ ಜನಪದ ಕಲೆಗಳ ರೂಪಾಂತರಗಳನ್ನು ಕಾಣಬಹುದು ಎನ್ನುವುದನ್ನೂ ಮರೆಯಕೂಡದು.

ಒಂದು ಬುಡಕಟ್ಟು ಅಥವಾ ಆದಿಮ ಗುಂಪು ಪ್ರಾದಿಮ ಕಾಲದಲ್ಲಿ ತನ್ನ ಸುತ್ತಣ ಅಗಾಧ ವಿಸ್ಮಯಕಾರಿ ರುದ್ರರಮ್ಯ ನಿಸರ್ಗಶಕ್ತಿಗಳಿಗೆ ಒಂದು ಮೂರ್ತ ರೂಪ ಕೊಡುವ ಹಂತದಲ್ಲಿ ಧಾರ್ಮಿಕ ಸ್ವರೂಪದ ನಂಬುಗೆಯ ಹುಟ್ಟು, ನೆಲೆ ಹುದುಗಿದೆ. ಟೇಯಲರ್ ಹೇಳುವ 'ಬಿಲೀಫ್ ಇನ್ ಸ್ಪಿರಿಚ್ಯುಅಲ್ ಬೀಯಿಂಗ್ಸ್'– ಆಧ್ಯಾತ್ಮ ಜೀವಿಗಳಲ್ಲಿ ನಂಬಿಕೆ. ಮತ್ತು ಪಿ. ರಾಡಿನ್ ಹೇಳುವ– 'ಸೋಶಿಯಲ್ ಪ್ರಿಸೆಪ್ಟ್ಸ್ ಆಫ್ ಫೀಯರ್'— ಭಯದ ಸಾಮಾಜಿಕ ವಿಧಿಗಳು, ಜನಪದ ಶ್ರದ್ಧೆ ಮತ್ತು ಆಚರಣೆಯ ಎರಡು ಸೂಕ್ಷ್ಮ ಅಂಶಗಳ ಕಡೆಗೆ ಬೆರಳು ಮಾಡುತ್ತವೆ.[1] ಒಂದು, ಅತಿಮಾನವ ಅಥವಾ ಮಾನವಾತೀತ ಸ್ವರೂಪದ ಅಮೂರ್ತ, ಅದ್ಭುತ ದಿವ್ಯಶಕ್ತಿಯ ಪ್ರಭಾವ: ಇನ್ನೊಂದು. ಸಾಮಾಜಿಕ ನಡವಳಿಕೆಯ ಮೇಲೆ ಹಿಡಿತ ಸಾಧಿಸುವ ವಿಧಿ ನಿಷೇಧ ಕಟ್ಟುಪಾಡುಗಳ ಭಯ ಮತ್ತು ಈ ವಿಧಿಗಳನ್ನು ಮೀರಿದರೆ ಉಂಟಾಗಬಹುದಾದ ಕೇಡುಗಳ ನಿವಾರಣೆಗೆ ಕೈಕೊಳ್ಳುವ ಆಚರಣೆಗಳು.

ಕತ್ತಲು ಭೇದಿಸಿ ಮೂಡುವ ಸೂರ್ಯ. ಧಿಮ್ಮೆಂದು ಸಿಡಿಯುವ ಜ್ವಾಲಾಮುಖಿ ಇತ್ಯಾದಿಗಳು ಯಾವುದೇ ಆದಿಗುಂಪಿನ ವ್ಯಕ್ತಿಗತ ಭಯವಿಸ್ಮಯಗಳಿಗೆ ಸೀಮಿತವಾಗದೆ ಇಡೀ ವೃಂದದ ವಿಸ್ಮಯ ಭಯಗಳ ಪ್ರಕ್ರಿಯೆಯು ಸಾಮೂಹಿಕ ಅನುಭವಕ್ಕೆ ಕಾರಣವಾಗುತ್ತವೆ. ಅದ್ಭುತ ಅಮಾಯಕ ಕಲ್ಪನೆಗಳಿಗೆ ಪ್ರೇರಕವಾಗುತ್ತವೆ. ಒಂದು ರೀತಿಯ ಸಂದಿಗ್ಧತೆ. ಭ್ರಮೆ, ನಿಗೂಢತೆಗಳು ಜನಪದ-ಆದಿಮ- ವೃಂದಗಳ ಸಾಮೂಹಿಕ ಅನುಭವಕ್ಕೆ ಒತ್ತು ಕೊಟ್ಟು ಜನಪದರಲ್ಲಿ ಅಪ್ರಜ್ಞಾಪೂರ್ವಕವಾಗಿ ಅಗೋಚರ ಶಕ್ತಿಗಳ ಮೂರ್ತೀಕರಣ ಕ್ರಿಯೆ ನಡೆದುಹೋಗುತ್ತದೆ. ಸುತ್ತಮುತ್ತಣ ಪರಿಸರದ ರುದ್ರರಮ್ಯ ಅದ್ಭುತ ವಸ್ತುರೂಪಗಳು ಜನಪದದ ಮಾನಸಿಕ ಪಾತಳಿಯಲ್ಲಿ ಬೇರೂರಿ ನಿಗೂಢ ವಸ್ತುಪ್ರತಿರೂಪಗಳು, ನಂಬುಗೆಗಳು ಒಡಮೂಡುತ್ತವೆ. ಇದು ಜನಪದದ ಅನುಭವಗಳನ್ನು ಆಧರಿಸಿದ 'ಅಮೂರ್ತ'ಗಳ ಮೂರ್ತೀಕರಣ– ದೈವೀಕರಣ ಕ್ರಿಯೆ. ಪ್ರಕಾಶದ ಮೂರ್ತೀಕರಣದಲ್ಲಿ ಸೂರ್ಯದೇವ ಕೃಷಿಕಾರ್ಯಗಳ

---

1. Wilhelm Dupre : Religion in Primitive Cultures, P. 62.

ಹಿನ್ನಲೆಯಲ್ಲಿ ಭೂಮಿ– 'ಭೂಮಿತಾಯಿ', ಆಕಳು 'ಗೋಮಾತೆ', ಚಂಡಮಾರುತ ಅವಿರತ ಪರ್ಜನ್ಯಗಳಲ್ಲಿ ವರುಣಾದಿ ದೇವತೆಗಳು; ತಮ್ಮ ತಮ್ಮ ಬುಡಕಟ್ಟನ್ನು ಕಾಪಾಡಿ ಅಥವಾ ನಿಯಂತ್ರಿಸಿ, ಆಯಾ ವೃಂದದ ವಿಸ್ಮಯ ಭಯ ಗೌರವಗಳಿಗೆ ಪಾತ್ರರಾಗಿ ಮರಣಾನಂತರ ಅರ್ಚಿಸಲ್ಪಟ್ಟ, ಅವರ ಸುತ್ತೂ ಹುಟ್ಟಿಕೊಂಡ ಐತಿಹ್ಯ. ಕಟ್ಟುಕಥೆ ಪುರಾಣಗಳ ತಲದಲ್ಲಿ ಹುದುಗಿಹೋದ 'ಅಜ್ಞಾತ ಸಾಂಸ್ಕೃತಿಕ ವೀರರು'. ಈ ಮೊದ ಲಾದ ವ್ಯಕ್ತಿ ಶಕ್ತಿಗಳನ್ನು ದಿವ್ಯತೆಯಲ್ಲಿ ಪ್ರತೀಕಗೊಳಿಸಿ ವರ್ಷದ ನಿರ್ದಿಷ್ಟ ಕಾಲದಲ್ಲಿ ಅರ್ಚಿಸುವದು– ವಿವಿಧ ಬಗೆಯ ಅರ್ಚನೆ ಮತ್ತು ಆರಾಧನಾ ವಿಧಾನಗಳ ಅಂಗವಾಗಿ ಮೂಡಿಬಂದ ರೂಢಿ ನೀತಿತತ್ವ, ವಿಧಿಕ್ರಿಯೆ ಮುಂತಾದವು ಜನಪದದ ಸಾಮಾಜಿಕ ಧಾರ್ಮಿಕ ಜೀವನದ ವ್ಯಾಪಕ ಸ್ವರೂಪವನ್ನು ರೂಪಿಸುತ್ತ ಬಂದ ಸಂಗತಿಗಳಾಗಿವೆ. ಧಾರ್ಮಿಕ ಹಿನ್ನಲೆಯ ಈ ಸ್ಥೂಲಾಂಶಗಳು, ಜನಪದರ ಒಟ್ಟು ಜೀವನದ ದೃಷ್ಟಿ ಯಿಂದ ಅವರ ಬದುಕಿಗೆ ಅರ್ಥಪೂರ್ಣತೆ ಸತ್ವಗಳನ್ನು ಅನುಗೊಳಿಸುವ ಆಂತರಿಕ ಅನಿಸಿಕೆ ನಂಬುಗೆಗಳನ್ನು ಸಂಯೋಜಿಸುವ, ವಿವಿಧ ಜನಪದ ವೃಂದಗಳನ್ನು ಸಾಮಾ-ಜಿಕವಾಗಿ ನಿಯಂತ್ರಿಸುವ ಕೇಂದ್ರಶಕ್ತಿಗಳಾಗಿವೆ. ಕುಲಸಂಕೇತ ಅಥವಾ ಕುಲದೇವತಾ ರಾಧನೆ ಟೊಟ್ಯಾಮಿಜಮ್, ಪರಮಶಕ್ತಿಪಿತ 'ಸರ್ವಶಕ್ತಿ' ಕಲ್ಪನೆ, 'ಆ್ಯನಿಮಿಜಮ್' ಸರ್ವ ಚೈತನ್ಯವಾದ ಮುಂತಾದ ಆರಾಧನಾ ಮೂಲದ ಹಾಡು ಕುರಿತ. ಬಲಿ. ಸಿಡಿ-ಮಾರೆಮ್ಮನ ಹಬ್ಬ, ಮೈಲಾರ ಭಕ್ತರ ವೀರಭದ್ರನ ಒಕ್ಕಲುಗಳ ಪುರವಂತರ ಕುರಿತ ಪವಾಡಗಳು, ತನ್ಮೂಲಕ ಮೂಡಿದ ಅಗಣಿತ ಜನಪದ ರಂಗ ಪರಂಪರೆ ಮತ್ತು ಕಲಾರೂಪಗಳು. ಮಾಟ ಮಂತ್ರ ಮಂಡಲರಚನೆ ಈ ರೀತಿಯಲ್ಲಿ ಹಬ್ಬ ಮತ್ತು ಜಾತ್ರೆಯ ಸಂದರ್ಭದ ಆಚರಣೆಗಳಿಗೂ ಜನಪದ ಕಲೆಗಳಿಗೂ ಒಂದು ಅನಿವಾರ್ಯ-ವಾದ ಸಂಬಂಧ ಏರ್ಪಟ್ಟಿರುವವನ್ನು ಕಾಣುತ್ತೇವೆ. ಈ ಹಂತದಲ್ಲಿ ಹಬ್ಬ ಮತ್ತು ಜಾತ್ರೆಗಳಿರುವ ಸ್ಥೂಲ ಸಂಬಂಧ ಮತ್ತು ವ್ಯತ್ಯಾಸಗಳನ್ನು ಗುರುತಿಸುವುದು ಅಗತ್ಯ.

'ಹಬ್ಬ' ಎಲ್ಲರಿಗೂ ತಿಳಿದಿರುವಂತೆ 'ಪರ್ವನ್ – 'ಪರ್ವ' ಶಬ್ದದ ತದ್ಭವ-ವಾಗಿದ್ದು ನಮ್ಮ ಜನಾಂಗಿಕ ಜೀವನದ ನಿರ್ದಿಷ್ಟ ಕಾಲದ ಆಚರಣೆಯಾಗಿದೆ. ಹಬ್ಬ 'ಪರ್ವ' ಎಂದರೆ ಕಾಲ ವಿಭಜನೆ. ತಿಂಗಳ ಮೊದಲ ಅರ್ಧಾವಧಿ ಚಂದ್ರನಲ್ಲಿ ಉಂಟಾಗುವ ನಾಲ್ಕು ಬದಲಾವಣೆಗಳ ಕಾಲ: ವಿಶೇಷತಃ ಎಂಟು ಮತ್ತು ಹದಿ-ನಾಲ್ಕನೆಯ ದಿನ. ಇದು ಮಾನವರ ಬಯಕೆಯ ಸಂಕಲ್ಪ ಅಥವಾ ವ್ರತ ಕೈಕೊಳ್ಳುವ ಕಾಲ. ಆ ಇಚ್ಛೆಯ ಪೂರ್ಣತೆಗಾಗಿ ನಿರ್ದಿಷ್ಟ ಅವಧಿಯಲ್ಲಿ ಬಲಿ ಅಥವಾ 'ಎಡೆ' ಕೊಡುವ ಆಚರಣೆ, ಒಂದು ವಿಧಿ: ಸಾಮಾನ್ಯವಾಗಿ ಈ ಹಬ್ಬಗಳ ಆಚರಣೆ ಕೌಟುಂಬಿಕ ಜೀವನಕ್ಕೆ ಸೀಮಿತವಾಗುವಂಥದು. ಆದರೆ ಕೆಲವು ವಿರಳ ಆಚರಣೆಗಳು ಹಬ್ಬಕ್ಕೆ ಸಾಮಾಜಿಕ–ಸಾಮೂಹಿಕ ಸ್ವರೂಪ ನೀಡಿರುವುದನ್ನೂ ಕಾಣುತ್ತೇವೆ. ಪ್ರಪಂಚದ ಅನೇಕ ಜನಪದ ವೃಂದಗಳ ಆಚರಣೆಯಲ್ಲಿ ಗುರುತಿಸಲಾಗಿರುವ 'ಆ್ಯನ್ಸಿಸ್ಟ್ರಲ್'

'ವರ್ಷಿಪ್'[1] 'ಯಜಮಾನ ಪೂಜೆ', ಕರ್ನಾಟಕದ ಬಹುತರ ಭಾಗಗಳಲ್ಲಿ ಆಚರಣೆಯಲ್ಲಿರುವ 'ಹೀರೆಹಬ್ಬ' ಕೌಂಟುಬಿಕ ನೆಲೆಗೆ ಸೀಮಿತವಾದದು. ಆದರೆ ಕಾರಹುಣ್ಣಿಮೆಯು ಕರಿಹರಿಯುವ 'ವಿಜಯದಶಮಿ'ಯ ಬನ್ನಿ ಮುಡಿಯುವ ಆಚರಣೆಗಳು ಕೌಟುಂಬಿಕ ಮತ್ತು ಸಾಮೂಹಿಕ ನೆಲೆಗಳನ್ನು ಏಕ ಕಾಲಕ್ಕೆ ಅಳವಡಿಸಿಕೊಂಡ ಹಬ್ಬಗಳು. 'ಹಟ್ಟಿಹಬ್ಬ' ಕಾಟುಂಬಿಕ ನೆಲೆಗೆ ಸೀಮಿತವಾದರೆ, ಭೂಮಿಗೆ ಹಾಲೆರೆಯುವ ಹಬ್ಬ ಸಾಮೂಹಿಕ ಸ್ವರೂಪ ಹೊಂದಿರುತ್ತದೆ. ಹೀಗೆ ಈ ಪಟ್ಟಿ ಬೆಳೆಸುತ್ತ ಹೋಗಬಹುದು.

ಹಬ್ಬಗಳ ಹಿಂದೆ ಹುದುಗಿರುವ ಪ್ರಾಕ್ತನತೆಯನ್ನು ಕುರಿತು ವಿವರವಾಗಿ ಚರ್ಚಿಸಿದ ಡಾ. ಚಿದಾನಂದಮೂರ್ತಿ 'ಹಬ್ಬಗಳು ವ್ಯಕ್ತಿಯನ್ನು ಸಾಂಸ್ಕೃತಿಕ ಪ್ರಾಚೀನಕ್ಕೆ ಸಂಲಗ್ನಗೊಳಿಸುವ ಮೂಲಕ ಅವನು ಸಾಂಸ್ಕೃತಿಕ ನಿರಂತರತೆಯನ್ನು ಅನುಭವಿಸುವಂತೆ ಮಾಡುತ್ತವೆ'[2] ಎಂದು ವಿಶ್ಲೇಷಿಸಿದ್ದಾರೆ. ಆದರೆ ಅವನು ಪಾಮರ ಮತ್ತು ಲಾಯ್ಡ್ ಅವರ ಕೃತಿಗೆ 'A year of festivals' ದ It is said that if you scratch civilization you find a savage–ನಾಗರಿಕತೆಯನ್ನು ಕರೆದು ನೋಡಿದರೆ ಅಲ್ಲಿ ಒಬ್ಬ ಅನಾಗರಿಕ ಕಾಣುತ್ತಾನೆ–ಎನ್ನುವ ಅಭಿಪ್ರಾಯವನ್ನು ಇದ್ದಕ್ಕಿದ್ದಂತೆ ಸ್ವೀಕರಿಸುವದು ಸೋಜಿಗವಾಗಿದೆ. ಇಂದಿನ ನಾಗರಿಕತೆ ಎಷ್ಟೋ ಮಿಲಿಯ ವರ್ಷಗಳ ಸಾಧಿತರೂಪ. ಇದನ್ನು ಕರೆದು ನೋಡುವುದು ಅಸಾಧ್ಯ. ಏನಿದ್ದರೂ ಹಿಂದೆ ಹಿಂದಕ್ಕೆ ಆಳವಾಗಿ ಸರಿದು ಸಂಶೋಧನೆ ಮಾಡುವುದು–ಜೀವಂತ ಪಳೆಯುಳಿಕೆಗಳ ವಿಶ್ಲೇಷಣೆ ಮಾಡುವುದು ಅಧ್ಯಯನದ ಕ್ರಮ. ಆಗ ಇಲ್ಲಿ ಕಾಣುವುದು ಒಬ್ಬ–ಸ್ಯಾವೇಜ–ಅನಾಗರಿಕ ಅಲ್ಲ– ಅಲ್ಲಿ ಕಾಣುವುದು ಪ್ರಾದಿಮ ಮಾನವ: ನಮ್ಮ ನಾಗರಿಕತೆ ಸಂಸ್ಕೃತಿಗಳ ಕಾಂಕ್ರಿಟ್ ಬುನಾದಿಯಲ್ಲಿ ಹೂತು ಹೋಗಿರುವ ಮೂಲ ಮಾನವ.

ನಾವು ಹಬ್ಬಗಳಲ್ಲಿ ಕಾಣುವುದು, ಈ ಪ್ರಾದಿಮ ಮಾನವನ ಹಂತ ಹಂತದ ಬೆಳವಣಿಗೆಯ ವಿಭಿನ್ನ ಶ್ರದ್ಧೆ– ಆಚರಣೆಗಳನ್ನೇ.

ಬೇಟೆ, ಹಣ್ಣುಹಂಪಲ ಸಂಗ್ರಹಣ, ವ್ಯವಸಾಯ ಮುಂತಾದ ವೃತ್ತಿಗಳ ಅಲೆಮಾರಿ ಅರೆ ಅಲೆಮಾರಿ ಮತ್ತು ಸ್ಥಿರ–ನೆಲೆ–ವಸತಿ ಜನಪದ ವೃಂದದ ನಡವಳಿಕೆಗಳ ವ್ಯಕ್ತಿಗತ ಮತ್ತು ಸಹಭಾಗಿತ್ವದ ಮನೋಧರ್ಮಗಳನ್ನು ಹಬ್ಬದ ಆಚರಣೆಗಳಲ್ಲಿ

1. ಜೈನಾದಲ್ಲಿ 'ಫೆಸ್ಟಿವಲ್ಸ್ ಆಫ್ ದಿ ಡೆಡ್' ಆಚರಣೆಯಲ್ಲಿರುವುದು ತಿಳಿಯುತ್ತದೆ.
2. ಡಾ. ಚಿದಾನಂದಮೂರ್ತಿ : ಪಗರಣ ಮತ್ತು ಇತರ ಸಂಪ್ರಬಂಧಗಳು, ಪು. 159: ಪುಸ್ತಕ ಚಿಲುಮೆ, 1984.

ಗುರುತಿಸಬಹುದು. ಹಬ್ಬ ಮತ್ತು ಜಾತ್ರೆಗಳಲ್ಲಿರುವ ವ್ಯತ್ಯಾಸವನ್ನು ಸ್ಥೂಲವಾಗಿ ಹೀಗೆ ವಿವರಿಸಬಹುದು.

ಹಬ್ಬ. ಮುಖ್ಯವಾಗಿ ಪ್ರತಿ ಜನಪದದ ಕುಲದೇವತೆಯ ಆರಾಧನೆಯಾಗಿದ್ದು ಅದು ಕೌಟುಂಬಿಕ ವಲಯಕ್ಕೆ ಸೀಮಿತವಾಗುವಂಥದು—ಒಂದೆರಡು ಅಪವಾದಗಳು ಇವೆ- ಆದರೆ ಜಾತ್ರೆ, ಕುಲದೇವತೆ. ಗ್ರಾಮದೇವತೆಗಳ ಉತ್ಸವವಾಗಿದ್ದು. ವಿಭಿನ್ನ ಜನಪದ ವೃಂದಗಳನ್ನು ಅವರವರ ಕೌಟುಂಬಿಕ ಪರಿಧಿಯನ್ನು ದಾಟಿಸಿ ಎಲ್ಲರನ್ನೂ ಸಾಮಾಜಿಕ ವಲಯದಲ್ಲಿ ಒಂದುಗೂಡಿಸುವಂಥದು: ಎಲ್ಲರಲ್ಲಿ ಸಾಮರಸ್ಯ ಮನೋಭಾವ ಉಂಟು ಮಾಡುವಂಥದು.

ಹಬ್ಬ. ಕೃಷಿ ಕುಲಕಸುಬುಗಳ ಹಿನ್ನಲೆಯ ನಂಬಿಕೆ ಮತ್ತು ಧಾರ್ಮಿಕ ಶ್ರದ್ಧೆಗೆ ಬದ್ಧವಾಗಿರುವದರಿಂದ, ಹಬ್ಬದ ಆಚರಣೆಯಲ್ಲಿ ಕಲೆಗಳು ಅನಾವರಣಗೊಳ್ಳುವುದು ವಿರಳ. ಏನಿದ್ದರೂ ಅದೆಲ್ಲ ಒಂದು ಅಮಾಯಕ ಶ್ರದ್ಧೆ ಮತ್ತು ಪವಾಡಗಳ ಚೌಕಟ್ಟಿನ ಒಳಗೇ ವೀರಭದ್ರನ ಒಕ್ಕಲು ಇದ್ದ ಕುಟುಂಬಗಳಲ್ಲಿ ಮದುವೆಯಾದಾಗ ಹೊರಡಿಸುವ ಗುಗ್ಗಳ ಪುರವಂತರ ಕುಣಿತ ಮತ್ತು ಶಸ್ತ್ರ ಪವಾಡ ಇತ್ಯಾದಿಗಳು. ಅಂಬಾಭವಾನಿಯ ಭಕ್ತರಾದ ಗೊಂದಲಿಗರ ಕುಣಿತ ಹಾಡು. ಅಥವಾ ಬೇರೆ ದೇವರ ಭಕ್ತರ ದಟ್ಟೀಕುಣಿತ ಮುಂತಾದವು ಇದಕ್ಕೆ ನಿದರ್ಶನಗಳಾಗಿವೆ. ಇಂಥ ಆಚರಣೆಗಳನ್ನು ನೋಡಲು ಜನಸಮೂಹ ನೆರೆಯುವುದು ನಿಜ. ಆದರೆ ಅದು ಒಂದು ಧಾರ್ಮಿಕ ಶ್ರದ್ಧೆಯ ಕಕ್ಷೆಯ ಒಳಗೇ. ಈ ಬಗೆಯ ಹಬ್ಬವೊಂದು ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ರೂಢಿಯಲ್ಲಿದೆ. ಅದು 'ಭೂಮಿಗೆ ಹಾಲೆರೆಯುವ ಹಬ್ಬ'[1].

ಮಳೆರಾಯನ ಕೃಪೆ ಮತ್ತು ಭೂಮಿಯ ಫಲವತ್ತತೆಗಳಿಗಾಗಿ ಈ ಹಬ್ಬದ ಆಚರಣೆ. ಗ್ರಾಮದ ಎಲ್ಲ ವೃಂದದ ಜನರೂ ಈ ಹಬ್ಬದ ಆಚರಣೆಯಲ್ಲಿ ಭಾಗಿಗಳಾಗುತ್ತಾರೆ. ಭೂಮಿಗೆ ಬಿತ್ತಿಗೆಯಾಗುವ ಮೊದಲು ಸುಮಾರು ವೈಶಾಖ-ಜ್ಯೇಷ್ಠ ತಿಂಗಳುಗಳಲ್ಲಿ ನಡೆಯುವ ಈ ಹಬ್ಬದಲ್ಲಿ ಸಹಭಾಗಿತ್ವ ಹೊಂದುವ ಒಂದು ಕಲಾಗುಂಪು ಎಂದರೆ ಡೊಳ್ಳಿನವರದು. ಇತರ ಜನಪದ ವಾದ್ಯಮೇಳ ಇರುವುದಾದರೂ ಡೊಳ್ಳಿನ ಮೇಳದ ವಾದನ- ಕುಣಿತಗಳ ಕಕ್ಷೆಯೊಳಗೇ ಬರುವಂಥದು. ಊರಿನ

1. ಈ ಹಬ್ಬದ ಆಚರಣೆ ಒಂದು ಪ್ರತ್ಯೇಕ ಪ್ರಬಂಧದ ವಿಷಯವಾಗಿರುವದರಿಂದ ಅದರ ಕೇವಲ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ಸೂಚಿಸಿದ್ದೇನೆ. ಭೂಮಿಗೆ ಹಾಲೆರೆಯುವ ಹಬ್ಬದ ಆಚರಣೆಯಲ್ಲಿ 'ಆಕಾಶ ಜಾನಪದ' ಮತ್ತು 'ಭೂಮಿ ಜಾನಪದ' ಎರಡೂ ಬೆಸೆದು ಕೃಷಿ ಸಮುದಾಯದ ವಿಶಿಷ್ಟ ಸಂಸ್ಕೃತಿ ನಿರ್ಮಾಣಕ್ಕೆ ಕಾರಣವಾಗಿರುವುದು ಕುತೂಹಲಕಾರಿಯಾಗಿದೆ.

ಗಡಿಯನ್ನು ಸುತ್ತುವ ಈ ಉತ್ಸವದಲ್ಲಿ ಮುತ್ತೈದೆಯರು, ಕಹಳೆಯವರು ಮತ್ತು ಜಪಗೊಡ್ಡಿ, ಭರ್ಜಿ, ಕತ್ತಿ ಇತ್ಯಾದಿ ಶಸ್ತ್ರಾಸ್ತ್ರಗಳ ತಂಡದವರು ಭಾಗಿಗಳಾ-ಗುವುದು. ಹಾಲೆರೆಯುವ ಹಬ್ಬದ ಮೆರವಣಿಗೆಯು ಸಮಗ್ರ ರೂಪದ ಅಂಗವಾಗಿದೆ. ಗ್ರಾಮದೇವತೆಯ ಗುಡಿಯಲ್ಲಿರಿಸಿದ ಮಣ್ಣಿನ ಹೊಸ ಹರಿವೆಗಳಲ್ಲಿ ಹಾಲು ತುಂಬುವದರಿಂದ ಮೊದಲುಗೊಂಡು. ಆ ಹರಿವೆ ಅಥವಾ ಬಿಂದಿಗೆಯನ್ನು ತಲೆಮೇಲೆ ಹೊತ್ತು ಅದರಲ್ಲಿರುವ ರಂಧ್ರದ ಮೂಲಕ ಗಡಿಗುಂಟ ಭೂಮಿಗೆ ಹಾಲೆರೆದು ಗುಡಿಗೆ ಮರಳುವವರೆಗೂ ಧಾರ್ಮಿಕ ಶ್ರದ್ಧೆ. ಭೂಮಿತಾಯಿಯ ಮೇಲಿನ ಭಕ್ತಿ, ಆಕಾಶದ ಕೃಪೆಯ ನಿರೀಕ್ಷಣೆಗಳೇ– 'ಅತೀತ ಶಕ್ತಿಗಳ ಕೃಪಾಯಾಚನೆ' ಈ ಆಚರಣೆಯ ಪ್ರಮುಖ ಆಶಯ. ಅದರಂತೆ ಭೂತಾರಾಧನೆಯ ಮಂಡಲ ರಚನೆ, ವಾದ್ಯಮೇಳ ಕುಣಿತ ಇತ್ಯಾದಿಗಳಲ್ಲಿ ಕೂಡ ಪ್ರಾದಿಮ ಶ್ರದ್ಧೆಗೇ ಮಹತ್ವ[1] ಹಬ್ಬದ ಅಂಗವಾಗಿ ಜರುಗುವ ಈ ಆಚರಣೆಗಳಲ್ಲಿ ಕಲಾತ್ಮಕ ಅಂಶಗಳನ್ನು ಗುರುತಿಸಬಹುದೇ ಹೊರತು-ಇವುಗಳನ್ನು ನೇರವಾಗಿ ಕಲೆ ಎನ್ನುವಂತಿಲ್ಲ. ಆದರೆ ಜಾತ್ರೆಯ ಅಂಗವಾಗಿ ನಡೆಯುವ ಕ್ರಿಯೆಗಳಲ್ಲಿ ಹಬ್ಬದ ಆಚರಣೆಯ ಕೆಲವು ಅಂಶಗಳು ಸೇರಿಕೊಂಡಿದ್ದರೂ ಅವುಗಳಲ್ಲಿ ಇದಕ್ಕಿಂತ ಭಿನ್ನವಾದ, ಧಾರ್ಮಿಕ ಶ್ರದ್ಧಾವಲಯವನ್ನು ದಾಟಿದ ಜನಪದ ಬದುಕಿನ ಸೌಂದರ್ಯಸೃಷ್ಟಿ, ಶಕ್ತಿ ಪ್ರದರ್ಶನಗಳನ್ನು ಆಧರಿಸಿದ ಅಗಣಿತ ಅಂಶಗಳು ಹಾಸುಹೊಕ್ಕಾಗುತ್ತವೆ. ಜನಪದ ಶ್ರದ್ಧೆಯಂತೂ ಸರಿಯೇ. ಜೊತೆಗೆ ಸಾಮಾಜಿಕ ಹಿರಿಮೆಯ ಅನೇಕ ಬಗೆಯ ಕಲಾತ್ಮಕ ಚಟುವಟಿಕೆಗಳೂ ಒಡಮೆರೆದು ಜಾತ್ರೆಗೂ ಜನಪದ ಕಲೆಗಳಿಗೂ ಒಂದು ಸಾಂಸ್ಕೃತಿಕ ಸಂಬಂಧವನ್ನು ಕಲ್ಪಿಸುತ್ತವೆ. ಆದುದರಿಂದ ಜಾತ್ರೆಗಳು ಜನಪದ ಬದುಕಿನ ವಿವಿಧ ಆಯಾಮಗಳನ್ನು ಮೈಗೂಡಿಸಿಕೊಂಡ, ಸಂಸ್ಕೃತಿ ಸಂವಹನದ ವಿಶಿಷ್ಟ ನೆಲೆಗಳಾಗಿ ರೂಪುಗೊಳ್ಳುತ್ತ ಬಂದಿವೆ. ಈ ದೃಷ್ಟಿಯಿಂದ ಜಾತ್ರೆ ಜನಪದ ಸಂಸ್ಕೃತಿಯ ಒಂದು ಸಂಕೀರ್ಣ ವೇದಿಕೆ ಎಂದು ಹೇಳಬಹುದು.

ಜಾತ್ರೆ ನೆರವೇರದ ಯಾವ ಗ್ರಾಮವೂ ಇಲ್ಲ. ಇಂದಿನ ಮಿಶ್ರ ಸಂಸ್ಕೃತಿಯ ನಗರಗಳಲ್ಲಿಯೂ ಜಾತ್ರೆಗಳು ಜರುಗುವುದನ್ನು ನಾವು ಕಾಣುತ್ತೇವೆ. ಪ್ರತಿ ಜಾತ್ರೆಗೂ ಒಂದೊಂದು ಅಧಿದೇವತೆ. ಗ್ರಾಮದೇವತೆ, ಪ್ರದೇಶದೇವತೆ ಇತ್ಯಾದಿಗಳಿಗೆ ಅವುಗಳದ್ದೇ ಆದ ಪ್ರತ್ಯೇಕ ಸ್ಥಳಪುರಾಣ, ಐತಿಹ್ಯ, ಕ್ಷೇತ್ರ ಮಹಾತ್ಮೆ ಇದ್ದು ಇವುಗಳ ಹಿನ್ನೆಲೆಯಲ್ಲಿ ವರ್ಷದ ನಿರ್ದಿಷ್ಟ ಕಾಲದಲ್ಲಿ ಜಾತ್ರೆಗಳ ವೈಭವ. ಜಾತ್ರೆಗೊಂದು 'ಉಚ್ಚಾಯ' ಮತ್ತು ತೇರು. ಈ ತೇರಿನಲ್ಲಿ ಆಯಾ ದೇವತೆಯ ಪ್ರತಿಷ್ಠಾಪನೆ ಮತ್ತು ಜನಸಮೂಹ ಕೂಡಿ ತೇರನ್ನು ಎಳೆದು ಒಂದು 'ಪಾಜೆಗಟ್ಟೆ'ಗೆ ಒಯ್ಯು

1. '......ಬಹುತೇಕ ಎಲ್ಲ ಹಬ್ಬಗಳೂ ಸಾಮೂಹಿಕ ರಿಚುಯಲ್ಲಿನಿಂದ ಉಗಮಗೊಂಡಿವೆ' ಡಾ. ಚಿದಾನಂದಮೂರ್ತಿ : ಹಗರಣ ಮತ್ತು ಇತರ ಪ್ರಬಂಧಗಳು. ಪು. 154.

ವುದು ಮತ್ತೆ ಮರಳಿ ದೇವತೆಯು ಗುಡಿಗೆ ತಂದು ನಿಲ್ಲಿಸುವುದು ಇತ್ಯಾದಿ; ಜಾತ್ರೆಯ ಒಂದು ಪ್ರಾಥಮಿಕ ಮತ್ತು ಪ್ರಧಾನ ಕ್ರಿಯೆ.

ಕನ್ನಡ ಕಾವ್ಯಗಳಲ್ಲಿ ಜಾತ್ರೆ ಕುರಿತು ವಿಪುಲವಾದ ಉಲ್ಲೇಖಗಳು ಕಾಣಸಿಗುತ್ತವೆ. 'ಸಮಯ ಪರೀಕ್ಷೆ'ಯ ಎಕ್ಕಲದೇವಿ, ಯಶೋಧರಚರಿತೆಯ 'ಚಂಡಿ ಮಾರಿದೇವತೆ' ಮುಂತಾದ ಜಾತ್ರೆಗಳು ಕೆಲವು ಉದಾಹರಣೆ ಮಾತ್ರ. ಚಂಡಿ ಜಾತ್ರೆಯ ಅಂಗವಾಗಿ ನೆರವೇರುತ್ತಿದ್ದ ಪಶುಬಲಿ, ನರಬಲಿ–ಶಿಶುಬಲಿ– 'ಸಿರಳದ–ಗಾಳ', 'ಸಿಡಿ' 'ಉರಿಯ ಉಯ್ಯಲೆ' ಇತ್ಯಾದಿ ಆಚರಣೆಗಳ ವಿವರಗಳನ್ನು 'ಯಶೋಧರ ಚರಿತೆ ದಾಖಲುಗೊಳಿಸುತ್ತದೆ. ಎಲ್ಲರೂ–ಅರಸು ಮತ್ತು ಪುರಜನ ಕೂಡಿ, 'ಚಂಡಿಮಾರಿಗೆ ಸಂತಸಮಂ ಮಾಡಲೆಂದು ಜಾತ್ರೆಗೆ ನೆರೆದರ್'[1] ಎಂದು ಹೇಳುವಲ್ಲಿ ದೇವತೆಯ ಸಂತೃಪ್ತಿಗಾಗಿ ಜಾತ್ರೆ ಜರುಗುತ್ತಿದ್ದುದು ಸ್ಪಷ್ಟವಾಗಿದೆ.

'ಸಿದ್ಧರಾಮ ಪುರಾಣ'ದ ಶ್ರೀಶೈಲ ಜಾತ್ರೆ. 'ಬಸವಪುರಾಣ'ದ ವೀರಭದ್ರನ ಜಾತ್ರೆಯ ವಿವರಣೆ (42–10) ಇತ್ತೀಚೆಗೆ ಪ್ರಕಟಗೊಂಡ ಜಾತ್ರೆಯ ತಾರಾವಳಿಗಳು[2] ಜಾತ್ರೆಯನ್ನು ಕುರಿತ ಇತರ ಕೆಲವು ಉಲ್ಲೇಖಗಳಾಗಿವೆ.

ಒಂದು ಗ್ರಾಮದಲ್ಲಿರುವ ದೇವತೆ ಯಾವುದೇ ಒಂದು ನಿರ್ದಿಷ್ಟ ಮತ ಅಥವಾ ಕುಲಗುಂಪು, ಆರ್ಥಿಕ ಶ್ರೇಣಿಗೆ ಅನುಗುಣವಾದ ವೃಂದದಿಂದ ಅರ್ಚನೆಗೊಳ್ಳುತ್ತಿದ್ದರೂ ಆ ದೇವತೆಯ ಜಾತ್ರೆಯಲ್ಲಿ ವಿಶೇಷತಃ ತೇರೆಳೆಯುವ ಉತ್ಸವದಲ್ಲಿ, ಆ ಗ್ರಾಮದ ಎಲ್ಲ ಪಂಗಡಗಳ ಜನರೂ ತಮ್ಮ ತಮ್ಮ ಭೇಧಭಾವಗಳನ್ನು ಮರೆತು ಭಾಗಿಗಳಾಗುತ್ತಾರೆ. ಧಾರ್ಮಿಕ ಶ್ರದ್ಧೆ ಮತ್ತು ಭಕ್ತಿಭಾವನೆಗಳೇ ಮೂಲ ಪ್ರಚೋದನೆಯಾಗಿರುವ ಜಾತ್ರೆಗಳಲ್ಲಿ ಒಂದು ಗ್ರಾಮದ ಜನ ಮಾತ್ರವಲ್ಲದೆ ಒಂದೊಂದು ಪ್ರದೇಶದ ಸುತ್ತಮುತ್ತಣ ಅನೇಕ ಗ್ರಾಮಗಳ ಜನರೂ ಬಂದು ನೆರೆಯುತ್ತಾರೆ. ಇಂಥ ಸಂದರ್ಭಗಳಲ್ಲಿ ಗ್ರಾಮದೇವತೆ ತನ್ನ ಎಲ್ಲೆಗಳನ್ನು ವಿಸ್ತ-

1. ಯಶೋಧರ ಚರಿತ್ರೆ. 1–12.
2. ಅ) ತೋಂಟದ ಸಿದ್ಧೇಶ್ವರನ ತಾರಾವಳಿ, ಸಂ. ಡಾ. ಬಿ. ಆರ್. ಹಿರೇಮಠ. ಬಸವಪಥ: ಸಂ. 4, ಸಂ. 12. ಪು. 51.
   ಬ) ನಿಡುಗಲ್ಲದುರ್ಗದ ಶಿಖರ ಬಸವನ ಜಾತ್ರೆ. ತಾರಾವಳಿ. ಸಂ. ಡಾ. ವೀರಣ್ಣ ರಾಜೂರ, ಅದೇ, ಸಂ 2. ಸಂ 4. ಪು. 40.
   ಕ) ನಂಜುಂಡೇಶನ ಜಾತ್ರೆಯ ತಾರಾವಳಿ, ಸಂ. ಡಾ. ವೀರಣ್ಣ ರಾಜೂರ. ಬಸವಪಥ ಸಂ. 5. ಸಂ. 78. ಪು. 58.
   ಡ) ಅಂದಾನಿ ಸ್ವಾಮಿಗಳ ಜಾತ್ರೆಯ ತಾರಾವಳಿ, ಡಾ. ಸಂ. ವೀರಣ್ಣ ರಾಜೂರ, ಬಸವಪಥ ಸಂ. 16, ಸಂ. 3, ಪು. 148.

ರಿಸಿಕೊಂಡು. ಪ್ರದೇಶದೇವತೆಯಾಗಿ ಅಂಥ ಜಾತ್ರೆ ಒಂದು ಪ್ರಾದೇಶಿಕ ಮಟ್ಟದ ವ್ಯಾಪ್ತಿಯನ್ನು ಪಡೆಯುತ್ತದೆ.

ತೋಂಟದ ಸಿದ್ಧೇಶ್ವರನ ತಾರಾವಳಿಯೊಂದರಲ್ಲಿ ಉಲ್ಲೇಖಿತವಾಗಿರುವ ಊರುಗಳ ಪಟ್ಟಿ ಇದಕ್ಕೊಂದು ಉದಾಹರಣೆ.

ಜಾತ್ರೆ ನೋಡುವ ಬನ್ನಿ। ಸಿದ್ಧೇಶ್ವರ
ಜಾತ್ರೆ ನೋಡುವ ಬನ್ನಿ'

ಎಂದು ಆರಂಭವಾಗುವ ಈ ತಾರಾವಳಿಯಲ್ಲಿ ಯಾವ ಯಾವ ಊರುಗಳಿಂದ 'ಪರಿಸೆ' ಬಂದು ಸೇರಿತು ಎನ್ನುವುದರ ವಿವರವಿದೆ.

ಜಿವರೂರ. ಸ್ವಾದಿ. ಬಂಕಾಪುರ, ಗದಗ-ಬೆಟಗೇರಿ. ಸವಣೂರ, ಹುಬ್ಬಳ್ಳಿ ಜಿವರಿಯ ಕೋಟೆ. ಸತಾರಿ, ತೀರ್ಥಹಳ್ಳಿ, ಜಂಬುಖಂಡಿ. ಕಿತ್ತೂರ, ಕರ್ಜಗಿ. ಅಗಡಿ ಹಾವೇರಿ, ಲಕ್ಷ್ಮೇಶ್ವರ, ಹರಪನಹಳ್ಳಿ. ಉಚ್ಚಂಗಿ, ರಾಯದುರ್ಗ, ಚಿತ್ರರಕಲ್ಲು, ಮೊಳಕಾಲ್ಮೂರು, ಗುಡಿಕೋಟೆ, ಸೊಂಡೂರು. ಕಂದನೊಳಿ, ಗದ್ದವಾಲಿ. ಕುಂವನೂರು. ಆದವಾನಿ, ಗಂಗಾಧರನಗಡ್ಡ, ಸಿರಗುಪ್ಪಿ. ಸಿಂಧನೂರು. ಸಾಲ-ಗುಂದಿ, ತಾವರಗೇರಿ, ಹೊಸಪೇಟೆ. ಕಮಲಾಪುರ. ಹಂಪಿ ಪಟ್ಟಣ. ಹೊಸೂರು ಹುಲಿಗಿ. ಆನೆಗುಂದಿ. ಕಂಪ್ಲಿ. ಕುರಗೊಡ. ಕುಡತಿನಿ, ಬಳ್ಳಾರಿ. ನಂದಾಪುರ, ಮುಸ್ಕಿ. ರಾಯಚೂರ, ಗಂಡಮುಟ್ಟಿಕಲ್ಲು. ನಾರಾಯಣಪೇಟೆ, ಮಾನ್ವಿ, ಕವಿತಾಳ ಬಳಗಾನೂರು, ಗೋಸ್ಕಿ. ಅಮರಗುಂಡ. ಗುಡಗುಂಟಿ. ಸುರಪುರ. ರಾಜವಳ್ಳಿ, ಶಪಪುರ, ಬಳ್ಳಿಗುಳ್ಳಿ, ಮಧುವಕೇರಿ. ಕಪ್ಪಡಿಸಂಗಮ. ಮುದಗಲ್ಲು. ಹುನಗುಂದ. ಕೊಪ್ಪಳ. ಕನಕೇರಿ, ಹಿರೇಗಜಂತ್ರಿ. ಯಲಬುರ್ಗಿ, ಕುಕನೂರು. ಮುಧೋಳ, ಮುಗೇರಿ. ಜಕ್ಕಲಿ, ರೋಣ. ತೊರಗಲ್ಲು, ಬಾದಾಮಿ, ಹಿರಿಯಬಾಗಡಿಕೋಟೆ, ನರಗುಂದ, ಮೊರಬ. ನವಲಗುಂದ, ಸವದತ್ತಿ. ಸವಣೂರ. ಮುಳಗುಂದ. ಉಪ್ಪಿನ–ಬೇಟಗೇರಿ. ಲಕ್ಕುಂಡಿ– ಹೀಗೆ ಸುಮಾರು 84 ಊರುಗಳಿಂದ ಪರಿಸೆ ಬಂದು 'ನಮಗಿಂದು ಪದವಿಯ ಪಾಲಿಸೆಂದು', 'ನಮಮಲ ಶಿವನು ಜಂಗಮಕೆ ನೀಡುವ ನೆಂದು' ಮಕ್ಕಳ ಹರಕೆಯಿಂದ ಕಾಣಿಕೆಯ ತಂದಿಕ್ಕಿ ಪಾಪಕ್ಕೆ ಮುಕ್ತಿಯಿಂದ್ದ ಬೇಳುವರಯ್ಯ' ಎಂದು ಮುಂತಾಗಿ ವರ್ಣಿಸಲಾಗಿದೆ.

ಸ್ಥಳನಾಮಗಳ ಅಧ್ಯಯನಕ್ಕೆ ಆಕರವಾಗಿರುವ ಈ ಬಗೆಯ ತಾರಾವಳಿ-ಗಳಲ್ಲಿ ಕಾವಿಯ ಪವಾಡ, ನೀಲಗಂಬಳಿ ಜಾಡಿಹೊದ್ದ, ತೋಳೊಳು ಆಧಾರಧರಿಸಿದ...... ವಿರಕ್ತರು– 'ಇಷ್ಟಲಿಂಗ ಪ್ರತಿಪಾಲರು ಪಂಚೇಂದ್ರಿಯ ಮೂಲವನ್ನೆಲ್ಲ ಕಿತ್ತು ನೀಡಾಡಿದಂಥವರ ವರ್ಣನೆಯೂ ಬಂದಿದೆ.

ಅಂಬಾನಿಸ್ವಾಮಿಯ ಜಾತ್ರೆಯ ತಾರಾವಳಿಯಲ್ಲಿ ಬರುವ ಕೆಲವು ವರ್ಣನೆಗಳು ಜಾತ್ರೆಯ ವೈಭವ ಮತ್ತು ಜನಪದ ವಾದ್ಯಮೇಳದ ಮತ್ತು ಮಹಿಳೆಯರು ಧರಿಸಿದ ಆಭರಣಗಳ ವಿವರ ನೀಡುತ್ತವೆ. ನಗಾರಿ. ಸೌಬತ್ತು. ಹೆಗ್ಗಾಳಿ. ಚಿನಿ-ಕಾಳಿ, ಕರಡಿ, ಸಮೇಳ (ಸಂಬಾಳ) ಜಾಗಟೆ, ಗಂಟೆ, ಕೈತಾಳ ಮುಂತಾದವುಗಳ ಅರ್ಭಟ ಒಂದೆಡೆಯಾದರೆ, ಬಂಗಾರದ ಹರಗುಟಿಜೌರಿ. ಮುಂತಿನದಂಡೆ. ಚೌಕಬಾವುಲಿ, ಬುಗುಡಿ, ಝುಮಕಿನ ಬಳಿ, ಮುತ್ತು. ಕಾಸಬಾವಲಿ. ಬುಗಡಿಗಂಟಿ. ಸರಪಳಿಸರ, ಏಕಾವಳಿ, ನತ್ತು, ಸರಗೆಜ್ಜಿ. ಟೀಕೆ. ಒಂಬತ್ತು ಎಳಿಯ ಗೋದಿಸರ ಕಟ್ಟಾಣಿ, ಮುತ್ತಿನಸರ, ಮಲ್ಲಿಗಿಹಾರ. ಸರಗಿ. ಸರಮುತ್ತುಪದಕ. ತೋಳಬಾಪುರಿ. ಬಂದಿ, ಕಡಗ, ಕಂಕಣ, ತೋಳಬಂದಿ, ಹರಡಿಗಿ. ಕೈಕಟ್ಟು. ಗೀರಬಂಗಾರಬಳಿ. ಒಡ್ಯಾಣ, ರತ್ನಕೆಚ್ಚಿದ ಡಾಬು. ಕಾಲ್ಗಡಗ, ರುಳಿ. ಗೆಜ್ಜಿ. ಪೈಜಣ. ಪಿಲ್ಲಿ ಮುಂತಾದವುಗಳನ್ನಾಧರಿಸಿದ ಹೆಂಗಳೆಯರ ಸಡಗರ ಸಂಭ್ರಮ ಇನ್ನೊಂದೆಡೆ.[1]

ಧರೆಗೆ ಕಲಿಯುಗ ಹೆಚ್ಚಿ ಧರ್ಮ ಏಳಿಸುವಂಥ
ಕರಪಾತಕರ ಕೈಯಿಂದ ಕರ್ಮ ಹೊದ್ದದಹಾಗೆ
ಧರೆಯೊಳು ದುರಿತದೋಷವು ಮೀರಿ ಬಂದರೆ
ಪರಿಹರಿಸುವ ವೀರ ಪ್ರತ್ಯಕ್ಷರಣಶೂರ'

ಇತ್ಯಾದಿ ನಿರೂಪಣೆ ಜಾತ್ರೆಯ ಧಾರ್ಮಿಕ ಗುರಿಯನ್ನು ಸ್ಪಷ್ಟಪಡಿಸುತ್ತವೆ.

ಜಾತ್ರೆಗಳನ್ನು ಕುರಿತು ರಚನೆಗೊಂಡಿರುವ ಬಹುತರ ತಾರಾವಳಿಗಳಲ್ಲಿ ಜಾತ್ರೆಯ ಅಂಗವಾಗಿ ಜರುಗುತ್ತಿದ್ದ ಇತರ ಶಕ್ತಿಶೌರ್ಯ ಪ್ರದರ್ಶನ. ರಂಗಕಲೆಗಳ ವಿಶೇಷ ಉಲ್ಲೇಖ ಬರುವುದಿಲ್ಲ. ಇದು ತಾರಾವಳಿಗಳ ಸ್ವರೂಪ ರಚನೆಯ ಪರಿಮಿತಿಗೂ ಸೂಚಿಯಾಗಿದೆ. ಇಂಥವುಗಳನ್ನು ಬಿಟ್ಟರೆ ಕೆಲವು ಹಾಡು. ಲಾವಣಿಗಳಲ್ಲಿಯೂ ಶ್ರೀಶೈಲ, ಶರಣಬಸವೇಶ್ವರ, ಸಿದ್ಧರಾಮ. ಕಾದರಲಿಂಗ. ಮುಂತಾದ ಜಾತ್ರೆಗಳ ಉಲ್ಲೇಖ ದೊರೆಯುತ್ತದೆ. ಇಂಥ ಲಾವಣಿಗಳಲ್ಲಿ ಆಯಾ ದೇವತೆಯ ಮಹಿಮೆ. ಜಾತ್ರೆಗೆ ಹೋಗುವವರಲ್ಲಿರಬೇಕಾದ ಭಕ್ತಿಭಾವ ಧಾರ್ಮಿಕ ಶ್ರದ್ಧೆ ನೀತಿಗಳಿಗೇ ಒತ್ತುಕೊಡಲಾಗಿದೆ: ಉದಾಹರಣೆಗೆ ಶ್ರೀಶೈಲ ಜಾತ್ರೆ ಕುರಿತು ಲಾವಣಿ ನೋಡಬಹುದು:

'ಅಲ್ಲೆ ಇಲ್ಲೆ![1] ಯಾಕ ಹುಡುಕತೀರಿ
ನಿಮ್ಮಲ್ಲೆಹಾನ ಮಲ್ಲಿಕಾರ್ಜುನ
....

1. ಬಬಲಾದಿಯ ಬಂಗಾರೆವ್ವನ ಮೇಳದವರು ಇತ್ತೀಚೆಗೆ 1984 ರ ಅಕ್ಟೋಬರ ಮೊದಲನೆಯ ವಾರದಲ್ಲಿ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಸ್ತುತಪಡಿಸಿದ ಲಾವಣಿಗಳಲ್ಲಿ ಒಂದು.

ಬ್ರಹ್ಮಾಂಡದೊಳಗಿನ ಆಕಾರ ಎಲ್ಲಾ
ಪಿಂಡಾಂಡದೊಳಗವ ನೋಡಣ್ಣಾ
....
ಪರ್ವತಕ್ಕೋದವರು ಹಾಗೆ ಬರ್ತಾರೊ
ಆದವು ಬೆಳ್ಗ ತಲೀ ... .
ಮನಸಿನ ಮೈಲಿಗಿ ತೊಳಿಯಲಾರ್ದ
ಹುಡುಕತೀರಿ ಅತ್ತ ಇತ್ತ
....
ಮನಸಿನಂತೆ ಮಲ್ಲಿಕಾರ್ಜುನದಾನಂತ
ಕೂಗತಾವೊ ಶಾಸ್ತರಾ.......... ...

ಹೀಗೆ ಮುಂದುವರಿದ ಲಾವಣಿಕಾರ ಉಸ್ತಾದ ಮೋದಿನಸಾಬ ಈ ರಚನೆಯ ಕೊನೆಯಲ್ಲಿ ಹೇಳುವ ಮಾತು ಜಾತ್ರೆಯನ್ನು ಕುರಿತ ಜನಪದ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದೆ.

'ಜೇ ಬಿಸ್ಮಿಲಾ, ಜೇ ಬಿಸ್ಮಿಲಾ ಅಂತಾರ ಹಗಲೆಲ್ಲಾ
ನಿಮ್ಮಲ್ಲೆ ಹಾನ ಅಲ್ಲಾ ಎಲ್ಲಾ, ಯಾರ್ಯಾರೇನ್ಕಂಡಿಲ್ಲಾ'

ಯಾವ ದೇವತೆಯ ಜಾತ್ರೆಯೇ ಆಗಿರಲಿ, ಎಲ್ಲ ದೇವತೆಗಳು ಒಂದೇ ರೂಪ ಮತ್ತು ಆ ದೇವತೆಯನ್ನು ಅಲ್ಲಿ ಇಲ್ಲಿ ಹುಡುಕುವುದು ಅನಗತ್ಯ ಎನ್ನುವ ಪರಮ ಅನುಭವ ಜನಪದರ ಅನಿಸಿಕೆ. ಈ ಧಾರ್ಮಿಕ ಸಾಮರಸ್ಯ ಜನಪದರಲ್ಲಿ ಮೂಡುವುದು ಅಪ್ರಜ್ಞಾಪೂರ್ವಕವಾಗಿ ಮತ್ತು ಅಷ್ಟೇ ಸಹಜವಾಗಿ.[1] ಆದರೆ ಜಾತ್ರೆಗಳ ಆಚರಣೆ ಇಷ್ಟಕ್ಕೆ ಸೀಮಿತವಾಗಿದ್ದರೆ ಇದಕ್ಕೆ ಅಷ್ಟೊಂದು ಮಹತ್ವ ಪ್ರಾಪ್ತವಾಗುತ್ತಿರಲಿಲ್ಲ. ಜಾತ್ರೆಯ ತೇರು ಎಳೆದ ನಂತರ ಜಾತ್ರೆಯ ಕ್ಷೇತ್ರದಲ್ಲಿ ನಡೆಯುವ ಅನೇಕ ಬಗೆಯ ಮನರಂಜನೆ, ಮೋಜು, ಮತ್ತು ಕಲಾ ಪ್ರದರ್ಶನಗಳು ಜಾತ್ರೆಗೆ ಒಂದು ಸಾಮಾಜಿಕ ಆಯಾಮವನ್ನು ಕಲ್ಪಿಸಿಕೊಡುತ್ತವೆ. ಆಗ

---

1. ರಾಯಚೂರ ಜಿಲ್ಲೆಯ ಚಿಕ್ಕೇನಕೊಪ್ಪ ಗ್ರಾಮದಲ್ಲಿ ಇಂದಿಗೂ ವೈಭವದಿಂದ ನಡೆಯುವ 'ಅಲಾವಿ ಹಬ್ಬ' ಅಥವಾ ಮೊಹರಮ್ ಜಾತ್ರೆ ಇದಕ್ಕೆ ನಿದರ್ಶನವಾಗಿದೆ. ಪ್ರತಿಶತ 98 ರಷ್ಟು ಮುಸಲ್ಮಾನೇತರ ಜನರಿರುವ ಈ ಗ್ರಾಮದಲ್ಲಿ ಅಲ್ಲಾಸಾಬನ ಜಾತ್ರೆ ನೆರವೇರುವುದು. ರಡ್ಡಿ, ಕುಡುವೊಕ್ಕಲಿಗ, ಕುರುಬ, ಕುಂಬಾರ, ತಳವಾರ, ಬ್ಯಾಗಾರ, ಚಲವಾದಿ ಇತ್ಯಾದಿ ಜನಸಮುದಾಯದ ನೆರವಿನಿಂದಲೇ; ಮತ್ತು ಈ ಜನಸಮೂಹ ಅಲಾವಿ ಜಾತ್ರೆಯ ಆಚರಣೆ, ಕಲಾ ಪ್ರದರ್ಶನಗಳಲ್ಲಿ ನೇರವಾಗಿ ಭಾಗವಹಿಸುವುದು ಕುತೂಹಲಕಾರಿಯಾಗಿದೆ.

ಧಾರ್ಮಿಕ ಸಮನ್ವಯ ಭಕ್ತಿ ಭಾವನೆಗಳ ಜೊತೆಗೆ ವಿವಿಧ ಜನಪದ ವೃಂದಗಳಲ್ಲಿ ಒಡಮೂಡುವ ಸಾಮಾಜಿಕ ಸಮನ್ವಯ ಮತ್ತು ಸಾಮೂಹಿಕ ಕ್ರಿಯಾಶೀಲತೆಗಳು ಜಾತ್ರೆಗೆ ಒಂದು ಬಗೆಯ ಸಾಂಸ್ಕೃತಿಕ ಸ್ವರೂಪ ತಂದುಕೊಡುವಲ್ಲಿ ಸಫಲವಾಗುತ್ತವೆ.

ಈ ದೃಷ್ಟಿಯಿಂದ ಜಾತ್ರೆಯನ್ನು ಎರಡು ಹಂತಗಳಲ್ಲಿ ವಿಂಗಡಿಸಬಹುದು:

ಮೊದಲನೆಯ ಹಂತ : ಗಾಮದೇವತೆಯ ಕ್ಷೇತ್ರ ಶುದ್ಧಿಯಿಂದ ಮೊದಲುಗೊಂಡು, ಗ್ರಾಮದೇವತೆಯ ಅಲಂಕಾರ, ಆರಾಧನೆ, ಕಾಣಿಕೆ ಸಮರ್ಪಣೆ, ದೇವತೆಯನ್ನು ಪಲ್ಲಕ್ಕಿ ತೇರಿನಲ್ಲಿ ಪ್ರತಿಷ್ಠಾಪಿಸುವುದು, ರಥೋತ್ಸವ, ರಥ 'ಪಾಜೆಗಟ್ಟಿ' ಯನ್ನು ಮುಟ್ಟಿ ಪುನಃ ಕ್ಷೇತ್ರಕ್ಕೆ ಮರಳುವುದು— ಈ ಹಂತದ ಎಲ್ಲ ಬಗೆಯ ಆಚರಣೆಗಳಲ್ಲಿ— ಸ್ತೋತ್ರ, ಭಜನೆ, ವಾದ್ಯವೈಭವ ಕುಣಿತ ಇತ್ಯಾದಿ— ಒಂದು ಧಾರ್ಮಿಕ ಪ್ರಜ್ಞೆ ಮತ್ತು ಭಕ್ತಿಯ ಆವೇಶಗಳು ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ.

ಎರಡನೆಯ ಹಂತ : ಜಾತ್ರೆಯ ಎರಡನೆಯ ಹಂತ ಮೊದಲಾಗುವುದು ತೇರೆಳೆದ ನಂತರವೇ.

ತೇರು ಎಳೆದ ಬಳಿಕ ವಿವಿಧ ಪ್ರದೇಶದಿಂದ ಬಂದ ಪರಿಸೆ ಜಾತ್ರೆಯ ಕ್ಷೇತ್ರದಲ್ಲಿ ಹಿಂಡುಹಿಂಡಾಗಿ ಕೂಡುತ್ತದೆ. ಬೇರೆ ಬೇರೆ ಜನಪದ ಕಲೆಯ ತಂಡಗಳು ತಮ್ಮ ತಮ್ಮ ಕಲೆಗಳ ಪ್ರದರ್ಶನ ನೀಡುತ್ತಾರೆ. ಕ್ಷೇತ್ರದ ಅಧಿದೇವತೆಯ ಗುಡಿಯ ಅಂಗಳ ಅಥವಾ ಮುಂಭಾಗದ ಬಯಲು ಹೀಗೆ ತಮಗೆ ಪ್ರಶಸ್ತವಾದ ಸ್ಥಳದಲ್ಲಿ ಒದೊಂದು ಕಲಾತಂಡ ತಮ್ಮ ಕಲೆಯನ್ನು ಪ್ರದರ್ಶಿಸುವುದು ವಾಡಿಕೆ. ಎಲ್ಲಮ್ಮನ ಜಾತ್ರೆಯಲ್ಲಿ ಚೌಡಿಕೆ ಹಾಡು, ಜೋಗತಿ ಕುಣಿತ, ಬೀರದೇವರ ಜಾತ್ರೆಯಲ್ಲಿ ಡೊಳ್ಳಿನ ವಾದನ, ಪಟ್ಟೇ ಕುಣಿತ, ಅಂಬಾಭವಾನಿ ಜಾತ್ರೆಯಲ್ಲಿ ಗೊಂದಲಿಗರ ಹಾಡು ಕುಣಿತ, ವೀರಭದ್ರ, ಸಿದ್ಧರಾಮನ ಜಾತ್ರೆಗಳಲ್ಲಿ ನಂದಿಕೋಲು ಕುಣಿತ, ಪುರವಂತರ ಕುಣಿತ, ಮೈಲಾರ ಜಾತ್ರೆಯಲ್ಲಿ ಗೊರವಪ್ಪಗಳ ಹಾಡು ಕುಣಿತ, ಬಸವೇಶ್ವರ, ಶರಣಬಸವೇಶ್ವರ ಜಾತ್ರೆಗಳಲ್ಲಿ ಕೋಲಾಟ, ಗೆಜ್ಜೆ ಕುಣಿತ, ಮಾದೇಶ್ವರ ಜಾತ್ರೆಯಲ್ಲಿ ಕಂಸಾಳ ಮೇಳ– ಹೀಗೆ ಆಯಾ ಪ್ರದೇಶ ಮತ್ತು ಅಧಿದೇವತೆಗಳಿಗೆ ಅನುಗುಣವಾಗಿ ಆಯಾ ಜಾತ್ರೆಗಳಲ್ಲಿ ವಿಶಿಷ್ಟವಾಗಿರುವ ಕಲೆಗಳ ಪ್ರದರ್ಶನ ಕಲಬುರ್ಗಿಯ ಶರಣಬಸವೇಶ್ವರ, ಸವದತ್ತಿ ಎಲ್ಲಮ್ಮ, ಅಂಕಲಿಯ ಅಡವಿಸ್ವಾಮಿ ಜಾತ್ರೆ ಮುಂತಾದೆಡೆಯಲ್ಲಿ 'ಪರದೇಸಿ ನಾಗೇಶಿ' ಲಾವಣಿ. ಗೀಗೀ ಮೇಳಗಳ ವೈಭವ ವರ್ಣನಾತೀತ. ತೇರೆಳದ ದಿನ ರಾತ್ರಿ ಸುಮಾರು 8 ಗಂಟೆಗೆ ಆರಂಭಗೊಳ್ಳುವ 'ಪರದೇಶಿ ನಾಗೇಶಿ' ತಂಡಗಳ ಹಾಡು ಸ್ಪರ್ಧೆ ಬೆಳ್ಳಿ ಮೂಡುವವರೆಗೂ ನಡೆಯುತ್ತವೆ.

ಇನ್ನು ಕೆಲವು ಜಾತ್ರೆಗಳಲ್ಲಿ ತೊಗಲುಗೊಂಬೆಯಾಟ, ಸೂತ್ರಗೊಂಬೆಯಾಟ, ದೊಡ್ಡಾಟ ಸಣ್ಣಾಟಗಳ ಪ್ರದರ್ಶನ ನಡೆಯುವುದುಂಟು. ಸುತ್ತಮುತ್ತಣ ಯಾವುದೇ ಗ್ರಾಮದ ತಂಡ ತಮ್ಮ 'ಹರಕೆ' ಸಲ್ಲಿಸುವುದಕ್ಕಾಗಿ ಇಂಥ ಜಾತ್ರೆಗಳಿಗೆ ಬಂದು ತಮ್ಮ ತಮ್ಮ ಆಟಗಳನ್ನು ಪ್ರದರ್ಶಿಸುತ್ತಾರೆ.

ಜಾತ್ರೆ ನೆರವೇರಿಸುವಲ್ಲಿ ಗ್ರಾಮದಪಂಚಾಯತಿ ಮತ್ತು ಅರ್ಚಕವರ್ಗ ಮುಖ್ಯ ಪಾತ್ರವಹಿಸುತ್ತವೆ. ನಿರ್ದಿಷ್ಟ ಕಾಲಾವಧಿಯಲ್ಲಿ ಜರಗುವ ವಿವಿಧ ಪ್ರದೇಶಗಳ ಜಾತ್ರೆಯ ಎಲ್ಲ ಹಂತದ ವ್ಯವಸ್ಥೆಗಳನ್ನು ಒಂದು ಕ್ರಮದಲ್ಲಿ ನಡೆಸಲು ಆಯಾ ಗ್ರಾಮದ ಪಂಚರು ಅಥವಾ ಪ್ರಮುಖರ ಒಂದು ಜಾತ್ರಾ ಸಮಿತಿ ರೂಪುಗೊಳ್ಳುತ್ತಿದ್ದು ಜಾತ್ರೆಯ ಅಂಗವಾಗಿ ನಡೆಯುವ ಎಲ್ಲ ಬಗೆಯ ಧಾರ್ಮಿಕ ವಿಧಿಕ್ರಿಯೆ ಮತ್ತು ಆಚರಣೆಗಳ ನಿರ್ವಹಣೆಗಾಗಿ ಆಯಾ ಕ್ಷೇತ್ರದೇವತೆಯ ಅರ್ಚಕವರ್ಗದ ಸಲಹೆ ಸೂಚನೆಗಳನ್ನು. ನೆರವನ್ನು ಪಡೆಯಲಾಗುತ್ತಿದೆ. ಈ ಬಗೆಯ ಆಚರಣೆಗಳ ವೈಶಿಷ್ಟ್ಯವೆಂದರೆ ಗ್ರಾಮದ ವಿವಿಧ ಜನಪದ ವೃಂದಗಳ ಜನರೂ ಇವುಗಳಲ್ಲಿ ಭಾಗವಹಿಸುವುದು. ರಥೋತ್ಸವದ ನಂತರ ನೆರೆದ ಪರಿಸೆಯಲ್ಲಿ ಜರಗುವ ಇತರ ಕಲಾತಂಡಗಳ ಪ್ರದರ್ಶನ– ಸ್ಪರ್ಧೆ ಮತ್ತು ಉತ್ತಮವೆಂದು ಕಂಡುಬರುವ ತಂಡಗಳಿಗೆ 'ಬೆಳ್ಳಿಕಡಗ' ಇತ್ಯಾದಿಗಳ ಪುರಸ್ಕಾರ ನೀಡುವುದು ಮುಂತಾದ ಕಾರ್ಯದ ಜವಾಬ್ದಾರಿ ಮಾತ್ರ 'ಪಂಚರ' ಮೇಲೆಯೇ ಬೀಳುತ್ತದೆ. 'ಪಂಚರು' ನೀಡಿದ ಯಾವುದೇ ನಿರ್ಣಯಗಳನ್ನು ಜಾತ್ರೆಯಲ್ಲಿ ಕಲಾಪ್ರದರ್ಶನ ನೀಡಿದ ತಂಡಗಳು ಪ್ರಶ್ನಿಸುವುದಿಲ್ಲ. ವಿವಿಧ ಕಲೆಗಳನ್ನು ಪ್ರದರ್ಶಿಸಿ ಎಲ್ಲ ತಂಡಗಳಿಗೂ ಬಹುಮಾನ ಮತ್ತು ಪುರಸ್ಕಾರ ನೀಡುವುದು ಈ ಜಾತ್ರಾ ಸಮಿತಿಗಳ ವೈಶಿಷ್ಟ್ಯ. ಜೊತೆಗೆ ಪಂಚರ ಈ ಸಮಿತಿಯನ್ನು ಜನ 'ದೈವ'ವೆಂದೇ ಕರೆಯುತ್ತಾರೆ. ಏಕೆಂದರೆ 'ಪಂಚರು ಪರದೈವದ ಪ್ರತೀಕ'ವೆಂದು ಜನಪದರ ನಂಬಿಕೆ.

ಧಾರ್ಮಿಕ ಶ್ರದ್ಧೆಯನ್ನೂ ಒಳಗೊಂಡು ಅದನ್ನು ಮೀರಿದ ಕಲಾತ್ಮಕ ಸಾಧನೆ ಸಿದ್ಧಿಗಳ ಪ್ರದರ್ಶನ ವೇದಿಕೆಯಾಗಿ ರೂಪುಗೊಳ್ಳುವ ಜಾತ್ರೆ, ಎಲ್ಲ ಬಗೆಯ ಕಲೆಗಳ ಬೆಳವಣಿಗೆಗೆ ಅವಕಾಶ ಕಲ್ಪಿಸಿಕೊಡುತ್ತದೆ. ಕರ್ನಾಟಕದ ವಿವಿಧ ವೃತ್ತಿ ಗಾಯಕ ಮೇಳಗಳು ಮತ್ತು ಹವ್ಯಾಸಿ ಕಲಾತಂಡಗಳು ನಿರಂತರ ಜೀವದಾನ ಪಡೆಯುವಲ್ಲಿ ಮತ್ತು ಉತ್ಸಾಹ ಆಸಕ್ತಿಗಳನ್ನು ಉಳಿಸಿಕೊಂಡು ಬರುವಲ್ಲಿ ಜಾತ್ರೆಗಳು ನಿರ್ವಹಿಸುತ್ತ ಬಂದಿರುವ ಪಾತ್ರ ಗಮನಾರ್ಹವಾಗಿದೆ.

ಸಾಮಾನ್ಯವಾಗಿ ಒಂದೊಂದು ಕಲೆ ಒಂದೊಂದು ಪಂಗಡಕ್ಕೆ ಸೀಮಿತವಾಗಿರುತ್ತದೆ. ಡೊಳ್ಳಿನ ವಾದನ ಮತ್ತು ಕುಣಿತ ಬೀರದೇವರ ಭಕ್ತರ ಪಂಗಡಕ್ಕೆ ಅಥವಾ ಪುರವಂತರ ಕುಣಿತ ವೀರಭದ್ರನ ಆರಾಧಕ ಗುಂಪಿಗೆ ಇತ್ಯಾದಿ. ಆದರೆ

ಒಂದು ಪಂಗಡದ ವ್ಯಕ್ತಿ ತಾನು ವೀರಭದ್ರನ ಒಕ್ಕಲಾಗಿದ್ದರೂ ಡೊಳ್ಳು ವಾದನದಲ್ಲಿ ಪರಿಣತನಾದರೆ ಆತ ತನ್ನ ಕಲಾಪರಿಣತಿಯಿಂದಾಗಿ ಡೊಳ್ಳಿನ ವಾದನದ ತಂಡದಲ್ಲಿ ಸೇರಿಕೊಳ್ಳುತ್ತಾನೆ ಅಥವಾ ಬೀರದೇವರ ಭಕ್ತನೊಬ್ಬ ಪುರವಂತರ ಕುಣಿತದಲ್ಲಿ ಪರಿಣತನಾಗಿದ್ದರೆ ಆತ ಪುರವಂತರಕುಣಿತದಲ್ಲಿ ಭಾಗಿಯಾಗಬಹುದು. ಹೀಗೆ ಭಿನ್ನ ಭಿನ್ನ ಕಲಾಮೇಳಗಳಲ್ಲಿ ಅವರವರ ಕಲಾಕೌಶಲ್ಯ ಮತ್ತು ವಿಶಿಷ್ಟ ಸಾಧನೆಗಳಿಗೆ ಅನುಗುಣವಾಗಿ ಪರಸ್ಪರ ಪಂಗಡಗಳಲ್ಲಿ ಬೆರೆಯುತ್ತಾರೆ. ಹೀಗೆ ವಿವಿಧ ಪಂಗಡದ ಜನ ಅಪ್ರಯತ್ನಿತವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ತಮ್ಮ ತಮ್ಮ ಪಂಗಡ, ಮತ ಪಂಥಗಳ ಸೀಮೆಗಳನ್ನು ದಾಟುತ್ತಾರೆ: ತಾವೆಲ್ಲರೂ ಒಂದು ಎನ್ನುವ ಸಹಜ ಸಮರಸ ಮನೋಭಾವದಿಂದ ವರ್ತಿಸುತ್ತಾರೆ. ಇಂಥ ಸಂದರ್ಭಗಳಿಂದಾಗಿ ಜನಸಮುದಾಯದ ಧಾರ್ಮಿಕ ಶ್ರದ್ಧೆಗೆ ಸಾಮಾಜಿಕ ನೀತಿಯ ಸಾಮೂಹಿಕ ಒಗ್ಗಟ್ಟಿನ ಆಯಾಮಗಳು ಅಳವಡುವುದು ಉಸಿರಾಟವಷ್ಟು ಸಹಜವಾಗುತ್ತದೆ.

ಜಾತ್ರೆಗಳಲ್ಲಿ ಪ್ರದರ್ಶನಗೊಳ್ಳುವ ಇತರ ಕೆಲವು ಲಘು ಮನರಂಜನೆ ಒದಗಿಸುವ ಸಂಗತಿಗಳನ್ನು ನೇರವಾಗಿ ಕಲೆಗಳೆಂದು ಕರೆಯಲು ಬಾರದು: ಆದರೆ ಅದೇ ಕಾಲಕ್ಕೆ ಅವುಗಳಿಂದಾಗಿ ಜಾತ್ರೆಗೆ ಬಣ್ಣವೇರುವುದನ್ನೂ ಅಲ್ಲಗಳೆಯಲಾಗುವದಿಲ್ಲ: ಸಿನಿಮಾ ತಂತ್ರಕ್ಕೆ ಮೂಲವೆಂದು ಹೇಳಬಹುದಾದ 'ಮುಂಬೈ ದೇಖೋ' ಪೆಟ್ಟಿಗೆ, ಅವನು ಕುಟ್ಟುವ ತಾಳಗಳ ಗತ್ತು. ಒಂದೊಂದಾಗಿ ಬಿಚ್ಚಿಕೊಳ್ಳುವ 'ಕುಂಬಾರನಾಗಿ' 'ಮುಂಬೈ ಬೀದಿ' ಚಿತ್ರಗಳ ಸುರುಳಿ. ಹಾವಾಡಿಗ ಅವನ ಪುಂಗಿನಾದ—ಅದಕ್ಕನುಗುಣವಾಗಿ ಹೆಡೆ ಬಿಚ್ಚಿ ಆಡುವ ಹಾವುಗಳು, ಮಂಗನಾಟವವನ ಅವನು ನೇರವೇರಿಸುವ 'ಬಡೇ ಸಾಬ–ಬಸಲಿಂಗಿ' ಮದುವೆ. ಮುರಮುರಗೆಯುವ ಅವನು ಮೈಗೆ ಹೊಡೆದುಕೊಳ್ಳುವ ಚಾಟಿಯ ಸಿದ್ದಿಕಿ ಸಿದ್ದಿ ಅವನು ಹಾಕುವ ವಿಚಿತ್ರ 'ಗುಟುರು' ಸುಡಗಾಡ ಸಿದ್ಧರು ಅವರ ಜೋಳಿಗೆಯ ಮಾಂತ್ರಿಕ ಗೊಂಬೆಗಳು. ಮೋಡಿಕಾರರು ಅವರ ಹಂಚಿನ ಬಿಲ್ಲೆಯಿಂದ ಮೇಲೆ ಸುರಿಯುವ 'ರೂಪಾಯಿ' ಕರಡೀ ಕುಣಿತದವ ಮತ್ತು ಕರಡಿಯ ಬೆನ್ನಮೇಲೆ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕುಳ್ಳಿರಿಸಿ ಎತ್ತಿಕೊಳ್ಳುವುದು. ಹೀಗೆ ಅಗಣಿತ ವಿನೋದ ತಮಾಷೆ ಮೋಜಿನ ದೃಶ್ಯಗಳು ಇಡೀ ಜಾತ್ರೆಯಲ್ಲಿ ನೆರೆದ ಪರಿಸೆಯನ್ನು ಒಂದು ಯಕ್ಷಲೋಕ ವಿಹಾರಸ್ಥಳವನ್ನಾಗಿ ಪರಿವರ್ತಿಸುವುದನ್ನು ಕಾಣಬಹುದು. ಈ ಎಲ್ಲ ಮೋಜಿನ ಪ್ರಸಂಗಗಳು ಒಂದು ರೀತಿಯಲ್ಲಿ ಅನಾದಿ ಕಾಲದಿಂದ ಸಂವಹನಗೊಳ್ಳುತ್ತ ಬಂದ ವಿವಿಧ ಕುಲಗುಂಪುಗಳ ವಿಶಿಷ್ಟ ಸಾಂಸ್ಕೃತಿಕ ಸಂಗತಿಗಳಾಗಿವೆ.

ಜಾತ್ರೆಗಳಲ್ಲಿ ಮನರಂಜನೆಗಿಂತ ಭಿನ್ನವಾದ ಇತರ ಕೆಲವು ಪ್ರದರ್ಶನಗಳೂ ಕೆಲವೆಡೆ ನಡೆಯುತ್ತಿದ್ದವು ಅಥವಾ ನಡೆಯುತ್ತವೆ. ಅವುಗಳ ಮುಖ್ಯ ಗುರಿ

ಶಕ್ತಿ ಪ್ರದರ್ಶನ. ನಮ್ಮ ಜನಪದರು ಎಷ್ಟು ಬಲಶಾಲಿಗಳಾಗಿದ್ದರು. ಮತ್ತು ಹೇಗೆ ಅವರು ವಿವಿಧ ಬಗೆಯ ಶಕ್ತಿ ಸಾಧನೆ ಹೊಂದಿದ್ದರು ಎನ್ನುವುದಕ್ಕೆ ಇವು ನಿದರ್ಶನ. ಭಾರಿ ಗಾತ್ರದ ಕಲ್ಲುಗುಂಡುಗಳನ್ನು ಅನಾಮತ್ತಾಗಿ ಮೇಲೆತ್ತಿ ಹೆಗಲ ಮೇಲಿಂದ ಕೆಳಗೆ ಒಗೆಯುವುದು, ಗುರುಸಾಣೆಕಲ್ಲನ್ನು ಒಂದೇ ಕೈಯಿಂದ ಮೇಲೆತ್ತಿ ಹಿಡಿಯುವುದು, ಹಳಿಬಂಡಿಯ- ಕಬ್ಬಿಣದ- ಇರುಸು, ಇರುಸುಕಟ್ಟುಗಳನ್ನು ಮೇಲೆತ್ತುವುದು. ಭಾರೀ ಗಾತ್ರದ ತುಂಬಿದ ಕೊಡಗಳನ್ನು ಎತ್ತುವುದು ಅಥವಾ ಮುಂದಲೆ ಕೂದಲು ಕೊಡದ ಉಕ್ಕಡಕ್ಕೆ ಕಟ್ಟಿ ಮೇಲೆತ್ತುವುದು–ಹೀಗೆ ಹತ್ತಾರು ಬಗೆಯ ಶಕ್ತಿ, ಶೌರ್ಯ ಪ್ರದರ್ಶನಗಳು ನಮ್ಮ ಜನಪದರ ಶಕ್ತಿ ಸಾಮರ್ಥ್ಯಗಳ ಅದ್ಭುತ ಸಾಧನೆಗೆ ಸಾಕ್ಷಿಗಳಾಗಿರುತ್ತವೆ. ಜಟ್ಟಿ ಕಾಳಗ. ಕುಸ್ತಿ ಕಣಗಳಲ್ಲಿ ಕುಸ್ತಿ ಪಟುಗಳ 'ಚಿತ್ತಪಟ್ಟು' ನಮ್ಮ ಪರಂಪರಾನುಗತ ಗರಡಿ ಸಾಧನೆಯನ್ನೂ ಜಾತ್ರೆಗಳಲ್ಲಿ ಕಾಣಬಹುದು. ಈ ಬಗೆಯ ಶಕ್ತಿ ಪ್ರದರ್ಶನಗಳಿಂದ ಜನಪದರಿಗೆ ಶಕ್ತಿ ಸಾಧನೆಯ ಪ್ರೇರಣೆದೊರೆಯುತ್ತದೆ. ಮುಂದೆ ಬರುವ ತಮ್ಮ ಗ್ರಾಮದ, ಪ್ರಾದೇಶಿಕ ಜಾತ್ರೆಯಲ್ಲಿ ತಾವೂ ಅಂಥ ಬಲ ಗಳಿಸುವ ಹಂಬಲ ಗರಿಗೆದರುತ್ತದೆ. ಜನಪದ ಯುವಕರಲ್ಲಿ ಆರೋಗ್ಯಕರವಾದ ಸ್ಪರ್ಧಾಮನೋಭಾವ ಬೆಳೆದು ದೈಹಿಕ ದಾರ್ಢ್ಯ ಶಕ್ತಿ ಸಾಮರ್ಥ್ಯಗಳ ಸಾಧನೆಗೆ ಅವರಲ್ಲಿ ಸ್ಫೂರ್ತಿ ಪುಟಗೊಳ್ಳುವುದು ಸಹಜ.

ಒಕ್ಕಲುತನವೇ ಪ್ರಧಾನವಾಗಿರುವ ನಮ್ಮ ನಾಡಿನಲ್ಲಿ ಜರಗುವ ಜಾತ್ರೆಗಳಲ್ಲಿ ಕೆಲವಂತೂ 'ದನದ ಜಾತ್ರೆ'ಗಳೆಂದೇ ಹೆಸರಾಗಿವೆ. ದೇವರಗುಡ್ಡದ ಮೈಲಾರ ಜಾತ್ರೆ, ಸಿಂಗಟಾಲೂರ ವೀರಭದ್ರ ಜಾತ್ರೆ ಒಂದೆರಡು ಉದಾಹರಣೆ ಮಾತ್ರ.

ಆಯಾ ದೇವತೆಯ ರಥೋತ್ಸವದ ಕನಿಷ್ಟ ಎರಡು ವಾರ ಮೊದಲೇ ಕೂಡುವ ದನಗಳ ಪರಿಷೆ, ಜಾತ್ರೆಯ ಧಾರ್ಮಿಕ ಇತ್ಯಾದಿ ಆಚರಣೆಗಳು ಮುಗಿದ ಬಳಿಕ ಕೂಡ ಸುಮಾರು ಎರಡು ಮೂರು ವಾರಗಳ ವರೆಗೆ ದನದ ಜಾತ್ರೆ ನಡೆಯುತ್ತಲೇ ಇರುತ್ತದೆ. ನಾಡಿನ ನಾನಾ ಪ್ರದೇಶಗಳ ಕೃಷಿಕ ಸಮುದಾಯ ತಮ್ಮ ತಮ್ಮ ದನಕರುಗಳನ್ನು ಜಾತ್ರೆಯ ಮಾರುಕಟ್ಟೆಗೆ ತರಲು ತಿಂಗಳುಗಟ್ಟಲೆ ಕಟ್ಟಿ ಮೇಯಿಸುತ್ತಾರೆ. ನೋಡಿದರೆ ದೃಷ್ಟಿ ತಾಕುವ ರೀತಿಯಲ್ಲಿ ಪುಷ್ಟಗೊಂಡ, ಹೋರಿ ಎತ್ತುಗಳ ಕೋಡು ಕೆತ್ತಿ ನುಣುಪುಗೊಳಿಸಿ, ಬಣ್ಣ ಬಳಿದು, ಕೋಡಣಸು, ಕೊರಳ ಪಟ್ಟಿ ಗಂಟೆ, ಹುರಿಗೆಜ್ಜೆ, ರೇಶಿಮೆ ಗೊಂಡೆ, ಜೂಲುಗಳಿಂದ ಅಲಂಕರಿಸಿ ಜಾತ್ರೆಗೆ ತರುತ್ತಾರೆ. ಕಿಲಾರಿ, ಜವಾರಿ, ಸೀಮಿಮೂಡಲ ಮುಂತಾದ ವಿವಿಧ ತಳಿಯ ಸಾಲಾಸಾಲಾದ ದಾವಣಿಗಳನ್ನು ಜಾತ್ರೆಯಲ್ಲಿ ನೋಡುವುದೇ ಒಂದು ಹಬ್ಬ. ಸ್ಥಿರ ನೆಲೆ ವಸತಿಯ ಪರಿಕಲ್ಪನೆಯೊಂದಿಗೇ ತಮ್ಮ ತಮ್ಮ ದನಕರುಗಳನ್ನು ಹಟ್ಟಿಯಲ್ಲಿ ಕಟ್ಟಿ ರಕ್ಷಿಸುತ್ತ ಬಂದ ಜನಪದರಿಗೆ—ವಿಶೇಷವಾಗಿ ಕೃಷಿ ಸಮುದಾಯಕ್ಕೆ ಪಶುಗಳ ಮೇಲಿರುವ ಪ್ರೀತಿ

ಗಾಢವಾದದ್ದು. ದನದ ಜಾತ್ರೆಗಳು ಈ ಬಗೆಯ ಅವರ ಮನೋಭಾವನೆಗೆ ಅಧಿಕ ಪ್ರಚೋದನೆ ನೀಡುತ್ತವೆ. ದನಕರುಗಳನ್ನು ಚೆನ್ನಾಗಿ ಪೋಷಿಸುವುದು, ಪ್ರೀತಿಯಿಂದ ಆರೈಕೆ ಮಾಡಿ ಬೆಳೆಸುವುದು ಮತ್ತು ತಮ್ಮ ವ್ಯವಸಾಯದ ಬದುಕನ್ನು ಸಾರ್ಥಕ ಸಫಲಗೊಳಿಸುವುದು ಇತ್ಯಾದಿ ಪ್ರೇರಣೆ ಜನಪದರಿಗೆ ದೊರೆಯುವುದು ಇಂಥ ಜಾತ್ರೆಯ ಪ್ರಯೋಜನಗಳು.

ಹಬ್ಬ, ಜಾತ್ರೆ ಮತ್ತು ಜನಪದ ಕಲೆಗಳಿಗೆ ಇರುವ ಸಂಬಂಧವನ್ನು ಕುರಿತು ನಮ್ಮಲ್ಲಿ ನಿರ್ದಿಷ್ಟವಾದ ಅಧ್ಯಯನ ಇದುವರೆಗೂ ನಡೆದಂತೆ ತೋರುವುದಿಲ್ಲ. ಡಾ. ಚಿದಾನಂದ ಮೂರ್ತಿಯವರ 'ಪಗರಣ'. ಉತ್ತರ ಕನ್ನಡ ಜಿಲ್ಲೆಯ ಒಂದು ದೇವಾಲಯ', ಕೆ. ಜಿ. ನಾಗರಾಜಪ್ಪ ಅವರ 'ಸಾಸಲ ಬನಶಂಕರಿ ಜಾತ್ರೆ– ಒಂದು ವಿಶ್ಲೇಷಣೆಗೆ' ಮುಂತಾದವು ಎಲ್ಲ ಒಳ್ಳೆಯ ಅಧ್ಯಯನಗಳಾಗಿದ್ದರೂ ಅವು ಕೇವಲ ಆಚರಣೆ ಮತ್ತು ವಿಧಿಕ್ರಿಯೆಗಳ ವಿವೇಚನೆ—ವಿಶ್ಲೇಶಣೆಗೆ ಮಾತ್ರ ಸೀಮಿತವಾಗಿವೆ. ಇಂಥ ಜಾತ್ರೆಗಳ ಧಾರ್ಮಿಕ ವಿಧಿವಿಧಾನಗಳ ಜೊತೆಗೆ ಅಲ್ಲಿ ಪ್ರದರ್ಶನಗೊಳ್ಳುವ ಕಲೆಗಳ ಅಧ್ಯಯನವೂ ನಡೆಯಬೇಕಾದುದು ಅಗತ್ಯವೆಂದು ಮಾತ್ರ ಇಲ್ಲಿ ಸೂಚಿಸ ಬಯಸುತ್ತೇನೆ. ಧಾರ್ಮಿಕ ಪರಿಸರದ 'ಶಸ್ತ್ರ ಪವಾಡ' 'ಕಾರಣಿಕ' ಮುಂತಾದವುಗಳಿಂದ ಜನಸಮುದಾಯ ಭಯ ಭಕ್ತಿಗಳ ಅಮೂರ್ತ ಸ್ಥಿತಿಗೆ ತಲುಪಿ ಅಪೂರ್ವ ಅನುಭವ ಪಡೆಯುವುದು ನಿಜ. ಆದರೆ ಜಾತ್ರೆಗಳ ಕ್ರಿಯೆ ಇಲ್ಲಿಗೆ ನಿಲ್ಲುವುದಿಲ್ಲ. ಜನಪದರ ಸಹಜ ಸೌಂದರ್ಯಾಭೀಪ್ಸೆಯ ಮತ್ತು ಸೃಜನಶೀಲ ಮನಸ್ಸಿನ ವ್ಯಕ್ತ ರೂಪಗಳಾದ ಜನಪದ ಕಲೆಗಳು ಅವರನ್ನು ಧಾರ್ಮಿಕ ಪರಿಸರದ ಮತ್ತು ಮತೀಯ ಭಾವನೆಗಳ ಸೀಮಿತ ವಲಯವನ್ನು ದಾಟಿ ಸ್ಪಂದಿಸಲು. ಪರಸ್ಪರರಲ್ಲಿ ಅಭಿಮಾನ ಗೌರವ ವಿಶ್ವಾಸಗಳನ್ನು ಮೂಡಿಸಲು ಕಾರಣವಾಗುತ್ತವೆ.

ಜನಸಮುದಾಯ ವಿಭಿನ್ನ ಅನುಶ್ರೇಣಿ ಮತ್ತು ಆರ್ಥಿಕ ವೈರುಧ್ಯಗಳಲ್ಲಿ ಜೀವಿಸುತ್ತಾರೆ ನಿಜ. ಆದರೆ ಈ ಎಲ್ಲ ವೈರುಧ್ಯಗಳ ಮಧ್ಯದಲ್ಲೂ ಪರಸ್ಪರರನ್ನು ಪ್ರೀತಿ ಗೌರವಗಳಿಂದ ಕಾಣುವ ಸಮಾಜೀಕರಣ ಕ್ರಿಯೆಗೆ ಜಾತ್ರೆಗಳು ಒದಗಿಸುವ ಪ್ರೇರಣೆ ಅತ್ಯಂತ ಗಣನೀಯ. ಈ ದೃಷ್ಟಿಯಿಂದ ಕಲೆ ಮತ್ತು ಜಾತ್ರೆಗಳ ಸಂಬಂಧ ಮತ್ತು ಅವುಗಳಿಂದಾಗಿ ಒಟ್ಟು ಜನಸಮೂಹದಲ್ಲಿ ಜರುಗುವ ಸಮಾಜೀಕರಣ ಕ್ರಿಯೆ– ಪ್ರಕ್ರಿಯೆಗಳನ್ನು ಗುರುತಿಸಿ ವಿಶ್ಲೇಷಿಸುವುದು ಸಾಂಸ್ಕೃತಿಕ ಅಧ್ಯಯನಕ್ಕೆ ಅಳವಡಿಸುವುದು ಜಾನಪದ ತಜ್ಞ ಮತ್ತು ಸಮಾಜಶಾಸ್ತ್ರಜ್ಞರಿಗೆ ಮುಖ್ಯವಾಗುತ್ತದೆ.

ಇತ್ತೀಚೆಗೆ ಜಾತ್ರೆ ಉತ್ಸವಗಳು ವಿಶಿಷ್ಟ ಸ್ವರೂಪ ಪಡೆಯುತ್ತಲಿವೆ. ಧರ್ಮಸ್ಥಳದ ಮಂಜುನಾಥ ಸ್ವಾಮಿಯ ಕಾರ್ತಿಕೋತ್ಸವ, ಕಲಬುರ್ಗಿ ಶರಣ

ಬಸವೇಶ್ವರ ಜಾತ್ರೆ. ಬನಶಂಕರಿಯ ತೆಪ್ಪೋತ್ಸವ, ಧಾರವಾಡದ ಮುರಘಾಮಠ, ಹುಬ್ಬಳ್ಳಿಯ ಸಿದ್ಧಾರೂಢಸ್ವಾಮಿ ಮತ್ತು ಮೂರುಸಾವಿರ ಮಠದ ಜಾತ್ರೆಗಳು, ಗದುಗಿನ ತೋಂಟದಾರ್ಯ ಜಾತ್ರೆ, ಹಳೇ ಹುಬ್ಬಳ್ಳಿಯ ವೀರಭದ್ರೇಶ್ವರ ದೀಪೋತ್ಸವ. ಹಂಪೆಯ ಜಾತ್ರೆ, ಎಲ್ಲಮ್ಮನ ಜಾತ್ರೆ, ಮಲೆಯಮಾದೇಶ್ವರ, ಆದಿಚುಂಚನ ಗಿರಿಯ ಜಾತ್ರೆಗಳು ಮುಂತಾದವು ನಮ್ಮ ಬದುಕಿನ ಸಂಸ್ಕೃತಿಯ ವೇದಿಕೆಗಳಾಗಿ ರೂಪುಗೊಳ್ಳುತ್ತ ಬಂದಿವೆ. ಸಹಸ್ರ ದೀಪೋತ್ಸವದಿಂದ ಲಕ್ಷ ಕಾರ್ತಿಕೋತ್ಸವ ಭಜನೆ. ಕೀರ್ತನೆ. ವಿದ್ವಾಂಸರ ಮೇಳ, ಸಾಹಿತ್ಯ ಸಂಗೀತ, ನೃತ್ಯ ಗೋಷ್ಠಿಗಳು ಯಕ್ಷಗಾನ, ಲಾವಣಿ. ಭಜನೆ, ಕೀರ್ತನ, ಕುಸ್ತಿ, ಕರಕುಶಲ ವಸ್ತು ಪ್ರದರ್ಶನ ಹೀಗೆ ನಮ್ಮ ಜನಜೀವನ ಅನೇಕ ಕ್ಷೇತ್ರಗಳ ಸಿದ್ಧಿ ಸಾಧನೆಗಳ ಒಂದು ಪುಟ್ಟ ಪ್ರಪಂಚವನ್ನೇ ಇಂದು ಕೆಲವೊಂದು ಜಾತ್ರೆಗಳಲ್ಲಿ ಕಾಣಬಹುದಾಗಿದೆ.

ಜಾತ್ರೆ. ಉತ್ಸವಗಳನ್ನು ಕೇವಲ ಜನಜಂಗುಳಿಯ ಉತ್ಸಾಹ ಮೋಜು ಗದ್ದಲಗಳ ಸ್ಥಳಗಳನ್ನಾಗಿ ಉಳಿಯಗೊಡದೆ ಅವುಗಳಿಗೆ ಒಂದು ಸಾಂಸ್ಕೃತಿಕ ಹಿರಿಮೆಯನ್ನು ತಂದುಕೊಟ್ಟ ಶ್ರೇಯಸ್ಸು ಧರ್ಮಸ್ಥಳಕ್ಕೆ ಸಲ್ಲುತ್ತದೆ.[1] ಗದುಗಿನ ತೋಂಟದಾರ್ಯ ಮತ್ತು ಕಲಬುರ್ಗಿಯ ಶರಣ ಬಸವೇಶ್ವರ, ಮುರಗಾಮಠದ ಜಾತ್ರೆಗಳು, ಧರ್ಮ ಮತ್ತು ಕಲೆಗಳ ಸಮಾಲೋಚನೆ ಮತ್ತು ಪ್ರದರ್ಶನಗಳಿಗೆ ಅವಕಾಶ ಕಲ್ಪಿಸಿ ಸಂಸ್ಕೃತಿ ಪ್ರಸರಣದ ಮಹತ್ವದ ಕಾರ್ಯ ನಿರ್ವಹಿಸುತ್ತಲಿವೆ.

ಜನಜೀವನದ ಸಾಮಾಜಿಕ ವ್ಯವಸ್ಥೆ ಸುರಕ್ಷಿತವಾಗಿ ಮುನ್ನಡೆಯುವ ಮತ್ತು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ ಸಂಸ್ಕೃತಿಯ ಪ್ರವಾಹವನ್ನು ಮುಂದು ವರೆಸಲು ಜಾತ್ರೆ ಮತ್ತು ಕಲೆಗಳು ನಿರಂತರ ಪ್ರಸ್ತುತ.

1. ಧರ್ಮಸ್ಥಳದ ಧರ್ಮಾಧಿಕಾರಿಗಳಾಗಿದ್ದ ದಿ. ರತ್ನಾಕರವರ್ಮ ಹೆಗ್ಗಡೆಯವರು ರೂಪಿಸಿದ ಮಂಜುನಾಥಸ್ವಾಮಿಯ ಉತ್ಸವ ಕಳೆದ ನಾಲ್ಕು ದಶಕಗಳಿಗೂ ಮಿಕ್ಕಿ ಈ ಬಗೆಯ ಕಾರ್ಯ ಮುಂದುವರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ಕೀಚಕ ವಿಡಂಬದಲ್ಲಿ ದ್ರೌಪದಿಯ ಪಾತ್ರ ಚಿತ್ರಣ : ತೌಲನಿಕ ಅಧ್ಯಯನ

● ಪಿ. ಕೆ. ಶ್ರೀಕೃಷ್ಣ ಭಟ್

ಕನ್ನಡದ ಜನಕೋಟಿಗೆ ತುಂಬ ಪ್ರಿಯನಾಗಿ ಕುಮಾರವ್ಯಾಸನು ರೂಪುಗೊಂಡಂತೆ ಮಲಯಾಳೀ ಜನರಿಗೆ ತುಂಜತ್ತೆಟುತ್ತಚ್ಛನು ಪ್ರಿಯನಾಗಿದ್ದಾನೆ. ಇಬ್ಬರೂ ಭಕ್ತಕವಿಗಳು. ವ್ಯಾಸ ಭಾರತವನ್ನು ತಮ್ಮ ತಮ್ಮ ಭಾಷೆಗೆ ತಂದುಕೊಂಡವರು. ಕುಮಾರವ್ಯಾಸನು 'ಕರ್ನಾಟಕ ಭಾರತ ಕಥಾಮಂಜರಿ' ಯನ್ನು ರಚಿಸಿದ್ದರೆ, ತುಂಜತ್ತೆಟುಚ್ಛನು 'ಶ್ರೀ ಮಾಹಾ ಭಾರತಂ' ಮತ್ತು 'ಅಧ್ಯಾತ್ಮ ರಾಮಾಯಣಂ' ಕಿಳಿಪ್ಪಾಟ್ಟು[1] ಗಳನ್ನು ಮಲಯಾಳದಲ್ಲಿ ರಚಿಸಿದ್ದಾನೆ. ಈಗಲೂ ಕೇರಳದಲ್ಲಿ ಅಧ್ಯಾತ್ಮ ರಾಮಾಯಣವು ನಿತ್ಯಪಾರಾಯಣದ ಗ್ರಂಥವಾಗಿರುವದನ್ನು ಗಮನಿಸಿದರೆ ಅವನ ಜನಪ್ರಿಯತೆ ಎಷ್ಟೆಂಬುದು ವ್ಯಕ್ತವಾಗುತ್ತದೆ. ಅಧ್ಯಾತ್ಮ ರಾಮಾಯಣಕ್ಕಿಂತಲೂ ಪ್ರೌಢಕೃತಿಯೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವದು ಆತನ ಶ್ರೀ ಮಹಾಭಾರತಂ ಕಿಳಿಪ್ಪಾಟ್ಟು.

ಈ ಇಬ್ಬರು ಶ್ರೇಷ್ಠ ಕವಿಗಳಲ್ಲಿ ಕೆಲವು ಸಾಮಾನ್ಯಾಂಶಗಳನ್ನೂ ಕೆಲವು ವ್ಯತ್ಯಾಸಾಂಶಗಳನ್ನೂ ನಾವು ಗುರುತಿಸಬಹುದು. 'ಕಥೆಯನ್ನು ಹಿಗ್ಗಿಸಿ ಹಿಗ್ಗಿಸಿ ಹೇಳುವುದು ನಾರಣಪ್ಪನ ಹುಟ್ಟುಗುಣ[2]' 'ಕಥಾರಚನೆಗಿಂತಲೂ ಪಾತ್ರ ನಿರೂಪಣೆಯಲ್ಲಿ ಕುಮಾರವ್ಯಾಸನು ಘನತೆಯನ್ನು ಮೆರೆದಿದ್ದಾನೆ.'[3] 'ಅವೇ ಮಹಾಭಾರತದ ಪಾತ್ರಗಳು ಅವನ ಕೃತಿರಂಗದಲ್ಲಿ ಕಾಲಿಟ್ಟು ಜೀವಂತ ವ್ಯಕ್ತಿಗಳಾಗಿ ಸಾಮಾನ್ಯರಿಗೂ ಗುರುತಿನವರಾಗಿ ಬಿಡುತ್ತಾರೆ. ಮೂಲದಿಂದ ಅವರೇನೂ ಬೇರೆಯವರಲ್ಲ. ಆದರೆ ಮೂಲದಲ್ಲಿ ಎದ್ದು ಕಾಣದ ಅವರ ವ್ಯಕ್ತಿತ್ವವು ಇಲ್ಲಿ 'ಹೂವೇ-ಹೂವಾಗಿ' ರೂಪತಾಳುತ್ತದೆ[4]' ಎಂಬುದಾಗಿ ವಿವಿಧ ವಿದ್ವಾಂಸರು ಪಟ್ಟ ಅಭಿಪ್ರಾಯಗಳು ಈ ಕಾವ್ಯವನ್ನು (ಗದುಗು ಭಾರತ) ಅಭ್ಯಸಿಸುವಾಗ ನಮ್ಮ ಮನಸ್ಸಲ್ಲೂ ಮೂಡಿನಿಲ್ಲುತ್ತದೆ.

---

1. ಕಾವ್ಯವನ್ನು ಗಿಳಿಯಿಂದ ಹೇಳಿಸುವ ಶೈಲಿಯು 'ಕಿಳಿಪ್ಪಾಟ್ಟು' ಎಂಬ ಹೆಸರನ್ನು ಪಡೆದಿದೆ. ಇದನ್ನು ಅನೇಕ ತಮಿಳು, ಮಲಯಾಳ ಕವಿಗಳು ಬಳಸಿದ್ದಾರೆ.
2. ಎಲ್. ಗುಂಡಪ್ಪ : ಪಂಪ-ನಾರಣಪ್ಪ-ಕುಮಾರವ್ಯಾಸ ಪ್ರಶಸ್ತಿ : ಪು : 151
3. ರಂ. ಶ್ರೀ ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ 1968 ಪು : 255
4. ಅದೇ

'ತುಂಜತ್ತೆಟುತ್ತಚ್ಛನನ ವಿಜಯ ವೈಜಯಂತಿಯೂ ಸಂಕ್ಷೇಪಣಾ ಸಾಮರ್ಥ್ಯದ ಮಹಾದ್ಭುತವೂ ಆಗಿ ಶ್ರೀ ಮಹಾಭಾರತ ಕಿಳಿಪ್ಪಾಟ್ಟು ಕೊಂಡಾಡಲ್ಪಡುತ್ತದೆ[5]' ಎನ್ನಲಾಗಿದೆ. ಇವನಲ್ಲಿ ಸಂಕ್ಷೇಪಾಕಾಂಕ್ಷೆ ಹೆಚ್ಚು. ಇವನು ಅಸಾಧಾರಣವಾದ ಸಂಗ್ರಹ ಸಾಮರ್ಥ್ಯವನ್ನು ಹೊಂದಿರುವನೆಂದು ಮಲಯಾಳೀ ಸಾಹಿತ್ಯದಲ್ಲಿ ಪ್ರಸಿದ್ಧನಾಗಿದ್ದರೂ, ಅದೇ ಆತನ ದೌರ್ಬಲ್ಯವೆಂದೂ ಹೇಳಲಾಗುತ್ತದೆ.[6] ಅತಿ ಸಂಕ್ಷೇಪದಿಂದ ಪಾತ್ರ ಚಿತ್ರಣ ಮಸಕಾಗುತ್ತದೆ. ಕೆಲವೊಮ್ಮೆ ವಿಕೃತವೂ ಆಗುತ್ತದೆ.

ಪ್ರಸ್ತುತ ಲೇಖನವು ಎರಡು ಭಾಷೆಯ ಮೇರು ಕೃತಿಗಳಾದ ಗದುಗು ಭಾರತ ಮತ್ತು ಮಹಾಭಾರತ ಕಿಳಿಪ್ಪಾಟ್ಟುಗಳ 'ಕೀಚಕ ವಿಡಂಬ'ದಲ್ಲಿ ದ್ರೌಪದಿಯ ಚಿತ್ರಣವನ್ನು ತುಲಾತ್ಮಕವಾಗಿ ವಿವೇಚಿಸುತ್ತದೆ.

ಕುಮಾರವ್ಯಾಸ ಹಾಗೂ ತುಂಜತ್ತೆಟುತ್ತಚ್ಛನರಿಬ್ಬರೂ ತಮ್ಮ ಕೃತಿಗಳಲ್ಲಿ ಭಕ್ತಿಗೆ ಪ್ರಾಧಾನ್ಯವನ್ನಿತ್ತವರು. ಕೃಷ್ಣಭಕ್ತಿ. ಆತನ ಕರುಣೆ-ಮಹಿಮೆ-ರೂಪ ಇತ್ಯಾದಿಗಳನ್ನು ವರ್ಣಿಸುವದರಲ್ಲಿ ಉತ್ಸುಕತೆಯುಳ್ಳವರು ಆದರೆ ಕೀಚಕ ಪ್ರಸಂಗವನ್ನಷ್ಟೆ ಗಮನಿಸುವಾಗ ಅದನ್ನು ಯುಕ್ತಿ ಯುಕ್ತವಾಗಿ ಸಂಗ್ರಹಿಸಿ. ಸ್ವಾರಸ್ಯವಾಗಿ, ದ್ರೌಪದಿಯ ವ್ಯಕ್ತಿತ್ವ ಬೆಳಗುವಂತೆ ನಿರೂಪಿಸುವದರಲ್ಲಿ ತುಂಜತ್ತೆಟುತ್ತಚ್ಛನಿಗಿಂತಲೂ ಕುಮಾರವ್ಯಾಸನು ತನ್ನ ಹೆಚ್ಚುಗಾರಿಕೆಯನ್ನು ಪ್ರದರ್ಶಿಸಿದ್ದಾನೆಂಬುದು ಕಂಡುಬರುತ್ತದೆ.

ವ್ಯಾಸ ಭಾರತದಲ್ಲಿ ೨೦ ಅಧ್ಯಾಯಗಳ ೫೭೫ ಶ್ಲೋಕಗಳಲ್ಲಿ ನಿರುಪಿತವಾಗಿರುವ ಕೀಚಕ ಪ್ರಸಂಗವು ಕುಮಾರವ್ಯಾಸನಲ್ಲಿ ೨ ಸಂಧಿಗಳ ೧೫೭ ಷಟ್ಪದಿಗಳಲ್ಲಿ ಕೀಚಕ ವಿಡಂಬವಾಗಿ ಸಂಗ್ರಹೀತವಾಗಿದ್ದರೆ ಎಟುತ್ತಚ್ಛನಲ್ಲಿ ೮೦ ಕಾಕಳಿ[7] ವೃತ್ತಪಾದಗಳಲ್ಲಿ ಬಕವಧೆಯಾಗಿ ಸಂಕ್ಷಿಪ್ತಗೊಂಡಿದೆ. ಮೂಲದಲ್ಲಿ ಅತಿ ದೀರ್ಘವಾಗಿರುವ ಸಂಭಾಷಣೆ ವಿವರಣೆಗಳನ್ನು ನಾರಣಪ್ಪನು ಅಗತ್ಯವೆನಿಸುವಷ್ಟೇ ವಿವರಗಳೊಂದಿಗೆ ಸಂಕ್ಷೇಪಿಸಿದ್ದಾನೆ. ಸ್ವಾರಸ್ಯಕೆಡದಂತೆ ನಿರೂಪಿಸಿದ್ದಾನೆ. ಎಟುತ್ತಚ್ಛನು ಮೂಲವನ್ನೇ ಅನುಸರಿಸಿದ್ದರೂ ಅತಿಯಾಗಿ ಸಂಕ್ಷಿಪ್ತಗೊಳಿಸಿ ಕೆಲವಡೆ ಪಾತ್ರದ ಘನತೆಗೆ ಕುಂದು ತಂದಿದ್ದಾನೆ. ವ್ಯಾಸಭಾರತದಲ್ಲಿ ಕೇವಲ ರೇಖಾಚಿತ್ರವಾಗಿ ಕಂಡು ಬರುವ

---

5. ಪ್ರೊ. ಎನ್. ಕೃಷ್ಣಪಿಳ್ಳೈ : ತಿರಞ್ಞೆಡುತ್ತ ಪ್ರಬಂಧಙಳ್ 1978 : ಪು : 22.
6. ಅದೇ
7. ಮಾತ್ರಯಂಜಕ್ಷರಂ ಮೂನ್ನಿಲ್ ವರುನ್ನೋರು ಗಣಙಳ್ ಎಟ್ಟು ಚೇರ್ತ್ತುಣ್ಣಿಕ್ಕ ರಡಿಕ್ಕು ಚೊಲ್ಲಾಂ ಕಾಕಳಿಯೆನ್ನು ಪೇರ್ (ವೃತ್ತಮಂಜರಿ ಪು : 71)
(ಐದುಮಾತ್ರೆಯ ಮೂರಕ್ಷರಗಳಿರುವ ಎಂಟುಗಣಗಳನ್ನು ಎರಡು ಪಾದಗಳಾಗಿ ಹೇಳಿದರೆ ಕಾಕಳಿಯೆನಿಸುತ್ತದೆ.)

ದ್ರೌಪದಿಯ ಚಿತ್ರವು ಕುಮಾರವ್ಯಾಸನಲ್ಲಿ ರಕ್ತಮಾಂಸ ತುಂಬಿದ ಜೀವಂತ ಸಹಜ ಸ್ತ್ರೀಯಾಗಿ ಕಾಣಿಸುತ್ತದೆ. ಎಟುತ್ತಚ್ಛನಲ್ಲಿ ಮೂಲದ ರೇಖಾ ಚಿತ್ರವೇ ಇನ್ನಷ್ಟು ಮಸುಕಾಗಿ ಮೂಡಿ ಕಳೆಗುಂದಿರುವುದು ಕಂಡು ಬರುತ್ತದೆ.

ಕುಮಾರವ್ಯಾಸನು 'ಕೀಚಕ ವಿಡಂಬ' ವನ್ನು 'ರಾವಣನು ಮುನ್ನಂದು ಸೀತಾ ದೇವಿಗಳುಪಿದ ಕಥೆಯವೋಲ್ ' ಎಂಬ ಪೀಠಿಕೆಯೊಡನೆ ತೊಡಗುತ್ತಾನೆ. ಎಟುತ್ತಚ್ಛನು 'ನಲ್ಲ ಸುದೇಷ್ಣ ತನ್ ಭ್ರಾತಾವು ಕೀಚಕನ್ ಮಲ್ಲಾಕ್ಷಿಯಾಗಿಯ ಸೈರಂಧ್ರಿಯೆ ಕಂಡು....' (ಒಳ್ಳೆಯವಳಾದ ಸುದೇಷ್ಣೆಯ ಸ್ವಂತ ತಮ್ಮನಾಗಿರುವ ಕೀಚಕನು ಸುಲೋಚನೆಯಾದ (ಕಮಲಾಕ್ಷಿಯಾದ) ಸೈರಂಧ್ರಿಯನ್ನು ಕಂಡನು) ಎಂದು ನೇರವಾಗಿ ಕಥಾಪ್ರವೇಶ ಮಾಡುತ್ತಾನೆ. ಇಲ್ಲಿ ಎಟುತ್ತಚ್ಛನ ಸಂಕ್ಷೇಪಗುಣವು ವ್ಯಕ್ತವಾಗುತ್ತದೆ. ಕುಮಾರವ್ಯಾಸನು ಕ್ರಮದಂತೆ ಮುನ್ನುಡಿಕೊಟ್ಟು ಸಮಯ ಸಂದರ್ಭಗಳನ್ನು ನಿರೂಪಿಸಿ ಕಥಾಪ್ರಾರಂಭ ಮಾಡುತ್ತಾನೆ. ಕೀಚಕನು ತನ್ನ ಸಹೋದರಿ ಸುದೇಷ್ಣೆಯನ್ನು ಕಾಣುವದಕ್ಕೆ ಅವಳ ಅಂತಃಪುರಕ್ಕೆ ಬಂದಾಗ ಊಳಿಗದವರ ಮಧ್ಯೆ ಸುಂದರಿಯಾದ ಸೈರಂಧ್ರಿಯನ್ನು ಕಾಣುತ್ತಾನೆ ಎಂಬಲ್ಲಿಂದ ಕುಮಾರವ್ಯಾಸನು ಕಥಾ ನಿರೂಪಣೆಗೆ ತೊಡಗುತ್ತಾನೆ. ಇದು ಕುಮಾರವ್ಯಾಸನ ಕಥಾ ವಿಸ್ತಾರದ ಗುಣವನ್ನು ತೋರಿಸುತ್ತದೆ.

ನಾರಣಪ್ಪನ ಗದುಗು ಭಾರತದಲ್ಲಿ ಸೈರಂಧ್ರಿಯ ರೂಪಕ್ಕೆ ಮರುಳಾಗಿರುವ ಕೀಚಕನಿಗೆ ಬುದ್ಧಿ ಹೇಳುವ ಸುದೇಷ್ಣೆಯ ಮಾತುಗಳಲ್ಲಿ ದ್ರೌಪದಿಯ ಬಗ್ಗೆ ಗೌರವ ವ್ಯಕ್ತವಾಗುತ್ತದೆ. ಆದರೆ ಎಟುತ್ತಚ್ಛನಲ್ಲಿ ಸುದೇಷ್ಣೆಯು ತಮ್ಮನಿಗೆ ಬುದ್ಧಿ ಹೇಳುವುದಿಲ್ಲ, ದ್ರೌಪದಿಯ ಕುರಿತು ಗೌರವದ ಮಾತನ್ನಾಡುವುದಿಲ್ಲ.

ಕೀಚಕನು ಸೈರಂಧ್ರಿಯನ್ನು ಕಾಮಿಸಿ ಸಮೀಪಿಸಿದಾಗ

"ಒಲಿದು ಸಿಂಹದಸತಿಗೆ ನರಿಮನ
ವಳುಪುವಂತಿರೆ ಗರುಡನರಸಿಗೆ
ನಲಿದು ಫಣಿ ಬಯಸುವ ವೋಲ್ಮೈದಿದೆ ಬಾಲಕಿಯ ಬಳಿಗೆ ॥"

ಎಂಬುದಾಗಿ ಕುಮಾರವ್ಯಾಸನು ಸೂಚ್ಯವಾಗಿ ಪರಿಣಾಮವನ್ನು ಹೇಳುವುದರ ಜೊತೆಗೆ ದ್ರೌಪದಿಯ ಯೋಗ್ಯತೆಯನ್ನು ಸೂಚಿಸುತ್ತಾನೆ. ಕೀಚಕನು ಸಮೀಪಿಸಿದೊಡನೆಯೇ ದ್ರೌಪದಿಗೆ 'ಖಳನ ಮನದಿಂಗಿತ' ತಿಳಿಯುತ್ತದೆ. ಆಗ 'ಆಕೆ ತೊಲಗಿ ಹಿಂದಡಿ' ಯಿಡುತ್ತಾಳೆ. ಒಬ್ಬಾಕೆ ಸ್ತ್ರೀಯು ಅಪರಿಚಿತ ಕಾಮುಕನೊಡನೆ ಹೇಗೆ ನಡೆದು ಕೊಳ್ಳಬಹುದೋ ಅದನ್ನು ಸಹಜವಾಗಿ ಚಿತ್ರಿಸಿರುವುದನ್ನಿಲ್ಲಿ ಕಾಣಬಹುದು. ಎಟುತ್ತಚ್ಛನಲ್ಲಿ ಕೀಚಕನು ಸೈರಂಧ್ರಿಯನ್ನು ಸಮೀಪಿಸಿದಾಗ ಆಕೆಯು ತಕ್ಷಣವ

ಪ್ರತಿಕ್ರಿಯೆ ಕಂಡುಬರುವುದಿಲ್ಲ. ಇದು ದ್ರೌಪದಿಯಂತಹ ಪತಿವ್ರತೆಗೆ ಅಸಹಜವಾದ ನಡವಳಿಕೆಯಾಗುತ್ತದೆ.

ಎಟುತ್ತಚ್ಛನು— 'ಮುಲ್ಲ ಬಾಣಜಳೇಟ್ಟಲ್ ಪೋರಾಞವನ್। ಚೊಲ್ಲಿ ನಾನೆತ್ರಯುಂ ನಲ್ಲ ಮಧುರಮಾಯ್' (ಕುಸುಮ ಶರಗಳ ಪೆಟ್ಟನ್ನು ತಾಳಲಾರದೆ ಅವನು ಎಷ್ಟೋ ಮಧುರವಾಗಿ ಹೇಳಿದನು) ಎಂಬುದಾಗಿ ಸೈರಂಧ್ರಿಯನ್ನು ಸಮೀಪಿಸಿದ ಕೀಚಕನನ್ನು ನೇರವಾಗಿ ಸಂಭಾಷಣೆಗೇ ತೊಡಗಿಸಿದ್ದಾನೆ. ಇಲ್ಲಿ. ನಾರಣಪ್ಪನು ಸೂಚಿಸಿದಂತೆ ಪರಿಣಾಮವೋ, ದ್ರೌಪದಿಯ ಯೋಗ್ಯತೆಯೋ. ಒಂದೂ ಕಂಡುಬರುವುದಿಲ್ಲ.

ಕೀಚಕನು ಕಾಮುಕನಾಗಿ ಸೈರಂಧ್ರಿಯನ್ನು ಬೇಡಿಕೊಳ್ಳುತ್ತಿರುವಾಗ ದ್ರೌಪದಿಯಾಡುವ ಮಾತುಗಳು ಗಮನಾರ್ಹವಾಗಿದ್ದು ಅವಳ ಪಾತ್ರವನ್ನು ಬೆಳಗುತ್ತದೆ. ನಾರಣಪ್ಪನು ಪಾತ್ರ ಚಿತ್ರಣಕ್ಕೆ ವಹಿಸುವ ಮುತುವರ್ಜಿ ಇಲ್ಲಿ ಸ್ಪಷ್ಟವಾಗುತ್ತದೆ.

'ಎಲೆ ಮರುಳೆ .... ಕೊರಲಗ ಕೊರಳಿಗೆ ಬಯಸದಿರು'
'ಪರರ ಸತಿಗಳುಪಿದೊಡೆ ಪಾತಕ
ದೊರಕುವುದು ನಿಜಲಕ್ಷ್ಮಿ ತೊಲಗುಗು
ಧರೆಯೊಳಗ್ಗದಿ ಕೀರ್ತಿ ಮಾಸುಗು ಗತಿಗೆ ಕೇಡಹುದು ।
ಕೊರಳು ಹಲವಾದಸುರ ನಂತಕ
ಪುರವ ನೈದಿದ ಕಥೆಯ ನೀ ಕೇ
ಳ್ದರಿಯಲಾ ಕಡುಪಾಪಿ ಹೋಗು ....'

ಎಂದು ಬುದ್ಧಿ ಹೇಳಿ ಛೀಮಾರಿ ಹಾಕುತ್ತಾಳೆ. ಕೀಚಕನು ಮತ್ತೂ ತನ್ನ ಕೀಳು ಮಾತನ್ನು ಮುಂದುವರಿಸಿದಾಗ—

'ಕೇಳಿ ಕಿವಿ ಮುಚ್ಚಿದಳು ತನ್ನಯ
ಮೇಳದೈವರ ನೆನೆದು ಹರಹರ
ಶೂಲ ಪಾಣಿ ಮುಕುಂದ ಯೆನುತವೆ ರವಿಯನೀಕ್ಷಿಸುತ'

ಎಂಬುದಾಗಿ ತನ್ನ ಪಾತಿವ್ರತ್ಯ, ದೇವ ಭಕ್ತಿಗಳನ್ನು ಮೆರೆಯುತ್ತಾಳೆ. ಜೊತೆಗೆ ಆ ಖಳಾಗ್ರಣಿಯ, ಕಾಳು ಮೂಳನ, ಮದಾಂಧನ ಸೋಲಿಸುವರಾರೆಂಬ ಚಿಂತೆಗೂ ತೊಡುಗುತ್ತಾಳೆ.

'ಕಾತರಿಸದಿರು ಮಂದಿವಾಳದ
ಮಾತುಗಳು ಸಾಕಕಟ ತೊಲಗೈ
ಸೋತಡೇನದು ಮನುಜ ಧರ್ಮದ ಚಿತ್ತಚಪಲವಲ ।'

ಎಂಬುದಾಗಿ ಅಷ್ಟೆಲ್ಲಾ ಹೊಲಸು ಮಾತನ್ನಾಡಿದ್ದ ಕೀಚಕನಿಗೆ ಬುದ್ಧಿಹೇಳಿ ಕ್ಷಮಿಸುತ್ತಾಳೆ. ಈ ಮಾತು ಅವಳ ಕ್ಷಮಾಗುಣಕ್ಕೆ ಕೈಗನ್ನಡಿಯಂತಿದೆ.

'ಈ ತತುಕ್ಷಣ ಜಾರು ಕೇಳಿದ
ಡಾತಗಳು ಸೈರಿಸರು ದೇವ
ಪ್ರಾತದಲಿ ಬಲ್ಲಿದರು........'

ಎನ್ನುವ ಮೂಲಕ ಕೀಚಕನಿಗೆ ಎಚ್ಚರಿಕೆಯನ್ನಿತ್ತು ತನ್ನ ಪತಿಗಳ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸುತ್ತಾಳೆ. ಈ ಭಯ ಪಡಿಸುವ ಮಾತನ್ನು ಕೇಳಿಯೂ ಹಟ ಬಿಡದೆ ಗೋಗರೆಯುತ್ತಿರುವ ಕೀಚಕನಿಗೆ ತೃಣವನ್ನೆತ್ತಿ ಹಿಡಿದು[8] ಸ್ಪಷ್ಟವಾಗಿ—

'ಮರುಳುತನ ಬೇಡೆಲವೊ ಗಂಧರ್ವರಿಗೆ ಹೆಂಡತಿ ತಾನು........'

ಎಂಬುದಾಗಿ ನುಡಿಯುವ ಮೂಲಕ ತನ್ನ ನಿರ್ಭಯತೆ, ಪತಿನಿಷ್ಠೆಗಳನ್ನು ಪ್ರದರ್ಶಿಸಿದ್ದಾಳೆ.

'ಹಲವ ಗಳಹಿದರೇನು ಫಲವಿಲ್ಲ ಕಟಸಾರಿದೆನು' ಎಂದು ಘೋಷಿಸಿ—

'ತಿಳುಪಿ ದೊಡೆಯೆನ್ನವರು ನಿನ್ನಯ
ತಲೆಯನರಿದೂ ತುಷ್ಟರಾಗರು
ಕಲಕುವರು ನಿನ್ನನ್ವಯಾಬ್ಧಿಯನು ...... '

ಎಂದು ಖಂಡಿತವಾಗಿ ನುಡಿದು ಪತಿನಿಷ್ಠೆ. ಪತಿಗಳ ಮೇಲಿನ ಭರವಸೆಗಳನ್ನು ವ್ಯಕ್ತಪಡಿಸುತ್ತಾಳೆ.

ತನ್ನ ಈ ಮಾತನ್ನು ಮೀರಿ ನಡೆದರೆ ಮುಂದಾಗುವ ಕೊಲೆ-ಪರಂಪರೆಗಳಿಗೆ ತನ್ನನ್ನು ಕಾರಣವೆಂದು ದೂರದಿರುವಂತೆ ಹೇಳುವ ಆಕೆ ತಾನು ಎಂತಹಳೆಂಬುದನ್ನೂ ಸೂಚಿಸುತ್ತಾಳೆ—

---

8. ಸೀತೆಯೂ ರಾವಣನಲ್ಲಿ ಮಾತನಾಡುವಾಗ ತೃಣವನ್ನೆತ್ತಿ ಹಿಡಿದು ಕೊಳ್ಳುತ್ತಿದ್ದಳೆಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಇದು ಆ ವ್ಯಕ್ತಿಗೆ ಅಗೌರವವನ್ನು, ನಿಕೃಷ್ಟತೆಯನ್ನು ತೋರಿಸುವದಕ್ಕಾಗಿ ಎಂದು ತಿಳಿಯಬಹುದು. ತಮ್ಮ ಪೌರುಷಗಳನ್ನು ಆಧರಿಸಿ ಸವಾಲು ಪ್ರತಿ ಸವಾಲು ಹಾಕಿಕೊಳ್ಳುವರು ಇಂದಿಗೂ 'ನೀನು ನನಗೊಂದು ಹುಲ್ಲಿಗೆ ಸಮಾನ' ಎಂಬ ಮಾತನ್ನು ಬಳಸುತ್ತಾರೆ.

'ಮರುಳೆ ಮನದ ವಿಕಾರ ಮಾರಿಯ
ಸರಸವಾಡುವರುಂಟೆ ಮೃತ್ಯುವ
ನೆರೆವರೇ ದಳ್ಳುರಿಯ ಪ್ರತಿಮೆಯನಪ್ಪುವರೆ ಬಯಸಿ ।
ಸರಳಕಂಗೈಸುವರೆ ಪಾಪಿಯೆ
ಮರಳು ನಿನ್ನರಮನೆಗೆ........'

ಇಲ್ಲವಾದರೆ 'ಎನ್ನಯ ಗರುವ ಗಂಡರು ಕಡಿದು ಹರಹುವರು' ಎಂದೂ ನುಡಿಯುತ್ತಾಳೆ. ಇವುಗಳ ಮೂಲಕ ದ್ರೌಪದಿಯ ಸಹವಾಸದ ಸ್ಪಷ್ಟಕಲ್ಪನೆಯನ್ನು ತನ್ಮೂಲಕ ಅವಳ ಸ್ವಭಾವವನ್ನು ಇಲ್ಲಿ ಕವಿಯು ವ್ಯಕ್ತಪಡಿಸಿರುವುದನ್ನು ನಾವು ಮನಗಾಣಬಹುದು.

ಅವಳ ಎಚ್ಚರಿಕೆಯನ್ನು ಲೆಕ್ಕಿಸದೆ ಮತ್ತೂ ಮುಂದುವರಿದು ಮಾತನಾಡುವ ಕೀಚಕನಿಗೆ— 'ನಾಯಿ ಸಿಂಹಕ್ಕಿದಿರೆ ಫಡ ಹೋಗು' ಎಂದು ಛೀಗಳೆದು ಅಲ್ಲಿಂದ ನಡೆದು ಬಿಡುತ್ತಾಳೆ.

ಸೈರಂಧ್ರಿ ಸಾಮಾನ್ಯಳಲ್ಲ ಮಹಾರಾಣಿಯಾಗಿ ಮೆರೆದ ದ್ರೌಪದಿಯು ಪರಿಸ್ಥಿತಿಯ ಒತ್ತಡಕ್ಕೊಳ್ಳಗಾಗಿ ಅನ್ಯರ ತೊತ್ತಾಗಿ ಜೀವಿಸಲು ಸೈರಂಧ್ರಿಯಾದವಳು, ಅವಳಲ್ಲಿ ಶುದ್ಧ ಕ್ಷತ್ರಿಯ ಸ್ವಾಭಿಮಾನ, ಪಾತಿವ್ರತ್ಯ, ಕುಲೀನತೆ, ಧೈರ್ಯಗುಂದದ ಸ್ವಭಾವ ಮೈಗೂಡಿ ಬಂದಿದೆ. ಇವೆಲ್ಲವೂ ಈ ಮೇಲಿನ ಅವಳ ಮಾತುಗಳಿಂದ ಸ್ಪಷ್ಟಗೊಳ್ಳುತ್ತವೆ. ಭಾರತ ಕಥೆಯಲ್ಲಿನ ಏಕಮೇವ ಗಂಡು ಎಂದರೆ ದ್ರೌಪದಿಯೆಂಬ ಅಭಿಪ್ರಾಯಕ್ಕೆ ಇದು ಸಾಕ್ಷಿ.[9] ಕುಮಾರವ್ಯಾಸನು ದ್ರೌಪದಿಯನ್ನು ಗಂಡುಮೆಟ್ಟಿನ ಹೆಣ್ಣಿನಂತೆಯೇ ಚಿತ್ರಿಸಿದ್ದಾನೆ.

ಮೊದಲೇ ತಿಳಿಸಿದಂತೆ ಎಟುತ್ತಚ್ಛನಲ್ಲಿ ಕೀಚಕನ ಕೀಳುಮಾತಿಗೆ ದ್ರೌಪದಿಯು ಯಾವ ಪ್ರತಿಕ್ರಿಯೆಯನ್ನೂ ತೋರಿಸುವದಿಲ್ಲ. ಯಾವ ಮಾತನ್ನೂ ಆಡುವದಿಲ್ಲ. ಆದರೆ–

'ಇತ್ಥಂ ಪಲತರವುಂ ಪರಞ್ಞಿಟ್ಟವಳ್। ಚಿತ್ತಮಿಳಕಾಞು ಮುಷಿಚ್ಚು ಕೀಚಕನ್...' (ಹೀಗೆ ಹಲವು ರೀತಿಯಿಂದ ಹೇಳಿಯೂ ಆಕೆಯು ಚಿತ್ತವನ್ನು ಸಡಿಲಿಸದಿದ್ದುದರಿಂದ ಕೀಚಕನು ದುಃಖಿಸಿದನು.) ಎಂಬ ಒಂದು ಉಲ್ಲೇಖವನ್ನು ಮಾತ್ರ ಮಾಡಿದ್ದಾನೆ. ಸುಮಾರು ೧೪ ಪಾದಗಳಲ್ಲಿ ಕಾಮುಕ ಕೀಚಕನು ಆಕೆಯ ಸೌಂದರ್ಯವನ್ನು ವರ್ಣಿಸುತ್ತಲೂ ಆಕೆಯನ್ನು ಬೇಡಿಕೊಳ್ಳುತ್ತಲೂ ಇದ್ದರೆ ಸೈರಂಧ್ರಿಯು ಯಾವ

9. ನೋಡಿ : ಎ. ಆರ್. ಕೃಷ್ಣಶಾಸ್ತ್ರಿ : ವಚನಭಾರತ ಟೀಕೆ.

ಪ್ರತಿಕ್ರಿಯೆಯನ್ನೂ ತೋರದೆ ಮೌನವಾಗಿ ನಿಂತಿರುತ್ತಾಳೆಂಬುದು ಸಹಜವೆನ್ನಿಸುವುದಿಲ್ಲ: ಎಟುತ್ತಚ್ಛನ ಈ ಸಂಕ್ಷಿಪ್ತ ನಿರೂಪಣೆಯು ಕೇವಲ ದ್ರೌಪದಿಯ ಚಿತ್ತಸ್ಥಿರತೆಯ ಚಿತ್ರಣ ಮಾತ್ರವಾಗಿ ಮೂಡಿಬಂದಿದೆ. ದ್ರೌಪದಿಯಂತಹ ಸಂಸ್ಕಾರಗೊಂಡ ಜೀವವು ಯಾವ ರೀತಿ ಪ್ರತಿಕ್ರಿಯಿಸಿದೆಯೆಂಬ ಚಿತ್ರಣವನ್ನು ಕೊಡದೆ ಎಟುತ್ತಚ್ಛನ ದ್ರೌಪದಿಯ ಪಾತ್ರ ಮಸಕಾಗುತ್ತದೆ ಮಾತ್ರವಲ್ಲ ಅವಗುಣವನ್ನಾರೋಪಿಸಿದಂತೆಯೂ ಆಗುತ್ತದೆ.

ಕೀಚಕನು ಬೇರೆದಾರಿಕಾಣದೆ ತನ್ನಕ್ಕ ಸುದೇಷ್ಣೆಯ ಮೊರೆಹೊಕ್ಕು ಬೇಡಿಕೊಂಡು ಸೈರಂಧ್ರಿಯನ್ನು ಪಡೆಯುವ ಭರವಸೆ ಹೊತ್ತು ಹಿಂದಿರುಗುವಲ್ಲಿ ಕುಮಾರವ್ಯಾಸನು ಮೂಲದಂತೇ ಸುದೇಷ್ಣೆಯಿಂದ ಕೀಚಕನಿಗೆ ಬುದ್ಧಿ ಹೇಳಿಸಿದರೆ ಎಟುತ್ತಚ್ಛನು ಕೂಡಲೇ ಒಪ್ಪಿಕೊಂಡು ತಮ್ಮನಿಗೆ ಶಾಮೀಲಾಗಿರುವ ಸುದೇಷ್ಣೆಯನ್ನ ಚಿತ್ರಿಸುತ್ತಾನೆ.

ಕೀಚಕನಿಗೆ ಮಾತು ಕೊಟ್ಟಂತೆ ಸುದೇಷ್ಣೆಯು ದ್ರೌಪದಿಯನ್ನು ಕರೆದು– 'ಎಲೆಗೆ ಅನುಜಾಲಯದಲುತ್ತಮ ಮಧುವ ನೀ ಝಡಿತೆಯಲಿ ತಹುದೆ'ನ್ದು ಬೆಸಸಿದಾಗ–

'ಅಮ್ಮನಲ್ಲಿಗೆ ದೇವಿ ನಿಮ್ಮಯ
ತಮ್ಮ ದುರುಳನು ಲೇಸುಹೊಲ್ಲೆಹ
ವೆಮ್ಮ ತಾಗುವುದು ಆತನಳಿದರೆ ಬಳಿಕ ಹಳಿವೆಮಗೆ।
ನಿಮ್ಮ ನಾ ವೊಲೈಸಿ ನಿಮಗೆ ವಿ
ಕರ್ಮವನು ಮಾಡುವದು ನಮಗದು
ಧರ್ಮವಲ್ಲ........'

ಎನ್ನುವ ದ್ರೌಪದಿಯ ಮಾತುಗಳಲ್ಲಿ ಆಕೆಯ ದೂರಾಲೋಚನೆ. ಧೈರ್ಯ ಹಾಗೂ ಪ್ರಾಮಾಣಿಕ ಸೇವಾಧರ್ಮಗಳು ವ್ಯಕ್ತವಾಗಿವೆ. ಸೇವಕಿಯಾಗಿದ್ದರೂ ರಾಣಿಯ ಆಪ್ತ ಸಖಿಯಾಗಿ ತನ್ನ ಸಂಸ್ಕಾರ. ಅಜ್ಞಾತ ಶ್ರೇಷ್ಠತೆಗಳ ಹಿನ್ನಲೆಯಲ್ಲಿ ಅವಳಾಡುವ ಮಾತನ್ನು ಗಮನಿಸಿದರೆ ಕುಮಾರವ್ಯಾಸನ ಸೂಕ್ಷ್ಮ ದರ್ಶನದ ಬಗ್ಗೆ ಗೌರವ ಮೂಡುತ್ತವೆ. ಇದರಿಂದ ದ್ರೌಪದಿಯ ನಡತೆಗೆ ಸಹಜತೆಯ ಮೆರಗು ಬಂದಿದೆ.

'ದೇವಿ ಸೇವಿಸಲರಿಯೆನೆಂದೊಡಿ
ದಾವ ಧರ್ಮವು.......'
'ಸೇವಿಸುವುದೆ ಕಷ್ಟವೆಂಬುದು
ಕೋವಿದರ ಮತ .. ....'

ಎಂಬ ದ್ರೌಪದಿಯಲ್ಲಿ ಸೇವಾ ಧರ್ಮವನ್ನರಿತು ನಡೆಯುವ ಮನೋಭಾವವನ್ನು ಕಾಣಬಹುದು. ರಾಣಿಯಾಗಿದ್ದವಳು ಸೇವಕಳಾಗಿರಬೇಕಾದರೆ ಎಷ್ಟು ಸಹನೆಯಿರಬೇಕೆಂಬ ವಿಚಾರವನ್ನು ಸೂಚಿಸುತ್ತದೆ.

ತುಂಜತ್ತೆಟುತ್ತಚ್ಛನು ದ್ರೌಪದಿಯಿಂದ ಯಾವ ಮಾತನ್ನು ಆಡಿಸುವದಿಲ್ಲ.

'ಮೌನಾನುವಾದ ಮೋಡಜನೆ ಪ್ರೋಯುವಳ್ ..' (ಮೌನ ಸಮ್ಮತಿಯೊಡನವಳು ಹಾಗೇ ಹೋದಳು.)

ಎಂಬ ನಿರೂಪಣೆಯಿಂದ ದ್ರೌಪದಿಯು ಸುದೇಷ್ಣೆಯ ಮಾತಿಗೆ ಕೂಡಲೇ ಸಮ್ಮತಿಸುವಂತೆ ಕಂಡುಬರುತ್ತದೆ. ಇದು ಆಕೆಯ ಸ್ವಭಾವಕ್ಕೂ, ಘನತೆಗೂ ಹೇಳಿಸಿದ್ದಲ್ಲ ಆತನ ಸಂಕ್ಷೇಪಾಕಾಕ್ಷೆಯಿಂದ ಹೀಗಾಗಿರಬಹುದಾಗಿದ್ದರೂ ದ್ರೌಪದಿಯ ಪಾತ್ರಕ್ಕೆ ಇಲ್ಲಿ ಕುಂದು ಬಂದಿದೆ.

ಕೀಚಕಾಲಯಕ್ಕೆ ಹೊರಟ ದ್ರೌಪದಿಯು ಅಸಹಾಯಕಳಾಗಿ ಬೇರೆದಾರಿಯಿಲ್ಲದೆ ದೈವಕ್ಕೆ ಮೊರೆಯಿಡುವ ಚಿತ್ರಣ ಕುಮಾರವ್ಯಾಸನಲ್ಲಿ ಅಮೋಘವಾಗಿ ಮೂಡಿಬಂದಿದೆ.

'ಸೇವಿಸುವದೆ ಕರಕಷ್ಟವೆಂಬುದು
ಕೋವಿದರಮತ ಶಿವಾ ಶಿವಾ ರಾ
ಜೀವ ಲೋಚನ ಕೃಷ್ಣಬಲ್ಲ.........'

'ಹರಿ ಹರಿ ಶ್ರೀಕಾಂತ ದಾನವ
ಹರ ಮುರಾರಿ ಮುಕುಂದ ಗತಿ ಶೂ
ನ್ಯರಿಗೆ ನೀನೇ ಗತಿಯಲೈ ಗರುವಾಯಿ ಗೆಟ್ಟೆನಲೈ।
ಕುರುಕುಲಾಗ್ರಣಿ ಸೆಳೆದ ವಸ್ತ್ರಾ
ಕರುಷಣದ ಭಯ ಮತ್ತೆ ಬಂದಿದೆ
ಕರುಣಿ ನೀನೇ ಬಲ್ಲೆಯೆನುತಡಿಯಿಟ್ಟಳಬುಜಾಕ್ಷಿ ॥
ಸುರಪಶಿಖಿ ಯಮನಿರುತಿ ವರುಣಾ
ದ್ಯರಿಗೆ ವಂದಿಸಿ ಕಣ್ಣವೆ ಬಿಗಿ
ದರೆಗಳಿಗೆ ನಿಂದ ಬುಜಮಿತ್ರನ ಭಜಿಸಿ ಕಂದೆರೆಯೆ।
ಮುರಿವ ದೈತ್ಯನ ಕಾಹ ಕೊಟ್ಟನು
ಶರಣೆ ತರುಣಿಗೆ ....'

ಎಂಬುದಾಗಿ ನಿರೂಪಿಸಿದ್ದಾನೆ. ಕೃಷ್ಣಭಕ್ತೆಯಾದ ದ್ರೌಪದಿಯು ಕೃಷ್ಣನಿಗೆ ಶರಣಾಗುವದೂ, ತನ್ನನ್ನು ಎಲ್ಲಾ ದಿಕ್ಕಿನಿಂದಲೂ ರಕ್ಷಿಸುವಂತೆ ದಿಕ್ಪಾಲಕರಿಗೆ ಬೇಡಿ

ಕೊಳ್ಳುವುದೂ, ಎಲ್ಲ ಕರ್ಮಕ್ಕೂ ಸಾಕ್ಷಿಯಾದ ಸೂರ್ಯನನ್ನು ಭಜಿಸುವುದೂ ಯೋಗ್ಯವೇ ಆಗಿದೆ. ವ್ಯಾಸನಲ್ಲಿಲ್ಲದ ಕೃಷ್ಣಸ್ತುತಿಯನ್ನು ದ್ರೌಪದಿಯಿಂದ ಮಾಡಿಸಿ ದ್ರೌಪದಿಯ ಕೃಷ್ಣಭಕ್ತಿಯನ್ನು ಆತನು ಗುರುತಿಸಿದ್ದಾನೆಂಬುದಕ್ಕೆ ಸಾಕ್ಷಿಯೊದಗಿಸುತ್ತಾನೆ. ಯೋಗ್ಯ ಸಂದರ್ಭದಲ್ಲಿ ಅದರ ಪ್ರಯೋಜನವನ್ನು ಪಡೆದು ಕೊಳ್ಳುತ್ತಾನೆ. ತನ್ಮೂಲಕ ತನ್ನ ಕೃಷ್ಣಭಕ್ತಿಯನ್ನೂ ವ್ಯಕ್ತಪಡಿಸಿದ್ದಾನೆಂಬುದು ನಮಗೆ ಕಂಡುಬರುತ್ತದೆ.

ದಿಕ್ಪಾಲಕಾದಿಗಳನ್ನು ಬೇಡಿಕೊಳ್ಳುವ. ಸೂರ್ಯನು ರಕ್ಕಸನನ್ನು ರಕ್ಷಕನಾಗಿ ಕಳುಹುವ ವಿಚಾರ ಮೂಲದಿಂದಲೇ ಬಂದದ್ದು. ಅದನ್ನು ಕೈ ಬಿಡದಿರುವುದು ಯೋಗ್ಯವಾಗಿದೆ. ಭಕ್ತಕವಿಯಾದ ಕುಮಾರವ್ಯಾಸನು ಸಿಕ್ಕಿರುವ ಸಂದರ್ಭವನ್ನು ಸಹಜವಾಗಿ ಕೃಷ್ಣಭಕ್ತಿಯತ್ತ ತಿರುಗಿಸಿ ಎಷ್ಟು ಚೆನ್ನಾಗಿ ದ್ರೌಪದಿಯ ದಾಸ್ಯ ಭಕ್ತಿಯನ್ನು ಬೆಳಗಿಸಿದ್ದಾನೆಂಬುದಕ್ಕೆ ಇದು ಉತ್ತಮ ಉದಾಹರಣೆಯಾಗುತ್ತದೆ.

ಎಟುತ್ತಚ್ಛನು ಈ ಯಾವ ವಿಚಾರವನ್ನೂ ಹೇಳಿಲ್ಲ. ಮೊದಲೇ ತಿಳಿಸಿದಂತೆ ಸುದೇಷ್ಣೆಯ ಮಾತನ್ನು ಸಮ್ಮತಿಸಿ ಹೊರಟ ಆಕೆ ನೇರವಾಗಿ ಕೀಚಕ ಗೃಹಕ್ಕೇ ಬರುತ್ತಾಳೆ. ಇಲ್ಲಿ ಮೂಲದಲ್ಲಿದ್ದ ದೈವ ಶರಣಾಗತಿಯಾಗಲೀ ಸೂರ್ಯನಿಂದ ಕಳುಹಲ್ಪಟ್ಟ ರಕ್ಕಸನ ಉಲ್ಲೇಖವಾಗಲೀ ಬರುವುದಿಲ್ಲ. ಇದು, ಭಕ್ತ ಕವಿಯೆನಿಸಿದ ಎಟುತ್ತಚ್ಛನು ಸಾಧ್ಯವಿರುವೆಡೆಯೂ ಭಕ್ತಿಯನ್ನು ಸರಿಯಾಗಿ ವ್ಯಕ್ತಗೊಳಿಸುವತ್ತ ಗಮನ ಹರಿಸುವುದಿಲ್ಲವೆಂಬುದಕ್ಕೆ ಉತ್ತಮ ಉದಾಹರಣೆಯಾಗುತ್ತದೆ. ಅತಿಸಂಕ್ಷೇಪಾಭಿಲಾಶೆ ಇವಕ್ಕೆ ಕಾರಣವಾಗಿದ್ದರೂ ಪಾತ್ರಚಿತ್ರಣದ ದೃಷ್ಟಿಯಿಂದ ಅಕ್ಷಮ್ಯವಾಗುತ್ತದೆ.

ಕೀಚಕನಲ್ಲಿಗೆ ಹೋಗುತ್ತಿರುವ ದ್ರೌಪದಿಯನ್ನು ವರ್ಣಿಸಿ ಕುಮಾರವ್ಯಾಸನು ವ್ಯಾಸಭಾರತವನ್ನು ಅನುಸರಿಸಿದ್ದಾನೆ. ಕಾಮುಕ ಕೀಚಕನು ಬರುತ್ತಿರುವ ದ್ರೌಪದಿಯ ರೂಪರಾಶಿಯನ್ನು ಆ ರೀತಿ ನಿರೂಪಿಸುತ್ತಿರುವನೆಂದೂ ಅವನ ಯೋಗ್ಯತೆಗೆ ಅದು ಸರಿಯೆಂದೂ ಸಮರ್ಥಿಸಬಹುದು. ಆದರೂ ಆ ಭಾಗವನ್ನು ಕೈಬಿಟ್ಟಿದ್ದರೆ ಕೊರತೆ ಯೇನೂ ಬರುತ್ತಿರಲಿಲ್ಲ. ಬದಲಾಗಿ ಕುಮಾರವ್ಯಾಸನ ಯೋಗ್ಯತೆ ಹೆಚ್ಚುತ್ತಿತ್ತು. ಇಲ್ಲಿ ಎಟುತ್ತಚ್ಛನು ಆ ಸಂದರ್ಭವನ್ನು ಕೈಬಿಟ್ಟಿರುವುದರಿಂದ ಉತ್ತಮ ಸಂಗ್ರಹ ಕಾರನ ಅರ್ಹತೆಯನ್ನು ಪಡೆಯುತ್ತಾನೆ.

ತನ್ನಲ್ಲಿಗಾಗಮಿಸಿದ ಸೈರಂಧ್ರಿಯನ್ನು ಕೀಚಕನು ಇದಿರೆದ್ದು ಸ್ವಾಗತಿಸಿ ಆಡುವ ಮಾತುಗಳಿಗೆ, ಅವನ ಕಾಮುಕ ನುಡಿಗಳಿಗೆ ದ್ರೌಪದಿಯು ಸಹಿಸದೆ—

'ಬಾಯಿ ಹುಳುವುದು ಬಯಲ ನುಡಿವಡೆ
ನಾಯಿ ತನ ಬೇಡೆಲವೊ ಕೆಡದಿರು
ರಾಯ ನಂಗನೆ ಕಳುಹೆಬಂದೆನು ಮಧುವತರಲೆಂದು ।
ಸಾಯಬೇಕೇ ಹಸಿದ ಶೂಲವ
ಹಾಯಿ ಹೋಗು ......'

ಎಂಬುದಾಗಿ ಬಯ್ಗುಳನ್ನು ಸುರಿಸುತ್ತಾಳೆ. ಇದು ದ್ರೌಪದಿಯ ದಿಟ್ಟತನದ ಪ್ರತಿಕ್ರಿಯೆ. ತಾನು ಬಂದ ಉದ್ದೇಶವನ್ನು ಅಪಾರ್ಥಕಲ್ಪಿಸದಿರುವಂತೆ ಸ್ಪಷ್ಟವಾಗಿ ಹೇಳಿಬಿಡುತ್ತಾಳೆ. ಮೀರಿ ನಡೆದರೆ ಏನಾಗಬಹುದೆಂಬುದನ್ನೂ ಕೀಚಕನ ಯೋಗ್ಯತೆಯನ್ನೂ ಸೂಕ್ಷ್ಮವಾಗಿ ಹೇಳಿ ಛೀಮಾರಿ ಹಾಕುತ್ತಾಳೆ.

ದ್ರೌಪದಿಯು ಸೈರಂಧ್ರಿಯಾಗಿದ್ದರೂ ಬಲಹೀನೆಯಲ್ಲ. ಆಕೆಯು ವೀರ ಪಾಂಡವರ ಪತ್ನಿಯಾಗಿದ್ದು ವೀರ ಪತ್ನಿಯರಂತೆಯೇ ನಡೆದುಕೊಳ್ಳುತ್ತಾಳೆ. ಎಂತಹ ಸಂದರ್ಭದಲ್ಲೂ ನೈತಿಕಬಲ, ಆತ್ಮಧೈರ್ಯಗಳು ಆಕೆಯಲ್ಲಿ ಸುಪ್ತವಾಗಿರುವುದರಿಂದ ಯಾವುದೇ ಕಠಿಣ ಪರಿಸ್ಥಿತಿಯನ್ನು ಕೂಡ ಸಾಮಾನ್ಯ ಸ್ತ್ರೀಗಿಂತಲೂ ಸಮರ್ಥವಾಗಿ ಎದುರಿಸುವ ಸಾಮರ್ಥ್ಯವನ್ನು ಪಡೆದವಳು. ಈ ಹಿನ್ನೆಲೆಯಲ್ಲಿ ಕುಮಾರವ್ಯಾಸನ ದ್ರೌಪದಿಯ ಪಾತ್ರವು ಇಲ್ಲಿ ಚೆನ್ನಾಗಿ ಮೂಡಿ ಬಂದಿದೆ.

ಎಟುತ್ತಚ್ಚನಲ್ಲಿ— 'ಅವಳ್, ತಾನೇ ವರುನ್ನದು ಕಂಡೊರು ಕೀಚಕನ್। ನೇತ್ರಸುಖತ್ತೋಡಡುತ್ತಿದು ಮ್ಯರೇಯ। ಪಾತ್ರವುಮಿಟ್ಟುಂ ಕಳಞ್ಞುವಳೋಡಿನಾಳ್' (ತಾನಾಗಿಯೇ ಬರುತ್ತಿರುವ ಅವಳನ್ನು ಕಂಡ ಕೀಚಕನು ಸಂತೋಷದಿಂದ ನೋಡುತ್ತಾ ಸಮೀಪಿಸಲು ಅವಳು ಮಧುಪಾತ್ರೆಯನ್ನೆಸೆದು ಓಡಿದಳು) ಎಂದು ಹೇಳಲಾಗಿದೆ.

ಇಲ್ಲಿ ಯಾವ ಸಂಭಾಷಣೆಯೂ ಇರುವುದಿಲ್ಲ. ಕೀಚಕನು ಕಾಮುಕನಾಗಿ ಬಳಿಬರುತ್ತಲೇ ಮಧುಪಾತ್ರೆಯನ್ನೆಸೆದು (ಕೆಳಗೆಸೆದು) ಓಡಿಬಿಡುತ್ತಾಳೆ. ಕೀಚಕನ ನಡತೆಗೆ ಸರಿಯಾಗಿ ದ್ರೌಪದಿಯ ಪ್ರತಿಕ್ರಿಯೆಯು ಇಲ್ಲಿ ಓಡಿ ಹೋಗುವ ಮೂಲಕ ವ್ಯಕ್ತವಾಗಿದೆ. ಇದರಿಂದ, ಪಾತ್ರ ಚಿತ್ರಣಕ್ಕೆ ಸಹಾಯವೇನೂ ಆಗುವುದಿಲ್ಲ.

ಕುಮಾರವ್ಯಾಸನಲ್ಲಿ ಕೀಚಕನಿಂದ ತಪ್ಪಿಸಿಕೊಂಡು ಓಡಿಬಂದ ದ್ರೌಪದಿಯು ವಿರಾಟನ ಆಸ್ಥಾನಕ್ಕೆ ಬರುತ್ತಾಳೆ. ಆಕೆಯ ತುರುಬನ್ನು ಹಿಡಿದು ಒದೆಯುವಾಗ ಆಕೆಯ ರಕ್ಷಣೆಗಿದ್ದ ರಕ್ಕಸನು ಬಂದು ಅಬ್ಬರಿಸಿ ಕೀಚಕನನ್ನು ಹೊಡೆದು ಓಡಿಸುತ್ತಾನೆ. ಕೀಚಕನಿಂದ ಭಂಗಿತಳಾಗಿ ರಕ್ತವೊಸರಿ ಹುಡಿಯಲ್ಲಿ ಬಿದ್ದು ಹೊರಳಿದ ತುರುಬುಳ್ಳ ದ್ರೌಪದಿಯು ಹಾಗೇ ಮೇಲೆದ್ದು ಸಾವರಿಸಿ ರಾಜಸಭೆಯನ್ನು ಆಕ್ಷೇಪಿಸುವ

ಚಿತ್ರಣವಿದೆ. ಸಭೆಯಲ್ಲಿ ಸೂಚ್ಯವಾಗಿ ತನ್ನವರಿಗೆ ದೂರುವ ಅವರನ್ನು ಆಕ್ಷೇಪಿಸುವ ಅವಳ ಮಾತು ತುಂಬ ಸ್ವಾರಸ್ಯವಾದುದು.

'ಶಿವಶಿವಾ ಪಾಪಿಗಳು ಪತಿಯೂ
ದವರತಾಗಲಿ ಸುಯ್ಲ ಕಟ ನಾ
ಲುವರ ನಡುವಣ ಹಾವುಸಾಯುದು[10]........'

ಎಂಬುದಾಗಿ ಹೇಳುವ ದಾರ್ಷ್ಟ್ಯ ಆಕೆಗಲ್ಲದೆ ಮತ್ತಾರಿಗೆ ಸಾಧ್ಯ? ತನ್ನ ಕಷ್ಟದ ಬಿಸಿಯುಸಿರು ತನ್ನ ಪಾಪಿ ಪತಿಗಳಿಗೆ ತಾಗಲಿ ಎಂಬ ಮಾತು ಆಕೆ ಪಟ್ಟ ಕಷ್ಟದ ವೇದನೆಯನ್ನು ಚಿತ್ರಿಸುತ್ತದೆ. ಇಲ್ಲಿ ಸೂಚ್ಯವಾಗಿ ಅವಳಾಡುವ ಮಾತು ಪತಿಯಾದವರನ್ನು ತಾಗುತ್ತದೆಯೆಂಬುದಕ್ಕೆ ಮುಂದೆ ಅವರು ವ್ಯಕ್ತಪಡಿಸಿದ ಪ್ರತಿಕ್ರಿಯೆಯೇ ಸಾಕ್ಷಿ.

'ಎಲವೊ ದೇಶಿಗ ಕಂಕಭಟ್ಟನೆ
ಹಲವು ಧರ್ಮವ ಬಲ್ಲೆಗಡ ನೃಪ
ತಿಲಕಗರುಹುವುದೇನು ಸನ್ಯಾಸಿಗಳಿಗುಚಿತವಿದು।
ತಿಳಿಯೆ ದೇಶಿಗರಿಂಗೆ ದೇಶಿಗ
ರೊಲವು ಸಮನಿಸಬೇಕು ಸಭೆಯಲಿ
ಬಲವಿಹೀನರಿಗಾಪ್ತರಿಲ್ಲ ...'

ಎಂಬುದಾಗಿ, ತನ್ನ ಕಣ್ಣಮುಂದೆಯೇ ಅನ್ಯಾಯ ನಡೆಯುತ್ತಿದ್ದರೂ ಸುಮ್ಮನಿರುವ ಧರ್ಮಜನನ್ನು ಅನ್ಯರಿಗೆ ಅರಿಯದಂತೆ ಆಕ್ಷೇಪಿಸುವ ಅವಳು ತನ್ನ ಮಾತುಗಳಿಂದ ಧರ್ಮಜನ ನಿಷ್ಕ್ರಿಯ ಧರ್ಮನಿಷ್ಠೆಯನ್ನು ಹಂಗಿಸಿ ಚುಚ್ಚಿ ನುಡಿಯುತ್ತಾಳೆ.

ಮೂಲ ಭಾರತದಲ್ಲಿ ದ್ರೌಪದಿಯು ಸಭೆಯಲ್ಲಿ ಆಡುವ ವಿಸ್ತಾರವಾದ ಮಾತುಗಳನ್ನು ಕುಮಾರವ್ಯಾಸನು ಸೂಕ್ತವಾಗಿ ಸಂಗ್ರಹಿಸಿ ದ್ರೌಪದಿಯ ವ್ಯಕ್ತಿತ್ವ ಚಿತ್ರಣಕ್ಕೆ ಎಷ್ಟುಬೇಕೋ ಅಷ್ಟನ್ನುಳಿಸಿಕೊಂಡಿದ್ದಾನೆ. ದ್ರೌಪದಿಯ ನಿರ್ಭಯತೆ ರಾಜಸಭೆಯಲ್ಲಿ ಸಾಬೀತಾಗುತ್ತದೆ. ಸಮಾಧಾನ ಹೇಳಿದ ಧರ್ಮಜನಿಗೆ–

'ನೀರು ಹೊರಗಿಕ್ಕುವುದು ಮೂರೇ ಬಾರಿ ...'
'ಸೈರಣೆಗೆ ತಾನವಧಿಯಿಲ್ಲಾ

10. ತನ್ನ ಜೀವನವು ತನಗೊಂದು ಚಿತ್ರಹಿಂಸೆಯಾಗುತ್ತಿದೆಯೆಂಬುದನ್ನು 'ಹಾವು ಸಾಯುದು' ಎಂಬ ಮಾತಿನಲ್ಲಿ ವ್ಯಕ್ತಪಡಿಸಿದ್ದಾಳೆ. ನಾಲುವರ ಸಂಕೇತವನ್ನು ಪಂಚಪಾಂಡವರಿಗೆ ಅನ್ವಯಿಸಬಹುದು. ಯಮಳರನ್ನು ಒಟ್ಟಿಗೆ ಒಬ್ಬರೆಂದೂ ಉಳಿದ ಮೂವರೂ ಒಬ್ಬೊಬ್ಬರೆಂದೂ ಕರೆಯುವ ಪದ್ಧತಿಯಿದೆ.

ಪೌರುಷವು ಕಡು ಬಂಜೆಯಾಯಿತು
ಆರಯಿಕೆಯಲಿ ಜಣುಗಿ ಜಾರುವಿರಿ ....'

ಎಂದು ಹೇಳುವ ಮಾತುಗಳಲ್ಲಿ ಸತ್ಯವನ್ನು ಹಿಂದು ಮುಂದು ನೋಡದೆ ನುಡಿವ ಧೈರ್ಯವನ್ನು, ರಾಜಸಭೆಯಲ್ಲಿ ಅನ್ಯಾಯದ ವಿರುದ್ಧ ಸಿಡಿದೇಳುವ ಅವಳ ದಾರ್ಷ್ಟ್ಯವನ್ನೂ ಗುರುತಿಸಬಹುದು.

ಧರ್ಮಜನ ಗದರಿಕೆಯ ಬಳಿಕ- 'ಇಲ್ಲಿಯ ಹಿರಿಯರಲಿ ಹುರುಳಿಲ್ಲ ಮಾರುತಿ ಗರುಹುವೆನು....' ಎಂಬ ಅವಳ ಮಾತಿನಲ್ಲಿ[11] ಅನ್ಯರ ಯೋಗ್ಯತೆಯನು ಅಳೆಯುವ ಆಕೆಯ ಸಾಮರ್ಥ್ಯವನ್ನು ಕಾಣಬಹುದು.

ಎಟುತ್ತಚ್ಛನ ದ್ರೌಪದಿಯು ಸಭೆಯಲ್ಲಿ ಯಾವ ಮಾತನ್ನೂ ಆಡುವದಿಲ್ಲ. ಕೀಚಕನಿಂದ ಭಂಗಿತಳಾಗಿದ್ದರೂ ಯಾವ ಪ್ರತಿಕ್ರಿಯೆಯನ್ನೂ ತೋರ್ಪಡಿಸುವದಿಲ್ಲ. ಅಷ್ಟೊಂದು ಜನರೆದುರಿಗೆ ಅಪಮಾನಿತಳಾದ ದ್ರೌಪದಿಯು ಪ್ರತಿಕ್ರಿಯಿಸದೆ ಇರುವುದು ಸಹಜವೆನಿಸುವುದಿಲ್ಲ. ಆದುದರಿಂದ ಇಲ್ಲಿ ಕೂಡ ಎಟುತ್ತಚ್ಛನು ದ್ರೌಪದಿಯ ವ್ಯಕ್ತಿತ್ವವನ್ನು ಮಸುಕುಗೊಳಿಸಿದ್ದಾನೆ.

ಗದುಗು ಭಾರತದಲ್ಲಿ ಸಭೆಯಿಂದ ಹೊರಟು ಸುದೇಷ್ಣೆಯಲ್ಲಿಗೆ ದ್ರೌಪದಿಯು ಬಂದಾಗ ಸುದೇಷ್ಣೆಯು ಆಕೆಯ ಸ್ಥಿತಿಯನ್ನು ಗಮನಿಸಿ ಪ್ರಶ್ನಿಸುತ್ತಾಳೆ. ಅದಕ್ಕೆ ದ್ರೌಪದಿಯು–

'ಈ ಸುಮರವೆ ಯಿದರಸು ತನದ ಮ
ಹಾಸಗಾಢಿಕೆ ಎಮ್ಮ ನೀ ಪಪ
ಹಾಸಮಾಡುವಿರಿ ....' ಎಂದುತ್ತರಿಸುತ್ತಾಳೆ.

ಇದರಿಂದ ದ್ರೌಪದಿಯು ಅರಸುತನದ ಸ್ವಭಾವವನ್ನು ಸುದೇಷ್ಣೆಯಲ್ಲಿ ಗುರುತಿಸಿದ್ದಾಳೆಂಬುದು ವ್ಯಕ್ತವಾಗುತ್ತದೆ.

'ದುರುಳ ನಿಮ್ಮೊಡ ಹುಟ್ಟಿದನು ನೀ
ವರಸುಗಳು ತಿರುಕುಳಿಗಳಾ ವಿ
ಸ್ತರಲು ಬಾರದು, ಸ್ವಪತಿ ತಪ್ಪಿದೊಡಾರು ಕಾವವರು ।'

11. ತಾನು ಸಭೆಯಲ್ಲಿ ಗೋಳಿಟ್ಟಾಗ ಪ್ರತಿಯೊಬ್ಬರನ್ನೂ ಸೂಕ್ಷ್ಮವಾಗಿ ಗಮನಿಸಿ ಭೀಮನಲ್ಲಿ ತನಗನುಕೂಲವಾದ ಪ್ರತಿಕ್ರಿಯೆಯನ್ನು ಕಂಡಿದ್ದಾಳೆಂಬುದಕ್ಕೆ ದ್ರೌಪದಿಯ ಈ ಮಾತು ಸಾಕ್ಷಿಯಾಗುತ್ತದೆ.

ಎಂಬ ದ್ರೌಪದಿಯು ತನ್ನ ವೇದನೆಯನ್ನು ವ್ಯಕ್ತಪಡಿಸಿ ಸುದೇಷ್ಣೆಯನ್ನು ಮಾತಿನ ಚಾವಟಿಯಿಂದ ಬಾರಿಸಿದ್ದಾಳೆ. ಸುದೇಷ್ಣೆಗೆ ತಾನು ಮೊದಲೇ ತಿಳಿಸಿದ್ದ ಕೀಚಕನ ದುರುಳತನದ ಅರಿವನ್ನೂ, ದೊರೆಯು ಅಸಹಾಯಕನಾಗಿದ್ದುದನ್ನೂ ವ್ಯಕ್ತ ಪಡಿಸುತ್ತಾಳೆ. ತನ್ನನ್ನು ಕೀಚಕನಲ್ಲಿಗೆ ಕಳುಹುವಾಗಲೇ ತಾನು ನಿರಾಕರಿಸಿದ್ದರೂ ಕೊನೆಗೆ ರಾಣಿಯ ಗದರಿಕೆಯಂತೆ ಹೋದುದರ ಫಲ ಎಂಬುದಾಗಿ ತನ್ನ ಈಗಿನ ಸ್ಥಿತಿಗೆ, ಅಪಮಾನಕ್ಕೆ ಸುದೇಷ್ಣೆಯನ್ನೇ ಆಕ್ಷೇಪಿಸುತ್ತಾಳೆ.

ಇದರಿಂದ ಸುದೇಷ್ಣೆಯು ದ್ರೌಪದಿಯನ್ನು ಸಮಾಧಾನ ಗೊಳಿಸುವುದಕ್ಕಾಗಿ ತಪ್ಪಿತಸ್ಥರನ್ನು ಶಿಕ್ಷಿಸುವ ಹೊಣೆ ಹೊತ್ತರೆ ಅದಕ್ಕೆ ಪ್ರತಿಯಾಗಿ ದ್ರೌಪದಿಯು—

'ಕೊಲಿಸುವೊಡೆ ನೀವೇಕೆ ತಪ್ಪಿನ
ಬಳಿಯಲೆನ್ನಾತಗಳು ಕೀಚಕ
ಕುಲವ ಸವರುವರೆನಗೆ ಕಾರಣವಿಲ್ಲ ...... '

ಎಂಬುದಾಗಿ ಸ್ವಾಭಿಮಾನದ ಮಾತನ್ನಾಡುತ್ತಾಳೆ. ಅವಳ ಛಲ, ತನ್ನನ್ನು ಕೆಣಕಿದವರ ಕುಲನಾಶವೆಂಬ ತನ್ನ ಹಿಂದಿನ ಮಾತನ್ನೇ ಬಲವಾಗಿ ಈಗಲೂ ಪ್ರತಿಪಾದಿಸುತ್ತಾ ಅದನ್ನು ಸತ್ಯವೆಂಬುದಾಗಿ ತೋರಿಸಿ ಕೊಡುವ ಹೊಣೆಯನ್ನು ವ್ಯಕ್ತಪಡಿಸುತ್ತಾಳೆ. ಇಲ್ಲಿ ಮುಂದಿನ ಕಥೆಯ ಬಗೆಗೆ ಮುನ್ಸೂಚನೆಯೂ ಇದೆ.

ತುಂಜತ್ತೆಯುತ್ತಚ್ಚನು ಈ ಯಾವ ವಿಷಯಗಳನ್ನೂ ಉಲ್ಲೇಖಿಸಿಲ್ಲ. ಸಭೆಯಿಂದ ನೇರವಾಗಿ ಹೊರಟ ಆಕೆಯು—

'ಅನ್ನುರಾವಂಬುಜ ಲೋಚನ ಮಾರುತಿ। ತನ್ನುಡೆ ಮಾರತ್ತು ವೀಣು ಕೇಣಿಡಿನಾಳ್....' (ಅಂದು ರಾತ್ರಿ ಕಮಲಲೋಚನೆಯು ಮಾರುತಿಯ ಎದೆಯಲ್ಲಿ ಬಿದ್ದು ಅತ್ತಳು.)

ಎಂಬುದಾಗಿ ತಿಳಿಸುತ್ತಾನೆ. ಸುದೇಷ್ಣೆಯೊಡನೆ ಸಂಭಾಷಣೆಯಾಗಲೀ ಅವಳ ಮನ ಸ್ಸಿನ ತುಮುಲವಾಗಲೀ ಅವನಲ್ಲಿ ಸ್ಥಾನ ಪಡೆದಿಲ್ಲ. ಆ ವಿಚಾರಗಳನ್ನೆಲ್ಲಾ ಕೈಬಿಟ್ಟು ಮೇಲಿನ ಒಂದೇ ಪಾದದಲ್ಲಿ ಸಂಕ್ಷೇಪಗೊಳಿಸಿದ್ದಾನೆ. ಇದರಿಂದ ದ್ರೌಪದಿಯ ಮನ ಸ್ಥಿತಿ ಸ್ಪಷ್ಟವಾಗಿ ವ್ಯಕ್ತವಾಗಿಲ್ಲ. ದುರ್ಬಲ ಮನಸ್ಸಿನ ಸ್ತ್ರೀಯೊಬ್ಬಳು ಅಸಹಾಯಕ ಳಾಗಿ ತನ್ನ ಪತಿಯನ್ನು ಮರೆಹೊಗುವಂತೆ ಚಿತ್ರಿತವಾಗಿದೆ. ಇದನ್ನು ಸಹಜವೆಂಬಂತೆ ಕಂಡರೂ ಇದರಿಂದ ದ್ರೌಪದಿಯ ಪಾತ್ರ ಚೆನ್ನಾಗಿ ಮೂಡಿ ಬರುವದಿಲ್ಲ.

ಕುಮಾರವ್ಯಾಸನ ದ್ರೌಪದಿಯಾದರೋ ಸುದೇಷ್ಣೆಯ ಭೇಟಿಯ ಬಳಿಕ ತನ್ನ ಅವಸ್ಥೆಯನ್ನು ನೆನೆದು ಮುಂದಿನ ಹೆಜ್ಜೆಯ ಬಗ್ಗೆ ಯೋಚಿಸುತ್ತಾಳೆ. ತಪ್ಪಿತಸ್ಥರನ್ನು

ತನ್ನ ಪತಿಗಳೇ ಕೊಲ್ಲುತ್ತಾರೆ ಎಂದು ಸಾರಿದ್ದಾಳೆ. ಅದನ್ನು ನೆರವೇರಿಸಿಕೊಳ್ಳದಿದ್ದರೆ ಅವಳ ಮಾತಿಗೆ. ಅವಳಿಗೆ ಮುಂದೆ ಬೆಲೆಯುಳಿದೀತೇ? ಆದುದರಿಂದಲೇ ಆಕೆಯ ಮನಸ್ಸಿನಲ್ಲಿ ತುಮುಲವೆದ್ದಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆಯೂ ಬಂದಿದೆ. ಆದರೆ ಅದು ಅಧರ್ಮವೆಂದುಕೊಳ್ಳುತ್ತಾಳೆ. ಈ ಹೆಂಗಸು ಜನ್ಮವನ್ನೇ ಸುಡಬೇಕೆಂದೂ. ತನ್ನಂತಹ ಘೋರ ಪಾತಕಿಗಳೇ ಇಲ್ಲವೆಂದೂ ಮರುಗುತ್ತಾಳೆ.[12] ತನ್ನ ದುಃಖ ನಿವಾರಣೆಗೆ ಶಕ್ತರಾರೆಂಬುದನ್ನು ಯೋಚಿಸುತ್ತಾಳೆ. ತನ್ನ ಒಬ್ಬೊಬ್ಬ ಪತಿಯನ್ನೂ ತೂಗಿನೋಡಿ ಅವರ ಯೋಗ್ಯತೆಯನ್ನು ನಿರ್ಧರಿಸುತ್ತಾಳೆ;

'ಯಮ ಸುತಂಗರು ಹುವೆನೆ ಧರ್ಮ
ಕ್ಷಮೆಯುಗರ ಹೊಡೆದಿಹುದು ...'

ಎಂಬುದಾಗಿಯೂ–

'... ಉಳಿದರಿಬ್ಬರು
ರಮಣರೀನಾಯ ಕೊಲಲ
ಕ್ಷಮರು ನಿಸ್ಸಂದೇಹ........'

ಎಂದೂ ಯೋಚಿಸಿ ತಿರ್ಮಾನಿಸುತ್ತಾಳೆ. ಇದರಿಂದ ಕೀಚಕನ ಬಲ, ಸಾಮರ್ಥ್ಯ ಆತನಿಗಿರುವ ರಾಜನ ಬೆಂಬಲ, ಇತ್ಯಾದಿಗಳನ್ನು ದ್ರೌಪದಿಯು ಗಮನಿಸಿದ್ದಾಳೆಂಬುದು ವ್ಯಕ್ತವಾಗುತ್ತದೆ. ಕೀಚಕ ಹೆಸರು ಬಿಡಿ, ಆತನ ನೆನಪು ಬಂದರೂ ಆ ಕ್ಷಣ ಅವನ ಯೋಗ್ಯತೆಗೆ ಸರಿಯಾದ ವಿಶೇಷಣ ಪದವನ್ನು[13] ದ್ರೌಪದಿಯು ಬಳಸುತ್ತಾಳೆ. ಈ ಮೂಲಕ ಅವಳ ಅಸಹನೆಯನ್ನು ಕುಮಾರವ್ಯಾಸನು ತುಂಬ ಚೆನ್ನಾಗಿ ಪರಿಚಯಿಸುತ್ತಾನೆ. ಕೊನೆಗೆ–

'ಎಲ್ಲರೊಳು ಕಲಿ ಭಿಮನೇ ಮಿಡು
ಕುಳ್ಳ ಗಂಡನು ...'

ಎಂದು ನಿಶ್ಚಯಿಸಿ ಅವನೂ ಒಗೊಡದಿದ್ದರೆ 'ಕುಡಿವೆನು ಘೋರತರ ವಿಷವ' ಎಂಬುದಾಗಿ ದೃಡವಾಗಿ ನಿಶ್ಚಯಿಸುತ್ತಾಳೆ. ಹೀಗೆ ಸ್ವಾಭಿಮಾನಿಯಾದ. ತನ್ನ ಅಪಮಾನವನ್ನು ಸಹಿಸದ ದ್ರೌಪದಿಯ ಚಿತ್ರಣದಿಂದ ಕುಮಾರವ್ಯಾಸನ ಪಾತ್ರನಿರೂಪಣಾ ಸಾಮರ್ಥ್ಯ ಮತ್ತೊಮ್ಮೆ ಸಾಬೀತಾಗುತ್ತದೆ.

12. ಘೋರ ಪಾತಕಿಗಳು ತಮ್ಮ ಪಾತಕದ ಫಲವಾಗಿಯೇ ಕಷ್ಟವನ್ನೂ, ದುಃಖವನ್ನೂ ಅನುಭವಿಸುತ್ತಾರೆಂಬುದು ಶಾಸ್ತ್ರಗಳಲ್ಲಿ ಹಾಗೂ ರೂಢಿಯಲ್ಲಿರುವುದರಿಂದ ಅವಳು ಆ ರೀತಿ ಯೋಚಿಸಿಕೊಳ್ಳುತ್ತಾಳೆ.

13. ನೋಡಿ : ವಿರಾಟ ಪರ್ವ ಪದ್ಯ 2, 21, 24, 38, 3, 2, 13, 18, 59, 79, 80. 99.

ಭೀಮನ ಭೇಟಿಗೆ ಹೋಗುವ ದ್ರೌಪದಿಯು ಅಡಿಗೆಮನೆಯನ್ನು ಗಮನಿಸುತ್ತಾ ನಡೆಯುತ್ತಾಳೆ. 'ಅರಲರಿದನೋ ಭೀಮನೀ ಸೂವಾರ ವಿದ್ಯೆಯ' ಎಂಬುದಾಗಿ ನಸುನಗುತ ಹೇಳಿಕೊಳ್ಳುವ ದ್ರೌಪದಿಯು ಹಾಸ್ಯ ಪ್ರಿಯಳೂ ಹೌದೆಂಬ ವಿಚಾರವನ್ನು ಕುಮಾರವ್ಯಾಸನು ಬೆಳಕಿಗೆ ತರುತ್ತಾನೆ. ಮೂಲದಲ್ಲಿಲ್ಲದ ಈ ಉಲ್ಲೇಖದಿಂದ ಕುಮಾರವ್ಯಾಸನು ಸೂಕ್ಷ್ಮಾವಲೋಕನ ಮಾಡಿ ಪಾತ್ರವನ್ನು ಚಿತ್ರಿಸುತ್ತಾನೆಂಬುದೂ ವ್ಯಕ್ತವಾಗುತ್ತದೆ.

ಭೀಮನಲ್ಲಿಗೆ ಬರುತ್ತಾ ದ್ರೌಪದಿಯು ಭೀಮನನ್ನು ಎಬ್ಬಿಸುವ ರೀತಿ, ಬಳಿಕ ಅವನು ನಡೆದುಕೊಳ್ಳಬಹುದಾದ ಬಗೆ ಇತ್ಯಾದಿಗಳನ್ನು ಯೋಚಿಸುತ್ತಾಳೆ. ಇದರಿಂದ ಕುಮಾರವ್ಯಾಸನ ದ್ರೌಪದಿಯು ಕಲ್ಪನಾ ವಿಲಾಸವನ್ನು ಹೆಣೆಯುವ ಸ್ವಭಾವವನ್ನೂ ಹೊಂದಿರುವಳೆಂದು ತಿಳಿಯಬಹುದು. ಆಕೆಗೆ ಭೀಮನಿಂದ ಸಹಾಯದ ಭರವಸೆ ಸಿಗುವ ಕುರಿತು ತುಸು ಸಂದೇಹವಿತ್ತೆಂದು ಹೇಳಬೇಕಾಗುತ್ತದೆ. ಈ ಮೊದಲೇ '....ಬಳಿಕವನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರ ವಿಷವ' ಎಂಬುದಾಗಿ ಹೇಳಿದ ಅವಳ ಮಾತು ಇದನ್ನು ಪುಷ್ಟೀಕರಿಸುತ್ತದೆ.

ವ್ಯಾಸಭಾರತದಲ್ಲಿ ೫ ಸಂಧಿಗಳ ೧೩೭ ಶ್ಲೋಕಗಳಲ್ಲಿ ಹರಡಿರುವ ಭೀಮ ದ್ರೌಪದಿ ಸಂವಾದವು ಕುಮಾರವ್ಯಾಸನಲ್ಲಿ ೩೪ ಷಟ್ಪದಿಗಳಲ್ಲಿ ಇಳಿದು ಬಂದಿದೆ. ಎಟುತ್ತಚ್ಚನಲ್ಲಿ ೫ ವೃತ್ತ ಪಾದಗಳಲ್ಲಿ ಸಂಕ್ಷಿಪ್ತವಾಗಿ ನಿರೂಪಿತವಾಗಿದೆ.

ಮೂಲದಲ್ಲಿ ದ್ರೌಪದಿಯು ಮೊದಲಿನಿಂದ ಅಂದಿನ ವರೆಗಿನ ತನ್ನ ಕಷ್ಟಗಳನ್ನೆಲ್ಲಾ ಪಟ್ಟಿಮಾಡುತ್ತಾಳಲ್ಲದೆ ಒಬ್ಬೊಬ್ಬ ಪಾಂಡವನ ಸ್ಥಿತಿಯನ್ನೂ ವರ್ಣಿಸಿ ತನ್ನ ಮರುಕವನ್ನು ವ್ಯಕ್ತಪಡಿಸುತ್ತಾಳೆ. ಈ ರೀತಿಯ ನೀರಸ ನಿರೂಪಣೆಗೆ ಬದಲಾಗಿ ಕುಮಾರವ್ಯಾಸನು ತುಂಬ ರಸವತ್ತಾಗಿ ಪತಿ ಪತ್ನಿಯರ ಬಿಚ್ಚು ಮನಸ್ಸಿನ ಪ್ರಣಯ ಕಲಹವನ್ನಾಗಿ ಇದನ್ನು ಚಿತ್ರಿಸಿದ್ದಾನೆ. ಇಲ್ಲಿ ತನ್ನ ಉದ್ದೇಶವನ್ನು ಭೀಮನಿಗೆ ತಿಳಿಸಿ ಆತನಿಂದ ಕೀಚಕ ಶಿಕ್ಷೆಗೆ ಸಮ್ಮತಿ ದೊರೆಯುವಂತೆ ಮಾಡಲು ಮಾತ್ರವಲ್ಲ ಕೀಚಕ ವಧೆಗೆ ಆತನಿಂದ ಪ್ರತಿಜ್ಞೆಯನ್ನು ಮಾಡಿಸಲು ತನ್ನೆಲ್ಲ ಜಾಣತನವನ್ನೂ ಅವಳು ಖರ್ಚು ಮಾಡಬೇಕಾಗುತ್ತದೆ.

'ನಿನ್ನವಂದಿಗರಿರಲು ಪರಿಭವವುಚಿತವೇ ತನಗೆ' ಎಂದು ಭೀಮನನ್ನು ಹೊಗಳುತ್ತಾ, 'ನೀನಲ್ಲದುಳಿದವರುಚಿತಜ್ಞರಿರರು ಮಮತೆಯಲಿ ನೀನೋಡು .... ಕುಠಾರನ ಯಮನ ಕಾಣಿಸಿ ಕರುಣಿಸು ಎಂದು ಪ್ರಾರ್ಥಿಸುತ್ತಾಳೆ. 'ಹೆಂಡತಿಯು ಪರಿಬವಲಿ ....' ಎಂಬುದಾಗಿ ಚುಚ್ಚಿ. 'ಗಂಡರೈವರು ಮೂರು ಲೋಕದ ಗಂಡರು ......' ಎಂದು ಹಂಗಿಸಿ. 'ಗಂಡರೋ ನೀವ್ ಭಂಡರೋ ಹೇಳಿ.......' ಎಂದು ಕೆರಳಿಸಿ ನುಡಿಯುತ್ತಾಳೆ.

ಇವುಗಳಿಗೆ ಉತ್ತರವಾಗಿ ಭೀಮನು ತನ್ನ ಅಸಹಾಯಕತೆಯನ್ನೂ ಧರ್ಮಜ ನೆಳೆದ ಗೆರೆಯನ್ನು ಮೀರಲಾರದ ಮೂಗುಬ್ಬಸವನ್ನೂ ಹೇಳಿ ತನ್ನ ಆಕೆಯ ಸಂಬಂಧವನ್ನೇ ಬಿಟ್ಟು ಬಿಡಲು ತಯಾರಾಗುತ್ತಾನೆ. ಇತರರಿಗೆ ಹೇಳಿ ಕೀಚಕನಿಗೆ ತಕ್ಕ ಶಿಕ್ಷೆಯನ್ನು ಕೊಡಿಸುವಂತೆ ಹೇಳಿಬಿಡುವ ಭೀಮನೆದುರಿಗೆ ದ್ರೌಪದಿಯು ಹತಾಶಳಾಗಿ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಇದು ಅವಳ ಅಸ್ತ್ರವೂ ಹೌದು, ಪ್ರಯತ್ನಕ್ಕೆ ಕೇಡಾಯಿತಲ್ಲಾ ಎಂಬ ವ್ಯಥೆಯೂ ಹೌದು. ಬಳಿಕ ಅವಳು ಗೋಳಾಡುತ್ತಾ ಹೆಂಗಸು ಜನ್ಮವನ್ನು ದೂರವುದು. ತನ್ನಂತಹ ನಿರ್ಭಾಗ್ಯರು ಜನಿಸದಿರಲೆಂದು ಪ್ರಾರ್ಥಿಸುವದು. ತನಗಿನ್ನು ವಿಷವೋ, ಬೆಟ್ಟದ ಪ್ರಪಾತವೋ. ಮಡುವೋ. ಕುಂತವೋ, ಬೆಂಕಿಯೋ ಗತಿಯೆನ್ನುವುದೂ ನಮ್ಮ ಸಹಾನುಭೂತಿಯನ್ನು ಪಡೆಯುತ್ತದೆ.

ತನ್ನ ಶ್ರೇಷ್ಠತೆಯನ್ನು, ತನ್ನ ಜನ್ಮ-ಜೀವನವನ್ನು ನೆನೆದು ಈಗಿನ ಅವಸ್ಥೆಯನ್ನು ಚಿಂತಿಸುತ್ತಾ ಮರುಗುತ್ತಾಳೆ. ಪತಿಗಳ ಶೌರ್ಯವನ್ನು ಹಂಗಿಸುತ್ತಾಳೆ. ಕೌರವನ ಭಾಗ್ಯವನ್ನು ಕೊಂಡಾಡಿ ಕೃಷ್ಣನ ಪ್ರೀತಿ ಪಡೆದೂ ಪ್ರಯೋಜನವಾಗದೆ ಸೇವಕರಾಗಿರುವ ಬಗ್ಗೆ ಹಂಗಿಸುತ್ತಾಳೆ. ತಾನಿನ್ನು ಬದುಕಲಾರನೆಂದೂ ತನ್ನನ್ನು ಕಾಮಿಸಿ – ಕೇಳಿಯ ವೇಳೆ ಮರೆಯದಿರೆಂದೂ ಪ್ರಾರ್ಥಿಸಿ ತಾನು ಸಿಟ್ಟಿನಿಂದ ಆಡಿದ ಮಾತುಗಳನ್ನು ಕ್ಷಮಿಸಬೇಕೆಂದೂ ಬೇಡಿಕೊಳ್ಳುತ್ತಾಳೆ. ಇವೆಲ್ಲವುಗಳಿಂದ ಕಠಿಣ-ವಿಮುಖ ಮನಸ್ಕನಾಗಿದ್ದ ಭೀಮನು ತುಸು ತುಸುವೇ ಮೃದುವಾಗಿ ಕೊನೆಗೆ ಅವಳ ಸಹಾಯಕ್ಕೆ ಮನಮಾಡುತ್ತಾನೆ. ಇದಕ್ಕೆ ದ್ರೌಪದಿಯ ವಿವಿಧ ರೀತಿಯ ಅಸ್ತ್ರ ಪ್ರಯೋಗವು ಕಾರಣವಾಗುತ್ತದೆ ಅವಳ ಗುರಿ ಸಾಧಿಸುತ್ತದೆ.

ಇವುಗಳಿಂದ ದ್ರೌಪದಿಯ ಚಾಣಾಕ್ಷತೆ, ದಿಟ್ಟತನ ಭೀಮನ ಮೇಲಿನ ಸಲಿಗೆಗಳು ವ್ಯಕ್ತಗೊಳ್ಳುತ್ತವೆ. ಕೊನೆಗೂ ಭೀಮನು ಒಪ್ಪಿ ಕೀಚಕನನ್ನು ಬಗೆಯುವ ಉಪಾಯವನ್ನು ಹೇಳಿದಾಗ ಹರುಷದಿಂದ ಪುಳಕಿತಳಾಗಿ ಭೀಮನನ್ನು ಹೊಗಳುತ್ತಾಳೆ. ಹೀಗೆ ದ್ರೌಪದಿಯ ಸ್ವಭಾವಕ್ಕೆ ಎಳ್ಳಷ್ಟೂ ಚ್ಯುತಿಯಾಗದಂತೆ ಬದಲಾಗಿ ಕಳೆಗಟ್ಟುವಂತೆ ಕುಮಾರವ್ಯಾಸನು ಚಿತ್ರಿಸಿದ್ದಾನೆ.

ಎಟುತ್ತಚ್ಚನಲ್ಲಿ ದ್ರೌಪದಿಯು ಗೋಳಾಡುತ್ತಾ ಭೀಮನನ್ನು ಆಲಂಗಿಸುತ್ತಾಳೆ. ಅವನು ಇನ್ನೊಂದು ತಿಂಗಳು ಸೈರಿಸೆಂದು ಸಮಾಧಾನ ಹೇಳಿದರೆ–

'ಮಾಸಮೋ ಪಿನ್ನೆಯುಲ್ಲೋ ಯೆನಿಕ್ಕಜೋರು। ವಾಸರಮುಲ್ಲೋರು ನಾಜಿ ಪಯುಂ ಪೋರಾ। ಕೀಚಕನೆ ಕೊನ್ನು ಸಂಕಟಂ ತೀರ್ಕನೀ। ನೀಚನೆಕ್ಕೊಂಡು ಪೊರು ದಿಯಿಲ್ಲೇದುಮೇ...' (ತಿಂಗಳು ಮತ್ತೆ ನನಗಂತೂ ಒಂದು ವಾರವಲ್ಲ ಒಂದು ಘಳಿಗೆಯೂ ಕಾಯಲಸಾಧ್ಯ. ಕೀಚಕನನ್ನು ಕೊಂದು ಸಂಕಟವನ್ನು ನೀನು ತೀರಿಸು.

ಈ ನೀಚನಿಂದ ಬೇರೆ ದಾರಿ ಒಂದಿಷ್ಟೂ ಇಲ್ಲ.) ಎಂಬುದಾಗಿ ಹೇಳುತ್ತಾಳೆ. ಇದಕ್ಕೆ ಭೀಮನು ಒಪ್ಪಿಕೊಂಡು ಬಿಡುತ್ತಾನೆ.

ಇಲ್ಲಿ ತುಂಜತ್ತೆಟುತ್ತಚ್ಛನು ದ್ರೌಪದಿಯ ಮಾತುಗಳನ್ನು ಕೇವಲ ಒಂದೆರಡು ಪಾದಗಳಲ್ಲಿ ಸಂಕ್ಷೇಪಗೊಳಿಸಿ ಬಿಟ್ಟಿದ್ದಾನೆ. ಇದು ಸಮರ್ಥವಾಗಿ ಅವಳ ಸ್ವಭಾವವನ್ನು ತೋರಿಸಿಕೊಡುವದಿಲ್ಲ. ಆಕೆಯ ಕಷ್ಟ ಹಾಗೂ ಶೋಕೋದ್ರೇಕವನ್ನು ಮಾತ್ರ ಇಲ್ಲಿ ಕಾಣಬಹುದು.

ಬಳಿಕ ಭೀಮನು ಸೂಚಿಸಿದ ಉಪಾಯವನ್ನು ನೆರವೇರಿಸಲು ತೊಡಗುತ್ತಾಳೆ. ಮರುದಿನ ಅರಮನೆಗೆ ಬಂದ ಕೀಚಕನು ದ್ರೌಪದಿಯನ್ನು ಕಂಡೂ ಹಿಂದಣ ದಿನದ ನೆನಪಿನಿಂದ ಕೈ ದುಡುಕಲು ಅಂಜುತ್ತಾನೆ. ಆದುದರಿಂದ ಕೇವಲ ಮಾತಿನ ಮೂಲಕ ಬೇಡಿಕೊಳ್ಳುತ್ತಾನೆ. ಆಗ ಅಲ್ಲಿ ದ್ರೌಪದಿಯು ಕೊಡುವ ಉತ್ತರವು ಕುಮಾರ ವ್ಯಾಸನ ಪ್ರತಿಭೆ, ಸಾಮರ್ಥ್ಯಗಳಿಗೆ ಉತ್ತಮ ಉದಾಹರಣೆಯಾಗುತ್ತವೆ.

'ಕಸುಮ ಶರ ಯಮಸಹನು...' ಎಂಬುದಾಗಿ ಅವನಾಡಿದ ಮಾತನ್ನೇ ಶ್ಲೇಷಾರ್ಥದಲ್ಲಿ ಬಳಸಿ ಪರಿಣಾಮವನ್ನೂ ಸೂಚ್ಯವಾಗಿ ತಿಳಿಸುತ್ತಾಳೆ. 'ಶಶಿವದನೆಗಳೂಪಿದ ದುರಾತ್ಮನ ವಸುಧೆ ಹೊರದೆಲೆ ಪಾಪಿ ಕೀಚಕ ..' ಎಂಬುದಾಗಿ ಮಾತು ಮಾತಿಗೂ ಬಯ್ಯುತ್ತಾಳೆ. ಅವನ ಹೆಸರು ಹೇಳುವಾಗಲೆಲ್ಲಾ ನಾಯಿ. ಪಾಪಿ ಇತ್ಯಾದಿ ಬಯ್ಗುಳ ವಿಶೇಷಣಗಳನ್ನು ಬಳಸುತ್ತಾಳೆ. ಇದು ತುಂಬ ಉಚಿತವಾಗಿದೆ. ವ್ಯಾಸಭಾರತದಲ್ಲಿಲ್ಲದ ಈ ಮಾತುಕತೆ ಕುಮಾರವ್ಯಾಸನಲ್ಲಿ ಬಂದಿರುವದರಿಂದ ಅವಳ ವ್ಯಕ್ತಿತ್ವವಿಲ್ಲಿ ಬೆಳಗುತ್ತದೆ. ಮುಂಚಿನ ದಿನವಷ್ಟೆ ಚೆನ್ನಾಗಿ ಬಯ್ದು ಛೀಮಾರಿ ಹಾಕಿದಾಕೆ ಮರುದಿನ ಕೂಡಲೇ ಆತನ ವಶವಾಗಲು ಸಮ್ಮತಿಯನ್ನು ಸೂಚಿಸುತ್ತಿರುವಂತೆ ವ್ಯಾಸಭಾರತದಲ್ಲಿ ನಿರೂಪಿತವಾಗಿದ್ದು ಅದು ಅಸಹಜವೆನ್ನಿಸುತ್ತದೆ. ಕೇವಲ ನಟನೆಯೇ ಆಗಿರಲಿ. ಹೇಳುವಾಕೆ ಮಾತಿನಿಂದ ಅದನ್ನು ವ್ಯಕ್ತಪಡಿಸಬೇಕಷ್ಟೆ? ದ್ರೌಪದಿಯಂತಹ ಪತಿವ್ರತೆ ಆ ಮಾತನ್ನು ಕನಸು–ಮನಸಲ್ಲೂ ಉಚ್ಚರಿಸಲಾರಳೆಂಬುದು ನಿಶ್ಚಯ. ಇದನ್ನು ತಿಳಿದೇ ಕುಮಾರವ್ಯಾಸನು ಔಚಿತ್ಯಪೂರ್ಣವಾಗಿ ಸಂಭಾಷಣೆಯನ್ನು ರಚಿಸಿದ್ದಾನೆ. ಅವಳ ನಡವಳಿಕೆ ಎಂದೂ ಬದಲಾಗುವದಿಲ್ಲ. ತಾನು ಒಲಿದಿರುವೆನೆಂಬ ಮಾತು ಅವಳ ಬಾಯಲ್ಲೆಂದೂ ಬರುವದಿಲ್ಲ—

'... ಎಲವೊ ಕೆಲಬಲ
ನರಿಯದಂದದಿ ಬಂದು ನಾಟ್ಯದ ಗರುಡಿಯೊಳಗಿಹುದು
ನೆರೆದುದಾಯುಷ ನಿನಗೆ ಕತ್ತಲೆ
ಮನೆಯೊಳಾನೈತಹೆನುಯೆನ್ನನು
ಮರೆದು ನೀ ಬಿಡೆಯಾದುದಾಗಲಿ ......'

ಎಂಬುದಾಗಿ ದ್ವಯಾರ್ಥವನ್ನಿಟ್ಟೇ ನುಡಿಯುತ್ತಾಳೆ. ಅರಸಿನ ಪಿತ್ತವೇರಿದವನಿಗೆ (ಕಾಮಾಲೆ ರೋಗಿಗೆ) ಲೋಕವಿಡೀ ಅರಸಿನವಾಗಿ ಕಾಣುವಂತೆ ಕಾಮುಕನಾದ ಕೀಚಕ ಆ ಮಾತುಗಳಲ್ಲಿ ತನಗನುಕೂಲವಾದ ಕಾಮವನ್ನೇ ಕಾಣುತ್ತಾನೆ. ಅವನ ಆಯುಷ್ಯ ಮುಗಿಯಿತೆಂದೇ ಆ ಮಾತುಗಳಲ್ಲಿ ದ್ರೌಪದಿಯು ಹೇಳಿ ಬಿಟ್ಟಿದ್ದಾಳೆ. ಈ ರೀತಿ ದ್ರೌಪದಿಯ ವ್ಯಕ್ತಿತ್ವವು ಬೆಳಗುವಂತೆ ಸಂಭಾಷಣೆಯನ್ನು ಹೆಣೆದ ಕುಮಾರ ವ್ಯಾಸನ ಪ್ರತಿಭೆ ಅನ್ಯಾದೃಶವಾದುದೆಂಬುದರಲ್ಲಿ ಸಂಶಯವಿಲ್ಲ. ಈ ಔಚಿತ್ಯ ಪ್ರಜ್ಞೆಯನ್ನು ವ್ಯಾಸನಲ್ಲಾಗಲೀ, ಎಟುತ್ತಚ್ಛನಲ್ಲಾಗಲೀ ನಾವು ಕಾಣಲಾರೆವು.

ತುಂಜತ್ತೆಟುತ್ತಚ್ಛನಲ್ಲಿ ದ್ರೌಪದಿಯ ಘನತೆ–ವ್ಯಕ್ತಿತ್ವಗಳಿಗೆ ಕಳಂಕವ್ಪೋ ಎಂಬಂತೆ ಸ್ಪಷ್ಟಾರ್ಥದಲ್ಲಿ ಆಕೆಯು ಕೀಚಕನಿಗೆ ಆಹ್ವಾನವೀಯುತ್ತಾಳೆ–

'ನಾರಿಮಾರ್ ಞಙಳ್ ಸ್ವಧರ್ಮಮರಿಗೆಡೋ। ಮಾರವಶಗ ಮಾರಾಗಯಾ ಲನ್ವಹಂ।। ನಾನಾ ಜನಙಳುಮೊನ್ನಿಚ್ಚಪೇಕ್ಷಿ ಚ್ಚಾಲೂ ನಮಿಲ್ಲಾತವಣ್ಣಮಿಣಙೀ ಡೇಣಂ।। ಉಂಡಂಗಿಲ್ ಪಂಚಮೋ ಗಂಧರ್ವನಾರ್ವನ್ಮಾರ್। ಪೀಡ ಓರೋ ದಿನಂ ಪ್ರತಿ ಕಾಣಾಮೆನ್ನುಂ ವರುಂ।। ಒಟ್ಟು ನಾಳೇಕ್ಕು ಕಂಡೀಲೆನ್ನದುಂ ವರುಂ। ಪಚ್ಚಾಞು ಞಾನ್ ಪರಞೀಲಯೆನ್ನಿಲ್ಲೆಡೋ।। ಪಯ್ಯವೇ ಕೂತ್ತ ರಂಗತ್ತೆನ್ನು ತಙಳಿಲ್। ಕಯ್ಯುಂ ಪಿಡಿಚ್ಚು ತೆಳಿಞು ಮನಸ್ಸೋಸ್ತು। ಸೈರಂಧ್ರಿ ಚೊನ್ನದು ಕೇಟ್ಟು ...' (ಸ್ತ್ರೀಯರಾದ ನಮ್ಮ ಸ್ವಭಾವವನ್ನು ತಿಳಿದುಕೋ ದಿನವೂ ಕಾಮವಶ ರಾಗಿರುವೆವಾದುದರಿಂದ ಅನೇಕ ಜನರು ಒಮ್ಮೆಗೆ ಅಪೇಕ್ಷಿಸಿದರೂ ಕೊರತೆಯಾಗ ದಂತೆ ಸಮ್ಮತಿಸಬೇಕು। ನನಗೆ ಐವರು ಗಂಧರ್ವರ ಕಾಟವು ಪ್ರತಿಯೊಂದು ದಿನವೂ. ಕಾಣಿಸುವುದೆಂದೂ ಇದೆ। ಕೆಲವೊಂದು ದಿವಸಗಳಷ್ಟು ಒಮ್ಮೆಗೆ ಕಾಣದೇ ಹೋಗು ವುದೂ ಇದೆ ಮತ್ತೆ ನಾನು ಹೇಳಿಲ್ಲವೆಂದನಬೇಡ। ಮೆಲ್ಲನೇ "ನಾಟ್ಯರಂಗ" ವೆಂದು ತನ್ನಲ್ಲಿ ಕೈಹಿಡಿದು. ಸಮಾಧಾನದಿಂದ. ಮನಸಾರೆ। ಸೈರಂಧ್ರಿ ಹೇಳಿದುದನ್ನು ಕೇಳಿ.)

ಇಲ್ಲಿ ದ್ರೌಪದಿಯು ಸುದೀರ್ಘವಾಗಿ ಸ್ತ್ರೀಕಾಮದ ಕುರಿತೂ. ತನ್ನ ಗಂಧರ್ವಪತಿ ಗಳ ಸ್ವಭಾವದ ಕುರಿತೂ ತಿಳಿಸಿ 'ನಾಟ್ಯರಂಗ'ದ ಸಂಕೇತವನ್ನು ಕೈ ಹಿಡಿದು ಒತ್ತಾ ಯಿಸಿ ಮನಸಾರೆ ಹೇಳಿದಳಂತೆ.

ದ್ರೌಪದಿಯಂತಹ ಪತಿವ್ರತೆ ಈ ರೀತಿ ನಡೆದುಕೊಳ್ಳುವುದು ಅಸಾಧ್ಯ. ಸಹಜ ವೆನಿಸುವದಿಲ್ಲ. ಎಷ್ಟೇ ನಟನೆಯಾದರೂ ಪರಪುರುಷನಲ್ಲಿ ಅದೂ ಹಿಂದಿನ ದಿನ ಒದೆದು ಬೀಳಿಸಿ ಅಪಮಾನಿಸಿದವನಲ್ಲಿ ಆಕೆಯಂತಹ ಕುಲೀನೆ ಈ ಮಾತನ್ನಾಡುವುದು ಅವಳ ವ್ಯಕ್ತಿತ್ವಕ್ಕೆ ಕಳಂಕ. ಹಿಂದಿನ ದಿನ ಆಕೆಯನ್ನು ಆಕ್ರಮಿಸಿದ್ದರಿಂದ ರಕ್ಕಸನ ಪೆಟ್ಟು

ತಿಂದು ರಕ್ತಕಾರಿ ಓಡಿಹೋದ ಕೀಚಕನಲ್ಲಿ ಆಕೆಯೇ ಈ ರೀತಿ ಹೇಳುವುದು ತಕ್ಕುದೆನಿಸುವುದಿಲ್ಲ. ಆಕೆಯೇ ಶ್ರೇಷ್ಠಳೆಂದೂ, ಬಲಶಾಲಿಯೆಂದೂ, ಕೀಚಕನು ಸೋತವನೆಂದೂ ಸಾಬೀತಾಗಿರುವಾಗ ಇದು ಉಚಿತವೆನಿಸುವುದಿಲ್ಲ. ಒಂದು ವೇಳೆ ಹಿಂದಿನ ದಿನ ದ್ರೌಪದಿಯು ಕೀಚಕನನ್ನು ಪ್ರಾರ್ಥಿಸಿ ದೀನಳಾಗಿ ಬೇಡಿಕೊಂಡಿದ್ದರೆ, ಕೀಚಕನು ದಯೆದೋರಿ ಅಂದಿನ ಮಟ್ಟಿಗೆ ತಾನಾಗಿಯೇ ಅವಳನ್ನು ಬಿಟ್ಟು ಹೋಗಿದ್ದರೆ ಅವಳಿಂದ ಈ ರೀತಿಯ ನಡುವಳಿಕೆಯನ್ನು ಸಮರ್ಥಿಸಬಹುದಿತ್ತು. ಆದರೆ ಹಾಗಿಲ್ಲ. ಆದುದರಿಂದ ಎಟುತ್ತಚ್ಛನಲ್ಲಿ ದ್ರೌಪದಿಯ ಚಿತ್ರಣ ಸೂಕ್ತವೆನಿಸುವುದಿಲ್ಲ ಮಾತ್ರವಲ್ಲ ದೋಷಪೂರ್ಣವೂ ಆಗಿದೆಯನ್ನಬೇಕಾಗುತ್ತದೆ.

ನಟ್ಯ ಶಾಲೆಗೆ ಬರುವಂತೆ ಕೀಚಕನಿಗೆ ಸೂಚನೆ ಕೊಟ್ಟಿರುವವನ್ನು ಭೀಮನಿಗೆ ತಿಳಿಸಲು ಸಂತೋಷದಿಂದ ಬರುವ ದ್ರೌಪದಿಯು–

‘ಭೀಮ ನಿಂದಿರು ನಾಟ್ಯ ನಿಲಯವ
ನಾ ಮದಾಂಧಗೆ ನುಡಿದು ಬಂದೆನು
ತಾಮಸವ ಮಾಡದಿರು ಹೂಡದಿರಲ್ಪಬುದ್ಧಿಗಳ।
ಕಾಮುಕನ ನಡೆಗೆಡಹಿ ನಿಜ ಸು
ಪ್ರೇಮವನು ತೋರು ... .. ’

ಎಂಬುದಾಗಿ ಭೀಮನಿಗೆ ಪ್ರೋತ್ಸಾಹಿಸುತ್ತಾಳೆ. ಕೀಚಕನ ಸಾವನ್ನು ಬಯಸುವ ಅವಳ ಕಠೋರ ನಿರ್ಧಾರವೂ. ಭೀಮನಲ್ಲಿ ಸಲಿಗೆಯೂ ಇಲ್ಲಿ ಕಂಡು ಬರುತ್ತದೆ. ಭೀಮನಿಗೆ ತಿಲಕವಿಟ್ಟು ಶುಭ ಹಾರೈಸುವಲ್ಲಿ ಅವಳ ಉತ್ಸುಕತೆ. ಭೀಮನ ಮೇಲಿನ ಪ್ರೀತಿಗಳು ವ್ಯಕ್ತವಾಗುತ್ತವೆ. ಇಂತಹ ಸತಿ-ಪತಿ ಭಾವವನ್ನು ವ್ಯಾಸನಲ್ಲಾಗಲೀ ಎಟುತ್ತಚ್ಛನಲ್ಲಾಗಲೀ ನಾವು ಕಾಣಲಾರೆವು.

ಭೀಮ-ಕೀಚಕ ಹೋರಾಟದ ಸಂದರ್ಭದಲ್ಲಿ ಕುಮಾರವ್ಯಾಸನು.—‘ಭೀಮನ ಯುವತಿ ನಗುತಾಲಿಸುತಿದ್ದಳು ಹೊಯ್ಲು ಹೋರಟೆಯ ...’ ಎಂದು ದ್ರೌಪದಿಯು ಅಲ್ಲಿದ್ದು ಕತ್ತಲಿನಲ್ಲಿ ನಡೆವ ಹೋರಾಟವನ್ನಾಲಿಸಿ ಆನಂದಿಸುತ್ತಿದ್ದಳು ಎಂಬುದಾಗಿ ಹೇಳುತ್ತಾನೆ. ಇದರಿಂದ ಹೋರಾಟ ಯುದ್ಧಗಳ ಬಗ್ಗೆ ಅವಳಲ್ಲಿನ ಕುತೂಹಲ. ತನ್ನನ್ನು ಕೆಣಕಿದ ಕೀಚಕನ ಸಾವಿಗೆ ಅವಳ ಉತ್ಸುಕತೆ ಹಾಗೂ ಅವಳ ವೀರ ಮನೋಭಾವಗಳು ವ್ಯಕ್ತವಾಗುತ್ತವೆ.

ಕೀಚಕನ ಅವಸ್ಥೆಯು ಮುಗಿದ ಬಳಿಕ ಮಾಂಸದ ಮುದ್ದೆಯಂತೆ ಬಿದ್ದಿರುವ ಆ ಕೀಚಕನನ್ನು ಕಂಡು ಕುಮಾರವ್ಯಾಸನ ದ್ರೌಪದಿಯು ಪ್ರತಿಜ್ಞೆ ಪೂರೈಸಿದ ಕ್ಷತ್ರಿಯ ವೀರಳಂತೆ ಸಂತೋಷಪಡುತ್ತಾಳೆ. ತನ್ನ ಅಭಿಲಾಷೆಯನ್ನು ನೆರವೇರಿಸಿದ

ಪತಿಯನ್ನು. ನೀಚ ಕಾಮುಕನನ್ನು ಶಿಕ್ಷಿಸಿದ ಪತಿಯನ್ನು ಸಂತೋಷಾಧಿಕ್ಯದಿಂದ ಅಪ್ಪಿ ಮುಂಡಾಡಿ ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸುತ್ತಾಳೆ. ಈ ಸುಂದರ ಚಿತ್ರವನ್ನೂ ವ್ಯಾಸಭಾರತದಲ್ಲಾಗಲೀ ಎಟುತ್ತಚ್ಛನಲ್ಲಾಗಲೀ ಕಾಣಲಾರೆವು.

ಎಟುತ್ತಚ್ಛನಲ್ಲಿ ಕೀಚಕ ವಧೆಯ ಬಳಿಕ ಭೀಮ ಯಾರರಿಯದಂತೆ ಹೋಗಿ ಬಿಡುತ್ತಾನೆ. ಸತ್ತ ಕೀಚಕನ ತಮ್ಮಂದಿರು ದ್ರೌಪದಿಯನ್ನು ಹಿಡಿದು ಶವದೊಂದಿಗೆ ಬಂಧಿಸಿ ಕಟ್ಟುತ್ತಾರೆ. ಇದೂ ಚೆನ್ನಾಗಿ ಮೂಡಿಬಂದಿಲ್ಲ. ಕುಮಾರವ್ಯಾಸನು ಬಹು ಯುಕ್ತಿ ಯುಕ್ತವಾಗಿ ಇವನ್ನು ನಿರೂಪಿಸಿದ್ದಾನೆ.

ದ್ರೌಪದಿಯು ಸತ್ತ ಕೀಚಕನನ್ನು ಕಾವಲಿನವರಿಗೆ ಮೊದಲು ತೋರಿಸುತ್ತಾಳೆ—

> 'ದುರುಳ ಬಲುಹಿಂದೆನ್ನನೆಳದೊಡೆ
> ಕೆರಳಿದರು ಗಂಧರ್ವರೀತಗೆ
> ಹರುವ ಕಂಡರು ನೋಡಿ ...'

ಎನ್ನುತ್ತಾಳೆ. ಹಿಂದಿನ ದಿನ ಆ ಕಾಮುಕನು ಸೈರಂಧ್ರಿಯನ್ನು ತುಡುಕಿದ್ದನ್ನು ಎಲ್ಲರೂ ಅರಿತಿದ್ದಾರೆ. ಆದುದರಿಂದ ಈ ದಿನ ಆತನು ಎಳದು ತಂದನೆಂಬ ಅವಳ ಮಾತನ್ನು ಯಾರಾದರೂ ನಂಬಲೇಬೇಕು. ಕೀಚಕನ ಸಾವಿಗೆ ಆಕೆಯು ಕೊಡುವ ಈ ಕಾರಣವು ಗಮನ ಸೆಳೆಯುವಂತದ್ದು. ಇದರಿಂದ ಕೀಚಕನು ಸತ್ತುದಕ್ಕೆ ಕಾರಣವನ್ನು ಯುಕ್ತಿ ಯುಕ್ತವಾಗಿ ಚಿತ್ತರಿಸಲು ಪ್ರತ್ಯಕ್ಷಪ್ರಮಾಣವನ್ನೆ ಒದಗಿಸಿದಂತಾಗಿ ದ್ರೌಪದಿಯ ನಡತೆ ಶುದ್ಧವಾದುದೆಂಬುದಾಗಿ ಸಾಬೀತಾಗುತ್ತದೆ. ಕುಮಾರವ್ಯಾಸನ ಬಹು ಚಿಕ್ಕ ವಿಷಯಕ್ಕೂ ಗಮನಹರಿಸಿದ್ದಾನೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಉಪಕೀಚಕರು ಬಂದು ದ್ರೌಪದಿಯನ್ನು ಕೀಚಕನೊಂದಿಗೆ ಸುಡುವ ನಿರ್ಧಾರ ಮಾಡಿ ವಿರಾಟನ ಅನುಮತಿಯನ್ನು ತರುತ್ತಾರೆ. ಇದೂ ಕುಮಾರವ್ಯಾಸನ ಸೃಷ್ಟಿ. ದ್ರೌಪದಿಯ ಯೋಗ್ಯತೆ, ಭೀತಿ ಜನರಲ್ಲಿ ಮೊದಲೇ ಇತ್ತು. ಆದುದರಿಂದ ರಾಜನ ಬೆಂಬಲ, ರಾಣಿ ಸುದೇಷ್ಣೆಯ ಆಪ್ತತ್ವವಿರುವ ದ್ರೌಪದಿಯನ್ನು ಕೊಂಡೊಯ್ಯುವ ಧೈರ್ಯ ಅದರಲ್ಲೂ ತಮ್ಮಣ್ಣ ಕೀಚಕನು ಸತ್ತು ಬಿದ್ದ ಸಮಯದಲ್ಲಿ ಉಪಕೀಚಕರಿಗೆ ಎಲ್ಲಿಂದ ಬರಬೇಕು? ಅಷ್ಟು ಮಾತ್ರವಲ್ಲ ಕೀಚಕನೆ ಒಂದು ಬಾರಿ ದುಡಿಕಿದಾಗ ಅಜ್ಞಾತ ರಕ್ಕಸನಿಂದ ಚೆನ್ನಾಗಿ ಪೆಟ್ಟು ತಿಂದಿದ್ದಾನೆ. ದ್ರೌಪದಿಗೆ ಗಂಧರ್ವ ಪತಿಗಳ ರಕ್ಷೆಯಿದೆ ಯೆಂಬುದು ರುಜುವಾತಾಗಿದೆ. ಹಾಗಿರುವಾಗ ವಿರಾಟನ ಅಪ್ಪಣೆ ಪಡೆಯುವದು ಯೋಗ್ಯವಾಗಿದೆ. ಇದರಿಂದ ರಾಜಬಲ ಬೆಂಬಲವಾದಂತಾಗುತ್ತದೆ. ವ್ಯಾಸನಲ್ಲಾಗಲೀ, ಎಟುತ್ತಚ್ಛನಲ್ಲಾಗಲೀ ಈ ಅಂಶವಿರುವದಿಲ್ಲ. ತಾವೇ ನೇರಾಗಿ ದ್ರೌಪದಿಯನ್ನು ಬಂಧಿಸಿ ಒಯ್ಯುವ ಕಾರ್ಯ ನಡೆಸುತ್ತಾರೆ. ಆದುದರಿಂದ ಕುಮಾರವ್ಯಾಸನ ಮೇಲ್ಮೆ ಇಲ್ಲಿ ಇನ್ನೊಮ್ಮೆ ವ್ಯಕ್ತವಾಗುತ್ತದೆ.

ದ್ರೌಪದಿಯು ಉಪಕೀಚಕರಿಂದ ಬಂಧಿತಳಾಗಿ ಒಯ್ಯಲ್ಪಡುವಾಗು ದುಃಖಿಸಿ ರೋಧಿಸುತ್ತಾಳೆ. ಆಗ ತನ್ನವರನ್ನು ಸಂಕೇತ ನಾಮಗಳಿಂದ ಕರೆದು ಮೊರೆಯಿಡುತ್ತಾಳೆ. ಈ ದೃಶ್ಯ ಕುಮಾರವ್ಯಾಸನಲ್ಲಿ ಯುಕ್ತವಾಗಿ ಸಂಗೃಹೀತವಾಗಿದೆ.

‘ಅಕಟಕಟ ಪಾಪಿಗಳಿರಾ ಗಂಧರ್ವರಿರಾ ....’
‘ಕೇಳಕಟ ಜಯನ ಜಯಂತನೆ ...’

ಎಂಬುದಾಗಿ ಅವಳು ಗೋಳಿಡುವುದನ್ನು ಕೇಳಿ ಭೀಮನು ಒಂದು ಮರವನ್ನೇ ಕಿತ್ತು ಓಡಿಬರುವುದು ಕುಮಾರವ್ಯಾಸನಲ್ಲಿರುವ ದೃಶ್ಯ. ಇವನನ್ನು ಕಂಡು ಉಪಕೀಚಕರು.— ‘ಎಲೆಲೆ ಗಂಧರ್ವಕನ ಹೆಂಗುಸ ಕಳಚಿಬಿಡಿರೋ .. ’ ಎಂದು ಒದರಿ ದ್ರೌಪದಿಯನ್ನು ಬಿಟ್ಟು ಓಡಿ ಬಿಡುತ್ತಾರೆ. ಭೀಮನನ್ನು ಗಂಧರ್ವನೆಂದೇ ಬಗೆದು ಓಡುವ ಚಿತ್ರ ಇಲ್ಲಿ ಬಹು ಚೆನ್ನಾಗಿ ಮೂಡಿಬಂದಿದೆ.

ಎಟುತ್ತಚ್ಛನಲ್ಲಿ ದ್ರೌಪದಿಯ ಗೋಳಿನ ಉಲ್ಲೇಖವೇ ಇಲ್ಲ. ಕೀಚಕನ ಹೆಣದೊಂದಿಗೆ ದ್ರೌಪದಿಯನ್ನು ಕಟ್ಟಿಕೊಂಡೊಯ್ಯುವುದನ್ನು ಭೀಮನು ನೋಡಿ ಸ್ತ್ರೀ. ವೃದ್ಧ, ಬಾಲರೇ ಮೊದಲಾದ ಜನರಿಗೆ ಉಂಟಾಗುವ ಅಪಮಾನ. ಕಷ್ಟಗಳನ್ನು ನೋಡಿ ಸಹಿಸಬಾರದೆಂದು ಹೇಳುತ್ತಾ ತಾನೇ ಧಾವಿಸಿ ಬರುತ್ತಾನೆ. ಈ ಬದಲಾವಣೆಯಿಂದ ದ್ರೌಪದಿಯ ಮನೋಭಾವ ವ್ಯಕ್ತವಾಗುವುದಕ್ಕೆ ಅವಕಾಶವಾಗಿಲ್ಲ. ತನ್ನನ್ನು ಸುಡುವುದಕ್ಕೆ ಕಟ್ಟಿಕೊಂಡೊಯ್ಯುವಾಗ ಆಕೆ ಸುಮ್ಮನಿರಲು ಸಾಧ್ಯವೇ? ಆದುದರಿಂದ ಇಲ್ಲಿ ಸಹಜವೆನಿಸುವಂತೆ ದ್ರೌಪದಿಯ ಪಾತ್ರ ಸೃಷ್ಟಿಯಾಗಿಲ್ಲ.

ಉಪಕೀಚಕ ಸಂಹಾರದ ಬಳಿಕ ಕೊಳದಲ್ಲಿ ಸ್ನಾನ ಮಾಡಿ ಬರುವಾಗ ಅಡುಗೆ ಮನೆಯ ಬಾಗಿಲಲ್ಲಿ ಭೀಮನು ನಿಂತಿರುವುದನ್ನು ಕಾಣುವ ದ್ರೌಪದಿಯು ಭೀಮನಿಗೆ ನಮಸ್ಕರಿಸಿ ಬರುವ ದೃಶ್ಯ ಹೀಗಿದೆ—

‘ಮುಗುಳು ನಗೆಯಲಿ ಕಣ್ಣಕಡೆಯಲಿ
ವಿಗಡ ಭೀಮನ ನೋಡಿ ಕೈಗಳ
ಮುಗಿದೆವಾವ್ ಗಂಧರ್ವಪತಿಗೆ ನಮೋ ನಮೋಯೆನುತ ।
ಹೊಗರಿಡುವ ಹರುಷದಲಿ ರೋಮಾ
ಳಿಗಳ ಗುಡಿಯಲಿ ತನ್ನ ನಿಳಯಕೆ
ಮುಗುದೆ ಬಂದಳು.... .. ’

ಎಂಬುದಾಗಿ ವರ್ಣಿಸುವ ಕುಮಾರವ್ಯಾಸನು ‘ಗಂಧರ್ವಪತಿಗೆ ನಮೋ ನಮೋ’ ಎಂಬ ಭಾಗವನ್ನು ವ್ಯಾಸ ಭಾರತದಿಂದ ಹಾಗೆಯೇ ಎತ್ತಿಕೊಂಡಿದ್ದಾನೆ. ಇದರಿಂದ ದ್ರೌಪದಿಯ ತುಂಟತನದ ಉತ್ಸಾಹ ಸ್ವಭಾವವನ್ನೂ ವ್ಯಕ್ತಪಡಿಸಿದಂತಾಗುತ್ತದೆ.

ಎಟುತ್ತಚ್ಛನು ಈ ಯಾವ ವಿಚಾರವನ್ನೂ ವಿಸ್ತರಿಸುವುದಿಲ್ಲ. ಅವನು ಹೇಗೋ ಪಂಕ್ತಿ ಸಲ್ಲಿಸಿ ಹೊರಡಲು ಆತುರ ತೋರುವವನಂತೆ ವರ್ತಿಸುತ್ತಾನೆ. ಕಥೆಯನ್ನು ಹೇಗೋ ಮುಗಿಸುವುದಕ್ಕೆ ಆತುರನಾಗಿರುವಂತೆ ಕಂಡು ಬರುತ್ತದೆ. ಉಪಕೀಚಕ ರನ್ನು ಕೊಂದಬಳಿಕ—

'ಶ್ಯಾಮಳ ಯಾಗಿಯ ಸೈರಂಧ್ರಿ ತನ್ನೆಯುಂ। ಕೋಮಳ ಯಾಗಿಲು ಮನ್ನು ತೊಟ್ಟಾರುಮೇ॥ ನಾಟ್ಟಾರ್ ಮುಖತ್ತು ನೋಕ್ಕಾದೆ ಚಮಞ್ಞದು। ಕೊಟ್ಟಮೋ ಕೊಲ್ಲಿಕ್ಕು ಮೆನ್ನ ಭಯತ್ತಿನಾಲ್॥' (ಶ್ಯಾಮಲೆಯಾದ ಸೈರಂಧ್ರಿಯನ್ನು ಕೋಮಲೆ ಯಾಗಿದ್ದರೂ ಅಂದು ಮೊದಲಾಗಿ। ಊರ ಜನರು, ಇಡೀ ಜನ ಸಮೂಹವನ್ನೇ (ಆಕೆಯು) ಕೊಲ್ಲಿಸಬಹುದೆಂಬ ಭಯದಿಂದ ತಮ್ಮ ಮುಖ ಮರೆಸಿದರು) ಎಂದು ಹೇಳಿ ಆ ಪ್ರಸಂಗವನ್ನೇ ಮುಗಿಸಿ ಬಿಡುತ್ತಾನೆ. ವ್ಯಾಸಭಾರತದ ಮುಂದಿನ ಯಾವ ವಿವರವೂ, ಕಥೆಯೂ ಮತ್ತೆ ಬರುವುದಿಲ್ಲ. ಇದರಿಂದ ಸಂಕ್ಷೇಪಗೊಂಡ ನಿರೂಪಣೆಯು ಸಾಧಿಸಿದ್ದರೂ ದ್ರೌಪದಿಯ ಪಾತ್ರ ಚಿತ್ರಣ ಮಸುಕಾಗಿ ಹೋಗಿದೆ.

ಕುಮಾರವ್ಯಾಸನಲ್ಲಿ, ಉಪಕೀಚಕರ ಸಂಹಾರದ ಬಳಿಕ ಊರ ಜನರಲ್ಲಿ ಭೀತಿ ಹರಡುತ್ತದೆ. ಇದನ್ನು ರಾಜನು ಗಮನಿಸಿ ದ್ರೌಪದಿಯನ್ನು ಕಳುಹಿಸಿ ಬಿಡುವಂತೆ ಸುದೇಷ್ಣೆಗೆ ನಿಯಮಿಸುತ್ತಾನೆ. ಅದರಂತೆ ಸುದೇಷ್ಣೆಯು ಆಕೆಯನ್ನು ಕರೆಸಿ ಹೇಳಿದಾಗ ದ್ರೌಪದಿಯು ಅದಕ್ಕುತ್ತರವಾಗಿ ಕೀಚಕನು ತನ್ನ ತಪ್ಪಿಂದಾಗಿ ಗಂಧರ್ವ ರಿಂದ ಹತನಾದನೆಂದೂ ಇತರರಾರಿಗೂ ಇನ್ನು ಭಯವಿಲ್ಲವೆಂದೂ ತಿಳಿಸುತ್ತಾಳೆ. ಇನ್ನು ಹದಿಮೂರು ದಿನಗಳ ತನಕ ಅವಧಿ ಬೇಕೆಂದೂ ಆ ತನಕ ಕಳುಹಿದರೂ ತಾನು ಹೋಗುವವಳಲ್ಲವೆಂದೂ ಆ ಬಳಿಕ ಎಲ್ಲರಿಗೂ ಒಳಿತಾಗುವುದೆಂದೂ ಹೇಳುತ್ತಾಳೆ—

'ಅಳುಕದಿರಿ ಹದಿಮೂರು ದಿವಸವ
ಕಳೆದ ಬಳಿಕೆಮಗೆಲ್ಲ ಲೇಸಹು
ದಳಿದು ಹೋದರು ದುಷ್ಟರಾದವರಿನ್ನು ಭಯ ಬೇಡ।
ಕಲಹದವರಾವಲ್ಲ...... '

ಎಂದು ಭರವಸೆಯನ್ನೀಯುತ್ತಾಳೆ. ಇದರಿಂದ ದ್ರೌಪದಿಯ ಸೌಮನಸ್ಸು. ರಾಣಿಯನ್ನೂ ತನ್ನ ಮಾತಿನಿಂದ ಸಮಾಧಾನ ಪಡಿಸುವ ಜಾಣ್ಮೆ, ಚಾತುರ್ಯಗಳು ವ್ಯಕ್ತವಾಗುತ್ತವೆ.

ಕುಮಾರವ್ಯಾಸನ ದ್ರೌಪದಿಯು ಸಹಜ ಸ್ತ್ರೀತ್ವವನ್ನು ಬಿಡದಿರುವ ಧೈರ್ಯಶಾಲಿ ಯಾದ ಕ್ಷತ್ರಿಯ ಕನ್ಯೆಯಾಗಿ ಅಭಿಮಾನವನ್ನು ತೊರೆಯದಿರುವ ಪ್ರಚ್ಛನ್ನ ರಾಣಿಯಾಗಿ, ಪ್ರಾಮಾಣಿಕ ಸೇವಕಿಯಾಗಿ, ವೇಷಧಾರಿಯಾಗಿರುವೆನೆಂಬ ಪ್ರಜ್ಞೆಯುಳ್ಳ ದ್ರೌಪದಿ ಯಾಗಿ, ಕೃಷ್ಣಭಕ್ತೆಯಾಗಿದ್ದೂ ಮಾನವ ಪ್ರಯತ್ನದಲ್ಲಿ ವಿಶ್ವಾಸವುಳ್ಳವಳಾಗಿ,

ಪತಿಯಾದವರ ಮೇಲೆ ಅಸಮಾಧಾನವಿದ್ದರೂ ಅವರನ್ನು ಮೀರಿದ ಸತಿಯಾಗಿ, ಹಾಸ್ಯ ಪ್ರಜ್ಞೆಯುಳ್ಳವಳಾಗಿ ಚಿತ್ರಿತವಾಗಿದ್ದಾಳೆ.

ಎಟುತ್ತಚ್ಛನ ದ್ರೌಪದಿಯಲ್ಲಿ ಈ ಗುಣಗಳಾವುವೂ ಕಂಡುಬರುವುದಿಲ್ಲ. ಮಾತ್ರವಲ್ಲ ಪಾತ್ರದ ಔಚಿತ್ಯ ಭಂಗವಾಗುವ ಸಂದರ್ಭಗಳೂ ಬಂದಿವೆ. ಸಂಕ್ಷೇಪನ ಸಾಮರ್ಥ್ಯವೊಂದು ಕವಿಯ ಗುಣವೆನಿಸಿದರೂ ಅದರಿಂದ ಪಾತ್ರದ ಶೀಲಕ್ಕೆ ಧಕ್ಕೆಯಾಗುವಂತೆಸಗಿರುವುದರಿಂದ ದೋಷವಾಗಿ ಪರಿಣಮಿಸುತ್ತದೆ. ಭಕ್ತಕವಿಯೆಂದು ಪ್ರಸಿದ್ಧನಾಗಿದ್ದೂ ಉತ್ತಮ ಅವಕಾಶಗಳನ್ನು ಬಳಸಿಕೊಳ್ಳದಿರುವ ಮೂಲಕ ಹೆಸರಿಗೆ ಊನ ತಂದುಕೊಂಡಿದ್ದಾನೆ. ಪಾತ್ರ ಚಿತ್ರಣವನ್ನು ಉಚಿತವಾಗಿ ಕೈಗೊಂಡಿಲ್ಲ. ಆತನು ಈ ಸಂಕ್ಷೇಪಾಕಾಂಕ್ಷೆಯೊಂದಿಗೆ ಪಾತ್ರ ಚಿತ್ರಣದತ್ತವೂ ತನ್ನ ಒಲವನ್ನು ಹರಿಸಿದ್ದರೆ ಕವಿಯು ಅದ್ವಿತೀಯನಾಗುತ್ತಿದ್ದನೆಂದು ಹೇಳಬಹುದು.

ಒಟ್ಟಿನಲ್ಲಿ ಕುಮಾರವ್ಯಾಸ ಹಾಗೂ ತುಂಜತ್ತೆಟುತ್ತಚ್ಛನರನ್ನು ತುಲನಾತ್ಮಕವಾಗಿ ನೋಡುವಾಗ ಪಾತ್ರ ಚಿತ್ರಣ ಸಾಮರ್ಥ್ಯದಲ್ಲಿ ಕುಮಾರವ್ಯಾಸನೇ ಮಿಗಿಲಾಗುತ್ತಾನೆ. ಸಂಕ್ಷೇಪನಾ ಸಾಮರ್ಥ್ಯದಲ್ಲಿ ಎಟುತ್ತಚ್ಛನು ಮಿಗಿಲೆನ್ನಬಹುದಾದರೂ ಔಚಿತ್ಯದ ಕೊರತೆಯು ಅದನ್ನು ಅಲ್ಲಗಳೆಯುತ್ತದೆ. ಇವರಿಬ್ಬರ ಸಾಮರ್ಥ್ಯ–ಪ್ರತಿಭೆ–ಶೈಲಿ ಇತ್ಯಾದಿ ವಿಚಾರಗಳಲ್ಲೂ ಇನ್ನಷ್ಟು ಖಚಿತವಾದ ತೀರ್ಮಾನಕ್ಕೆ ಬರಬೇಕಾದರೆ ಇಬ್ಬರ ಕೃತಿಗಳನ್ನೂ ಜೊತೆ ಜೊತೆಯಾಗಿ ಕೂಲಂಕಷ ಅಭ್ಯಾಸ ನಡೆಸಬೇಕಾಗುವುದು.

ಆಧಾರ ಗ್ರಂಥಗಳು :

1. ಕರ್ನಾಟಕ ಭಾರತ ಕಥಾಮಂಜರಿ : ಸಂ : ಕುವೆಂಪು–ಮಾಸ್ತಿ ಪ್ರ : ಪ್ರಸಾರಾಂಗ ಮೈಸೂರು 1974. ರೂ. 7–00.
2. ಕನ್ನಡ ಸಾಹಿತ್ಯ ಚರಿತ್ರೆ : ರಂ. ಶ್ರೀ. ಮುಗಳಿ 1968.
3. ವಚನ ಭಾರತ : ಎ.ಆರ್. ಕೃಷ್ಣಶಾಸ್ತ್ರಿ : 1971. ರೂ. 20–00.
4. ಶ್ರೀ ಮಹಾಭಾರತಂ (ಸಂಸ್ಕೃತ ಮೂಲ) : ಸಂ: ಸೂಕ್ತಂಕರ್ : ವಿರಾಟ ಪರ್ವ : 1944.
5. ಶ್ರೀ ಮಹಾಭಾರತಂ ಕಿಳಿಪ್ಪಾಟ್ಟು : ವಿದ್ಯಾರಂಭಂ ಪ್ರೆಸ್ಸ್ & ಬುಕ್‌ಡಿಪ್ಪೊ. ಮುಲ್ಲಕ್ಕಲ್, ಆಲೆಪ್ಪಿ, 1981, ರೂ. 15–00.
6. ಕಿರಞ್ಞೆಡುತ್ತ ಪ್ರಬಂಧಙಳ್ : ಪ್ರೊ. ಎನ್. ಕೃಷ್ಣಪಿಳ್ಳೈ 1978.
7. ವೃತ್ತಮಂಜರಿ : ಎ. ಆರ್. ರಾಜ ರಾಜವರ್ಮ : ಸಾಹಿತ್ಯ ಪ್ರವರ್ತಕ ಕೋ-ಅಪ್ ಸೊಸೈಟಿ. ಕೊಟ್ಟಯಂ 1970 ರೂ. 1–00.

ಭಾಷೆ ಮತ್ತು ಸಂಸ್ಕೃತಿ

● ವಿಲ್ಯಂ ಮಾಡ್ತ

ಭಾಷೆಯ ಹುಟ್ಟು ಹಾಗೂ ಬೆಳೆವಣಿಗೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಡೆಯು ವುದರಿಂದ ಅವುಗಳ ಸಂಬಂಧ ಸಹಜವಾಗಿ ಅನ್ಯೋನ್ಯವಾಗಿದೆ. ಒಂದು ಸಮಾಜದ ವ್ಯಕ್ತಿಗಳ ಜೀವನದ ಒಟ್ಟು ಮೊತ್ತವೆಂದು ಸಂಸ್ಕೃತಿಯನ್ನು ಸ್ಥೂಲವಾಗಿ ವರ್ಣಿಸಿದಾಗಲೂ ಅದರಲ್ಲಿ ನಾವು ಎರಡು ಸ್ತರ (dimension)ಗಳನ್ನು ಗಮನಿಸಬಹುದು. ವ್ಯಕ್ತಿಗಳ ಸಮಷ್ಟಿ ಜೀವನ ಸಂಸ್ಕೃತಿಯ ಅಂತಃಸ್ತರ (depth-dimension) ವಾದರೆ ಅದರ ಅಭಿವ್ಯಕ್ತಿಯೇ ಬಹಿಃಸ್ತರ (surface-dimension). ಅಭಿವ್ಯಕ್ತಿಯ ಗೋಚರ ಸ್ವರೂಪವನ್ನು ವಿಷಯಿಕ ಸಂಸ್ಕೃತಿ (material culture) ಯೆಂದೂ ಅಗೋಚರ ಸ್ವರೂಪವನ್ನು ಅಮೂರ್ತ ಸಂಸ್ಕೃತಿ (non-material culture) ಯೆಂದೂ ಕರೆಯಬಹುದು. ಪ್ರಸ್ತುತ ವಿಶ್ಲೇಷಣೆಗೆ ಅನುಗುಣವಾಗಿ ಮಾನವ ಜೀವನದ ಅಗೋಚರ ಅಭಿವ್ಯಕ್ತಿಗಳಾದ ವಿಚಾರಗಳು, ಭಾವ ಅನುಭಾವಗಳು, ಆಶೆ ಆಕಾಂಕ್ಷೆಗಳು, ಕನಸು ನೆನಹು ಇತ್ಯಾದಿಗಳು ಆತನ ಅಮೂರ್ತ ಸಂಸ್ಕೃತಿಗೆ ಸೇರಿದವುಗಳಾದರೆ ಅವುಗಳ ಗೋಚರಾಭಿವ್ಯಕ್ತಿಯಾಗಿರುವ ಲಲಿತ ಹಾಗೂ ಪ್ರಾಯೋಜ್ಯ ಕಲೆ (fine and useful arts), ಸಂಪರ್ಕ ಮಾಧ್ಯಮ ಇತ್ಯಾದಿ ಸಾಂಕೇತಿಕಾಭಿವ್ಯಕ್ತಿ (symbolic expression)ಗಳು ಮೂರ್ತ ಸಂಸ್ಕೃತಿಗೆ ಸೇರಿದ ವಿಷಯಗಳಾಗಿವೆ ಎಂದು ಸಾಮಾನ್ಯವಾಗಿಟ್ಟುಕೊಳ್ಳಬಹುದು.

ಪ್ರಸ್ತುತವಲ್ಲಿ ಮಾನವನ ಭಾಷೆ ಆತನ ಸಂಸ್ಕೃತಿಯ ಅಂತಃಸ್ತರವನ್ನು ಪ್ರತಿಬಿಂಬಿಸಬಲ್ಲುದು ಎಂಬುದನ್ನು ವಿಶದೀಕರಿಸಿ ಅವುಗಳೊಳಗಣ ಮೈತ್ರಿಯನ್ನು ತೋರಿಸುವ ಪ್ರಯತ್ನ ಮಾಡಲಾಗಿದೆ.

ಒಂದು ಸಂಸ್ಕೃತಿಗೆ ಸೇರಿದ ಜನರು ಅನ್ಯ ಸಂಸ್ಕೃತಿಗೆ ಸೇರಿದ ಭಾಷೆಯನ್ನು ಬಳಸುತ್ತಿರುವಾಗ ಎಷ್ಟೋ ಸಲ ಆ ಭಾಷೆಯ ಸಂಸ್ಕೃತಿಯನ್ನು ಬಿಟ್ಟು ಬಿಟ್ಟು ಸ್ವಸಂಸ್ಕೃತಿಯನ್ನು ಪ್ರತಿಬಿಂಬಿಸುವುದನ್ನು ನಾವು ಗಮನಿಸಬಹುದು.
ಈ ಹಿನ್ನೆಲೆಯಲ್ಲಿ ಕೆಳಗಿನ ವಾಕ್ಯಗಳನ್ನು ಗಮನಿಸಿ :

(1) I am approaching Vittal

(2) I got angry
(3) She gave birth to a baby-girl.

ಸಂಸ್ಕೃತಿಯ ಹಿನ್ನೆಲೆ ಇಲ್ಲದೆ ಇಂಗ್ಲೀಷನ್ನು ಕಲಿತವರು ಮೇಲಿನ ವಾಕ್ಯಗಳನ್ನು (1-3) ಹೆಚ್ಚಾಗಿ ಈ ಕೆಳಗಿನ ರೀತಿಯಲ್ಲಿ ರೂಪಾಂತರಿಸಿ ಬಳಸುತ್ತಾರೆ:

(1) 1 (a) Vittal is coming
(2) 2 (a) Anger came to me
(3) 3 (a) A girl-baby is born to her.

ಇಂತಹ ರೂಪಾಂತರಗಳಿಗೆ ಅರ್ಥಾತ್ ಇಂಗ್ಲೀಷಿನ ಭಾರತೀಕರಣ (indianization) ಕ್ಕೆ ಕಾರಣವೇನು? ಮಾತೃಭಾಷೆಯ ಪ್ರಭಾವವೇ ಇಂತಹ 'ಪ್ರಮಾದ' ಗಳಿಗೆ ಕಾರಣವಾಗಿರಬೇಕೆಂದು ಮೇಲ್ನೋಟಕ್ಕೆ ಕಾಣಬಹುದು.

(1) (b) ವಿಟ್ಲ ಬರುತ್ತದೆ
(2) (b) ನನಗೆ ಸಿಟ್ಟು ಬಂತು
(3) (b) ಆಕೆಗೆ ಒಂದು ಹೆಣ್ಣು ಕೂಸು ಹುಟ್ಟಿತು— ಎಂಬ ವಾಕ್ಯಗಳೇ ಇದಕ್ಕೆ ಆಧಾರ. ಹಾಗಾದರೆ ಮಾತೃಭಾಷೆಯಲ್ಲಿ ಇಂತಹ ವಾಕ್ಯಗಳು ಯಾಕೆ ಹುಟ್ಟಿದವು ಎಂಬ ಪ್ರಶ್ನೆಯನ್ನು ಕೇಳಿದರೆ 'ಅವರ ಜೀವನ ದೃಷ್ಟಿಕೋನ (world-view)ವೇ ಅವುಗಳಿಗೆ ಕಾರಣ' ವೆಂಬುದೇ ಅದಕ್ಕೆ ಸರಿಯಾದ ಉತ್ತರ.

ಮೇಲಿನ ವಾಕ್ಯಗಳನ್ನು (1–3) ಭಾಷಾ ವಿಶ್ಲೇಷಣೆಗೆ ಒಳಪಡಿಸಿದಾಗ ಅಲ್ಲಿ (1-3) (I) ಮತ್ತು (She) ಎಂಬ ಸರ್ವನಾಮಪದಗಳು. ಆಖ್ಯೇಯ (subject) ವಾಗಿ ವಾಕ್ಯದಲ್ಲಿ ಬಂದಿವೆ. ಹಿಂದಿನ 1_a –3_a ವಾಕ್ಯಗಳಲ್ಲಿ ಮತ್ತು ಅವುಗಳ ಬದಲು India, Anger ಮತ್ತು Girl-baby ಆ ಸ್ಥಾನದಲ್ಲಿ ಬಂದಿವೆ. ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳು ಭಿನ್ನವಾಗಿರುವುದೇ ಈ ಭಾಷಾರಚನಾವ್ಯತ್ಯಾಸಕ್ಕೆ ಮೂಲಕಾರಣವೆಂದು ಹೇಳಬೇಕಾಗುತ್ತದೆ.

ಪಾಶ್ಚಾತ್ಯ ಸಂಸ್ಕೃತಿಯಲ್ಲಿ ವ್ಯಷ್ಟಿಗೆ, ವ್ಯಕ್ತಿಗೆ. ಪ್ರಾಧಾನ್ಯತೆ. ಕಾರಣ. ಅವರ ಭಾಷೆಗಳಲ್ಲಿ I/We/You ಇವುಗಳಿಗೆ ಹೆಚ್ಚು ಪ್ರಧಾನ ಸ್ಥಾನವಿದೆ:

(4) I love my girl.
(5) We get angry at others
(6) You should understand me.

ಮಾನವನ ಕ್ರಿಯೆಗಳಿಗೆ (love, get angry, understand) ಮಾನವನೇ ಕಾರಣ ಹಾಗೂ ಅವುಗಳಿಗೆ ಆತನೇ ಜವಾಬ್ದಾರನೆಂಬುದು ಅವರ ಜೀವನ ದೃಷ್ಟಿ

(weltanchauung) ಆದರೆ, ಭಾರತೀಯ ಸಂಸ್ಕೃತಿಯಲ್ಲಿ ಇವೆಲ್ಲ ಬ್ರಹ್ಮ—ಲೀಲೆ. ಇಹದ್ದೆಲ್ಲವೂ ಆತನ ಪ್ರಸಾದ (blessing), ಮಾಡುವಾತನೂ ಆತನೇ, ಮಾಡಿಸುವಾತನೂ ಆತನೇ. ನಾವು ಕೇವಲ ಮೂಕ ಸಾಕ್ಷಿಗಳು ಮಾತ್ರ. ಆತನ ಲೀಲೆ *(ludum Dei)* ಆತನೇ ಬಲ್ಲ. ನಾವು ಆ ಸೂತ್ರಧಾರಿಯ (Designer's) ಕೈಯಲ್ಲಿರುವ ಗೊಂಬೆಗಳಷ್ಟೆ!

ಭಾರತೀಯ ವಿಚಾರಧಾರೆಯಲ್ಲಿಯೇ, ಜೀವನದೃಷ್ಟಿಯಲ್ಲಿಯೇ, ಅಹಂಭಾವಕ್ಕೆ ಗೌಣ ಸ್ಥಾನವಿರುವುದರಿಂದ ನಮ್ಮ ಭಾಷೆಯಲ್ಲಿಯ ವಾಕ್ಯಗಳಲ್ಲಿಯ ಪ್ರಥಮ ಪುರುಷ (first person)ಕ್ಕೆ ಅತ್ಯಂತ ಗೌಣಸ್ಥಾನ. ನನ್ನ ಕ್ರಿಯೆಗಳ ಕರ್ತೃ ನಾನಲ್ಲವೆಂದ ಬಳಿಕ ಅವುಗಳನ್ನು ಅಭಿವ್ಯಕ್ತಗೊಳಿಸುವ ವಾಕ್ಯಗಳಲ್ಲಿಯ ಕ್ರಿಯಾ ಪದಗಳ ಕರ್ತೃವೂ ಪ್ರಥಮ ಪುರುಷವಾಗಿ, ಪ್ರಧಾನವಾಗಿ ಬರಲಾರದು. ಈ ನಮ್ಮ ಸಂಸ್ಕೃತಿಯ ಪ್ರಭಾವ ನಾವು ಕಲಿತ, ಕಲಿಸುವ, ಇಂಗ್ಲೀಷಾದಿ ಅನ್ಯಭಾಷಗಳಲ್ಲಿಯೂ ಪ್ರತಿಬಿಂಬಿತಗೊಳ್ಳುವುದನ್ನು ಭಾಷಾವಿಜ್ಞಾನಿಗಳು ಗಮನಿಸುತ್ತಾರೆ.

ಭಾರತೀಯ ಸಂಸ್ಕೃತಿಯಲ್ಲಿ 'ನಾನು' ಎಂಬುದೂ ಹೇಗೆ ಗೌಣವೋ ಅದೇ ರೀತಿಯಲ್ಲಿ 'ನನ್ನದು' 'I have' ಎಂಬುದೂ ಅತೀ ಗೌಣವಾಗಿ ಭಾಷೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಭಾರತೀಯ ಸಂಸ್ಕೃತಿಯ ಈ ಪ್ರಮುಖ ಲಕ್ಷಣಕ್ಕೆ ಇತರ ಭಾಷೆಗಳಂತೆ ಕನ್ನಡವೂ ಒಂದು ನಿದರ್ಶನ. ಕೆಳಗಿನ ವಾಕ್ಯಗಳನ್ನು ಗಮನಿಸಿ:

(7) I have money
(8) I have a wife
(9) I have property

ಮೇಲಿನ (7-9) ವಾಕ್ಯಗಳನ್ನೋದುವಾಗ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹೊನ್ನು, ಹೆಣ್ಣು, ಮಣ್ಣು, ತನ್ನದು ಎಂಬ ಭಾವನೆ ಬೇರೂರಿ ನಿಂತಿದೆಂಬುದನ್ನು ನಾವು ಊಹಿಸಬಹುದು. ಮೇಲಿನ ವಾಕ್ಯಗಳನ್ನು ಸಾಮಾನ್ಯವಾಗಿ ನಾವು ಈ ಕೆಳಗಿನಂತೆ ಭಾಷಾಂತರಿಸುತ್ತೇವೆ:

(7) a. ನನ್ನ ಹತ್ತಿರ ಹಣ ಇದೆ.
b. Beside me there is money.

(8) a. ನನಗೆ ಹೆಂಡತಿ ಇದ್ದಾಳೆ.
b. To me there is a wife.

(9) a. ನನಗೆ ಆಸ್ತಿ ಇದೆ.
b. To me there is property.

ಹಣ, ಹೆಂಡತಿ, ಆಸ್ತಿ— ಇವೆಲ್ಲ ನನ್ನ ಬಳಕೆಗೆ ದಯಪಾಲಿಸಿದ ಪ್ರಸಾದ (blessing)ವೆಂದು ಭಾವನೆ ಈ ಭಾಷೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆಯೇ ವಿನಹ ಅವುಗಳಿಗೆಲ್ಲ ನಾನೇ ಒಡೆಯ (master) ನೆಂಬ ಭಾವನೆ ಹುಟ್ಟುವುದಿಲ್ಲ. ಕಾರಣವಿಷ್ಟೆ: ನಾವು ಆದಷ್ಟುಮಟ್ಟಿಗೆ ಈ ಸಂಸಾರದಿಂದ ವಿಮುಖರಾಗಿ ಬಾಳಬೇಕು. ಪರಮಾತ್ಮನಲ್ಲಿ ಐಕ್ಯವನ್ನು ತಾದಾತ್ಮ್ಯತೆಯನ್ನು. ಸಾಮರಸ್ಯವನ್ನು ಪಡೆಯಲು ಹೆಣಗಾಡಬೇಕೇ ವಿನಹ ಹೆಂಡತಿ, ದುಡ್ಡು ತೆಗೆದುಕೊಂಡು week endಗೆ ದೂರ ಹೋಗಿ ಮಜಾ ಮಾಡಿಕೊಂಡು ಬರಬೇಕು, ಬಾಳಬೇಕೆಂಬುದು ನಮ್ಮ ಸಂಸ್ಕೃತಿಯ ಪ್ರಧಾನ ಮೌಲ್ಯವಲ್ಲ. ಭಾರತೀಯ ಸಂಸ್ಕೃತಿಯ ಅಂತಃಸ್ಸ್ವರವಾದ ಈ ಜೀವನ—ವಿಮುಖತೆ ಭಾರತೀಯ ಭಾಷಾರಚನೆಗಳಲ್ಲಿಯೂ ಉಕ್ತರೂಪದಲ್ಲಿ ನಾವು ಕಾಣುತ್ತೇವೆ.

ಭಾರತೀಯ ಭಾಷೆಗಳನ್ನು ಪಾಶ್ಚಾತ್ಯ ಭಾಷೆಗಳೊಡನೆ ಹೋಲಿಸಿದಾಗ ಅವುಗಳಲ್ಲಿ 'ನಾನು', 'ನನ್ನದು' ಎಂಬ ಪದಪ್ರಯೋಗಗಳು ಅತ್ಯಂತ ಗೌಣವಾಗಿ ಬಳಕೆಯಾಗುತ್ತವೆ. ಎರಡನೆಯದಾಗಿ, ಭಾರತೀಯರು ಪಾಶ್ಚಾತ್ಯ ಭಾಷೆಗಳನ್ನು ಬಳಸುವಾಗ ಅವುಗಳ ಸಮಾನಾರ್ಥಕ (equivalent)ಗಳನ್ನು ಈ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಆರಿಸುತ್ತಾರೆಂಬುದನ್ನು ಸ್ವಲ್ಪವರಲ್ಲಿ ಇಲ್ಲಿಯವರೆಗೆ ಸಕಾರಣಗಳೊಂದಿಗೆ ತೋರಿಸಲಾಯಿತು.

ಮಾಡುವಾತ ಜೀವಾತ್ಮನಲ್ಲ, ಪರಮಾತ್ಮನಾದುದರಿಂದ ಅಹಂಭಾವವನ್ನು ಕಳಚಿ ಸಾಮರಸ್ಯಭಾವದಿಂದ ಬಾಳಬೇಕೆಂಬ ಭಾರತೀಯ ಸಾಂಸ್ಕೃತಿಕ ಮೌಲ್ಯಕ್ಕೆ ಭಾರತೀಯ ಭಾಷೆಗಳು (ಉದಾ : ಕನ್ನಡ) ಕನ್ನಡಿ ಹಿಡಿದಂತಿವೆ. ಬೇರೆ ಬೇರೆ ಸಂಸ್ಕೃತಿಗಳ ಅಂಗವಾಗಿ ಬೆಳೆದ ಜನರ ಜೀವನ ದೃಷ್ಟಿ ಅವರವರ ಭಾಷೆಗಳಲ್ಲಿ ಪ್ರತಿಬಿಂಬಿತಗೊಳ್ಳುತ್ತದೆಂಬ ವಾಸ್ತವಿಕ ಸತ್ಯ ಭಾಷಾವೈಜ್ಞಾನಿಕ ವಿಶ್ಲೇಷಣೆಯಿಂದ ನಾವು ತಿಳಿದುಕೊಳ್ಳಬಹುದು.

ಆಂಗ್ಲಾವಲೋಕನದಲ್ಲಿರುವ ತಾನು, ತನ್ನಕ್ರಿಯೆಯ ಕರ್ತೃ: ಕಾರಣ. ತನ್ನ ಪ್ರತಿಕ್ರಿಯೆಯಲ್ಲಿಯ ತನ್ನ ಮುದ್ರೆಯನ್ನು ತಾನು ಒತ್ತಬೇಕು: ಅಲ್ಲದೆ. ತನ್ನ ಕ್ರಿಯೆಗಳಿಗೆ ತಾನೇ ಜವಾಬ್ದಾರ ಎಂಬೀ ಮೌಲ್ಯಗಳು ಆಂಗ್ಲ ಭಾಷೆಯಲ್ಲಿ I, my, ಗಳ ಮೂಲಕ ಪ್ರಧಾನವಾಗಿ ಅಭಿವ್ಯಕ್ತಗೊಳ್ಳುತ್ತವೆ. ಭಾರತೀಯಾವಲೋಕನದಲ್ಲಿ 'ನಾನು' ಎಂಬುದು ನಿಜಕರ್ತೃವಲ್ಲ. 'ನಾನು' ಬ್ರಹ್ಮಲೀಲೆಯ ದರ್ಶನವನ್ನು ನಿರ್ಲಿಪ್ತಭಾವದಿಂದ ಕಾಣುವತನಾದುದರಿಂದ 'ನಾನು' ಎಂಬದು ಸಾಕ್ಷಿ—ಸ್ವರೂಪಿ. ಕ್ರಿಯಾದೃಷ್ಟಿಯಿಂದ ಅದು ಮಾಯೆ (Illusion). ಆದುದರಿಂದಲೇ ಭಾರತೀಯ ಭಾಷೆಗಳಲ್ಲಿ ನಾನು, ನನ್ನದು.— ಎಂಬ ಪದಪ್ರಯೋಗಳಿಗೆ ಗೌಣಸ್ಥಾನ. ನನ್ನ ಹಣ. ಹೆಂಡತಿ. ಆಸ್ತಿ .... ಪ್ರಸಾದ ರೂಪದಲ್ಲಿ ನನಗೆ ದೊರಕಿವೆಯೇ

ಹೊರತು ನಾನೇ ಅವುಗಳ ನಿಜ ಒಡೆಯನಲ್ಲವಾದುದರಿಂದ 'ನಾನು' ಎಂಬ ಕರ್ತೃಪದಕ್ಕೆ ನಮ್ಮ ಭಾಷೆಗಳಲ್ಲಿ ಗೌಣಸ್ಥಾನ. ಭಾಷೆ, ಸಂಸ್ಕೃತಿಯ ಕೈಗನ್ನಡಿಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಭಾಷಾವಿಜ್ಞಾನ. ಅನ್ಯಭಾಷಾ ಅಧ್ಯಾಪನ ಅಧ್ಯಯನಗಳಲ್ಲಿ ಮೇಲಿನ ಕಾರಣಕ್ಕೋಸ್ಕರ ಸಂಸ್ಕೃತಿಯ ಹಿನ್ನೆಲೆಗೆ ಅತ್ಯಂತ ಮಹತ್ವದ ಸ್ಥಾನವನ್ನು ಕೊಡುತ್ತದೆ. ಕನ್ನಡ ವಿದ್ಯಾರ್ಥಿಗಳು ಅನ್ಯಭಾಷೆ ಸಾಹಿತ್ಯಗಳನ್ನು ಕಲಿಯುವಾಗ ಅವುಗಳಿಗೆ ಸಂಬಂಧಿಸಿದ ಸಂಸ್ಕೃತಿಗಳ ಪರಿಚಯ ಚೆನ್ನಾಗಿ ಮಾಡಿಕೊಳ್ಳದೆ ಕೇವಲ ಪದ ಹಾಗೂ ಅವುಗಳ ವ್ಯಾಕರಣ (ರೀತಿ) ಕಲಿತರೆ ಆ ಭಾಷೆಗಳನ್ನು ವಸ್ತುನಿಷ್ಠವಾಗಿ ಕಲಿಸಿದಂತೆ ಅಥವಾ ಕಲಿವಂತಾಗುವುದಿಲ್ಲ.

ಒಟ್ಟಿನಲ್ಲಿ ಭಾಷೆಯು ಮೂಲಕ ಅದರ ಸ್ಥಲಪ್ರಾಯವಾದ ಸಂಸ್ಕೃತಿ ತನ್ನ ನಿಜ ರೂಪವನ್ನು ಕನ್ನಡಿಸುತ್ತದೆ (mirrors) ಎಂಬುದು ನಿರ್ವಿವಾದ. ಕಾರಣ, ಭಾಷೆಯೆಂಬುದು ಸಂಸ್ಕೃತಿಯ ಅಮೂರ್ತ ಅಂತಃಸ್ತರದ ಮೂರ್ತಸ್ವರೂಪಕ್ಕೆ ಸೇರಿದ ಸಾಂಕೇತಿಕ ಅಭಿವ್ಯಕ್ತಿಗಳಲ್ಲೊಂದೆನ್ನಬಹುದು.

ಸಾಹಿತ್ಯಸೂಚಿ

1. Allan, Harold Brown (ed.) *Readings in Applied English Linguistics*, New Delhi/Bombay/Calcutta/New York : Amerind Publishing Co. Pvt., Ltd., 1971.

2. Boas, Franz (ed.) *Race, Language and Culture*, New York : The Macmillan Co., 1940.

3. Hoijer, Harry (ed.). *Language in Culture : Conference on the Inter-relations of Language and Other Aspects of Culture*, Chicago : University of Chicago Press, 1954.

4. Hymes, Dell (ed.) *Language in Culture and Society: A Reader in Linguistics and Anthropology*, New York : Harper & Row, 1964.

5. Kroeber, Alfred Louis: *Anthropology : Race, Language, Culture, Psychology, Prehistory,* New York : Harcourt, Brace & World, 1948.

6. Lado, Robert, *Linguistics Across Cultures*: *Applied Linguistics for Language Teachers*, Ann Arbor, Mich : University of Michigan Press, 1957.

7. Smith, A. G. (ed.) *Communication and Culture*, New York : Holt, Rinehart & Winston, 1966.

8. Valles, Carlos G. (S. J.) "A Tale of Two Languages" *Vidyajyoti* XLV : 48-9-(1981).

9. ಮಾಡ್ತ ವಿಲ್ಯಂ, ಅನ್ಯಭಾಷಾಬೋಧೆ, ಧಾರವಾಡ ; ಕರ್ನಾಟಕ ವಿಶ್ವ ವಿದ್ಯಾಲಯ, 1976.

ಸರ್ವಾಂತರ್ಯಾಮಿ

● ಬಿ. ಎ. ಸನದಿ

ಮನುಷ್ಯನ ಮಹಾ
ಭಾರತದಾದಿಗೂ ಅಂತಕೂ
ಅನಂತಕಾಲ ಸೇತುವೆಯಾಗಿ
ವಿಶ್ವವ್ಯಾಪೀ ಬಾಹುಗಳ ಚಾಚಿ ನಿಂದವನು
ಯಾವೊಂದು ಊರಲ್ಲಿ ಹುಟ್ಟಿದ್ದಿಲ್ಲ ನಾ
ನೊಂದೂ ಊರು ಬಿಟ್ಟಿದ್ದಿಲ್ಲ
ಜನ್ಮ-ಜರಾಮರಣಗಳ ಗಾಳಿ ತಟ್ಟಿದ್ದಿಲ್ಲ
ನನ್ನ ಆಕೃತಿ-ಪ್ರಕೃತಿಯೆಂದೆಂದೂ ಕೆಟ್ಟಿದ್ದಿಲ್ಲ
ಆದರೂ ಜಗದ ಬಾಗಿಲ ತೋರಣದಲ್ಲಿ
'ಸಂಭವಾಮಿ ಯುಗೇ ಯುಗೇ'
ಎಂಬ ಮುತ್ತಿನ ಮಾಲೆ ತೂಗು ಬಿಟ್ಟವನು
ಭಕ್ತಗಣ ಕರೆದ ಕಡೆಗೆಲ್ಲ ಥಟ್ಟನೆ ಓಗೊಟ್ಟವನು
ಈ ಲೋಕ ಆ ಲೋಕ
ಯಾ ಲೋಕವಾದರೂ ಸರಿ
ನಾನೊ, ಸರ್ವಾಂತರ್ಯಾಮಿ
ವಿಶ್ವತೋಚಕ್ಷುವಿಗೆ ಯಾ ಭೂಮಿ-ಸೀಮಿ!
ಈ ವರೆಗೆ
ಈ ಧರೆಗೆ ಇಳಿದು ಬಂದದ್ದುಂಟೆ
ನನ್ನಂಥ ಅವತಾರಿ !
ದಿನಕರನಿಗೂ ದಾರಿ ತೋರಿಸಬಲ್ಲ
ದೀಪಧಾರಿ !!

....

ಇಂದು ಕನ್ನಡಿಗರಾಡುಂಬೊಲವೆನ್ನ ಕರ್ಮಭೂಮಿ
ನನ್ನ ದೃಷ್ಟಿಗೆ

ಧರ್ಮ-ಕರ್ಮಗಳೆಲ್ಲ ಒಂದೆ ಸಮನಾಗಿರಲು
ಅದೆ ನನ್ನ ಧರ್ಮಭೂಮಿ !
ಒಳನಾಡೊ ಹೊರನಾಡೊ
ಗಡಿನಾಡೊ ಗಡಿ-ಬಿಡಿನಾಡೊ
ಎಲ್ಲೆಲ್ಲಿ ಕನ್ನಡದ ಕುಲವೋ ಅದೆ ನನ್ನ ನೆಲವು
ಅದೆ ನನ್ನ ಕರ್ತವ್ಯ ಧರ್ಮದೊಲವು !
ಕನ್ನಾಡ ಒಳಹೊರಗು ನನ್ನ ಅನುಯಾಯಿಗಳು
ತುಂಬಿಹರು ನಂಬಿಹರು ನನ್ನ ಲೋಕಕಲ್ಯಾಣದೃಷ್ಟಿ
ನಿತ್ಯ ಕಾಣುತ್ತಿಹರು
ನಾನಡಿಯನಿಟ್ಟ ಕಡೆಗೆಲ್ಲ ಕನ್ನಡದ ಹೊಸ ಸೃಷ್ಟಿ !
'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ'
ಎಂದು ಕೈಮುಗಿದು ಕೇಳುವ ಗರಜು ನನಗೆ ಬಂದುದೆ ಇಲ್ಲ
ಯಾರು ಹೇಳಲಿ ಬಿಡಲಿ
ಇಡಿಯ ಲೋಕವೇ ನನಗೆ ಶರಣಾಗತ
ಜಗದ ಜೀವನವೆನ್ನ ಲೀಲಾಮೃತ !

....

ನನ್ನ ಪಾವನಸ್ಪರ್ಶದಿಂದ ಕನ್ನಡದ ಪವನವೂ ಪಾವನ
ನನ್ನೊಂದೆ ಬೆವರಹನಿ ಬಿದ್ದ ಪಾವನಭೂಮಿ ಬೃಂದಾವನ !
ನನ್ನ ತುಟಿಗೆ ತಗಲಿದ ಗಾಳಿಯಲೆಯೂ ಮಧುರ ವೇಣುಗಾನ
ಒಮ್ಮೊಮ್ಮೆ ನನ್ನ ಬೆರಳೆತ್ತಿದರೂ ಸಾಕು
ಕೌರವರ ಪಡೆಯೆಲ್ಲ ಗಡಗಡನೆ ನಡುಗುವುದು
ಸುಯ್ಯೆಂದು ಬಿಟ್ಟಂತೆ ಅರ್ಜುನನ ಬಾಣ !
ನನ್ನ ಕನಸಿನ ಬಗೆಗೆ ಒಳಗೊಳಗೇ ನಗೆಯುರಳಿದ ಕ್ಷಣ
ಮಳಲಗಾಡೂ ಹಸಿರೊಡೆದ ಉದ್ಯಾವನ !
ಒಟ್ಟಿನ ಮೇಲೆ
ತಿಳಿದವರಿಗೆಲ್ಲ ತಿಳಿದ
ತಿಳಿದವರ ಮನದಲ್ಲಿ ಅಚ್ಚೊತ್ತಿಯುಮುಳಿದ
ಸತ್ಯಸ್ಯ ಸತ್ಯವೆಂದರೆ ಇಷ್ಟೆ-
ನನ್ನಿಂದ-ಅಂದರೆ ನನ್ನಿಂದಲೇ-ಕನ್ನಡದ ಕಲ್ಯಾಣ!
ನನ್ನಿಂದಲೇ ಕನ್ನಡರ ಬೆಡಗು-ಬಿನ್ನಾಣ,
ನನ್ನ ಪದತಲದಲ್ಲೆ ಕನ್ನಡದ ಕಾರ್ಯಾಂಗಣ !

ಹುಟ್ಟು-ಸಾವುಗಳಿರದ
ನಿದ್ದೆ–ಹಸಿವುಗಳಿರವ ಈ ನನ್ನ ಜೀವನವೆ
'ಅ' ದಿಂದ 'ಕ್ಷ' ವರೆಗೂ ಸಕಲ ಕಾರ್ಯಕಾರಣ
ವಿಸು ಸಲ ಹೇಳಿದರೂ ನಾನು ದಣಿಯುವುದಿಲ್ಲ
ನೀವು ತಣಿಯುವುದಿಲ್ಲ
ಕೇಳುವವರಿರುವತನಕ ಹೇಳಿಯೇ ಹೇಳುವೆನು
ಇಗೊ ಕೇಳಿ – ಕನ್ನಡದ ಕಾ
ರಣಿಕೆ
ಅಹೋರಾತ್ರಿ ಸಿದ್ಧಾಸ್ಮಿ ಬದ್ಧಾಸ್ಮಿ ದಾಸಾನುದಾಸ್ಮೋಹಂ
'ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃಪರ್ಯುಪಾಸತೆ
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ !'

ಶ್ರೀಮತಿ ಲಲಿತಾದೇವಿಯ ಮೂಡುಬಿದ್ರೆಯ ತಾಮ್ರಶಾಸನಗಳು

● ವೈ. ಉಮಾನಾಥ ಶೆಣೈ


ಒಂದೇ ತಾಮ್ರಪಟದ ಮೇಲೆ ಬರೆದಿರುವ ಈ ಮೂರು ಅಪ್ರಕಾಶಿತ ತಾಮ್ರಶಾಸನಗಳು ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆಯಲ್ಲಿರುವ ಶ್ರೀ ದಿಗಂಬರ ಜೈನ ಮಠದ ಪಟ್ಟಾಚಾರ್ಯ ಶ್ರೀ ಮಚ್ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರ ವಶದಲ್ಲಿದ್ದುವು. ಈ ಶಾಸನಗಳನ್ನು 30ಸೆ.ಮೀ. ಎತ್ತರ ಮತ್ತು 20ಸೆ.ಮೀ. ಅಗಲವಿರುವ ಆಯತಾಕಾರದ ತಾಮ್ರಪಟದ ಒಂದು ಮಗ್ಗುಲಲ್ಲಿ 42 ಪಂಕ್ತಿಗಳಲ್ಲಿಯೂ ಇನ್ನೊಂದು ಮಗ್ಗುಲಲ್ಲಿ 24 ಪಂಕ್ತಿಗಳಲ್ಲಿಯೂ ಬರೆಯಲಾಗಿದೆ.

ಈ ಶಾಸನಗಳನ್ನು ಮಧ್ಯಯುಗದ ಕನ್ನಡ ಲಿಪಿಯಲ್ಲೂ, ಕನ್ನಡ ಭಾಷೆಯಲ್ಲೂ ಬರೆಯಲಾಗಿದೆ. ಆದರೆ ಪ್ರಾರಂಭದ ಮೂರು ಪಂಕ್ತಿಗಳು ಮಾತ್ರ ಸಂಸ್ಕೃತ ಭಾಷೆಯಲ್ಲಿದ್ದು ಶಾರ್ದೂಲ ವಿಕ್ರೀಡಿತ ವೃತ್ತ ಛಂದಸ್ಸಿನಲ್ಲಿವೆ.

ಈ ಶಾಸನಗಳ ಕರ್ತೃ ಉತ್ತರ ಕನ್ನಡ ಜಿಲ್ಲೆಯ ನಗಿರೆ (ಗೆರೆಸೊಪ್ಪೆ) ರಾಜ್ಯವನ್ನು ಆಳುತ್ತಿದ್ದ ಸಾಳ್ವಮಲ್ಲ ಎಂಬ ಅರಸನ ರಾಣಿಯಾದ ಶ್ರೀಮತಿ ಲಲಿತಾದೇವಿ ಎಂಬವಳು. ಆಕೆಯನ್ನು ಈ ಶಾಸನದಲ್ಲಿ ``ಮನೋಜ್ಞಾರಮಾ'' ಎಂದೂ ಶೃಂಗಾರ ಸಾಗರಕ್ಕೆ ಬೆಳದಿಂಗಳಾಗಿ ಶೋಭಿಸುವವಳು ಎಂದೂ ವರ್ಣಿಸಲಾಗಿದೆ.

ಈ ಶಾಸನಗಳ ಬರವಣಿಗೆಯಲ್ಲಿ ಹಲವು ತಪ್ಪುಗಳಿರುವುದರಿಂದ ತಪ್ಪಾಗಿ ಬರೆದಿರುವ ಅಕ್ಷರಗಳನ್ನು ಸರಿಪಡಿಸಿ ವೃತ್ತಾವಾರಣದೊಳಗೂ, ಬರೆಯಲು ಬಿಟ್ಟು ಹೋಗಿರುವ ಅಕ್ಷರಗಳನ್ನು ರೇಖಾವರಣದೊಳಗೂ ಕೊಟ್ಟು ಈ ಮೂರೂ ಶಾಸನಗಳ ಪೂರ್ಣ ಪಾಠಗಳನ್ನು ಕೆಳಗೆ ಕೊಡಲಾಗಿದೆ. ಆದರೆ ಸ್ವರ, ವ್ಯಂಜನ ಸಂಯುಕ್ತಾಕ್ಷರಗಳನ್ನು (ನಿಯಮದಂತೆ) ಏನೂ ಬದಲಾವಣೆ ಮಾಡದೆ, ತಾಮ್ರ ಪಟದಲ್ಲಿರುವುದನ್ನೇ ಕೊಡಲಾಗಿದೆ.

೧ ನೆಯ ಶಾಸನ



ಈ ಶಾಸನವನ್ನು ತಾಮ್ರಪಟದ ಮೇಲೆ ಮೊದಲಿನ 21 ಪಂಕ್ತಿಗಳಲ್ಲಿ ಬರೆಯಲಾಗಿದೆ. ಶ್ರೀಮತಿ ಲಲಿತಾದೇವಿಯ ಈ ಶಾಸನದ ಕಾಲವನ್ನು "ತಾರಣ

ಸಂವತ್ಸರದ ವೃಷಭ ಮಾಸಂ ೨೨ನೆಯ ಗುರುವಾರ'' ಎಂದು ಹೇಳಿದೆ. ಆದರೆ ಶಕವನ್ನು ಹೇಳಿಲ್ಲ, ಅಷ್ಟೇ ಅಲ್ಲದೆ, ಈ ಮಾಸದ 22ನೆಯ ದಿನಕ್ಕೆ ಗುರುವಾರವು ಮಧ್ಯಯುಗದ ಯಾವುದೇ ತಾರಣ ಸಂವತ್ಸರದಲ್ಲಿ ಸರಿಹೊಂದಿ ಬರುವುದಿಲ್ಲ. ಆದುದರಿಂದ ಈ ಶಾಸನದ ಕಾಲವನ್ನು ನಿರ್ಣಯಾತ್ಮಕವಾಗಿ ಹೇಳುವುದು ಕಷ್ಟ. ಆದರೆ ಈ ಶಾಸನದ ಕರ್ತೃವಾದ ಶ್ರೀಮತಿ ಲಲಿತಾದೇವಿ ಯ ಪತಿ ಸಾಳ್ವಮಲ್ಲ ನೃಪತಿಯು ನಗಿರೆ (ಗೆರೆಸೊಪ್ಪೆ) ರಾಜ್ಯವನ್ನು ಕ್ರಿ.ಶ. 1462 ರಿಂದ ಆಳುತ್ತಿದ್ದುದು ನಮಗೆ ಇತಿಹಾಸದಿಂದ ತಿಳಿದುಬರುತ್ತದೆ. ಮೇಲೆ ಹೇಳಿರುವ ತಾರಣ ಸಂವತ್ಸರವು ಕ್ರಿ.ಶ. 1464 ರಲ್ಲೊಮ್ಮೆಯೂ 1524ರಲ್ಲಿ ಇನ್ನೊಮ್ಮೆಯೂ ಬರುತ್ತದೆ. ಕ್ರಿ.ಶ. 1462 ರಿಂದ ತನ್ನ ಆಳ್ವಿಕೆ ಯನ್ನು ಪ್ರಾರಂಭಿಸಿದ ಸಾಳ್ವಮಲ್ಲನು ಮುಂದೆ ಕ್ರಿ.ಶ. 1524 ರ ವರೆಗಿನ 64 ವರ್ಷಗಳ ಕಾಲ ಆಳಿಕೊಂಡಿರುವುದು ಅಸಾಧ್ಯವಾದುದರಿಂದ, ಈ ಶಾಸನವು ತಾರಣ ಸಂವತ್ಸರದ ವೃಷಭ ಮಾಸದ 22ನೆಯ ದಿನ ಅಂದರೆ ಕ್ರಿ.ಶ. 1464ನೆಯ ಇಸವಿ ಮೇ ತಿಂಗಳ 18ನೆಯ ತಾರೀಕಿನದಾಗುತ್ತದೆ. ಆದರೆ ಅಂದು ಈ ಶಾಸನದಲ್ಲಿ ಹೇಳಿರುವಂತೆ ಗುರುವಾರ ಆಗಿರದೆ ಶುಕ್ರವಾರವಾಗಿತ್ತು. ಈ ಶಾಸನವನ್ನು ಆ ದಿನದಿಂದ 9 ವರ್ಷಗಳ ನಂತರ ಬರೆದಿದ್ದುದರಿಂದ ಬರೆದವನ ಮರವೆಯಿಂದಾಗಿ ವಾರವನ್ನು ತಪ್ಪಾಗಿ ಬರೆದಿರಬಹುದೆಂದು ಕಾಣುತ್ತದೆ. ಯಾಕೆಂ-ದರೆ ಈ ತಾಮ್ರಪಟದ ಮೇಲಿನ 37ನೆಯ ಪಂಕ್ತಿಯಿಂದ ಪ್ರಾರಂಭವಾಗುವ ಇನ್ನೊಂದು ಶಾಸನವು ನಂದನ ಸಂವತ್ಸರ, ಅಂದರೆ ಕ್ರಿ.ಶ. 1472 ರಲ್ಲಿ ಬರೆಯಲ್ಪಟ್ಟಿದೆ. ಈ ಎಲ್ಲಾ ಕಾರಣಗಳಿಂದಾಗಿ ಈ ಶಾಸನದ ಕಾಲವನ್ನು ಕ್ರಿ.ಶ. 464ನೆಯ ಇಸವಿ ಮೇ ತಿಂಗಳ 18ನೆಯ ತಾರೀಕು ಶುಕ್ರವಾರವೆಂದು ಹೇಳಬೇಕು.

ಶಾಸನದ ಪೂರ್ಣ ಪಾಠವು ಈ ರೀತಿ ಇದೆ :

1. ಯಸ್ಯಾಬಂಕಿಧರಾಧಿಪೋವರಪಿತಾ ಶ್ರೀ ಮಲ್ಲಿದೇವಿ ಸತೀ. ಮಾತಾ ಶ್ರೀಮಧಿ ಸಾ(ಳ್ವ)
2. ಮಲ್ಲ ನೃಪತಿಃ ಪ್ರಾಣಾಧಿನಾಥೋ ಗುರು। ಸದ್ವಂ ದ್ಯೋ ಮುನಿಚಂದ್ರ-ಯೋಗಿತಿಲ (ಪ)*
3. ಕಸ್ಯೇಯಂ ಮನೋಜ್ಞಾರಮಾ ಶೃಂಗಾರಾಂಬುನಿಧೇರ್ವ್ವಿಭಾತಿಲಲಿತಾದೇವಿದ್ಯ
4. ಶಾಂ ಚಂದ್ರಿಕಾ॥ ತಾರಣ ಸಂವತ್ಸರದ ವೃಷಭ ಮಾಸಂ ೨೨ನೆಯ ಗು[ರು]

* ಈ ಅಕ್ಷರವು ಅಗತ್ಯವಿಲ್ಲ

5. ವಾರದಂದು ಶ್ರೀಮತು ಲಲಿತಾದೇವಿಯರಿಗೆ ಚವೀಸ ತೀರ್ತ್ಥಂಕರ ಅಮೃತಪ

6. ಡಿಗೆ ಚಂದ್ರಕೀರ್ತ್ತಿ ದೇವರು ತಂದು ಕೊಟ್ಟ ಹೊಂನ ಪೆರ್ನ್ನಾಡ ದೇರಂಬಳದ ವಿಷ್ಣ

7. ನಲೂರವರು ತಂಮ ಪ್ರಸ್ತ ನಿಮಿತ (ತ್ತ)ವಾಗಿ ತಂಮ ಬ್ರಂಪ್ಮ(ಹ್ಮಾ) ವಾಯ ಮೂಲ

8. ಅಗ್ಗಿತಿಲದ ಬಯಲಲೂ ಪಾನಂಬುಯೆಂಬ ಬಯಲ ಬಗ್ಗೆ ೨ಕ್ಕ[ಂ] ಬಿದೆಕಾರು

9. ಮೂಡೆ ೨ ಬಟ್ಟಲುಕಂಡಯೆಂಬ ಬಯಲಗದ್ದೆ ೧ಕ್ಕಂ ಬಿದೆಕಾರು ಮೂಡೆ ೨

10. ಸಳಂತಿಮರೆಂಬ ಗದ್ದೆ ೧ ಅರ್ತ್ತಿಕಂಡಯೆಂಬ ಗದ್ದೆ ೧ ಅಂತೂ ಗದ್ದೆ ೨ ಕ್ಕಂಬಿದೆಕಾ

11. ರು ಮು(ಮೂ)ಡೆ ೨ ವ್ರಭಯಂ ಗದ್ದೆ ೫ಕಂ ಬಿದೆಕಾರು ಮೂಡೆ ೬ ಯೀ .ತಾವಿಗೆ ಗೇಣಿಭ

12. ತ್ತ ಪೆರ್ನ್ನಾಡಯೆಂಟು ಕುಡುತೆ ಬಳ(ಳ್ಳ) ಮೂವತ್ತರ ಲೆಕ್ಕದ ಭತ್ತ ಮೂಡೆ ೬೦ಯೀ

13. ತಾವನು ನಿಮಗೆ ಅಪ್ವಾರ್ರಂ ಮಡಗಿ ಕಡಂಗೊಂ(ಡು)ಂ ವೀ ಂ[ರ] ರಾಯ ಆರು ಹಣವಿನಮೂ

14. ಡೆಯ ಕಾಟಿಗದ್ಯಾಣಂ ಅಕ್ಷರದಲು ವೀರರಾಯ ಆರು ಹಣವಿನಮೂ

15. ಡೆಯ ಕಾಟಿ ಇಂನೂರು ೩ (ಈ) ಹೊನಿ(ನ್ನಿ) ಗೆ ಪ್ರತಿವರುಷ ೧ಕ್ಕ ಕೊಡು ಬಡಿ(ಡ್ಡಿ) ಅಕ್ಕಿಮೂಡೆ

16. (ಡೆ)* ೧೬ ಹದಿನಾರು ಮೂಡೆ ಅಕ್ಕಿಯ ತಾವಿಗೆ ಪೂರ್ವ್ವಾದಿಯಿಲ್ಲ ಅಪರಾಧಿ

17. ಸಲ್ಲ ಯೀ ಬಡ್ಡಿಯನೂ ಜೇಡೆ ಸುಗ್ಗಿಯಲೂ ತಪ್ಪದೆ ನಡೆಸಿಬಹೆನು ಯೆಂ

18. ದು ತಂಮ ಸ್ವರೂಚಿಯಿಂದ ಪೊಡಂಬಟ್ಟು ಬರಸಿಕೊಟ್ಟ ಪತ್ರ ತೋಟಿ ತೊ

19. ಡಕು ಬಂದರೆ ಮೂಲಿಗನ ಭಾರಯಿ [ಲ್ಲ] ತಪ್ಪದಕೆ ಸಾಕ್ಷಿ ಕುಂಞಾ ಕುಬಣೂ

---

* ಈ ಅಕ್ಷರವು ಅಗತ್ಯವಿಲ್ಲ

20. ರವರು ವಾಸುದೇವ ಕಾಸತವರು ಯಿಂತಿಸಿವರ ವೃಭಯಾಲ್ಮ (ಸ್ವ) ತದಿಂಸೇ

21. ಮಿತ ದೇವರು ಸೆಟ್ಟಿಯು ಬರಹ ಕೊಡಕರ್ತ್ರಾವಿನ ಸ್ವಹಸ್ತದ ವ್ರೋಪ್ಪ ॥ ಶ್ರೀ ಶ್ರೀ ॥

ಸಾರಾಂಶ :

ಶ್ರೀಮಲ್ಲಿದೇವಿ ಹಾಗೂ ರಾಜಾಬಂಕಿಧರರ ಮಗಳಾದ, ಸಾಳ್ವಮಲ್ಲಸೆಂಬ ರಾಜನ ಪತ್ನಿಯಾದ, ಪೂಜ್ಯರಾದ ಮುನಿಚಂದ್ರಯೋಗಿಯ ಶಿಷ್ಯೆಯಾದ ಶೃಂಗಾರ ಶರಧಿಗೆ ಬೆಳದಿಂಗಳಂತೆ ಶೋಭಿಸುತ್ತಿದ್ದ ಶ್ರೀಮತಿ ಲಲಿತಾದೇವಿಗೆ ತಾರಣ ಸಂವತ್ಸರದ ವೃಷಭಮಾನ 22ನೆಯ ದಿನವಂದು ಗೆರೆಸೊಪ್ಪೆ ಬಸದಿಯ 24 ತೀರ್ಥಂಕರರ ಅಮೃತಪಡಿಗಾಗಿ ಚಂದ್ರಕೀರ್ತಿ ಮುನಿಯು ಒದಗಿಸಿಕೊಟ್ಟ ಹೊನ್ನಿನ ವಿವರಗಳನ್ನು ಈ ತಾಮ್ರಶಾಸನವು ತಿಳಿಸುತ್ತದೆ. ಪೆರ್ನಾಡು ಎಂಬಲ್ಲಿಯ ದೇರಂಬಳ ವಿಷ್ಣು ನಲ್ಲೂರ ಎಂಬ ಬ್ರಾಹ್ಮಣನು ತನ್ನ ಮದುವೆಗಾಗಿ ತನ್ನ ಬ್ರಹ್ಮಾದಾಯದ ಭೂಮಿಯನ್ನು ಶ್ರೀಮತಿ ಲಲಿತಾದೇವಿಯಲ್ಲಿ ಅಡವು ಇಟ್ಟು ಸಾಲ ತೆಗೆದುಕೊಂಡಿದ್ದನು. (ಆ ಭೂಮಿಯ ಎಲ್ಲಾ ವಿವರಗಳನ್ನು ಈ ಶಾಸನದಲ್ಲಿ ಹೇಳಿದೆ.) ತೆಗೆದುಕೊಂಡ ಇನ್ನೂರು ಕಾಟಿಗದ್ಯಾಣಗಳ ಸಾಲಕ್ಕೆ ಪ್ರತಿ ವರ್ಷ 16ಮುಡಿ ಅಕ್ಕಿಯ ಬಡ್ಡಿಯನ್ನು ಕೊಡಬೇಕೆಂದು ನಿರ್ಣಯವಾಗಿತ್ತು. ಪ್ರಾಯಶಃ ಆ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದಾಗ, ಆ ಆಸ್ತಿಯನ್ನು ಚಂದ್ರಕೀರ್ತಿ ಮುನಿಯು ಶ್ರೀಮತಿ ಲಲಿತಾದೇವಿಗೆ ಒದಗಿಸಿಕೊಟ್ಟು, ಅದಕ್ಕೆ ಯಾವುದೇ ತೆರಿಗೆಗಳು, ಹಿಂದಿನ ಬಾಕಿ, ಕಾನೂನಿನ ಬಂಧನಗಳು ಇಲ್ಲವೆಂದು ಹೇಳಿರುವನು. ಇದಕ್ಕೆ ಸಾಕ್ಷಿಗಳು ಕುಂಞಕುಬಣೂರವರು ಮತ್ತು ವಾಸುದೇವ ಕಾಸತವರು ಎಂದೂ. ಈ ವ್ಯವಸ್ಥೆಯನ್ನು ಎರಡೂ ಪಕ್ಷಗಳವರ ಒಪ್ಪಿಗೆಯಿಂದ ಮಾಡಲಾಗಿದೆ – ಎಂದೂ ಹೇಳಲಾಗಿದೆ. ಸೇಮಿತ್ರ ದೇವರು ಸೆಟ್ಟಿ – ಎಂಬವನು ಈ ಶಾಸನವನ್ನು ಬರೆದವನು.

ಇದೊಂದು ವರದಿಯಾಗಿರದ ಅಪ್ರಕಾಶಿತ ತಾಮ್ರಶಾಸನ. ಶ್ರೀಮತಿ ಲಲಿತಾದೇವಿ ಎಂಬವಳನ್ನು ಈ ಶಾಸನವು ಬೆಳಕಿಗೆ ತಂದಿದೆ. ಹಿಂದಿನಕಾಲದಲ್ಲಿ ನಡೆಯುತ್ತಿದ್ದ ಸಾಲ ವ್ಯವಸ್ಥೆ, ಅದರ ನಂತರ ಆಗುತ್ತಿದ್ದ ಕಾರ್ಯಕ್ರಮಗಳು, ಇವರಲ್ಲಿ ತ್ಯಾಗಿಗಳಾದ ಮುನಿಗಳು ನಡೆಸುತ್ತಿದ್ದ ಕಾರ್ಯಭಾರವನ್ನು ಈ ಶಾಸನವು ತಿಳಿಸುತ್ತದೆ. ಮಧ್ಯಯುಗದ ಸಮಾಜದ ಮೇಲೆ ಈ ಶಾಸನವು ಸಾಕಷ್ಟು ವಿಮರ್ಶನೀಯ ಬೆಳಕನ್ನು ಚೆಲ್ಲುತ್ತದೆ.

೨ ನೆಯ ಶಾಸನ

ಈ ಶಾಸನವು ತಾಮ್ರಪಟದ 22ನೆಯ ಪಂಕ್ತಿಯಿಂದ ಪ್ರಾರಂಭವಾಗಿ 36 ನೆಯ ಪಂಕ್ತಿಯುವರೆಗಿದ್ದು ಒಟ್ಟು 15 ಪಂಕ್ತಿಗಳಲ್ಲಿ ಬರೆಯಲ್ಪಟ್ಟಿದೆ.

ಈ ಶಾಸನದ ಕಾಲವು "ಸ್ವಭಾನು ಸಂವತ್ಸರದ ಕರ್ಕಮಾಸಂ ೯ನೆಯು ಬುಧವಾರ" ಅಂದರೆ ಕ್ರಿ. ಶ. 1463 ನೇ ಇಸವಿ, ಜುಲಾಯಿ ತಿಂಗಳ 7ನೇ ತಾರೀಕು, ಗುರುವಾರ ವಾರದ ಕುರಿತು ಒಂದನೆ ಶಾಸನದ ಸಂಬಂಧದಲ್ಲಿ ಕೊಟ್ಟಿರುವ ವಿವರಣೆಯು ಇಲ್ಲಿಗೂ ಅನ್ವಯವಾಗುತ್ತದೆ.

೨ನೇಯ ಶಾಸನದ ಪೂರ್ಣ ಪಾಠವು ಈ ರೀತಿ ಇದೆ.

1. ಸ್ವಭಾನು ಸಂವತ್ಸರದ ಕರ್ಕ್ಕಮಾಸಂ ೯ನೆಯ ಬುಧವಾರದಲು ಶ್ರೀಮತ ಬಿ
2. ದಿರೆಯ ಗುರುಗಳ ಬಸ್ತಿಯ ಪಾರಿಶ್ವನಾಥನ ಚೈತ್ಯಾಲಯದಲು ಗೆರ
3. ಸೊಪೆಯ ಲಲಿತಾ ದೇವಿಯರು ಮಾಡಿಸಿದ ಕಂಚಿನ ಬಸ್ತಿಯ ದೇವ
4. ರಿಗೆ ಅಮೃತ ಪಡಿಗೆ ಮುನಿಸೂವ್ರತ ತೀರ್ಥ್ಥಕರ ಅಕ್ಷಯ ಭಂಡಾರಕೆ ಪೆರ್ನ್ನಾ
5. ಡ ಪಡುವಣ ಮನೆಯ ವಾಸುದೇವ ಪಡೆಕೋಡಿನವರ ಮಗ ಶ್ರೀಧರ ಪಡೆಕೋ
6. ಡಿನವರು ಬರದು ಕೊಟ್ಟ ಪತ್ರದ ಕ್ರಮವೆಂತೆಂದರೆ ತಾವು ತಂಮ ಪ್ರಸ್ತುನಿಮಿ
7. ತ್ತವಾಗಿ ತಂ [ಮ] ಬ್ರಹ(ಹ್ಮಾ)ದಾಯದು(ದೂ) ಜ ಬಯಲಲು ಪಡೆಕೋಡಿ ಬೆಟ್ಟಿಂದ ಬಡಗ
8. ಸಲುಟಿದ ತೆಂಕ ತಮುಗುಳ(ಳ್ಳ) ಕುಡುತ [ಗ]ದೆ(ದ್ದೆ) ೩ ಕಂ ಗೇಣಿ ಅಕ್ಕಿಯ ಮೂಡೆ ೩೫ ಅದಕುಳ(ಳ್ಳ)
9. ಕರೆಮುರ ಮನೆ ಬಾವಿ ಸಹ ಅರ್ವ್ವಾರಂ ಮಡಗಿ ಕಡಂಗೊಂಡವಿರ (ವ)ರಾ ಇಹಣ
10. ಣ* ೨೦೦೦ ಅಕ್ಷರದಲು ಯೆರಡು ಸಾವಿರದ ನೂರು ಹಣವಿಗಂ ಬಡಿ(ಡ್ಡಿ) ಕು

---

* ಣ ಎಂಬ ಅಕ್ಷರವು ಇಲ್ಲಿ ಅಗತ್ಯವಿಲ್ಲ

11. ಡುತೆ ೮ರ ಬ[ಡ್ಡಿ] ೧೩೦ರ ಲೆಕ್ಕ ಅಕ್ಕಿಯ ಮೂಡೆ ೨೮ ಯಿಪ್ಪತ್ತೆಂಟು ಮೂಡೆ ಅಕ್ಕಿ
12. ಯನು ಬೇಡೆ ಸುಗಿ(ಗ್ಗಿ)ಯಲೂ ತಪ್ಪದೆ ನಡಸಿ ಬಹೆನುಯೆಂದು ತಂಮ ನುರು
13. ಚಿದ ವೊಡಂಬಟ್ಟು ಬರದು ಕೊಟ್ಟ ಪತ್ರ ಇಂತಪ್ಪುದಕೆ ಸಾಕ್ಷಿಗಳು ಯವ (ಮ) ಕ
14. ಯದ ಪಡಕೋಡೆಸವರು ಕೋರಿ ಕಾರವನು ಯಿಂತಿ ಇವರ ಉ ಭಯವಾಲ್ತ್ರ (ಸ್ಮ)ತದಿಂ
15. ಕೊಡಕರ್ತಾವಿನ ಬರಹ ಸಾಕ್ಷಿಗಳ ವೋಪ್ಪ ಶ್ರೀ

ಸಾರಾಂಶ

ಪೆರ್ನಾಡು ಎಂಬಲ್ಲಿಯ ಪಡುವಣ ಮನೆಯ ಶ್ರೀಧರ ಪಡೆಕೋಡಿನವರು ತಮ್ಮ ವಿವಾಹಕ್ಕಾಗಿ ತಮ್ಮ ಬ್ರಹ್ಮಾದಾಯದ ದೂಜಿಬಯಲು ಎಂಬಲ್ಲಿಯ 35 ಮುಡಿ ಅಕ್ಕಿ ಗೇಣಿ ಬರುವ ಆಸ್ತಿಯನ್ನು ಶ್ರೀಮತಿ ಲಲಿತಾದೇವಿಯಲ್ಲಿ 2100 ಹಣಗಳಿಗೆ ಆರ್ವಾರ ಇಟ್ಟಿದ್ದರು. ತೆಗೆದುಕೊಂಡ ಈ ಸಾಲದ ಮೊತ್ತಕ್ಕೆ ತೆರಬೇಕಾದ್ದ ಬಡ್ಡಿ 28 ಮುಡಿ ಅಕ್ಕಿಯನ್ನು ಮೂಡುಬಿದ್ರೆಯ ಪಾರ್ಶ್ವನಾಥ ಬಸದಿಯಲ್ಲಿಪ್ಪ ಕಂಚಿನ ಮೂರ್ತಿಯೊಂದರ ಅಮೃತಪಡಿಗೂ, ಮುನಿಸುವೃತ ತೀರ್ಥಂಕರರ ಭಂಡಾರಕ್ಕೂ ಕೊಡಬೇಕೆಂದು ಕ್ರಿ.ಶ. 1463ನೆಯ ಇಸವಿ ಜುಲಾಯಿ ತಿಂಗಳ ಏಳನೆಯ ತಾರೀಕಿನಂದು ಈ ಶಾಸನವನ್ನು ಬರೆಯಲಾಗಿತ್ತು. ಈ ಒಪ್ಪಂದಕ್ಕೆ ಎರಡೂ ಪಕ್ಷಗಳ ಒಪ್ಪಿಗೆಯೂ ಕೆಲವು ಸಾಕ್ಷಿಗಳೂ ಇದ್ದುವು.

೩ ನೆಯ ಶಾಸನ

ಈ ಶಾಸನವು ತಾಮ್ರಪಟದ 37ನೆಯ ಪಂಕ್ತಿಯಿಂದ ಪ್ರಾರಂಭವಾಗಿ ಕೊನೆಯದಾದ 67ನೆಯ ಪಂಕ್ತಿಯ ವರೆಗೆ ಬರೆಯಲ್ಪಟ್ಟಿದೆ. ಮೊದಲ 6 ಪಂಕ್ತಿಗಳು ತಾಮ್ರಪಟದ ಮುಂಭಾಗದಲ್ಲಿದ್ದು ಮುಂದಿನ 24 ಪಂಕ್ತಿಗಳು ಹಿಂಭಾಗದಲ್ಲಿವೆ. ಈ ಶಾಸನವು ಒಟ್ಟು 30 ಪಂಕ್ತಿಯಲ್ಲಿ ಬರೆಯಲ್ಪಟ್ಟಿದೆ.

ಈ ಶಾಸನದ ಕಾಲವು ''ನಂದನ ಸಂವತ್ಸರದ ಮೇಷಮಾಸಂ ಪ್ರಥಮನೆಯ ಆದಿವಾರ'' ಅಂದರೆ ಕ್ರಿ.ಶ. 1472ನೆಯ ಇಸವಿ. ಮಾರ್ಚ ತಿಂಗಳ 27ನೆಯ ತಾರೀಕು.

ಈ ಶಾಸನದ ಪೂರ್ಣ ಪಾಠವು ಈ ರೀತಿ ಇದೆ

1. ನಂದನ ಸಂವತ್ಸರದ ಮೇಷಮಾಸಂ ಪ್ರಥಮನೆಯ ಆದಿವಾರದ [೦] ದುಶ್ರೀ
2. ಮತು ನಾರಾಯಣ ಆಸ್ರಾ[ಣ]ರ ಮಕ್ಕಳು ನಾರಾಯಣ ಆಸ್ರಾಣಂ
3. ರು ಗೋಪಿಂದಾಸ್ರ [ಣ]ರು ಸಂಕರಾಸ್ರ[ಣ] ರೂ ತಂಮೊಳೇಕಸ್ತರಾಗಿ ಬಿದಿ
4. ರೆಯ ಗುರುಗಳ ಬಸ್ತಿಯ ಪಾರಿಶ್ವನಾಥನಿಗೆ ಬರದು ಕೊಟ್ಟ ಸಾಧ
5. ನ ಕ್ರಮವೆಂತೆಂದರೆ ನಾವು ನಂಮ ಪ್ರಸ್ತನಿಮಿತ(ತ್ತ)ವಾಗಿ ಸಂಮ್ಮ ಬ್ರಂಹ್ಮ (ಹ್ಮಾ)
6. ದಾಯ ಮೂಲ ಸೀಳುವಯಲ ಸಂಕೇತದ ಗದೆ(ದ್ದೆ) ಕಾಜೂರಲು ಮೇಲ

ಹಿಂಭಾಗ

7. * ಟಣ ಗೆವ್ವ ಗದ್ದೆ ೨ ಕ್ಕಂ ಬಿತ್ತುವ ಬಿದೆಕಾರು ಬಯಲು ಮು (ಮೂ)೫॥
8. ಆ ಬಗೆ ಅರಸಧಿಕಾರಿ ಗೆವ್ವ ಬಯಲಗದ್ದೆ ಬಿತ್ತುವ ಬಿದೆಕಾರು ಬ
9. ಮೂ ೮ ಬೆಟ್ಟು ಮೂ ೪ ಅಂತೂ ಬಯಲು ೧೩॥ಬೆಟ್ಟು ಮು ೪ ಕ್ಕಂಗೇ
10. ಣೆ ಪ್ರತಿವರುಷ ೧ ಕ್ಕಂ ಕು ೮ ಲೆಕ್ಕದ ಬ ೩೦ರ ಲೆಕ್ಕದ ಭತ್ತ ಮೂ ೧೦೭ರ
11. ಗೇಣೆ ಯನು ಗದ್ದೆಗಳನ್ನೂ ನಾವು ನಿಮಗೆ ಆವ್ವಾರಂ ಮಡಗಿ ನಿಂಮ ಕ
12. ಯ್ಯ ನಾವು ಕಡಂಗೊಂಡದು ನಿಮಗೆ ಲಲಿತಾದೇವಿಯರೂ ಧರ್ಮ್ಮವ ಮಾಡಿ
13. ದ ಹೊಂನಿಂದ ನಂಮ ತಾಯಗಳ ವಷ [೯] ಕ್ರಿಯೆಗಾಗಿ ಕಡಂಗೊಂಡವ
14. ರಹಗ ೧೦೦ ಅಕ್ಕರದಲು ನಾವು ನಿಂಮ ಕೈಯ ಕಡಂಗೊಂಡ ವರಹ
15. ಕ್ಕೆ ಬಡ್ಡಿ ಪ್ರತಿ ವರುಷ ೧ಕ್ಕ [೦] ೧ಕು ೮ಲೆಕ್ಕದ ಬ೩೦ರ ಲೆಕದ ಭತ್ತ ಮು ೭೫
16. ನಾವು ಸಿರ (ರೂ)ಪ್ಪ(ಪ)ಣೆಯಾಗಿ ವೊಕ್ಕಲಲೂ ನೆಲದರವಾಗಿ ನಿವ(ಮ) ಗೆ ನಿರಪ್ಪಣೆಯಾ
17. [೧] ನಾವು ನಡಸಿ ಬಹೆವು ಯೀ ಗದ್ದೆಗೆ ಪೂರ್ವಾದಿಯಿಲ್ಲ ಅಪರಾಧಿಸ
18. ಲ(ಲ್ಲ) ಯೀ ಸ್ಥಳಕ್ಕೆ ಆರೋಬ್ಬರಿಂದ ತೋಟಿ ತೊಡಕು ಬಂದರೆ ನಾವು ಪರಿಹರಿ

---

* ಇಲ್ಲಿ ಅಕ್ಷರವೂ ಕಾಣೆಯಾಗಿದೆ.

19. ಸಿ ಕೊಡುವೆವೆಂದು ನಾವು ನಂಮು ಸರೂಚಿಯಿಂದೊಡಂಬಟ್ಟು ಕೊಟ್ಟ ಸಾ
20. ಧನ ಕ್ರ [ಮ] ಯಿಂತಪ್ಪುದಕೆ ಸಾಕ್ಷಿಗಳು ಬದವತವ ಯಿಚ್ಚಿಲಂಣ ಪಯಿಂ
21. ನ್ರಿವರ ಪ್ರಭಯಾಂ*ನೃತದಿಂ ಸೂರೆ ನಾರಾಯಣನ ಬರಹ ಆ ನಾಲ್ವ
22. ರ ಸ್ವಹಸ್ತದ ವೊಪ (ಪ್ಪ) ಸಾಕ್ಷಿಗಳ ವೊಪ್ಪ ॥ಶ್ರೀ॥ ಮಂದರ ಸ್ನಪ್ನೈ-ದ್ಯಕ್ಕೆ ಯ ಮೂ
23. ಡೆ ೭ ವೊಪ್ಪಾನೆಗೆ ಅಕ್ಕಿಯ ಮೂ ೯ ಹಾಲಧಾರೆ ನಾ ೪ ಕ್ಕ ಕ್ಕ [ಂ] ಅಕಿ (ಕ್ಕಿ) ಮೂ ೧೨ ಅದ
24. ಕೆ ರೆಗೆ ಅಕ್ಕಿಯ ಮೂ ೨ ಮಂದರಕ್ಕೆ ಅಭಿಷೇಕ ೭ ಕ್ಕಂ ಅಕ್ಕಿಯ ಮೂ ೧ ಚವೀಸ ತೀರ್ಥ
25. ಕರಿಗೆ ಅಂಮೃತ ಪಡಿ ಯಿಪ್ಪಾನೆ ಅಕ್ಕಿಗೆ ಮೂಡೆ ೧೮ ಚವೀಸ ತೀರ್ಥಕರಿಗೆ ಅಭಿಷೇ
26. ಕ ೭ಕ್ಕ [ಂ] ಅಕ್ಕಿಮೂಡೆ ೭ ಆರಾಧನೆಗೆ ಪ್ರ [ತಿ] ತಿಥಿಗೆ ಅಕ್ಕಿಯ ಮೂ ೧೪ ಅಭಿಷೇಕ ಸ
27. ಹ ದೀವಿರೆ (ಗೆ) ಯೆಣ್ಣೆಗೆ ಹಾಡ ೪ ಅಕ್ಕಿಯ ಮೂಡೆ ೬ ಅನಂತಮತಿ ಅವ್ವ
28. ಗರು(ಳು) ಸಿದ್ಧಾ[ಂ] ತದ ಅಡಕೆಯ ಪೂಜೆಗೆ ಅವರೊ[ಳ]ಗೆ ಅಕ್ಕಿಯ ಮೂ ೫
29. ಅನಂತಮತಿ ಅವ್ವಗಳು ಲಲಿತಾದೇವಿಯ ಅಮ್ಮಂಸವರು ಧರ್ಮ್ಮಕ್ಕೆ ಬಿಟ್ಟು ಕೊಟ್ಟ
30. ಅಕ್ಕಿ ಮೂಡೆ ೭೪

ಸಾರಾಂಶ

ನಾರಾಯಣ ಅಸ್ರಣ್ಣ ಎಂಬವರ ಮೂರು ಜನಮಗಂದಿರು ಕ್ರಿ. ಶ. 1472 ನೆಯ ಮಾರ್ಚ 27ರಂದು ಈ ಶಾಸನವನ್ನು ಮೂಡುಬಿದ್ರೆಯ ಪಾರ್ಶ್ವನಾಥ ಬಸದಿಗೆ ಬರೆದುಕೊಟ್ಟರು. ಅವರು ತಮ್ಮ ಮದುವೆಗಾಗಿ, ಹಾಗೂ ತಮ್ಮ ತಾಯಿಯ ಮರಣೋತ್ತರ ವಾರ್ಷಿಕಕ್ಕಾಗಿ, ತಮ್ಮ ಬ್ರಹ್ಮಾದಾಯದ 107 ಮುಡಿ ಭತ್ತ ಗೇಣಿಬರುವ ಸ್ಥಳವನ್ನು, ಆ ಬಸದಿಯಲ್ಲಿ ಆರ್ವಾರ ವಿಟ್ಟು, 100 ವರಹ ಸಾಲವನ್ನು ತೆಗೆದುಕೊಂಡಿದ್ದರು. ಇದ್ದಕ್ಕೆ ಕೊಡಬೇಕಾದ ಬಡ್ಡಿಯನ್ನು ತಾವು ವರ್ಷಂಪ್ರತಿ ಸರಿಯಾಗಿ ಕೊಡುತ್ತೇವೆಂದು, ಸಾಕ್ಷಿಗಳೊಂದಿಗೆ ಈ ಶಾಸನವನ್ನು ಬರೆಸಿದ್ದರು. ಈ

* ಈ ಅಕ್ಷರ ಅಗತ್ಯವಿಲ್ಲ.

ಬಡ್ಡಿಯನ್ನು ಶ್ರೀಮತಿ ಲಲಿತಾದೇವಿಯ ಅಭಿಪ್ರಾಯದಂತೆ, ಆ ಬಸದಿಯ ವಿಭಿನ್ನ ಧಾರ್ಮಿಕ ಕಾರ್ಯಗಳಿಗೆ ವಿನಿಯೋಗಿಸುವಂತೆಯೂ ಈ ಶಾಸನದಲ್ಲಿ ನಿರೂಪಿಸಲಾಗಿದೆ.

ಇವನ್ನು ಪ್ರಕಟಿಸಲು ಅನುಮತಿ ನೀಡಿದ ಮೂಡುಬಿದ್ರೆಯ ಶ್ರೀ ದಿಗಂಬರ ಜೈನ ಮಠದ ಪಟ್ಟಾಚಾರ್ಯ ಶ್ರೀ ಮಚ್ಚಾರು ಕೀರ್ತಿ ಭಟ್ಟಾರಕ ಸ್ವಾಮಿಗಳವರಿಗೆ ಭಕ್ತಿ ಪೂರ್ವಕ ನಮಸ್ಕಾರಗಳು.

ಅಯ್ಯಾವೊಳೆ ಐನೂರ್ವರ ಪ್ರಶಸ್ತಿಗಳು

● ಬಿ. ಆರ್. ಹಿರೇಮಠ

'ಅಯ್ಯಾವೊಳೆ ಐನೂರ್ವರು' ಎಂಬುದು ಐದುನೂರು ಸದಸ್ಯರುಳ್ಳ ವರ್ತಕಸಂಘದ ಹೆಸರು. ವಿಜಾಪುರ ಜಿಲ್ಲೆಯ ಐಹೊಳೆ ಈ ವರ್ತಕಸಂಘದ ಕೇಂದ್ರಸ್ಥಳ. ಇಲ್ಲಿಯ 'ಅಯ್ಯಾವೊಳೆ ಐನೂರ್ವರು' ಪದ ವರ್ತಕಸಂಘವಾಚಿಯಾಗಿದ್ದಂತೆ ವರ್ತಕಪ್ರಕಾರಸೂಚಿಯೂ ಆಗಿದೆ. ಹತ್ತನೆಯ ಶತಮಾನದ ಪೂರ್ವದಲ್ಲಿದ್ದ ಈ ವರ್ತಕಸಂಘ ಪ್ರಸ್ತುತ ಶಾಸನಗಳ ಕಾಲದಲ್ಲಿ ಐಹೊಳೆಯಲ್ಲಿ ಅಸ್ತಿತ್ವದಲ್ಲಿರಲಿಲ್ಲ. ಆಮೇಲೆ ಮಧ್ಯಕಾಲೀನ ಕರ್ನಾಟಕದಲ್ಲಿ ವ್ಯಾಪಾರ ಮಾಡುತ್ತಿದ್ದ ಸೆಟ್ಟಿ-ಬಣಂಜಿಗ, ನಕರ, ಮುಂಮುರಿದಂಡ ಮುಂತಾದ ವರ್ತಕರು ಈ ವರ್ತಕಸಂಘದ ಹೆಸರಿನಿಂದ ತಮ್ಮನ್ನು ಗುರುತಿಸಿಕೊಂಡಿರುವುದು ಗೊತ್ತಾಗುತ್ತದೆ. ತಮ್ಮ ಪೂರ್ವಜರ ಮೇಲಿನ ಪೂಜ್ಯಭಾವನೆಯಿಂದ ನಂತರದ ವರ್ತಕರು ಈ ಪ್ರಶಸ್ತಿಯನ್ನು ಹಚ್ಚಿಕೊಂಡಿರಬಹುದು. ಇದಲ್ಲದೆ ' ಅಯ್ಯಾವೊಳೆ ಐನೂರ್ವರು ' ವರ್ತಕಸಂಘದ ಹೆಸರು ಜನಮನದಲ್ಲಿ ಹಚ್ಚಹಸಿರಾಗಿಸಲು ಇವರು ನಡೆಸಿದ ಪ್ರಯತ್ನವೂ ಇದಾಗಿರಬೇಕೆನಿಸುತ್ತದೆ.

ಚಕ್ರವರ್ತಿ, ಮಂಡಲೇಶ್ವರ, ದಂಡನಾಯಕ ಮೊದಲಾದವರಿಗೆ ಮಾತ್ರ ಪ್ರಶಸ್ತಿಗಳಿರುವುದು ಇತಿಹಾಸದಿಂದ ವ್ಯಕ್ತವಾಗುತ್ತದೆ. ಆದರೆ 'ಅಯ್ಯಾವೊಳೆ ಐನೂರ್ವರು' ವರ್ತಕಸಂಘ ಸ್ವತಂತ್ರವಾದ ಪ್ರಶಸ್ತಿ ಹೊಂದಿರುವುದು ಮಧ್ಯಯುಗೀನ ಭಾರತದಲ್ಲಿಯೇ ವಿರಳ ಹಾಗೂ ವಿಶಿಷ್ಟ ಉದಾಹರಣೆ. ಚಕ್ರವರ್ತಿಯಂತೆ ಸ್ವತಂತ್ರವಾದ ಪ್ರಶಸ್ತಿಯುಳ್ಳ 'ಅಯ್ಯಾವೊಳೆ ಐನೂರ್ವರು' ವರ್ತಕಸಂಘದ ಪ್ರಶಸ್ತಿಗಳಿಂದ ಇವರ ಪೂರ್ವಜರು. ಮೂಲಸ್ಥಳ. ಶೌರ್ಯ–ಪರಾಕ್ರಮ. ವ್ಯಾಪಾರ ವಿಶೇಷ, ಚಿಹ್ನೆ. ಲಾಂಛನ. ಶಾಸ್ತ್ರ. ಧರ್ಮ. ದೈವ ಮುಂತಾದ ವಿಶಿಷ್ಟ ಮತ್ತು ವಿಪುಲ ಸಂಗತಿಗಳು ತಿಳಿದುಬರುತ್ತವೆ.

ಪ್ರಶಸ್ತಿ ಶಬ್ದಕ್ಕೆ ಪರ್ಯಾಯವಾಗಿ ಪೂರ್ವಾವತಾರ. ನಾಮಾವಳಿ ಎಂಬ ಪದಗಳನ್ನೂ ಬಳಸಲಾಗಿದೆ. ಕ್ರಿ.ಶ. ಸು. 10 ರಿಂದ ಕ್ರಿ.ಶ. 1398 ರ ವರೆಗೆ 50 ಪ್ರಶಸ್ತಿಗಳು ದೊರಕಿವೆ. ಈ ಪ್ರಶಸ್ತಿಗಳು ಕೆಲವುಸಲ ಶಾಸನಗಳ ಆರಂಭದಲ್ಲಿಯೂ ಹೆಚ್ಚುಸಲ ಮಧ್ಯಭಾಗದಲ್ಲಿಯೂ ಕಾಣಿಸಿಕೊಂಡಿರುತ್ತವೆ. ಇಲ್ಲಿಯ

ಪ್ರಶಸ್ತಿಗಳು ಹೆಚ್ಚಾಗಿ ಪಡಿಯಚ್ಚುಗಳಾಗಿ ಕಂಡುಬರುತ್ತವೆ. ಪ್ರಾದೇಶಿಕವಾಗಿ ಏಕರೂಪತೆಯನ್ನು ಮೈಗೂಡಿಸಿಕೊಳ್ಳದ ಇವು ಆಯಾ ಶತಮಾನಗಳಲ್ಲುಂಟಾದ ಭಿನ್ನಪಾಠ, ಸ್ಥಾನಪಲ್ಲಟ ಮತ್ತು ಸಂಕ್ಷೇಪೀಕರಣಗಳನ್ನು ಉಳಿಸಿಕೊಂಡು ಬಂದಿವೆ. ಶಿಲೆಯ ವಿನ್ಯಾಸಕ್ಕನುಗುಣವಾಗಿ ಈ ಪ್ರಶಸ್ತಿಗಳು ಸಂಕ್ಷೇಪವಾಗಿಯೂ ವಿಸ್ತೃತವಾಗಿಯೂ ರಚಿತವಾಗಿವೆ. ಸಿದ್ಧಶೈಲಿಯಲ್ಲಿ ರಚಿತವಾದ ಈ ಪ್ರಶಸ್ತಿಗಳಲ್ಲಿ ಪ್ರಯೋಗಶೀಲತೆ ವಿರಳವಾಗಿ ಗೋಚರಿಸುತ್ತಿದೆ. ರಾಜಾವಳಿಗದ್ಯದ ಮಾದರಿಯಲ್ಲಿ ಬರೆಯಲ್ಪಟ್ಟ ಇವುಗಳಲ್ಲಿ ವೈಭವೀಕರಣ ಕಾಣಿಸಿಕೊಂಡುದು ಸಹಜವೆನಿಸುತ್ತದೆ. ಹೀಗೆ ಅನೇಕ ಅಂಶಗಳಿಂದ ಅಧ್ಯಯನಯೋಗ್ಯವಾದ ಅಯ್ಯಾವೊಳೆ ಐನೂರ್ವರಿಗೆ ಸಂಬಂಧಿಸಿದ ಶಾಸನೋಕ್ತ ಪ್ರಶಸ್ತಿಗಳು ಹೀಗಿರುತ್ತವೆ :

1

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂ........ಸನಲಬ್ಧಾನೇಕ ಗುಣಗಣಾಳಂಕೃ......ರು ಚರಿತ ನಯವಿನಯ ವಿನ್ಯಾ(ಜ್ಞಾ)ನ ವೀರ... ....ಪಾಳನ ವಿಸುದ್ಧ ಗುಡ್ಡಧ್ವಜ ವಿರಾಜಿ........ಲಿಂಗಿತ ವಕ್ಷಸ್ಥಳ ಭುವನ ಪರಾಕ್ರಮ........ಳೀ ಮೂಳಭದ್ರೋದ್ಭವ ಶ್ರೀಮುತು ....[1]

2

ಸ್ವಸ್ತಿ ಸಮಸ್ತ ಭುವನ ವಿಖ್ಯಾತಂ ಪಂಚಸತ ವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಸೌಚಾಚಾರ ಚಾರಿತ್ರ ನಯವಿನಯ ಸಂಪನ್ನರಪ್ಪ ಸ್ರೀ ವೀರಬಳಂಜದ ಧರ್ಮ್ಮ ಪ್ರತಿಪಾಳನ ವಿಸುದ್ಧ ಗುಡ್ಡಧ್ವಜವಿರಾಜಿತಮಪ್ಪ ಲಕ್ಷ್ಮೀವಕ್ಷಸ್ಥಳಂ ಸರಳಾಂಗಿತ ಭುವನ ಪರಾಕ್ರಮಂ ವಾಸುದೇವ ಕಣ್ಡಳೀ ಮೂಳಭದ್ರೋದ್ಭವಂ ಭಗವತೀ ವರಪ್ರಸಾದಂ ದ್ವಾತ್ರಿಂಸ ವೇಳಾವುಳ ಅಷ್ಟಾದಸಪಟ್ಟಣಂ ಚೌಸಷ್ಟಿ ಯೋಗಪೀಠಂ ಅರವತ್ತನಾಲ್ಕು ಘಟಿಕಾಸ್ಥಾನಂ ನಾನಾದೇಸ ಭ್ರುವಂತ ವಿದಗ್ಧ ಸಿದ್ಧಾಗಮ ವಾಕುಸಿದ್ಧರುಂ ಛಲ್ಲುಂಕಿದಣ್ಡಹಸ್ತರ್ ಐಯವೊಳೆಯ ಪುರಪರಮೇಶ್ವರರ್ ಕಲಿಹಸಂಪಂಸರಾಚಾರಗಲಿಗಳ್ ತೊಡರೆ ಬಲುಗಂಡರ್ ಪೆಣಕೆ ಕಡುಗೂರ್ಪ್ಪರ್ ಕೃತಯುಗಂ ತ್ರೇತೆ ದ್ವಾಪರಂ ಕಲಿಯುಗಂ ನಾಲ್ಕು ಯುಗದೊಳಂ ಬ್ರಹ್ಮವಿಷ್ಣು ಮಹೇಶ್ವರರ ಮತವೆ ಪಸುಂಬೆಯಾಗೆಯು ಅಷ್ಟ ಲೋಕಪಾಳಕರ್ ಗೊಂಟಾಗೆಯು ಎಂಟುಂದೆಸೆಯ ದೇವತೆಗಳೆ ಗೊಳಸಾಗೆಯು ವಾಸುಗಿಯೆ ಬಳಸಾಗೆಯುಂ ಫಣಿಪ್ರಳುಮೆ ದಾರವಾಗೆಯುಂ ಬೊಕ್ಕಣಮೆ ಒಳ ವಸುಂಬೆಯಾಗೆಯುಂ ಖಟ್ವಾಂಗಮೆ ಕೋಲಾಗೆ ಚಂದ್ರಾದಿತ್ಯರ್ಕ್ಕಳಣಸಾಗೆಯುಂ

1. ಎ. ಕ. V ತಿ. ನರಸೀಪುರ 25 ತಿರುಮಕೂಡಲು (ಕ್ರಿ. ಶ. ಸು. 991).

ಚಕ್ರಮೆ ಬೇಳವಾಗೆಯುಂ ವಜ್ರಕವಚಮೆ ಕಂಚುಳಿಕೆಯಾಗೆಯುಂ ದ್ವಾವತಿಯ ಭಂಡಮೆ ತಾಯಿಭಂಡವಾಗೆಯುಂ ಐಸಂಬರಮ ಅಮೂಲ್ಯ ವಸು (ಸ್ತು)ಗಳಾಗೆಯುಂ ನಡೆದುಂ ನುಡಿದುಂ ಸಂದ ಶ್ರೀಮತ್ತೆಂಟುನಾಡಪದಿನಜುವರುಮಾದಿಯಾಗೆ ಐನೂರ್ಬರು ಸ್ವಾಮಿಗಳ್[2]

3

.... ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಞ್ಚಶತವೀರಶಾಸನಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಳಂಜಧರ್ಮ್ಮ ಗುಡ್ಡಧ್ವಜ ವಿರಾಜಮಾನ ಸಾಹಸಾನೂನ ವಿಶಾಳವಕ್ಷಸ್ಥಳ ಭುವನ ಪರಾಕ್ರಮ ಖಣ್ಡಳಿ ವಾಸುದೇವಮೂಳಭದ್ರೋದ್ಭವನ್ನುಡಿದು ಪ್ರಸಿಯುತ್ರ್ತೀದಟ್ಟು ಕುಸಿಯಮ್ಮಹಾಸಮುದ್ರದನ್ತೆ ಮೇರೆದಪ್ಪಬ್ರ್ಬಲದಲ್ಮಹೇಶ್ವರನನ್ನರುಪಾಯದಲ್ವಿಷ್ಣುವಿನನ್ನ್ವಿಜ್ಞಾನದಲ್ ಬ್ರಹ್ಮನನ್ನಯ್ರ್ಯಮವರುಣವಾಯುವ್ಯ ಚೇರಚೋಳಪಾಣ್ಡ್ಯರ್ಕ್ಕಳನ್ನಡೆಗೊಣ್ಡು ಕನ್ನರದೇವನ........[3]

4

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯಶೌಚಾಚಾರ ಚಾರುಚರಿತ್ರ ನಯವಿನಯ ವಿಜ್ಞಾನ ವೀರ ಬಣಂಜಧರ್ಮ್ಮ ಪ್ರತಿಪಾಳವಿಶುದ್ಧ ಗುಡ್ಡಧ್ವಜ ವಿರಾಜಮಾನಮಾನಾನೂ(ನೂನ) ಸಾಹಸ ಲಕ್ಷ್ಮ್ಯಾಲಿಂಗಿತ ವಕ್ಷಸ್ಥಳ ಭುವನಪರಾಕ್ರಮೋಂನತರುಂ ವಾಸುದೇವ ಖಂಡಳಿಮೂಳಭದ್ರವಂಶೋದ್ಭವರುಂ ಭಗವತೀಲಬುಧ ವರಪ್ರಸಾದರುಂ ದ್ವಾ(ದ್ವಾ)ತ್ರಿಂಶದ ವೇಳಾವರವಷ್ಟಾದಶಪಟ್ಟಣಂಗಳು ಚೌಷಷ್ಟಿಯೋಗಪೀಠಮುಂ ಚತುರ್ದಿಶೆಯಾಶ್ರಮ ನಾನಾದೇಶ ಭ್ರಮಾನ್ತುಕರವರ್ಗ್ಗ ಪ್ರಟ್ಟಿಯುಂ ಕ್ರಿತಯುಗ ತ್ರೇತೆ ದ್ವಾಪಾರ ಕಲಿಯುಗಂ ಮೊದಲಾಗೆ ಬ್ರಂಹ್ಮವಿಷ್ಣುಮಹೇಶ್ವರವರ ಮತಂ ಪ್ರಿಥ್ವಿಯೆ ಹಸುಂಬೆಯಾಗೆ ಅಷ್ಟಲೋಕಪಾಳಕರೇ ಗೋಂಟಾಗೆ ವಾಸುಗಿಯೇ ಬಳಸಾಗೆ ಫಣಿಕುಳಂಗಳೇ ದಾರವಾಗಿ ಜೊಕ್ಕಣವೊಳವಸುಂಬೆಯಾಗಿ ಚಕ್ರಮೇ ಜೆಳವಾಗಿ ಕೂರಸಿಯೇ ಮರ ಸುರಿಗೆಯಾಗೆ ಹಸುಂಬೆಯೊಳಮೂಲ್ಯವಸ್ತುಗಳೇ ವಸ್ತುಗಳಾಗಿ ಚೇರ ಚೋಳ ಪಾಂಡ್ಯ ಮಲೆಯ ಮಗಧ ಕೌಶಳ ಸೌರಾಷ್ಟ್ರ ಧನುಷ್ಟ್ರ ಕುರುಂಭ ಕಾಂಭೋಜ ಗೌಲ್ಲಲಾಳ ಬರ್ವ್ವರ ಪಾರಸ ನೇಪಾಳ ಏಕಪಾದ ಲಂಬಕರ್ಣ್ಣ ಸ್ತ್ರೀರಾಜ್ಯ ಪೋಳಾಮುಖಮೆಂಬ ನಾನಾದೇಶಂಗಳೊಳಂ ಗ್ರಾಮ ನಗರ ಖೇಡ

---

2. ಕ. ಇ. IV 55 ಬೆಡಕಿಹಾಳ (ತಾ) ಚಿಕ್ಕೋಡಿ (ಕ್ರಿ. ಶ. 1000).

3. ಎ. ಕ. III ಹೆಗ್ಗಡದೇವನಕೋಟೆ 59 ಬೆಳತೂರ (ಕ್ರಿ. ಶ. 1033).

ಖರ್ವ್ವಡ ಮಡಂಬ ಪಟ್ಟಣ ದ್ರೋಣಾಮುಖ ಸಂಪಾನವೆಂಬ ದಿಗುವಂತಿ ಪಟ್ಟಣಂಗಳಂ ಪಾದಮಾರ್ಗ್ಗ ಜಲಮಾರ್ಗ್ಗದೊಳು ಷಟ್ಖಂಡ ಮಂಡಳಂಗಳಂ ಪೊಕ್ಕು ಭದ್ರಹಸ್ತಿ ಜಾತ್ಯಶ್ವ ಇಂದ್ರನೀಲ ಚಂದ್ರಕಾಂತ ಮುತ್ತು ಮಾಣಿಕ್ಯ ವಜ್ರ ವೈಡೂರ್ಯ್ಯ ಗೋಮೇಧಿಕ ಪುಷ್ಯರಾಗ ಪದ್ಮರಾಗ ಪವಳ ಮರಕತ ಕರ್ಕ್ಕೇತನ ನಾನಾವಸ್ತುಗಳಮನೇಲಾ ಲವಂಗಪಗರು ಚಂದನ ಕರ್ಪ್ಪೂರ ಕಸ್ತೂರಿ ಕುಂಕುಮ ಮಲೆಗಜಾದಿ ಸುಗಂಧ ದ್ರವ್ಯಂಗಳುಮಂ ಪೇರಿಯುಂ ಮಾರಿಯುಂ ಪೆಗಲೊಳಾಂತು ಸುಂಕಚ್ಛಾವಯುಮಂ ಕಿಡಿಸಿ ಚಕ್ರವರ್ತ್ತಿಯ ಸುವರ್ಣ್ಣಭಂಡಾರಮುಮಂ ಪಟ್ಟಿನ ಭಂಡಾರಮುಮಂ ತೆಕ್ಕನೆ ತೀವಿ ಮಿಕ್ಕುದರೊಳು ಚತುಸ್ಸಮಯ ಷಡುದರ್ಶನ ವಿಶಿಷ್ಟ ವಿದಗ್ಧ ಪಂಡಿತ ಮುನಿಜನಂಗಳ್ಗೆ ನಿತ್ಯಂ ಬೆಸಕೆಯ್ಯುತ್ತಂ ಅವರ ಪರಸಿದ ಪರಮಾಶೀರ್ವ್ವಾದ ಶತಸಹಸ್ರ ವಚನಂಗಳಂ ತಲೆಯೊಳಾಂತು ಕಯ್ಕೊಳ್ಳುತ್ತಂ ಮಹಾದೇವರುಮನಿಷ್ಟಾದೇವರುಮಾಗಿ ಬಗೆದು ಧರ್ಮ್ಮಾರ್ತ್ಥಕಾಮಭೋಗಂಗಳಂ ಮಹಾಸುಖದಿನನುಭವಿಸುತ್ತ ಗಾವರ್ದ್ಧಪ ಮಹಿಪ ವಾಹಕ ಚೇನಾ(ಣಾ)ಭರಣಭೂಷಿತರಪ್ಪ ಎಂಟುನಾಡಪದಿನಜುವರುಂ ಗವರೆಗಳುಂ ಗಾತ್ರಿಗರುಂ ಸೆಟ್ಟಿಯರುಂ ಸೆಟ್ಟಿಗುತ್ತರುಂ ಅಂಕಕಾಱರುಂ ಬೀರರುಂ ಬೀರವಣಿಗರುಂ ಗಂಧಿಗರುಂ ಗಾವುಂಡರುಂ ಗಾವುಂಡಸ್ವಾಮಿಗಳುಂ ಇನ್ತು ಭಲ್ಲುಂಕಿದಂಡಹಸ್ತರುಂ ಆನೆಯೇ ಭೇರಿಯಾಗಿ ಭೇರಿಯೇ ಮದ್ದಳೆಯಾಗಿ ಬೆಳುಗೊಡೆಗಳೇ ನೆಳಲಾಗಿ ಮಹಾಸಮುದ್ರಮೇ ನೀರ್ಗ್ಗಾರಿಗೆಯಾಗಿ ಇಂದ್ರನೇ ಕರಗವಳನಾಗಿ ವರುಣನೇ ಗಳೆವಿಡಿವನಾಗಿ ಧನದನೇ ಭಂಡಾರಿಗನಾಗಿ ನವಗ್ರಹಂಗಳೇ ಕಂಕಣವಾಗಿ ರಾಹುವೇ ತೊಂಗಲಾಗಿ ಕೇತುವೇ ಸುರಿಗೆಯಾಗಿ ಕುಳಿಕನೇ ಮೊನೆಯಾಗಿ ಚಂದ್ರಾದಿತ್ಯರ್ಕ್ಕಳೇ ಬೆಂಬಲವಾಗಿ ಮೂವತ್ತಮೂದೇವರ್ಕ್ಕಳೇ ನೋಟಕ್ಕರಾಗಿ ಕ್ಷಮೆಯೆಂಬ ಬಾಳಂ ಕಿರ್ತ್ತು ಕ್ರೋಧ ಶತ್ರುವೆಂಬ ಹಗೆವನಱಿದು ಕಾದಿಗೆಲ್ದ ಭಟರಿಯ ಮಕ್ಕಳ ಡಮರುಗಪರೆ ನಿರ್ಘ್ಘೋಷಣರುಮಪ್ಪ ಶ್ರೀಮದಯ್ಯಾವೊಳೆಯ್ಯೈನೂರ್ವ್ವಸ್ವಾಮಿಗಳು ತಮ್ಮೊಳೊಳ್ಪಿದರುಂ ನಿರ್ಮ್ಮಳತೇಜರುಂ ತೇಜತೇಜೋತ್ತುಂಗರುಂ ಸತ್ಯದಲು ಗಾಂಗೇಯರಂನರುಂ ಚಲದಲು ದುರ್ಯೋಧನನಂನರುಂ ದೋರ್ವ್ವಲದಲು ಭೀಮಸೇನನಂನರುಂ ಆನೆಯನ್ನೆ ಮುಟ್ಟಿ ಕೊಲುವರುಂ ಹಸುವಿನಂತೆ ನಿಂದು ಕೊಲುವರುಂ ಹಾವಿನಂತೆ ವಿಷವೆ ಕೊಲುವರುಂ ಸಿಂಹದಂತೆ ಸೀರ್ದ್ದು ಕೊಲುವರುಂ ಬೃಹಸ್ಪತಿಯಂತೆ ಬುದ್ಧಿವಂತರುಂ ನಾರಾಯಣನಂತುಪಾಯಕರ್ತ್ತಾರರುಂ ನಾರದರಿಷಿಯಂತೆ ಕಲಹ ಸಂಪೂರ್ಣ್ಣರುಂ ಬೆನ್ನೇಱ ಮಿರ್ತ್ತುಗರವರು ಹೋಹ ಮಾರಿಯ ಚಲ್ಲವಾಡುವರುಂ ಬಹ ಮಾರಿಯನಿದಿರ್ಗ್ಗೊಳುವರುಂ ಪಟ್ಟಿರ್ದ್ದ ಹುಲಿಯುಂ ಕೆಣಕುವರುಂ ಕೆಸರಂ ಕಿಚ್ಚಿಡುವರುಂ ಮಣಲ ಸರವಿಯುಂ ಹೊಸೆವರುಂ ಸಿಡಿಲುಂ ಪಿಡಿದು ತೋರ್ಪ್ಪರುಂ ಚಂದ್ರಾದಿತರ್ಕ್ಕಳಂ ನೆಳಕಿಳಿಹುವರು ಈಶ್ವರ ಭಟ್ಟಾರಕನ ನೊಸಲಕಣ್ಣು ಚತುರ್ಭುಜಮುಮಂ ಬ್ರಂಹ್ಮರಟ್ಟಹಾಸಮುಮಂ ಭಗವತಿಗುನ್ಮಥಮುಮಪ್ಪ ತ್ರೈಳೋಕ್ಯವಾಕ್ಯವಚನಂಗಳಂ ಸಾಧಿ

ಸುವ ಸಾಧಕನಂತೆ ತ್ರೈಳೋಕ್ಯಮಂ ಸಾಧಿಸುವ ಗುಡ್ಡಶಾಸ್ತ್ರದವಯುವ ಲಕ್ಷಣಂಗಳನಱಿದು ನುಡಿವಂಗಡಿವಂದಿಗ್ಗಳಿಂ ದೆಸೆಮುಸಗಿ ಬಪ್ಪ ವಸುಂಬೆಗಂ ಕಣಪರುಪ ಕರ್ತ್ತರಿಗಂ ಮುರಿದುಬಿರ್ದ್ದ ಪೆಣಕ್ಕಂ ಸೂಜಿವೋದ ಚೆಂಡಕ್ಕಂ ಎತ್ತಿದ ಸೆತ್ತರ ಕೂಱಿಂಗ ಪಟ್ಟಪಾಳಕ್ಕಂ ಪಾಯ್ದ ಬಲಿಗಂ ಮೊಱೆಯೆಂಬ ಶಬ್ದಕ್ಕಂ ಸಮೆಯಧರ್ಮಕ್ಕಂ ಕೂಡಿದ ಸಘುತಕ್ಕಂ ಮಾಡಿದ ವ್ಯವಸ್ಥೆಗಂ ತಪ್ಪುವರಲ್ಲರು ತೊಂಗಲಿನಂತೆ ಪೊಗೆವನ ತಲೆಯುಂ ಕೊಂಡು ಪಟ್ಟಿಗೆಯನ್ತೆ ಪಗೆವನ ಹಸ್ತವಂ ಕಟ್ಟಿ ಮೆಱೆವರುಂ ಪಣವನೊಲ್ಲರು ಪೆಣಕ್ಕೆನಲ್ಲರುಂ ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮದಯ್ಯಾವೊಳೆಯಯ್ಯೂರ್ವ್ವರಸ್ವಾಮಿಗಳ್[4]

5

ಸ್ವಸ್ತಿ ಸಮಸ್ತಭುವನಭವನ ವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯ ಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರ ಬಳಂಜಧರ್ಮ್ಮ ಪ್ರತಿಪಾಳನವಿಶುದ್ಧ ಗುಡ್ಡಧ್ವಜವಿರಾಜಮಾನಾನೂನ ಸಾಹಸಲಕ್ಷ್ಮೀ ಸಮಾಲಿಂಗಿತ ವಿಶಾಲವಕ್ಷಸ್ಥಳರುಂ ಸಾಹಸದಿಂ ಕಾರ್ತ್ತಿಕೇಯನಂ ಶೌರ್ಯದಿಂ ವೈನತೇಯನಂ ಶೌಚದಿಂ ಗಾಂಗೇಯನಂ ಸತ್ಯದಿಂ ರಾಧೇಯನಂ ದಾನದಿಂ ವರ ಸುರಭೂಜಮಂ ಚಲದಿಂ ಕುರುರಾಜನಂ ಧರ್ಮದಿಂ ಯುಧಿಷ್ಠಿರನಂ ಧೈರ್ಯ್ಯದಿಂ ಮೇರುವಂ ಗಾಂಭೀರ್ಯ್ಯದಿಂ ರತ್ನಾಕರಮಂ ಕ್ಷಮೆಯಿಂ ಧರಿತ್ರಿಯಂ। ಶರಣಾಗತರ್ಗೆ ವಜ್ರಪಂಜರಮಂ ಪೋಲ್ತು ವಾಸುದೇವ ಖಂಡಲೀಮೂಳಭದ್ರವಂಶೋದ್ಭವರುಂ ಭಗವತೀದೇವಿಲಬ್ಧ ವರಪ್ರಸಾದರುಮೆನಿಸಿದ ದ್ವಾತ್ರಿಂಶದ್ವೇಳಾ(ಪುರ)ಮುಮಷ್ಟಾದಶ ಪಟ್ಟಣಮುಂ ಚೌಶಷ್ಟಿ.... ಗೈದಿ ಗವಱೆಗರುಂ ಗಾತ್ರಿಗರುಂ ವೇಳಕಾಱರುಂ ಬೀರರುಂ ಬೀರವಣಿಗರುಂ ಗವುಂಡರುಂ ಗಾವುಂಡಸ್ವಾಮಿಗಳುಮಯ್ಯಾವೊಳೆ ಪುರಮುರಮೇಶ್ವರರುಮಪ್ಪ ಶ್ರೀಮದಯ್ಯೂರ್ವ್ವರ್[5]

6

ಸ್ವಸ್ತಿ ಸಮಸ್ತ ಭು[ವ] ...... ನೇಕಗುಣಗಣಾಳಂಕ್ರಿತ ಸ... ನೂನ ವೀರ ಬಳಂಜಧ[ರ್ಮ] .. . [ಗುಡ್ಡಧ್ವಜ] ವಿರಾಜಮಾನರ್ ದ್ವಾತ್ರಿಂಶ... ಚೌಶಷ್ಟಿಯೋಗಪೀಠಮುಮಱುವತ್ತ........ ಗವಱೆಯರುಂ ಗಾತ್ರಿಗರುಂ ಸೆಟ್ಟಿಯ........ ಭಲ್ಲುಂಕಿದ ಣ್ಡಿಹಸ್ತರುಂ ವೇಳಾಂಬರ .... ಹಾಸಪೂರ್ಣ್ಣರುಂ ಕಾರ್ಯ್ಯ .... ಮದ್ದಳೆಯಾಗೆ ದಿಗ್ಗಜಂಗಳೇ .. ನಾಗೆ ಸಮುದ್ರಮೇ ಸಿಂಗ್ಗಾರಿಗೆಯಾಗೆ ವರುಣನೇ ಕರಗ[ಬಳ]

---

4. ಎ. ಕ. VII ಶಿಕಾರಿಪುರ 118 ಬಳ್ಳಿಗಾವೆ (ಕ್ರಿ. ಶ. 1054).
5. ಸೌ. ಇ. ಇ. IX-i 118 ಹಿರೇಹಡಗಲಿ (ತಾ) ಹಡಗಲಿ (ಕ್ರಿ. ಶ. 1054).

ನಾಗೆ ತಾರಾಬಳಮೋ ಬಳಮಾಗೆ ಚಂದ್ರಾದಿತ್ಯರ್ಕ್ಕಳೇ . ಯೆಂಬ ಪಲಗೆಯಂ ಬರೆದು...ಅಭಿಮಾನಮೆಂಬ ಸುರಿಗೆಯಿಂ ಕಲಿಕ್ರೋಧಮೆಂಬ ಸತ್ರುವನಿರಿದು ಕಾದಿ ಗೆಲ್ದ ಭಗವತಿಯ ಮಕ್ಕಳು ಶ್ರೀಮತು ಎಂಟುನಾಡಪದಿನಱುವರುಂ ಅಯ್ಯಾವೊಳೆ ಪುರಪರಮೇಶ್ವರರಪ್ಪ ಅಯ್ಯೂರ್ವ್ವಸ್ವಾಮಿಗಳ್[6]

7

ಸ್ವಸ್ತಿ ಸಮಸ್ತಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕ ವೀರಬಳಂಜುಧರ್ಮ್ಮ ಪ್ರತಿಪಾಳಕರುಂ ಭದ್ರವಂಶೋದ್ಭವರು ಭಗವತೀ ದೇವಿಲಬ್ಧ ವರಪ್ರಸಾದರುಂ......[7]

8

ಸ್ವಸ್ತಿ ಸಮಸ್ತ ಭುವನ ವಿಖ್ಯಾತಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯ ಶೌಚಾಚಾರ ಚಾರುಚಾರಿತ್ರ ನಯವಿನಯ ವೀರಬಳಂಜ ಧರ್ಮ್ಮಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ ಖಂಡಳಿ ಮೂಳಭದ್ರೋದ್ಭವ ದ್ವಾ(ದ್ವಾ)ತ್ರಿಂಸ ವೇಳಾಮವಪ್ರಮಷ್ಟಾದಸ ಪಟ್ಟಣಮುಂ ಚೌಷಷ್ಟಿಯೋಗ ಪೀಠಮುಂಮಱುವತ್ತುನಾಲ್ಕು ಘಟಿಕಾಸ್ಥಾನಮುಮಯ್ಯಾವೊಳೆ ಪುರಪರಮೇಶ್ವರರಾ ಶರಣಾಗತ ವಜ್ರಪಂಜರರುಂ ಪಿರಿದಿತ್ತು. ಮಱಿವರು ಮಱಿವುಗೆ ಕಾವರುಂ ಪರನಾರೀ ಸಹೋದರರುಂಮಾಶ್ರಿತಜನ ಕಲ್ಪವೃಕ್ಷರುಂ ನಾಮಾದಿ ಸಮಸ್ತಪ್ರಶಸ್ತಿ ಸಹಿತಂ[8]

9

... ವಸ್ತು ವಿಸ್ತೀರ್ಣ್ನಘೂರ್ಣಿತಾರ್ಣ .... ಸಮವಿಖ್ಯಾತ ... ನೇಕಗುಣಗಣಾಳಂಕ್ರಿತ ಸತ್ಯಸೌಚಚಾರುಚಾರಿತ್ರ ನಯವಿನಯ ವೀರಬಣಂಜುಧರ್ಮ್ಮಪ್ರತಿಪಾಳನ ವಿಸುದ್ಧಗುಡ್ಡಧ್ವಜ ವಿರಾಜಮಾನಮಾನೂನ ವೀರಲಕ್ಷ್ಮೀ...ಭುವನ ಪರಾಕ್ರಮೋಂನತರುಂ ಬಲದೇವ ವಾಸುದೇವ...ದ್ರವಂಶೋದ್ಭವರುಂ ಭಗವತೀಲಬ್ಧ ವರ ಪ್ರಸಾದರುಂ ದ್ವಾತ್ರಿಂಸತು ವೇಳಾದಿ(ವ)ರ ಅಷ್ಟಾದಸ ಪಟ್ಟಣ ಚೌಸಟ್ಟಿಯೋಗಪೀಠ ಮೊದಲಾಗೆ ಸಕಳ... ಶ್ರಯಂ ಪುಟ್ಟೆ ಕ್ರಿ[ತ*]ಯುಗ ತ್ರೇತೆ ದ್ವಾಪರ ಕಲಿಯುಗ ಮೊದಲಾಗೆ ಬ್ರಹ್ಮವಿಷ್ಣುಮಹೇಶ್ವರಮ[ತಂ] ನೆಲಂ ಪಸುಂಬೆಯಾಗೆ ಅಷ್ಟ

---

6. ಸೌ. ಇ. ಇ. IX-i 139 ಹೊಳಲ (ತಾ) ಹಡಗಲಿ (ಕ್ರಿ. ಶ. 1074).
7. ಮೈ. ಆ. ರಿ. 1928 ನಂ 103 ಗಂಗವಳ್ಳಿ (ತಾ) ಸೊರಬ (ಕ್ರಿ. ಶ. 1077).
8. ಎ. ಕ. VII ಶಿಕಾರಿಪುರ 95 ಬಳ್ಳಿಗಾವೆ (ಕ್ರಿ. ಶ. 1094).

ಲೋಕಪಾಳ......ಕಾರಣರುಮಪ್ಪ ಶ್ರೀಮದಯ್ಯಾವಳೆಯ ಆಯಿನ್ನೂರ್ವ್ವರ್ಸ್ವಾಮಿಗಳು[9]

10

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಸತಚಿ(ವೀ)ರಸಾಸನ ಲಬ್ಧಾನೇಕ ಗುಣಗಣಾಳಂಕೃತ ಸತ್ಯಸೌಚಾಚಾರ ಚಾರಿತ್ರ ನಯವಿನಯ ವಿನ್ನಾ(ಜ್ಞಾ)ನ ವೀರ ಬಣಂಜಸಮಯ ಧರ್ಮ್ಮಪ್ರತಿಪಾಳನ ವಿಸುದ್ಧಗುಡ್ಡಧ್ವಜ ವಿರಾಜಿತಾನೂನ ವಾಸುದೇವ ಕಣ್ಡಳೀಮೂಳಭದ್ರೋದ್ಭವರುಂ ಸಮಸ್ತ ಭಲ್ಲುಂಕಿದಣ್ಡಹಸ್ತರಯ್ಯಾವೊಳೆಪುರಪರಮೇಶ್ವರಾಚಾರ ಕಲಿಗಳಪ್ಪ ಶ್ರೀಮದಯ್ನೂರ್ವ್ವರ್ಸ್ವಾಮಿಗಳು[10]

11

ಸ್ವಸ್ತಿ ಸಮಸ್ತ ಗುಣಗಳಾಳಂಕ್ರಿತ ಚಾರುಚಾರಿತ್ರ ನಯವಿನಯ ವಿನೂನ ವೀರ ಬಳಂಜಧರ್ಮ್ಮಪ್ರತಿಪಾಳನ ಗುಡ್ಡಧ್ವಜ ವಿರಾಜಿತ ಮಾನೋನ್ನತರುಂ ಖಣ್ಡಳಿ ಮೂಳ ಭದ್ರೊದ್ಭವರುಂ ಭಲ್ಲುಂಕೆ(ಕಿ)ದಣ್ಡಹಸ್ತರು ಶರಣಾಗತ ವಜ್ರಪಂಜರರ್ವೈರಿ ಭೇರುಣ್ಡರುಂ ಪಂಚಸತ ಗೋತ್ರಾನ್ವಯರುಮಪ್ಪೈನೂರ್ವ್ವರು[11]

12

ಸ್ವಸ್ತಿ ಸಮಸ್ತ ಗುಣಗಣಾಳಂಕ್ರಿತ ಚಾರುಚಾರಿತ್ರ ನಯವಿನಯ ವೀರ ಬಳಂಜಧರ್ಮ್ಮ ಪ್ರತಿಪಾಳ ಗುಡ್ಡಧ್ವಜ ವಿರಾಜಿತಮಾನೋನ್ನತರುಂ ಖಣ್ಡಳೀಮೂಲ ಭದ್ರೊದ್ಭವರುಂ ಭಲಾಕದಣ್ಡಹಸ್ತರುಂ ಶರಣಾಗತ ವಜ್ರಪಂಜರರುಂ ವೈರಿ ಭೇರುಂಡರುಂ ಪಂಚಸತ ಗೋತ್ರಾನ್ವಯರುಮಪ್ಪೈನೂರ್ವ್ವರು[12]

13

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನ ಲಬ್ಧಾನೇಕ ಗುಣಗಣಾಳಂಕೃತ ಸತ್ಯಶೌಚಾಚಾರ ಚಾರುಚರಿತ್ರ ನಯವಿನಯ ವಿಜ್ಞಾನ ವೀರಬಳಂಜುಧರ್ಮ್ಮ ಪ್ರತಿಪಾಳನವಿಶುದ್ಧ ಗುಡ್ಡಧ್ವಜ ವಿರಾಜಮಾನಾನೂನ ಸಾಹಸೋತ್ತುಂಗ ಕೀರ್ತ್ಯಂಗನಾಲಿಂಗಿತ ನಿಜಭುಜೋಪಾರ್ಜ್ಜಿತ ವಿಜಯಲಕ್ಷ್ಮೀ

9. ಸೌ. ಇ. ಇ. XX 63 ಯರಗಲ್ಲ (ತಾ) ಸಿಂದಗಿ (ಕ್ರಿ. ಶ. 1098).
10. ಸೌ. ಇ. ಇ. XI-ii 148 ಹನಮನಹಾಳ (ತಾ) ರೋಣ (ಕ್ರಿ. ಶ. 1099).
11. ಸೌ. ಇ. ಇ. XI-ii 158 ಎಲಿಶಿರೂರ (ತಾ) ಗದಗ (ಕಿ. ಶ. 1109).
12. ಸೌ. ಇ. ಇ. XI-ii 172 ಶಿರೋಳ (ತಾ) ಗದಗ (ಕ್ರಿ. ಶ. 1121).

ನಿವಾಸ ವಕ್ಷಸ್ಥಳರುಂ ಭುವನ ಪರಾಕ್ರಮೋನ್ನತ ವಾಸುದೇವ ಖಣ್ಡಲೀ ಮೂಳ ಭದ್ರವಂಶೋದ್ಭವರುಂ। ಭಗವತೀಲಬ್ಧ ವರಪ್ರಸಾದರುಂ। ತಾವು ಕಾದಿ ಸೋಲದರುಂ। ಮಜುವಕ್ಕ ಮಾರಿಗಳುಂ। ಪರಸ್ತ್ರೀ ಪರಧನ ವರ್ಜ್ಜಿತರುಂ ಚತುಷಷ್ಟಿಕಳೆಗಳೊಳ್ ಪ್ರವೀಣರಪ್ಪುದರಿಂ। ಬ್ರಹ್ಮಸನ್ನರುಂ। ಚಕ್ರಮುಳ್ಳುದರಿಂ ನಾರಾಯಣನನ್ನರುಂ। ದೃಷ್ಟಿಯೊಳ್ನೋಡಿ ಕೊಲ್ವುದಱಿಂ। ಕಾಳಾಗ್ನಿರುದ್ರರನನ್ನರುಂ। ಕೊನ್ದರನರಸಿ ಕೊಲ್ವುದಱಿಂ। ಪರಶುರಾಮನನ್ನರುಂ। ತುಳಿದು ಕೊಲ್ವುದಱಿಂ ಮದಾನ್ಧ ಗಂಧ ಸಿಂಧುರದನ್ನರುಂ। ಗಿರಿದುರ್ಗ್ಗಮುಂ ಮಱಿಪೊಕ್ಕರಂ ತೆಗೆದು ಕೊಲ್ವೆಡೆಯೊಳ್ ಸಿಂಹದನ್ನರುಂ। ಪಾತಾಳಮುಂ ಪೊಕ್ಕರಂ ಕೊಲ್ವೆಡೆಯೊಳ್ ವಾಸುಗಿಯನ್ನರುಂ। ಆಕಾಶಮೊಳಿರ್ದ್ದರಂ ಕೊಲ್ವೆಡೆಯೊಳ್ ಗರುತ್ಮನನ್ನರುಂ। ಪೆಂಪಿನಲ್ ಪ್ರಿಥ್ವಿಯನ್ನರುಂ। ಬಿಣ್ಪಿನಲ್ ಕುಲಗಿರಿಯನ್ನರುಂ। ಗುಣ್ಪಿನಲ್ಮಹಾಸಮುದ್ರದನ್ನರುಂ। ಉದ್ಯೋಗದಲ್ ರಾಮನನ್ನರುಂ। ಪರಾಕ್ರಮದೊಳ್ ಪಾರ್ಥನನ್ನರುಂ। ಶೌಚದೊಳ್ ಗಾಂಗೇಯನನ್ನರುಂ। ಸಾಹಸದೊಳ್ಭೀಮನನ್ನರುಂ। ಧರ್ಮ್ಮದಲ್ ಧರ್ಮ್ಮಪುತ್ರನನ್ನರುಂ। ಜ್ಞಾನದಲ್ಸಹದೇವನನ್ನರುಂ। ತ್ಯಾಗದಲ್ಕರ್ಣ್ಣನನ್ನರುಂ। ತೇಜದಲಾದಿತ್ಯನನ್ನರುಂ। ಅಪಿಚ ತ್ರಮೆಸಿಸುವ ಅಯ್ಯಾವಳೆ ಪುರಪರಮೇಶ್ವರರುಮಪ್ಪ ಯ್ಯೂರ್ವ್ವಸ್ವಾಮಿಗಳು[13]

14

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಣಂಜ [ಧರ್ಮ್ಮಪ್ರ]ತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ ಸಾಹಸೋತ್ತುಂಗ ಕೀರ್ತ್ತಿಂಗನಾಲಿಂಗ ನಿಜಭುಜವಿಜಯಲಕ್ಷ್ಮೀನಿವಾಸವಕ್ಷಸ್ಥಳ ಭುವನ ಪರಾಕ್ರಮೋನ್ನತ ವಾಸುದೇವ ಖಣ್ಡಲೀಮೂಳಭದ್ರವಂಶೋದ್ಭವರುಂ ದ್ವಾತ್ರಿಂಶದ್ವೆಲ್ಗವರುಮಮಷ್ಟಾದಶ ಪಟ್ಟಣಮುಮಱುವತ್ನಾಲ್ಕು ಘಟಿಕಾಸ್ಥಾನಮುಂ ನಾನಾದೇಶಾಭ್ಯಂತರದೆಂಟುನಾಡಪದಿನಱುವರುಂ ಗವಱೆಗರುಂ ಗಾತ್ರಿಗರುಂ ಸೆಟ್ಟಿಯರುಂ ಸೆಟ್ಟಿಗುತ್ತರುಂ ಬಚ್ಚರುಂ ಬಳೆಗಾಱರುಂ ಗಂಧಿಗರುಂ ಗಾವುಂಡರುಂ ಗಾವುಂಡಸ್ವಾಮಿಗಳುಂಮರಸುಗಳುಂಮರಸುಮಕ್ಕಳುಂಮಂಕರುಂಕಮೆರೆವರುಂ ಬಿರುದರುಂ ಬೀರವಣಿಗರುಂ ಬಾರಿಕರುಂ ಬಾರಿಕಜನಸಹಸ್ರರುಂ ಸಾಸಿರದ ಏಳ್ನೂರು ಗವಱೆಗಳುಂ ಮಪಿಚ್ಚತ್ರವಿಸಿಗ್ಗ್ಗತರುಂಮಯ್ಯಾವಳೆ ಪುರಪ್ರರಮೇಶ್ವರರುಂ ಶ್ರೀ ಭಗವತೀದೇವೀಲಬ್ಧವರ ಪ್ರಸಾದಾದ್ಯನೇಕ ನಾಮಾಂಕಮಾಳವಿರಾಜಿತರುಮಪ್ಪ ಶ್ರೀಮದಯ್ಯೂರ್ವ್ವಸ್ವಾಮಿಗಳು[14]

13. ಎ. ಇ. XIX ಪುಟ 30–34 ಕೊಲ್ಹಾಪುರ (ತಾ) ಕೊಲ್ಹಾಪುರ (ಕ್ರಿ. ಶ. 1135).
14. ಎ. ಇ. XIX ಪುಟ 35-39 ಮಿರಜ (ತಾ) ಮಿರಜ (ಕ್ರಿ. ಶ. 1142).

15

ಅಯಿಸೂರ್ವ್ವರ ನಾಮಾವಳಿಯೆಂತೆಂದಡೆ ಸಮಸ್ತಭುವನವಿಖ್ಯಾತ ಪಂಚಸತವೀರಸಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಸೌಚಾಚಾರ ಚಾರು ಚಾರಿತ್ರಾನೇಕ ಗುಣ .... ನೂನ ವೀರಬಳಂಜುಧರ್ಮ್ಮ ವಿಸುದ್ಧ ಗುಡ್ಡಧ್ವಜ ವಿರಾಜಮಾನಾನೂನ ಸಾಹಸವೀರಲಕ್ಷ್ಮೀಲಿಂಗಿತವಿಶಾಳವಕ್ಷಸ್ಥಳರುಂ ಭುವನ ಪರಾ ಕ್ರಮೋನ್ನತರುಂ ವಾಸುದೇವ ಕಂಡಳೀಮೂಳಭದ್ರವಂಸೋದುಭವರುಂ ಭಗವತೀ ....ವರಪ್ರಸಾದ ....ಷ್ಟಾದಸಪಟ್ಟಣ ಚೌಸಸ್ಟಿಯೋಗಪೀಠ ಸಕಳದಿಗಾಶ್ರಯ ನಾನಾದೇಶಾಭ್ಯಂತರ ....ಪುಟ್ಟಿ ಪ್ರಿ ......ಮೊದಲಾಗಿ ಬ್ರಹ್ಮವಿಷ್ಣುಮಾಹೇಶ್ವರ ಮತಂ ನೆಲಂ ಹಸುಂಬೆಯಾಗಿಯಷ್ಟಲೋಕಪಾಳಕರು ಹ.... .... ರವಾಗೆ ಚೊ(ಬೊ)ಕ್ಕಣವೊಳವಸುಂಜೆಯಾಗೆ ಖಟ್ವಾಂಗ ಕೋಲಾಗೆ ಕೂರಸಿ ವರ ಸುರಿಗೆಯಾಗೆ ಚಕ್ರ ... ವಾಗೆ ವಸ್ತುಗಳೆ ವಸ್ತುವಾಗೆ ಚೇರ ಚೋಳ ಪಾಂಡ್ಯ ಮಳಯ ಮಗಧ ಕೋಶಳ ಸೌರಾಷ್ಟ್ರ ದಂಷ್ಟ್ರಾಕುರುಂಧ ಕಾ .... ಸಿಂಧು .... ಬಬ್ಬರಂಪಾರಸದ್ವೈಕಪಾದ ಲಂಬಕರ್ನ್ನಸ್ತ್ರೀರಾಜ್ಯಘೋಳಾಮು. ಮೆಂಬ ನಾನಾದೇಶ ದೇಶಾಂತರ ....ಗಳ ॥ಕಂದ॥ ಭದ್ರಹಸ್ತಿಜಾತ್ಯಸ್ವಂಗಳಂ ಕೊಂಡಿಂದ್ರನೀಲಚಂದ್ರಕಾಂತಮರಕತಕ .... ನೀಳ ವಜ್ರ .... ನಾನಾವಸ್ತುಗಳಂ ಕೊಂಡೇಲಾ ಲವಂಗ ಚಂದನ ಖಚರಕಕತ್ತುರಿ ಕುಂಕುಮ ಶುಗಂಧ ..... ಲಾಂತುಂ ಸುಂಕಮಂ ಚಕ್ರವರ್ತಿಯಲ್ಲಿ ಹ(ಪ)ರಿಯಾ(ಹಾ)ರಂ ಬಡೆದು ಮಾಣಿಕೇಸ್ವರ ....ಚತುಸ್ಸಮಯ ಷಡ್ದರ್ಷನ ವಿಶಿಷ್ಟ ವಿದಗ್ಧ ಪಂಡಿತಮುನಿಜಸಂಗಳುಗೆ ನಿಚ್ಚ .... ದೇವರಾಗಿ ಬಗೆದು ಧರ್ಮ್ಮಾರ್ತ್ಥಕಾಮ ಭೋಗಂಗಳಂ ಸುಖದಿನುಭವಿಸುತ್ತಿರ್ಪ್ಪ ಮಹಿಷ ಗಾರ್ದ್ದಭ ವಾಹನರುಂ .... ವಿಭೂಶಿತ ....ಟುನಾಡ ಪದಿನಱುವರುಂ ಗವಱೆಗಾತ್ರಿಗರುಮಂಕಕಾರರುಂ ಬೀರರುಂ ಬಿರುದರುಂ ಸೆಟ್ಟಿಯರುಂ ಸೆಟ್ಟಿಗುತ್ತರುಂ ಗೌಡುಗಳುಂ ಗಾವುಂಡು ಸ್ವಾಮಿಗಳುಂ......ಭಲ್ಲುಂಕಿದಂಡಹಸ್ತರಾಜ್ಞಿಯಾನೆಯೆ ಭೇರಿಯಾಗೆ ಭೇರಿಯೆ ಮದ್ದಳೆಯಾಗೆ ಬೆಳುಗೊಡೆ ನೆಳಲಾಗೆ ನೆಲಂ ಕಳನಾಗೆ, ... ಯಾಗೆ ಸಮುದ್ರ ನೀರ್ಗ್ಗ(ರ್ಗ್ಗ)ದಿ(ಳಿ)ಯಾಗೆ ಚಂದ್ರಾರ್ಕ್ಕರುಂ ಬೆಂಬಲವಾಗೆ ರಾಹುವೆ ತೊಂಗಲಾಗೆ ಕೇತುವೆ ಸುರಿಗೆಯಾಗೆ ಸಿಡಿಲೆ ಕೋಲಾಗೆ ಕುಳಿಶ ಮೊನೆಯಾಗೆ .ಂಗಳೆ ....ನಾಗೆ ಧನದಂ ಭಂಡಾರಿಗನಾಗೆ ಮೂವತ್ತುಮೂದೇವರುಂ ನೋಟಕರಾಗೆ ದೇವರ ದಿಬ್ಯಾಯುಧಂಗಳು ತಮಗಾಯುಧವಾಗೆ ಕ್ಷಮೆಯೆಂಬ ಬಾಳ ಕಿತ್ತು ಶತ್ರುವೆಂಬ ಬಾಗೆಯುದಿಱಿದು ಕುಳಿಗೆಲುದ ಭಟಾರಿಯ ಮಕ್ಕಳು ಡಮರುಗ ಪಱೆಘೋಸಣರುಂ ಶ್ರೀಮದಯ್ಯಾವೊಳೆಯ ಪುರವರಾಧೀಶ್ವರರುಂ ಲೋಕೈಕ ವೀರರುಂ ಲೋಕೈಕಮಾನ್ಯರುಂ ಕಲಹಂಸಪೂರ್ನ್ನರುಂ ತಮ್ಮೊಳೊಳ್ಳಿದರುಂ......

ಕಾದಿ ಸೋಲದರುಂ ನಾನಾನಾಥ ಸಮುಯೋಧಾ(ದ್ಧಾ)ರಣ ವೈರಿಗೊಂಡಳ ಚತುರ್ಮ್ಮುಖರುಂ ಪರಸಮಯ ಕಿರಾತಕುಳಧೂಮಕೇತುಗಳಪ್ಪ ಶ್ರೀಮದಯ್ಯಾವೊಳೆಯ ಅಯ್ನೂರ್ವ್ವಸ್ವಾಮಿಗಳುಂ[15]

16

ಸ್ವಸ್ತಿ ಸಮಸ್ತ ವಸ್ತುವಿಸ್ತೀರ್ಣ್ಣ ಘೂರ್ಣ್ಣಿತಾರ್ಣವ ನಿನಾದ ಪ್ರಣುತಾನುತ ಭುವನವಿಖ್ಯಾತ ಪಂಚಶತವೀರಶಾಸನ ಲಬ್ಧಾನೇಕ ಗುಣಗಣಾಳಂಕೃತ ಸತ್ಯ ಶೌಚಾಚಾರ ಚಾರುಚರಿತ್ರ ನಯವಿನಯ ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನರಪ್ಪ ಶ್ರೀಮದಯ್ಯಾವೊಳೆಯಯ್ನೂರ್ವ್ವರ್ ಸ್ವಾಮಿಗಳು[16]

17

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯ ಶೌಚಾಚಾರ ಚಾರುಚಾರಿತ್ರ ನಯನವಿನಯ ವಿಜ್ಞಾನ ವೀರಸಮಯ ಬಣಂಜುಧರ್ಮ್ಮ ಪ್ರತಿಪಾಳಕರಪ್ಪ ಶ್ರೀಮದಯ್ಯಾವೊಳೆಯಯ್ನೂರ್ವ್ವಸ್ವಾಮಿಗಳು[17]

18

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪದಂ(ಪಂಚ)ಶತವೀರಸಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯ ಸೌಚಾಚಾರ ಚಾರಿತ್ರ ನಯವಿನಯ ವಿಜ್ಞಾನ ವೀರಬಣಂಜು ಧರ್ಮ್ಮ ಪ್ರತಿಪಾಳಕ ವಿಸುದ್ಧ ಗುಡ್ಡಧ್ವಜ ವಿರಾಜಿತಾನನ್ತ ಸಾಹಸ...ವೀರಲಕ್ಷ್ಮೀಲಿಂಗಿತ ವಿಶಾಲ ವಕ್ಷಸ್ಥಳ ಭುವನ ಪರಾಕ್ರಮೋನ್ನತರುಂ ವಾಸುದೇವ ಖಂಡಳೀಮೂಳಭದ್ರವಂಶೋದ್ಭವರುಂ ಭಗವತೀದೇವೀಲಬ್ಧ ವರಪ್ರಸಾದರುಂ ಅಯ್ಯಾವೊಳೆಯ ಪುರವರಾಧೀಶ್ವರರ್[18]

19

...............ರ ಸಾಹಸಭೀಮರುಂ ...... ಕಲ್ಪವೃಕ್ಷರುಂ............ ದೇರಗ್ಯಟು ಸಾಮರ್ಥ್ಯವೇಸದ .... ರುಂ ... ... ಜಗತ್ ಪ್ರಕಾ....... ಸಾರ................. ಚಾಳುಕ್ಯಪದ ...... ಶಪಪ್ಪ ... ರೆನಿಸಿ ....ಸಮಸ್ತ ವಸ್ತುವಿಸ್ತೀರ್ಣ್ಣ ಕ್ಷೋಣೀ

15. ಸೌ. ಇ. ಇ. XX 112 ಸಂಸಿ (ತಾ) ಕುಂದಗೋಳ (ಕ್ರಿ. ಶ. 1144?).
16. ಎ. ಇ. V ಪುಟ 19-20 ಮನಗೂಳಿ (ತಾ) ಬಾಗೇವಾಡಿ (ಕ್ರಿ. ಶ. 1161).
17. ಕರ್ನಾಟಕ ಭಾರತಿ : 11-2 ಏಕ್ಸಂಬಾ (ತಾ) ಚಿಕ್ಕೋಡಿ (ಕ್ರಿ. ಶ. 1165).
18. ಸೌ. ಇ. ಇ. XV 106 ಹುಯಿಲಗೋಳ (ತಾ) ಗದಗ (ಕ್ರಿ. ಶ. 1166).

ತಾರ್ಣ್ಣವ...... ವಿಖ್ಯಾತ ..... ಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತರು ಸತ್ಯಶೌಚಾಚಾ......... ರು ಚಾರಿತ್ರ ನಯವಿನಯ ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳ....... ವಿಶುದ್ಧ ಗುಡ್ಡಧ್ವಜ ವಿರಾಜಿತರುಂ ಅನೂನ ಸಾಹಸ ಸಮಗ್ರರುಂ ಬೀರ ವಿಶಾಳವಕ್ಷಸ್ಥಳರುಂ ಬಲದೇವ ವಾಸುದೇವ ಕಂಡಳೀ ಮೂಳಭದ್ರ ... ವರುಮಪ್ಪ ಶ್ರೀಮದಯ್ಯಾವೊಳೆಯಯ್ನೂರ್ವ್ವರು[19]

20

ಸ್ವಸ್ತಿ ಸಮಸ್ತ ವಸ್ತುವಿಸ್ತೀರ್ಣ್ನ ಘೂರ್ಣ್ನಿತಾರ್ಣ್ನವಪರೀತ ಭೂತಳ ಭುವನವಿಖ್ಯಾತರುಂ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಶರೀರರುಂ ಸತ್ಯಶೌಚಾಚಾರ ಚಾರುಚಾರಿತ್ರ ನಯವಿನಯಜ್ಞಾನ ವೀರಬಣಂಜು ಧರ್ಮ್ಮ ಪ್ರತಿಪಾಳನ ವಿಶುದ್ಧ ಗುಡ್ಡಧ್ವಜವಿರಾಜಿತಾನೂನ ಸಾಹಸ ಸತ್ಯಾಚಾರ ವೀರಲಕ್ಷ್ಮೀ ಸಮಾಲಿಂಗಿತ ವಿಶಾಳವಕ್ಷಸ್ಥಳರುಂ ಬಲದೇವ ವಾಸುದೇವ ಕಂಡಳಿ ಮೂಲಭದ್ರವಂಶೋದ್ಭವರುಮಪ್ಪ ಶ್ರೀಮದಯ್ಯಾವಳೆಯಯ್ನೂರ್ವ್ವರು ಸ್ವಾಮಿ ಗಳು[20]

21

...... ಯ್ನೂರ್ವ್ವರನಸಂಖ್ಯಾತ .....ಪಂಚಶತವೀರಸಾಸನ ಲಬ್ಧಾನೇಕ ಗುಣಂಗಳ ಸತ್ಯಶೌಚ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಳಂಜು ....ಧರ್ಮ ಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ ಸಾಹಸಾಲಿಂಗಿತ ವಿಶಾಳವಕ್ಷಸ್ಥಳ .... ಪರಾಕ್ರಮೋಂನತ ವಾಸುದೇವ ಖಣ್ಡಳೀಮೂಳಭದ್ರೋದ್ಭವ ಬ್ಬರಲ್ಲುಂಕದಂಣ್ಡಹಸ್ತರಯ್ಯಾವೊಳೆ ಪುರವರೇಶ್ವರ......[21]

22

ಸಮಸ್ತ ಭುವನ ವಿಖ್ಯಾತ ಪಂಚಸತವೀರಸಾಸನ ವಚಾಗುಣಗಣ ನಾಮಾಂಕಿತ ಸತ್ಯ ಶುಭ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಣಂಜಧರ್ಮ ಪ್ರತಿಪಾಳಿ ತರಪ್ಪ ಶ್ರೀಮದಯಿನೂರುಸ್ವಾಮಿಗಳು[22]

---

19. ಹಿ. ಕ. ಸ್ಟ. ರಿ. ಅ. ಐ. ಸಂ. 83 ಅಡಕಿ (ತಾ) ಸೇಡಂ (ಕ್ರಿ. ಶ. 1172).
20. ಹಿ. ಕ. ಸ್ಟ. ರಿ. ಅ. ಐ. ಸಂ. 84 ಅಡಕಿ (ತಾ) ಸೇಡಂ (ಕ್ರಿ. ಶ. 1172).
21. ಸೌ. ಇ. ಇ. XV 124 ಬೆಳ್ವಡ (ತಾ) ಗದಗ (ಕ್ರಿ. ಶ. 1174).
22. ಹಿ. ಕ. ಸ್ಟ. ರಿ. ಅ. ಐ. ಸಂ. 88 ಚಿಮ್ಮಳ್ಗಿ (ತಾ) ಅಫಜಲಪುರ (ಕ್ರಿ. ಶ. 1175).

23

ಸ್ವಸ್ತಿ[ಸ*]ಮಸ್ತ ವಸ್ತುವಿಸ್ತರ [ವಾರ]ಪರೀತ ವಾರಿಧಿ[ಪರೀ]ತ ವಿಶೇಷ ಭುವನ ವಿಖ್ಯಾತ ಪಂಚಸತವೀರಸಾಸನಪದವೀ ಪ್ರಸಿದ್ಧರುಂ ತತ್ವಜ್ಞಾನ ನಯ ವಿನಯ ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನರುಂ ವೀರಲಕ್ಷ್ಮೀ ವಿಶಾಳವಕ್ಷಸ್ಥಳರುಂ ಬಲದೇವ ವಾಸುದೇವ ಕಣ್ಡಳೀಮೂಲವಂಶೋದ್ಭವರುಂ ಭುವನ ಪರಾಕ್ರಮೋಂನತರುಮಪ್ಪಯಯ್ಯಾವೊಳೆಯಯನೂರ್ವ್ವಸ್ವಾಮಿಗಳು[23]

24

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತವೀರಸಾಸನ ಲಬ್ಧಾನೇಕ ಗುಣ ಗಣಾಳಂಕ್ರಿತ ಸತ್ಯಸೌಚ ಚಾರುಚಾರಿತ್ರ ನಯವಿನಯ ವಿಭೂನ(ವಿಜ್ಞಾನ) ವೀರಬಣಂಜಧರ್ಮ್ಮ ಪ್ರತಿಪಾಳಕರಪ್ಪ ಶ್ರೀಮತ್ ಅಯ್ಯಾವೊಳೆಯ್ಯೆನೂರ್ಬ್ಬ ಸ್ವಾಮಿಗಳು[24]

25

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತವೀರಸಾಸನ ಲಬ್ಧಾನೇಕ ಗುಣ ಗಣಾಳಂಕ್ರಿತ ಸತ್ಯ ಶೌಚ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಣಂಜು ಧರ್ಮ್ಮ ಪ್ರತಿಪಾಲನರ್[25]

26

ವಿಸ್ತೀರ್ಣ್ನ ವಿಸ್ತೀರ್ಣ್ನೀತಾರ್ಣ್ನವವೇಳಾವಳಯಿತ ಸಕಳ ಜಗತೀತಳ ಖ್ಯಾತ ಪಂಚಶ ... ನೇಕಗುಣ[ಗಣಾಳಂ]ಕ್ರಿತಸತ್ಯಶೌಚಾಚಾ[ರ] ಚಾರುಚಾರಿತ್ರ ನಯ ವಿನಯ ವಿಜ್ಞಾನ ವಿ... ವೀರಬಣಂಜುಧರ್ಮ್ಮ ಪ್ರತಿಪಾಳನ ವಿಸುದ್ಧಗುಡ್ಡಧ್ವಜ ವಿರಾಜಿತಾಸೂನ ಸಾಹಸ ಸತ್ಯ... ಲಕ್ಷ್ಮಿ... ...ಸ್ಥಳ[ರುಮಪ್ಪ] ಪರಾಕ್ರಮೋಂನ [ತರುಮ]... ತೋತ್ಪತ್ತಿ... ಲ ವಾಸುದೇವ ಖಂಡ[ಳಿ] ಮೂಳಭದ್ರವಂಶೋದ್ಭ ರುಂ... ಳಕಳಕುಳ[ವಾ]ರ್ದ್ಧಿ ವರ್ದ್ಧನ[ದಿವಾ]ಕರರು... ಕರಣ ಸಕಳಶಾಸ್ತ್ರ ಪಾರಾ ವಾರಗರುಪಪ್ಪ ತ್ರಿ[ಂ]ಶತು ದೇಶಾ... ಮುಂ ಅಷ್ಟಾದಸ ಪಟ್ಟಣಮುಂ ಯೋಗ ಮುಂ... ಘಟಿಕಾಸ್ಥಾನಂಗಳು[ಮೆಸೆಯೆ] ನಾನಾದೇಶಾಭ್ಯಂತರದ... ಳುಂ ಗಾತ್ರಿ ಗರುಂ ಸೆಟ್ಟಿಯರುಂ ಸೆಟ್ಟಿ[ಗುತ್ತ]ರುಂ ಗಾವು[ಂ]ಡುಗಳುಂ ಗಾವುಂಡಸ್ವಾಮಿ ಬಿರು

---

23. ಸಾ. ಇ. ಇ. XX 165 ವಿಜಾಪುರ (ತಾ) ವಿಜಾಪುರ (ಕ್ರಿ. ಶ. 1176).
24. ಹೈ. ಆ. ಸಿ. III 32 ಅಲಂಪೂರ (ತಾ) ಅಲಂಪುರ (ಕ್ರಿ. ಶ. 1182).
25. ಎ. ಕ. VI ತರೀಕೆರೆ 10 ದುಗ್ಗಲಾಪುರ (ಕ್ರಿ. ಶ. 1184).

ವರ... ವಣಿಗರುಂ ಚಾರಿಕರುಂ... ವವರುಂ ಪೋಹ ಮಾರಿ ಪ್ರ್ವ ಮಾರಿ ಯಾಡಿರ್ಗಾ...ಗೊಟ್ಟರುಂ ಬ್ರಹ್ಮಾಂಡಮನು... [ಗೊಂ] ಬರುಂ ಕೆಸರಕಿಚ್ಚಿ [ಡುವರುಂ]...ಸರ[ಧಿ]ಯ ಹೊಸೆವರುಂ ಹರಿದ ಭಂಡಿಯ ಕಾ...ರುಂ ಸತ್ಯ ರಾಧೇಯರುಂ ಶೌಚಾಗಾಂಗೇಯರುಂ ನುಡಿದಂತೆ ಗಂಡರುಂ ಶ್ರೀಪದ್ಮಾವತೀದೇವಿ ವರಪ್ರಸಾದರುಮಪ್ಪ ಶ್ರೀ[ಮದಯ್ಯಾ]ವ...[26]

27

ಸ್ವಸ್ತಿ ಸಮಸ್ತ ಸುವರ್ಣ್ಣ ಘೂರ್ಣ್ಣಿತಾರ್ಣ್ಣವ ಪಂಚಶತವೀರ ಶಾಸನ ಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯಶೌಚಾಚಾರ ಚಾರಿತ್ರ ನಯವಿನಯ ವಿಜ(ಜ್ಞಾ)ನ ವೀರಬಣಂಜುದಂಮ್ಮಾ... .... ವಿಶುದ್ಧ ಗುಡ್ಡಧ್ವಜ ವಿರಾಜಮಾನ ಸಾಹಸ ಸಮಾಲಿಂಗಿತ ವಕ್ಷಸ್ಥಳ ಭುವನ ಪರಾಕ್ರಮೋನ್ನತರುಂ ಬಲದೇವ ವಾಸುದೇವ ಖಂಡಳಿ ಮೂ ....[27]

28

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತ ವೀರಶಾಸನಲಬ್ಧಾನೇಕ ಗುಣ ಗಳಾ(ಣಾ)ಳಂಕ್ರಿತ ಸತ್ಯ ಶೌಚಾಚಾರರುಂ ತ್ರಿನಯವಿನಯರುಂ ಬಲದೇವ ವಾಸುದೇವ ಖಂಡಳಿ ಮೂಳೇಂದ್ರ ವಂಶೋದ್ಭವರುಂ ಭಗವತೀಲಬ್ಧವರ ಪ್ರಸಾದರುಮಪ್ಪ ಶ್ರೀಮದಯ್ಯಾವೊಳೆಯಯ್ನೂರ್ವ್ವರ್ಸ್ವಾಮಿಗಳು[28]

29

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾ ಳಂಕೃತ ಸತ್ಯಶೌಚ ಚಾರುಚರಿತ್ರ ನಯವಿನಯ ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ ಸಾಹಸ ಸತ್ಯಬಳ ವೀರಲಕ್ಷ್ಮೀ ಲಿಂಗಿತ ವಕ್ಷಸ್ಥಳ ಭುವನ ಪರಾಕ್ರಮೋಂನತರುಂ ವಾಸುದೇವ ಖಂಡಳೀಮೂಳಭದ್ರ ವಂಶೋದ್ಭವರುಂ ಭಗವತೀದೇವಿಲಬ್ಧ ವರಪ್ರಸಾದರುಂ ಏಕೈಕವೀರರುಂ ಕಲಹ ಸಂಪೂರ್ಣ್ಣರುಂ ಎಕ್ಕೋಟಿಯ ಗುಡ್ಡದಯಿನೂರ್ಬ್ಬರುಂ .... ನ ಪ್ರಧಾನರುಂ ಎಕ್ಕೋಟಿಯ ದ್ವಾತ್ರಿಂಶವೇಳಾ ..... ರರುಂ ಅಷ್ಟಾದಶಪಟ್ಟಣಕ್ಕೆಲ್ಲಾಂ ಫಣಿಯ ಫಣಾಮಣಿಯಪ್ಪಂತಿರ್ದ್ದಯ್ಯಾವಳೆಯಯಿನೂರ್ವ್ವರ್ಸ್ವಾಮಿಗಳ ಪೂರ್ಬ್ಬಾವತಾರ

26. ಸೌ. ಇ. ಇ. XV 65 ಕೊಣ್ಣೂರ (ತಾ) ಜಮಖಂಡಿ (ಕಿ.ಶ. 1185).
27. ಎ. ಕ. VII ಹೊನ್ನಾಳಿ 90 ಕುಣಿಗಲುಘಟ್ಟ (ಕ್ರಿ. ಶ. 1185).
28. ಇ. ಸಾ. ಕ. ಕೊ. ಸ್ಪೇ. ಸಂ. 15 ಶಿರಸಂಗಿ (ತಾ) ಸವದತ್ತಿ (ಕ್ರಿ. ಶ. 1186).

ಮೆಂತೆಂದಡೆ ಬಲದಲು ....ಯುಂನರುಂ ಚಲದಲು ದುರ್ಯ್ಯೋಧನನಂನರುಂ ತ್ಯಾಗದಲು ಕರ್ಣ್ಣನಂನರುಂ ಸತ್ಯದಲು ಧರ್ಮ್ಮಪುತ್ರನಂನರುಂ ಸಾಹಸದಲು ಭೀಮನಂನರುಂ ಪರಾಕ್ರಮದಲು ಫಲ್ಗುಣನಂನರುಂ ಅಜಿತದಲು ಸಹದೇವನಂನರುಂ ಸೌರ್ಯ್ಯದಲು ಗಾಂಗೇಯನಂನರುಂ ತೇಜದೊಳಾದಿತ್ಯನಂನರುಂ ಭೋಗದಲು ದೇವೇಂದ್ರನಂನರುಂ ಕೋಪದೊಳಗ್ನಿಯಂನರುಂ ಗಾಂಭೀರದಲು ಮಹಾಸಮುದ್ರನಂನರುಂ ಬಿತ್ತು ದಣಿಯದುದಱಿಂ ಕಲ್ಪವಿಕ್ಷನಂನರುಂ ರೂಪಿನಲು ಕಾಮದೇವನಂನರುಂ ಕಾದಿ ಸೋಲದುದಱಿಂ ಧನ್ವಂತರಾಮನಂನರುಂ ನರವಡೆ ನಂಜು ಹರಿದಡೆ ಮಂಜುವ ಪಾದಸೇಖರರುಂ ಸರಣಾಗತ ವಜ್ರಪಂಜರರುಂ ಪರನಾರೀ ಸಹೋದರರುಂ ಭಯಲೋಭವರ್ಜ್ಜಿತರುಂ ನುಡಿದು ಮತ್ತೆಂನದರುಂ ಮಱೆಯುಗೆ ಕಾವರುಂ ಕೆಸಱ ಕಿಚ್ಚಿಡುವರುಂ ಮಣಲ ಸರವಿಯ ಹೊಸವರುಂ ಹುಲಿಯ ಮೀಸೆಯನುಯ್ಯಾಲಾಡುವರುಂ ಕಾಳೋರಗನವಿಡಿದು ಮುಂಡಾಡುವರುಂ ನಂಜನಂಜಲಿಸುವರುಂ ಆನೆಯ ಭೇರಿಯೆ ಮದ್ದಳೆಯಾಗೆಯುಂ ಆಕಾಶವೆ ಬೆಳ್ಗೊಡೆಯಾಗೆಯುಂ ಸುರಚಕ್ರವರ್ತ್ತಿಯರುಸಾಗೆ ಅಗ್ನಿಯೇ ಕಳನಾಗೆಯುಂ . ದಿರಪದೇ ಮೇಳೆಯವಾಗೆಯುಂ ಚಂದ್ರನೆ ಚಂದ್ರಬಲವಾಗೆ ಆದಿತ್ಯನೆ ಬೆಂಬಲವಾಗೆ ತಾರಕೆಗಳೆ ಕೈದೀವಿಗೆಯಾಗೆ ನಕ್ಷತ್ರಮೆ ಹೂಮಾಲೆಯಾಗೆ ಜವನೆ ಸುರಿಗೆವಿಡಿವನಾಗೆ ......ದೇವನೆ ಗಳೆವಿಡಿವನಾಗೆ ವರುಣನೆ ಕರಗವಿಡಿದವನಾಗೆ ಧನದನೆ ಭಂಡಾರಿಯಾಗೆ ....ಳಿರಾ ನಂದಿಕೇಸರನೆ ವಾದ್ಯವಾಳನಾಗೆ ಜವನೆ ದಿಬ್ಯಾಯುಧಂಗಳ .... ದೇವಾದಿಗಳು ನೋಟಕರಾಗೆ ಶಂಕೆಕಹಳೆ ಜೇಘಂಟೆ ಜಗ .... ಮುಂ ತೇಜನೆಂಬ ತಿಮಿರನೇಱಿಸಿಕೊಂಡು ನ್ಯಾಯಮೆಂಬ ವೀರಮದ್ದಳೆ ...... ಯುಂ ತೊಟ್ಟು...... ಮೆಂಬ ಹಲಗೆಯುಂ ಪಿಡಿದು ನಾಣೆಂಬ........ಳಂ .. . ಕ್ರೋಧಮೆಂಬ ಶತ್ರುವವಿಱಿದು ಕಾದಿ ಗೆಲ್ದ ಸ .... ಕಾರ್ಯ್ಯ........ರು[29]

30

ಸ್ವಸ್ತಿ ಸಮಸ್ತವಸ್ತುವಿಸ್ತೀರ್ಣ್ಣ ಭುವನ ವಿಖ್ಯಾತ ಪಂಚಶತವೀರಸಾಸನ ಲಬ್ಧಾನೇಕ ಗುಣಗಣಾಳಂಕೃತ ಸತ್ಯಸೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಾವತಾರ ಬಣಂಜುಧರ್ಮ್ಮಪ್ರತಿಪಾಳನ। ವಿಶುದ್ಧ ಗುಡ್ಡಧ್ವಜ ವಿರಾಜಮಾನಾನೂನ ಲಕ್ಷ್ಮೀ ಸಮಾಲಿಂಗಿತ ವಿಶಾಳವಕ್ಷಸ್ಥಳ ತ್ರಿಭುವನ ವೀರ ಪರಾಕ್ರಮೋಂನತರುಂ ಶ್ರೀವಾಸುದೇವ ಖಂಡಳೀಮೂಳಭದ್ರವಂಶೋದ್ಭವರುಂ ಭಲ್ಲುಂಕೆ(ಕಿ)ದಂಡಹಸ್ತರುಮಪ್ಪ ಶ್ರೀಮದಯ್ಯಾವೊಳೆಯೈನೂರ್ವ್ವಸ್ವಾಮಿಗಳು[30]

29. ಸೌ. ಇ. ಇ. XV 211 ಮೇವುಂಡಿ (ತಾ) ಮುಂಡರಗಿ (ಕ್ರಿ. ಶ. 1196).
30. ಸೌ. ಇ. ಇ. IX-i 391 ಕುರವತ್ತಿ (ತಾ) ಹರಪನಹಳ್ಳಿ (ಸು. ಶ. 12).

31

ಸ್ವಸ್ತಿ ಸಮಸ್ತ ಭುವನ ವಿಖ್ಯಾತರುಂ ಪಂಚಸತವೀರಸಾಸನ ಲಬ್ಧಾನೇಕ ಗುಣಗಣಾಳಂಕ್ರಿತರುಂ ಸತ್ಯಸೌಚಚಾರುಚರಿತ್ರ ನಯವಿನಯ ವಿಜ್ಞಾನರುಂ ವೀರ ಬಣಂಜುಧರ್ಮ್ಮಪ್ರತಿಪಾಳರುಂ ವಿಶುದ್ಧ ಗುಡ್ಡಧ್ವಜರುಂ ವಿಶಾಳ ವಕ್ಷಸ್ಥಳರುಂ ಭುವನ ಪರಾಕ್ರಮರುಂ ವಾಸುದೇವ ಕಂಣ್ಡಳಿಮೂಳ ....ಶೋದ್ಭವರುಂ ಭಲ್ಲುಂಕಿದಂಡಹಸ್ತರುಂ[31]

32

ಶ್ರೀ ಸ್ವಸ್ತಿ ಸಮಸ್ತ ಭುವನವಿಶ್ರುತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಚಾರುಚರಿತ್ರ ನಯವಿನಯ ವಿಜ್ಞಾನ ವೀರಾವತಾರ ವೀರ ಬಣಂಜುಧರ್ಮ ಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ ಸಾಹಸ ಸತ್ವ ಬಳ ವೀರಲಕ್ಷ್ಮೀ ಸಮಾಲಿಂಗಿತ ವಕ್ಷಸ್ಥಳ ಭುವನ ಭವನ ಪರಾಕ್ರಮೋನ್ನತರುಂ ವಾಸುದೇವ ಖಂಡಣರೊಳು ಭದ್ರವಂಶೋದ್ಭವರುಂ ಭಗವತೀದೇವಿ ಲಬ್ಧವರ ಪ್ರಸಾದರು ಶ್ರೀಮದಯ್ಯಾವಳೆಯಯ್ನೂರ್ವ್ವ ಸ್ವಾಮಿಗಳು[32]

33

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಶತವೀರಸಾಸನಲಬ್ಧಾನೇಕ ಗುಣ ಗಣಾದ್ಯಂ....ತ್ಯಸೌಚಾಚಾರ ಚಾರುಚಾರಿತ್ರ ನಯವಿನಯವ ಖಿಣ್ಡಿತ ವೀರ ಬಣಂಜುಧರ್ಮ್ಮ ... ವಿಸುದ ಗುಡ್ಡಧ್ವಜ ವಿರಾಜಿತಮಾನ ಸಾಹಸ ಸಮ ....ತ ವಾಸುದೇವ ಖಣ್ಡಳಿಮೂಲಭದ್ರೋದ್ಭ ದ್ವಾಶಿಂಸದ್ವ ... ಯಾಸಬರ ಮೂವತ್ತಟು [ವ*]ತ್ತನಾಲ್ಕು ಘಟಿಕಸ್ಥಾನಮುಂ ನಾಲ್ವ... ಗವರೆಗಳುಂ ಗಾತ್ರಿಗರುಮಂಕಕಾ ಜರುಂ ಬೀರರುಂ ... ವರುಂ ಸಮಸ್ತ ಭಲೂಕದಂ. ಹಸ್ತಕ ....[33]

34

ಸ್ವಸ್ತಿ ಸಮಸ್ತ ಭುವನಾಶ್ರಯ ಲೋಕವಿಖ್ಯಾತ ಪಞ್ಚಸತವೀರಸಾಸನಲಬ್ಧಾ ನೇಕ ಗುಣಗಣಾಳಂಕ್ರಿತ ನಯವಿನಯ ಜ್ಞಾನ ವಿಜ್ಞಾನ ಬೀರಬಣಜಧರ್ಮ್ಮ ಪ್ರತಿ ಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಮಾನ ಸಹ ಸಮಾಳಿಂಗಿತ ವಕ್ಷಸ್ಥಳ ಭುವನ

---

31. ಸೌ. ಇ. ಇ. XX 299 ಕಡ್ಲೇವಾಡ (ತಾ) ಸಿಂದಗಿ (ಸು. ಶ. 12).
32. ಶಿವಾನುಭವ : 5–7 ಕೊಂಗವಾಡ - ವಿಜಾಪುರ ಜಿಲ್ಲೆ (ಸು. ಶ. 12).
33. ಎ. ಕ. III ನಂಜನಗೂಡ 359 ಕಳಲೆ (ಸು.ಶ. 12-13).

ಪರಸವಾನುತ ವಸುದೇವ ಖಣ್ಡಳಿಮೂಲ ಭದ್ರೋದ್ಭವ ದ್ವಾತ್ರಿಂಶ ದಳಾದುಳ ಮೂಯ ಮಾಸಪಟ್ಟಣಮು ಚವುಸಟ್ಟಿಯೋಗಪೀಠಮು ನಾನಾದೇಶಾಭ್ಯನ್ತರ ಮುಲ್ಲರೂವತ್ತನಾಲ್ಕು ಘಟಿಕಾಸ್ಥಾನಮುಂ ಎಣ್ಬನಾಡ ಪದಿನಜುವರುಂ ನಾಲ್ವದಾ ಸಾಲೆ ಗವಾಕ್ಷಿಗಳುಂ ಗಾತ್ರಿಗರುಂ ಗಾನ್ದಿಗರುಂ ಗಾವುಣ್ಡಸ್ವಾಮಿಯುಂ ಸೆಟ್ಟಿಗಳೂ ಸೆಟ್ಟಿಗುತ್ತರು ಸೇನಬೋವರುಂ ಏಕೇಕ ಬೀರರು ಕನಕನಸಮಿದ್ಧರುಂ ಸಮಸ್ತ ಬಲುಂಕೆಯ ದಣ್ಡಪಸ್ತರು ಆಚಾರಗಲಿಗಳುಂ ಕಳಹಸಪೂರ್ಣರಾನ್ನಯ ಬೇಲಿ ಯಾಗೆ ಜಜ್ಗಳಿಯ ನೆಟಿಲಾಗೆ ಜೇರಿಯ ಮನ್ದಳಿಯಾಗೆ ಪ್ರಿಥುವಿಯ ಕಳನಾಗೆ ಸಮುದ್ರಮ ಸಿಂಗ್ಗಾಡಿಗೆಯಾಗೆ ಜವಗೆ ಸರಿಗೆವಳ್ಳನಾಗೆ ಆದಿತ್ಯನ ಬಲಮ ಮಾಬಲ ಮಾಗೆ ಚನ್ದ್ರನ ಚನ್ದ್ರಬಲವಾಗೆ ನಕ್ಷತ್ರ ತಾರಾಗಣಗಳೆ ತೊಂಗಲಾಗೆ ತೆತ್ತೀಸ ಕೋಟಿ ದೇವರ್ಕಳೆ ನೋಟಕರಾಗೆ ವಿವರಮೆಂಬ ಕವಚಮಂ ತೊನ್ನೆಯೆಂಬ ಪಲ ಲಗೆಯ ಬಡಿ ಪೂನಾಣಂಬಯುಲುದಂ ಪೆಡೆದು ಚೇರ ಚೋಳ ಪಾಣ್ಡ್ಯ ಮಣ್ಡಳಿಕ ಸಾಮನ್ತ ಮಹಾಸಾಮನ್ತ ಚಕ್ರವರ್ತ್ತಿಗಳ್ ಮೊದಲಾಗೆ ನಾಮಧರ್ಮ್ಮಸೀಲಚಾರು ಗುಣಗಳಿಂ ಕಾವರಾಗಿ ಪಸುಜೆಯ ಜಪಸೀಳಾ...... ಞ್ದಪಮಯೆಪ ಬಳಂ ಕಿತ್ತಿ ಕೊಟ... ಖಿಚಕ್ರ ನಾಸಿಜಿದೂ ಕಾದಿಗೆಲ್ವ ಭಗವತಿಯ ಮಕ್ಕಳ್ ಪ್ರಿಯಕುಲಣಯ್ಯವ ಳರುಂ ಅಯ್ಯವಳೆಯ ಪುರಪರಮೇಶ್ವರಿಯ ಮಕ್ಕಳಪ್ಪ ಅಯ್ಯಾವ್ವಯಿಗಳ್.[34]

35

ಸ್ವಸ್ತ್ಯನೇಕಗುಣಗಣಾಳಂಕೃತ ಸತ್ಯಶೌಚಾಚಾರ ನಯವಿನಯ ಸಂಪನ್ನರುಂ ಆಶ್ರಿತಜನಪ್ರಸನ್ನರುಂ ಮಘಪಟ್ಟಪುರ ಪ್ರತಿಷ್ಠಿತ ಜಿನಮುನಿಜನೋಪದಿಷ್ಟ ಗುಡ್ಡ ಶಾಸ್ತ್ರ ಕ್ರಮ ಪರಿಪಾಳಿತ ವೀರಬಣಂಜುಧರ್ಮ್ಮರುಂ ಸಮಾಚರಿತ ಪುಣ್ಯಕರ್ಮ್ಮರುಂ ಪದ್ಮಾವತೀದೇವೀಲಬ್ಧ ವರಪ್ರಸಾದರುಂ ವಿಹಿತ ಸಕಳಜನಾಹ್ಲಾದರುಂ ನ್ಯಾಯೋ ಪಾರ್ಜ್ಜನ ವ್ಯವಹಾರ ಪ್ರಶಸ್ತರುಂ ಭಲ್ಲುಂಕಿದಂಡಹಸ್ತರು[35]

36

ಸ್ವಸ್ತಿ ಸಮಧಿಗತ ಭುವನವಿಖ್ಯಾತ ಪಂಚ[ಶತ*]ವೀರಸಾಸನಲಬುಧಾನೇಕ ಗುಣಗಣಾಳಂಕ್ರಿತರು ಸತ್ಯಸೌಚ ಚಾರುಚಾರಿತ್ರ ನಯವಿನಯ ವಿಜ್ಞಾನ ಧರ್ಮ್ಮ ಪ್ರತಿಪಾಳನರುಂ ಸುವರ್ಣ್ನ ಗುಡ್ಡಧ್ವಜರುಂ ಭಗವತೀಲಬುದ ವರಪ್ರಸಾದರುಂ[36]

---

34. ಎ. ಕ. X ಕೋಲಾರ 170 ಸೋಮಾಂಬುಧಿ (ಸು. ಶ. 12-13).
35. ಎ. ಇ. XIII ಪುಟ 19-22 ಬೆಳಗಾವಿ (ತಾ) ಬೆಳಗಾವಿ (ಕ್ರಿ. ಶ. 1204).
36. ಸೌ. ಇ. ಇ. XV 232 ದೇವರಹುಬ್ಬಳ್ಳಿ (ತಾ) ಧಾರವಾಡ (ಕ್ರಿ. ಶ. 1206).

37

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತವೀರಸಾಸನ ಲದ್ಭು(ಬ್ಧಾ)ನೇಕ ಗುಣಗಣಾಲಂಕ್ರಿತ ಸತ್ಯಸೌಚಾಚಾ(ರ ಚಾ)ರುಚಾರಿತ್ರ ನಯವಿನಯ ವಿನ್ಯಾ(ಜ್ಞಾ)ನ ವೀರಾವತಾರ ವೀರಬಣಂಜುಸಮಯಧರ್ಮ್ಮ ಪ್ರತಿಪಾಳಕರು[37]

38

ಸ್ವಸ್ತಿ ಸಮಸ್ತ ವಸ್ತುವಿಸ್ತೀರ್ಣ್ಣ ಘೂರ್ನ್ನಿತಾರ್ಣ್ನವ ನಿನದ ಪ್ರಣುತ...... ವಿಖ್ಯಾತ ವೀರಶಾಸನ ಲಬುಧಾನೇಕ ಗುಣಗಣಾಳಂಕ್ರಿತರುಂ ಸತ್ಯ . ಚಾರು ಚರಿತ್ರ ...ನಯ ವಿಜ್ಞಾನ ವೀರಬಣಂಜುಧರ್ಮ್ಮ ಪ್ರತಿಪಾಳಕರು[38]

39

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತ ವೀರಶಾಸನರುಮಪ್ಪ ಶ್ರೀಮದ ಯ್ಯಾವಳಿಯ ಅಈಸೂರ್ವ್ವಸ್ವಾಮಿಗಳ್[39]

40

ಸ್ವಸ್ತಿ ಸಮಸ್ತ ಭೆವನವಿಖ್ಯಾತ ಪಂಚಶತವೀರಸಾಸನಲಭ್ವಾನೇಕ ಗುಣಗ ಣಾಳಂಕ್ರಿತ ಸತ್ಯ ಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರವತಾರ ವೀರಬಣಂಜುಸಮಯ ಧರ್ಮ್ಮಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾಸೂನ ಸಾಹಸ ಸಮಾಲಿಂಗಿತ ವಿಶಾಳ ವಕ್ಷಸ್ಥಳ ಭುವನ ಪರಾಕ್ರಮೋನ್ನತರುಂ ಶ್ರೀಪದ್ಮಾ ವತೀದೇವೀಲಬ್ಧ ವರಪ್ರಸಾದರ್[0]

41

ಸ್ವಸ್ತಿ ಸಮಸ್ತ ವಸ್ತು ವಿಸ್ತೀರ್ನ್ನಘೂರ್ನ್ನಿತಾರ್ನ್ನವ ಪ್ರಣತಾನೂನ ಭುವನ ವಿಖ್ಯಾತ ಸರ್ಬ್ಬಶತವೀರಸಾಸನಲಬ್ಧಾನೇಕ ಗುಣಗಳಾಣ(ಗಣಾಳಂ)ಕ್ರಿತರುಂ ದಯಾ ದಾಕ್ಷಿಣ್ಯ ಕ್ಷಮಾ ಶೌರ್ಯ ವೀರ್ಯ್ಯ ....ಸುಜನಜನಮನೋಜರುಂ ಜಿನ ಪೂಜಾಪುರಸ್ಸರರುಂ ಜಿನಸಮಯವಾರ್ದ್ಧಿವರ್ಧ್ಧನಚಂದ್ರರುಂ ಶ್ರೀಮತ್ಪಾರುಶ್ವ

---

37. ಸೌ. ಇ. ಇ. XX 228 ಕಲಕೇರಿ (ತಾ) ಹಾನಗಲ್ಲ (ಕ್ರಿ. ಶ. 1207).
38. ಸೌ. ಇ. ಇ. XVIII 203 ನಿಡೋಣಿ (ತಾ) ವಿಜಾಪುರ (ಕ್ರಿ. ಶ. 1208).
39. ಎ. ಕ. XI ಹೊಳಲಕೆರೆ 124 ಚಿಕ್ಕಯುಗಟಿ (ಕ್ರಿ. ಶ. 1208?).
40. ಜ. ಬಾ. ಬ್ರ್ಯಾ. ರಾ. ಏ. ಸೊ X ಪುಟ 248–49 ನೇಸರಗಿ (ತಾ) ಬೈಲಹೊಂಗಲ (ಕ್ರಿ. ಶ. 1219).

ನಾಥ ಚರಣಾರವಿಂದಯುಗಳಭ್ರಿಂಗಾಯಮಾನರುಂ ರಾಯರಾಸ್ಥಾನ ಪೂಜ್ಯರುಂ ಸದ್ಧರ್ಮ್ಮ ಪ್ರತಿಷ್ಠಾಪಕರುಮಧರ್ಮ್ಮ ನಿವಾರಣರುಂ ಜಿನಗಂಧೋದಕ ಪವಿತ್ರೀಕ್ರಿತೋತ್ತಮಾಂಗರುಂ ಸಮ್ಯಕ್‌ರತ್ನಾಕರರುಂ ದುರಿತಕ್ಕೆ ದೂರರುಂ ಪರಸಮಯದ .... ನಿವಾರಣರುಂ ಬನವಸೆ ದೆಸೆಕಾಱರುಂ ನಾಗವಳ್ಚಿ ಸಮಯ ಸಮುದ್ಧರಣರುಂ ಶ್ರೀಬೀರಲಕ್ಷ್ಮೀನಂದನವನಾಭೀಷ್ಟವಸಂತಕರುಂ ಚೋಳಕುಳಾಂತಕರುಂ ಶರಣಾಗತ ವಜ್ರಪಂಜರರುಮಪ್ಪ ಶ್ರೀಮದಯ್ಯಾವಳೆಯಯ್ನೂರ್ವ್ವಸ್ವಾಮಿಗಳು[41]

42

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಾವತಾರ ವೀರಬಣಂಜು ಸಮಯಧರ್ಮ್ಮ ಪ್ರತಿಪಾಳಕರ್[42]

43

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತವೀರಸಾಸನ ಲಬ್ಧಾನೇಕ ಗುಣಗಣಾಳಂಕಿತರಪ್ಪ ಶ್ರೀಮದಯ್ಯಾಪೊಳೆಯಯಿನೂರ್ವ್ವಸ್ವಾಮಿಗಳುಂ[43]

44

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತವೀರಸಾಸನಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯಶೌಚಾಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಬಳಂಜಧರ್ಮ್ಮ ಪ್ರತಿಪಾಳಕರುಂ ಭಗವತೀದೇವಿಯ ಲಬ್ಧವರ ಪ್ರಸಾದರುಂ[44]

45

ಸ್ವಸ್ತಿ ಯಮನಿಯಮಸ್ವಾಧ್ಯಾಯಧ್ಯಾನಧಾರಣಮೌನಾನುಷ್ಠಾನಪರಾಯಣ ಜಪಸ್ಸಮಾಧಿಸೀಲಾದ್ಯನೇಕ ಗುಣಸಂಪಂನರುಂ। ವಿಬ್ಧಪ್ರಸಂನರುಂ। ಅಹಿಛತ್ರ ಪುರೀಲಲನಾ ಲಲಾಟ ತಿಳಕರು। ಶ್ರೀವೀರನಾರಾಯಣ ಭಗವತೀದೇವೀಲಬ್ಧವರಪ್ರಸಾದನ. ಗಂಡಸ್ತುಟಿಪ್ರಳಕರುಂ। ಚಾಳುಕ್ಯವಂಸಾಭ್ಯುದಯಕರಣಪರಮಾಸೀರ್ವ್ವಾದ ಶತಸಹಸ್ರ

41. ಸೌ. ಇ. ಇ. XV 164 ಕಂದಗಲ್ಲ (ತಾ) ಹುನಗುಂದ (ಕ್ರಿ. ಶ. 1220).
42. ಸೌ. ಇ. ಇ. XX 248 ಸವದತ್ತಿ (ತಾ) ಸವದತ್ತಿ (ಕ್ರಿ. ಶ. 1228).
43. ಕನ್ನಡ ಅಧ್ಯಯನಪೀಠ : ಚಿಕ್ಕಮುದ್ನೂರ (ತಾ) ಸುರಪುರ (ಕ್ರಿ. ಶ. 1229).
44. ಮೈ. ಆ. ರಿ. III ಮಹಬೂಬನಗರ 63 ವರ್ಧಮಾನಪುರಂ (ಕ್ರಿ. ಶ. 1229)

ವಚನೋದ್ಯೋಗ ಪ್ರಪಂಚರುಂ। ಸಾಪಾನುಗ್ರಹಸಮರ್ತ್ಥ ವಿರಿಂಚರುಂ। ಸ್ವರ್ಗ್ಗಾ ಪವರ್ಗ್ಗದುರ್ಗ್ಗಮಾರ್ಗ್ಗಸಾಧನಾನುಷ್ಠಾಣಪರಾಯಣರುಂ। ಯಜನ ಯಾಜನ ಅಧ್ಯಯನ ಅಧ್ಯಾಪನ ಪ್ರತಿಗ್ರಹ ಷಟುಕರ್ಮ್ಮನಿಯುತರುಂ। ರುಗ್ಯಜುಸಾಮಾಥರ್ವ್ವಣ ಚತುರ್ವ್ವೇದ ವೇದಾರ್ತ್ಥ ಪ್ರಮಾಣ ಪ್ರವೀಣರುಂ। ತರ್ಕ್ಕವ್ಯಾಕರಣಛಂದಸು ನಿಘಂಟುಭರತವಾದಿಯಾದಿ ಅನೇಕ ಶಾಸ್ತ್ರಪ್ರಮಾಣಪ್ರವೀಣರುಂ ವಾದಿಕುಳಕೋಳಾಹಳರುಂ। ಅವುಪಾಸಾಗ್ನಿಹೋತ್ರರ ದ್ವಿಜಗುರುಪೂಜಾತತ್ಪರರುಂ। ವಿದ್ವಾಂಸಕದಂಬಹೃತುಪದುಮಿನೀ ರಾಜಹಂಸರುಂ। ಭಾರತೀಕರ್ಣ್ನಾವತಂಸರುಂ। ಶಟುತರ್ಕ್ಕ ಕಂಜಮಂಜರೀ ಪುಂಜರಂಜಿತ ಬಾಲದಿವಾಕರರುಂ। ಬ್ರಹ್ಮವಂಶವಾರ್ದ್ಧಿವರ್ದ್ಧನ ಸುಧಾಕರರುಂ। ಹರಿಹರ ಹಿರಂಣ್ಯಗರ್ಬ್ಭಪಾದಾಂಭೋಜ ಚಂಚಚ್ಚಂಚರೀಕರುಂ। ಹರಹಾಸಕ್ಕಾಸ ಗಂಗಾಜಳಧವಳ ತರತ್ತರಂಗ ಸೀಹಾರಹಾರ ತಾರ ತಾರಾಚಳ ತಾರಾಧೀಶ ದಿವಿಜವುದ್ದಂಡ ಪುಂಡರೀಕ ದುಗ್ಧಾರ್ಣ್ನವ ಡಿಂಡೀರಿ ಪಿಂಡ ಪಾಂಡುರ ಹಿಮವದಚಳವಿಚಕಿಳಪಾಂಚಜನ್ಯೋಪಮಾನನಿರ್ಮ್ಮಳಕೀರ್ತ್ತಿಪತಾಕರುಂ। ಅಷ್ಟಾದಶಪುರಾಣಕಾಬ್ಯನಾಟಕ ನಾನಾಕಳಾ ಚಮತ್ಕಾರ ಭಂಗೀಭಾಸಣಕವಿಗಮಕವಾದಿ ವಾಗ್ಮಿಹೃದಯಾಕ್ರಿಷ್ಟ ಮಂತ್ರಾಕ್ಷರರುಂ ಪ್ರತಿಪಂನಸಿಲಾಕ್ಷರರುಂ। ದ್ವಾತ್ರಿಂಸತು ಸಹಸ್ರ ವಿಪ್ರಚೂಡಾಮಣಿಗಳುಂ। ಪರೋಪಕಾರ ಚಿಂತಾಮಣಿಗಳುಂ। ಚತುಸ್ಸಮಯ ನಿಸ್ತಾರಕರುಂ। ವೀರಬಣಂಜುಸಮಯ ಸಮುದ್ಧರಣರುಂ। ಪ್ರದ್ದಂಡ ಸಮಯ ಕದಳೀ ಕೋದಂಡನ ಕುಠಾರರುಂ ಪರಸಮಯ ಗಜಕೇಸರಿಗಳುಂ। ಸ್ವದೇಶಪರದೇಸ ಸ್ವಸ್ತಾನ ಪರಸ್ಥಾನ ಧರ್ಮ್ಮಾಧರ್ಮ್ಮನಿರ್ಣ್ನಯ ಸೂಕ್ಷ್ಮವಿಚಾರಪರರುಂ। ಆರಾತಿ ಬಳಕಂಜಕುಂಜರರುಂ। ಶರಣಾಗತವಜ್ರಪಂಜರರುಂ। ಮಾರ್ತ್ತಂಡೋಜ್ವಳಕೀರ್ತ್ತಿ ಯುತರುಂ। ಶ್ವೇತಛತ್ರ। ಚಾಮರಾದ್ಯನೇಕ ರಾಜ್ಯಲಕ್ಷಣಾಲಕ್ಷಿತರುಂ ರಾಜಗ್ರಿಹಪೂಜಿತರುಂ। ಸ್ವಸ್ತಿ ಸಮಸ್ತ ವಸ್ತು ವಿಸ್ತೀರ್ಣ್ನಘೂರ್ಣ್ನಿತಾರ್ಣ್ನವ ಪ್ರಣೂತಾನೂತ ಭುವನವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯಸೌಚಾ ಚಾರುಚಾರಿತ್ರ ನಯವಿನಯ ವಿಗ್ನಾನವೀರ ವೀರಾವತಾರ ವೀರಬಣಂಜುಸಮಯ ಧರ್ಮ್ಮಪ್ರತಿಪಾಲಕರುಂ। ನಯವಿನಯ ವಿಶುದ್ಧ ಗುಡ್ಡಗರುಡಧ್ವಜರುಂ। ವಿರಾಜಿತ ಮಾನಾನೂನ ವೀರಲಕ್ಷ್ಮೀ ಪುಳಕಿತಹರ್ಷ ಸದಾನಂದನರುಂ। ಸಾಹಸಸತಬಳ ತ್ರಿಭುವನಪರಾಕ್ರಮೋಂನತರುಂ। ಬಲದೇವ ವಾಸುದೇವ ಖಂಡಳಿಮೂಲಭದ್ರ ವಂಸೋದ್ಭವರುಂ। ಬಲುಕಿದಂಡಹಸ್ತರುಂ। ತಂಮೊಳೀಕಹಸ್ತರುಂ। ಏಕಯಿಕವೀರರುಂ। ಲೋಕೈಯ್ಕಮಾನ್ಯರುಂ। ನುಡಿದಂತೆ ಗಂಡರುಂ। ಗಂಡರೊಳು ಗಂಡರುಂ। ಕದನಪ್ರಚಂಡರು। ಭಯುಲೋಭಮರ್ಲ್ಲಭರುಂ। ಸತ್ಯರಾಧೇಯರುಂ। ಸೌಚಗಾಂಗೇಯರುಂ ಅಪೆತ್ತುಂ ಯೆರೆವಜೀಯದೆ ಸೋಲದರುಂ। ಸರೆವಡೆ ನಂಜುಗಳುಂ। ಹರವಡೆಮಂ...ಗಳುಂ। ಹೊಗೆವಲ್ಲಿ ಹುಲ್ಲಸಿಕ್ಕುವರುಂ। ಆಳಿಕಾಜರುಂ ಬಂಪಾಜಿ ಕಾಜಿರುಂ। ಕೊಲ್ಬುದಕೆ ಜವನಂಸರುಂ ಬಲನಲ್ಲಿ ವಾಲಿಯಂನರುಂ। ಛಲದಲು

ವಯ್ರೋಧನರುಂ। ತ್ಯಾಗದಲು ಕರ್ಣ್ನನಂನರುಂ। ಭೋಗದಲು ಇಂದ್ರನಂನರುಂ। ಗುಂ(ಣ್ಪಿ)ಪಿನಲು ಮಹಾಸಾಮುದ್ರಮಂ ಪೋಲವರುಂ। ದುಷ್ಟಚತುಷ್ಟಯರಲಚೆ ಪೊಟೆ ನಿಟಿಲುಗೋನಾಳಿಯುಂ ಮುಱಿದು ತೇದು ಬೂದಿ ಕೊಂಬರುಂ। ಬ್ರಹ್ಮರಾಕ್ಷಸಂಗೆ ಹೊಜಗೊಡ್ಡನೊಡ್ಡುವರುಂ। ಕೆಸಜ ಕಿಚ್ಚಿಡುವರುಂ। ದೆಸೆಗೆ ಬೊಬ್ಬಿಱಿವರುಂ। ಹೋಹ ಮಾರಿಯ ಚಲ್ಲವಾಡುವರುಂ। ಬಹ ಮಾರಿಯುಗಿದಿರ್ಗ್ಗೊಂಬರುಂ। ಬಾರದ ಮಾರಿಗೆ ಬಳಿಯನಂಟುವರುಂ। ಬಿದ್ದ ಮಾರಿಗೆ ಬಿದ್ದನಿಕ್ಕುವರುಂ। ಬಂಟಿಱಿಮಿತ್ತುವ ಕರೆವರುಂ। ಜವನ ಮೊಸೆಯನೊಲದುಯ್ಯಲಾಡುವರುಂ। ಮಿತ್ತುವಂ ತೊತ್ತಮಾಡಿಯಾಳುವರುಂ। ಅರಳಿಯ ಹೂತವಳಿಯುತಿಗುಡರಕ್ಕಸನ ದಾಡೆಯ ಬೆಳುದಿಂಗಳ ಸೊರೆಯ ಹೆಬ್ಬುಲಿಯ ಗಿಂಣು ಆಸಱಯ ಗೋಸನೆಯೆಂಬಿದಿ ಬೆಚಡವಂ ಪಿಡಿದು ಪಾದಮಾರ್ಗ್ಗ ಜಲಮಾರ್ಗ್ಗದಿ ನಾನಾ ಪಟ್ಟಣವಂ ಪೊಕ್ಕು ಚಕ್ರವರ್ತ್ತಿಯ ಮಾಣಿಕ್ಯಭಂಡಾರವಂ ತೀವಿ ಮಿಕ್ಕದ್ರಬ್ಯವನಾಹಾರಭಯಬೈಶಜ್ಯಶಾಸ್ತ್ರದಾನ ವಿನೋದಿಗಳುಂ। ಕಸ್ತೂರಿ ಕಾಮೋದರುಂ। ಹಯವತ್ಸರಾಜರುಂ। ರಾಜಗ್ರಹಪೂಜಿತರುಂ। ಆಶ್ರಿತಜನಕಲ್ಪವ್ರಿಕ್ಷರುಂ। ಗೋತ್ರ ಪವಿತ್ರ ಚಿಂತಾಮಣಿಗಳುಂ। ಕನಕಕಂಚುಳಿಕೆ ಕಾಮದೇವರುಂ। ಚೇಳಾಭರಣಭೂಸಿತರುಂ। ಶ್ರೀಮತು ಕನಕದೇವಸಕರುವಾಡದಲು ಪೊಸಂಬ ತೆತ್ತಿಸಿದ ಅಗಣಿತ ಪ್ರತಾಪಲಂಕೇಶ್ವರರುಂ। ಶ್ರೀವೀರಲಕ್ಷ್ಮೀನಂದನವನಾಭೀಷ್ಟವಸಂತರುಂ। ಚೋಳಕುಲಾಂತಕರುಂ। ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ। ಚತುರುಯುಗ ಚತುರಾಭಿಧಾನ ಪರಂಪರಾಯಮಾನಮಪ್ಪ ಶ್ರೀಮದನಾದಿಯಗ್ರಹಾರಂ ಬಣಂಜುದಾದಿವಟ್ಟಣಂ ಜಂಬೂದ್ವೀಪ ಶಿರೋಮಣಿ ಶ್ರೀಮತು ಭಗವತೀದೇವಿಲಬ್ಧವರಪ್ರಸಾದೋಂನತರುಮಪ್ಪ ಅ ಯ್ಯಾ ವ ಳೆ ಯ ಅಯ್ನೂರ್ವಸ್ವಾಮಿಗಳು.[45]

46

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಶೌಚಾರ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಾವತಾರ ವೀರಬಣಂಜುಸಮಯಧರ್ಮ್ಮ ಪ್ರತಿಪಾಳನ ವಿಶುದ್ಧ ಗುಡ್ಡಧ್ವಜ ವಿರಾಜಿತಾನೂನ ಸಾಹಸೋತ್ತುಂಗರುಂ ಪುಣ್ಯಪ್ರಸಂಗರುಂ। ಅಷ್ಟಪಟ್ಟಿ ಗುರೂತ್ಪತ್ತಿ ಬಲದೇವ ವಾಸುದೇವ ಖಣ್ಡಳೀ ಮೂಲಭದ್ರ ವಂಶೋದ್ಭವರುಂ ಅಹಿಚ್ಛತ್ರಪುರೀಲಲನಾಲಲಾಟತಿಳಕರುಂ। ಹರಿವಿರಿಂಚಿ ಪಂಚಾನನ ಜಿನೇಂದ್ರ ಪೂಜಾನಿರತರುಂ ಶ್ರೀ ಪದ್ಮಾವತೀದೇವಿಲಬ್ಧವರಪ್ರಸಾದರುಂ ವೀರನಾರಾಯಣ

45. ಎ. ಕ. VIII ಸೊರಬ 268 ದೇವಸ್ಥಾನಹಕ್ಕಲು (ಕ್ರಿ. ಶ. ಸು. 1245).

ದೇವಚರಣ ಸ್ಮರಣ ಪರಿಣತಾಂತಃಕರಣರುಮಪ್ಪ ಶ್ರೀಮದಯ್ಯಾವಳೆಯಯ್ನೂರ್ಬ್ಬರ್ಸ್ವಾಮಿಗಳು[46]

47

ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತವೀರಸಾಸನ ಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯಸೌಚ ಚಾರುಚಾರಿತ್ರ ನಯವಿನಯ ವಿಜ್ಞಾನವೀರಾವತಾರ ವೀರಬಣಂಜುಸಮಯಧರ್ಮ್ಮ ಪ್ರತಿಪಾಳಕರುಂ ವಿಶುದ್ಧ ಗುಡ್ಡಗರುಡಧ್ವಜರುಂ ವಿರಾಜಿತಾನೂನ ಸಾಹಸೋತ್ತುಂಗರುಂ ಕೀರ್ತ್ತ್ಯಂಗನಾವಲ್ಲಭರುಂ ನಿಜಭುಜ ವಿಜಯಲಕ್ಷ್ಮಾಲಿಂಗಿತ ವಿಶಾಲವಕ್ಷಸ್ಥಳರುಂ ತ್ರಿಭುವನ ಪರಾಕ್ರಮೋನ್ನತರುಂ ಅಹಿಚ್ಛತ್ರ ಪುರವರಾಧೀಶ್ವರರುಂ ಬಲದೇವ ವಾಸುದೇವ ಖಂಡಳಿ ಮೂಳಭದ್ರ ವಂಶೋದ್ಭವರುಂ ಬಲ್ಲುಂಕಿದಂಡಹಸ್ತರುಂ ಕನಕ ಕಂಚುಳಿಕೆ ಕಾಮದೇವರುಂ ಚೇಳಾಭರಣಭೂಷಿತರುಂ ಚೋಳಕುಳಾಂಸ್ವಿತರು ಚಾಳುಕ್ಯಾನ್ವಯರುಂ ಕಂ...ನ ಕರುವಾಡ ಹೊರಂಬಂ ತೆತ್ತಿಸಿದರು . ಜಂಬೂದ್ವೀಪ ... . ಅಯ್ಯಾವಳೆಯ ಯ್ನೂರ್ಬ್ಬರ್ಸ್ವಾಮಿಗಳುಂ[47]

48

ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಸತವೀರಸಾಸನಲಬ್ಧಾನೇಕ ಗುಣಗಣಾಳಂಕ್ರಿತ ಸತ್ಯ ಸವುಚಯ ಚಾರುಚಾರಿತ್ರ ನಯವಿನಯ ವಿಜ್ಞಾನ ವೀರಾವತಾರ ವೀರಬಣಂಜುಸಮೆಯ ಧರ್ಮ್ಮಪ್ರತಿಪಾಳಕರು[48]

49

ಸ್ವಸ್ತಿ ಸಮಸ್ತ ವಸ್ತು ವಿಸ್ತೀರ್ಣ್ನಪ್ರಾಮಾಣ್ಯ ಭುವನವಿಖ್ಯಾತ ಭರತಖಂಡ ದಕ್ಷಿಣ ದಿಶಾಭಾಗದ ಜಂಬೂದ್ವೀಪದ ಪಂಚಶತವೀರಶಾಸನರುಂ ಅನೇಕ ಗುಣ ಗಣಾಕ್ರಾಂತರುಂ ಕ್ರಿತಸತ್ಯವಿಹಿತ ಚಾರುಚಾರಿತ್ರರುಂ ನಯವಿನಯ ವಿಜ್ಞಾನ ವೀರಾವತಾರರುಂ ಸಾಲುಮೂಲೆ ಬಣಜು ಪರಿವಾರ ಸಮಯಧರ್ಮ್ಮಪ್ರತಿಪಾಲ ಕರುಂ ಮಾನೋನ್ನತರುಂ ಸಾಹಸೋತ್ತುಂಗರುಂ ಕೀರ್ತ್ತ್ಯಂಗನಾವಲ್ಲಭರುಂ ಭಲದೇವ ವಾಸುದೇವ ಖಂಡಳಿಮೂಳಭದ್ರೋತ್ತುಂಗ ಚಂಡಕೀರ್ತಿವಿಳಾಸ ವಂಶೋದ್ಭವರುಂ ಅಹಿಚ್ಛತ್ರ ಪುರವರಾಧೀಶ್ವರರುಂ ಆಚಾರಪುರುಷರುಂ ವಿಚಾರ ನಿರ್ಣಾಯಕರುಂ ಏಕೈಕವೀರರುಂ ಲೋಕೈಕಮಾನ್ಯರುಂ.......[49]

---

46. ಎ. ಇ. XIX ಪುಟ 19-26 ಮುದುದಾಪ್ಪುರ (ತಾ) ಗೋಕಾಕ (ಕ್ರಿ. ಶ. 1246).
47. ಎ. ಕ. IX ದೊಡ್ಡಬಳ್ಳಾಪುರ 31 ದೊಡ್ಡಬಳ್ಳಾಪುರ (ಕ್ರಿ. ಶ. 1267).
48. ಎ. ಕ. XI ಹೊಳಲಕೆರೆ 137 ಹೊನ್ನೇಕೆರೆ (ಕ್ರಿ. ಶ. 1307).
49. ಎ. ಕ. V ಬೇಲೂರ 75 ಬೇಲೂರ (ಕ್ರಿ. ಶ. 1382).

50

ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತ ಸತ್ಯ ಸಉಚಾಚಾರ ಚರಿತ್ರರುಂ ಚೇಳಾಭರಣ ಭೂಷಿತರುಂ ಮಱಿಬಗೆ ಕಾವರುಂ ಸಿಂಗಣದಿಪರ ಚಕ್ಕ್ರವರ್ತ್ತಿಯ ಪಟ್ಟದಾನ ಯುಂ ಪ್ರಧಾನನಂ ಕೊಂದ ಪರಬಳಮಲ್ಲರುಂ ಪಾಂಡ್ಯನ ಪಟ್ಟದಾನಿ ಪಸರವ ರೆಡ್ಡಿ ಪಡೆತಲೆಗೊಂಡ . ಲಿಗಳುಂ ಶ್ರೀಗಂಗವತಿದೇವಿಯಲಬ್ಧವರಪ್ರಸಾದಕರಪ್ಪ ಅಯ್ಯವೊಳೆಯರ ಅಇನೂರ್ಬ್ಬರುಂ ಸ್ವಾಮಿಗಳು[50]

ಸಂಕ್ಷೇಪಗಳು

ಇ. ನಾ. ಕ. ಕೊ. ಸ್ಟೇ.	—	ಇನ್‌ಸ್ಕ್ರಿಪ್ಷನ್ಸ್ ಇನ್ ನಾರ್ದರ್ನ್ ಕರ್ನಾಟಕ ಆ್ಯಂಡ್ ಕೊಲ್ಲಾಪುರ ಸ್ಟೇಟ್
ಎ. ಇ.	—	ಎಪಿಗ್ರಾಫಿಯಾ ಇಂಡಿಕಾ
ಎ. ಕ.	—	ಎಪಿಗ್ರಾಫಿಕಾ ಕರ್ನಾಟಿಕಾ
ಕ. ಇ.	—	ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್
ಕ್ರಿ. ಶ.	—	ಕ್ರಿಸ್ತಶಕ
ಜ.ಬಾ.ಬ್ರ್ಯಾ.ರಾ.ಏ.ಸೊ.	—	ಜರ್ನಲ್ ಆಫ್ ಬಾಂಬೆ ಬ್ರ್ಯಾಂಚ್ ಆಫ್ ರಾಯಲ್ ಏಸಿಯಾಟಿಕ್ ಸೊಸೈಟಿ
ತಾ.	—	ತಾಲೂಕು
ಮೈ. ಆ. ರಿ.	—	ಮೈಸೂರ ಆರ್ಕಿಯಾಲಾಜಿಕಲ್ ರಿಪೋರ್ಟ
ಸು. ಶ.	—	ಸುಮಾರು ಶತಮಾನ
ಸೌ. ಇ. ಇ.	—	ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್
ಹಿ.ಕ.ಸ್ಟ.ರಿ.ಅ.ಬ.	—	ಹಿಸ್ಟಾರಿಕಲ್ ಆ್ಯಂಡ್ ಕಲ್ಚರಲ್ ಸ್ಟಡೀಜ್ ಆಫ್ ದಿ ರೀಜನ್ ಅರೌಂಡ್ ಬಸವಕಲ್ಯಾಣ
ಹೈ. ಆ. ಸಿ.	—	ಹೈದ್ರಾಬಾದ ಆರ್ಕಿಯಾಲಾಜಿಕಲ್ ಸೀರೀಜ್

50. ಎ. ಕ. IV ಕೊಳ್ಳೇಗಾಲ 55 ಸಿಂಗನಲ್ಲೂರ (ಕ್ರಿ. ಶ. 1398).

ತದ್ಧಿತ-ತಾತ್ಸಮ್ಯ ಶಬ್ದಗಳಲ್ಲಿ ಪ್ರಥಮಸ್ವರಾದೇಶ : ಒಂದು ಅನ್ವಯಿಕ ವಿಶ್ಲೇಷಣೆ

● ಕೆ. ಅನ್ಬನ್

ಒಂದು ಶಬ್ದ, ಕೇವಲ ಪ್ರಕೃತಿಯಾಗಿರಬಹುದು; ಪ್ರಕೃತಿ ಮತ್ತು ಪ್ರತ್ಯಯ (ಗಳು) ಸೇರಿದ್ದಾಗಿರಬಹುದು: ಪ್ರಕೃತಿ ಅಂತರಿಕ ಆದೇಶ ಪಡೆದದ್ದಿರಬಹುದು ಅಥವಾ ಪ್ರಕೃತಿ ಅಂತರಿಕ ಆದೇಶಹೊಂದುವವರ ಜೊತೆ ಪ್ರತ್ಯಯುವ(ಗಳ)ನ್ನೂ ಹೊಂದಿದ್ದಾಗಿರಬಹುದು. ಉದಾಹರಣೆಗೆ **ಮನೆ, ವಿಷ** ಕೇವಲ ಪ್ರಕೃತಿಗಳಿಂದ ಆದ ಪದಗಳು; ಮನೆಯಲ್ಲಿ (ಮನೆ+ಅಲ್ಲಿ), ವಿಷದಿಂದ ಪ್ರಕೃತಿ ಮತ್ತು ಪ್ರತ್ಯಯ ಸೇರಿ ಆದ ಪದಗಳು; **ಕೇಡು** (ಕೆಡು' ವಿನ ಪ್ರಥಮ ಸ್ವರ ದೀರ್ಘವಾದದ್ದು) **ಚಾಂದ್ರ** (ಚಂದ್ರ' ನ ಪ್ರಥಮ ಸ್ವರ ದೀರ್ಘವಾದದ್ದು) ಪ್ರಕೃತಿ ಅಂತರಿಕಾದೇಶ ಹೊಂದಿ ಆದ ಪದಗಳು; **ನಮ್ಮ** [ನಾವು (ನಾಮ್)] ನಮ್ ಆಗುವದರ ಜೊತೆ – 'ಅ' ಪ್ರತ್ಯಯ ಸೇರಿ ಆದದ್ದು) **ವೈಷಮ್ಯ** ('ವಿಷ' ವೈಷ ಆಗುವದರ ಜೊತೆ – 'ಮಯ' ಪ್ರತ್ಯಯ ಸೇರಿ ಆದದ್ದು) ಗಳು ಪ್ರಕೃತಿ ಅಂತರಿಕ ಆದೇಶ ಹೊಂದುವವದರೊಂದಿಗೆ ಪ್ರತ್ಯಯುವನ್ನೂ ಹೊಂದಿ ಆದ ಪದಗಳು. ಇಂತಹ ಶಬ್ದಗಳು ಮೂಲತಃ ಅದೇ ಭಾಷೆಯವಾಗಿರಬಹುದು; ಅಥವಾ ಬೇರೆ ಭಾಷೆಯಿಂದ ಎರವಲಾಗಿ ಬಂದವುಗಳಾಗಿರಬಹುದು. ಮನೆ. ಕೇಡು ಮುಂತಾದವು ಮೂಲತಃ ಕನ್ನಡ ಶಬ್ದಗಳು. ಚಂದ್ರ, ವಿಷ ಮುಂತಾದವು ಕನ್ನಡ ಭಾಷೆ ಸಂಸ್ಕೃತದಿಂದ ಎರವಲು ಪಡೆದ ಶಬ್ದಗಳು. ಪ್ರಸ್ತುತ ಲೇಖನದಲ್ಲಿ ಹೀಗೆ ಎರವಲಾಗಿ ಬಂದ ಸಂಸ್ಕೃತಪದಗಳಲ್ಲಿ ಅಂತರಿಕ ಬದಲಾವಣೆಯಾಗಿ ಬರುವ ಪ್ರಥಮ ಸ್ವರಾದೇಶ ಗಳ ಬಗ್ಗೆ ವಿವೇಚಿಸಲಾಗಿದೆ.

ಅಗ್ನಿ–ಅಗ್ನೇಯ, ಕಲ್ಪನೆ–ಕಾಲ್ಪನಿಕ, ಉನ್ನತ–ಔನ್ನತ್ಯ ಮುಂತಾದ ಪದ ಯುಗ್ಮಗಳು ಒಂದರಿಂದ ಒಂದು ಬೆಳೆದ ಶಬ್ದಗಳು. ಇಲ್ಲಿ ಎಲ್ಲ ಪದಜೋಡಿಗಳ-ಲ್ಲಿಯೂ ಎರಡನೆಯವು ಮೊದಲನೆಯವುಗಳಿಂದ ಭಿನ್ನವಾದ ಸ್ವರಗಳನ್ನು ಹೊಂದಿವೆ. ಈ ಭಿನ್ನತೆ (ಆದೇಶ) ಕೆಲವು ವಿಧಿಗಳಿಗೆ ಅನುಸಾರವಾಗಿ ಉಂಟಾಗಿದೆ. ಈ ತರದ ಶಬ್ದಗಳು ಅಲ್ಲೊಂದು ಇಲ್ಲೊಂದಿದ್ದರೆ ಅವುಗಳನ್ನು ಸಂಬಂಧರಹಿತವಾದ ಭಿನ್ನ ಶಬ್ದಗಳಾಗಿಯೇ ಕಲಿಯಬಹುದು; ಬಳಸಬಹುದು. ಇವುಗಳ ಬಳಕೆ ಗಣನೀಯ

ವಾದಲ್ಲಿ ನಿಯಮಗಳನ್ನು ಕಲಿಯುವದೂ, ಸಂಬಂಧವನ್ನರಿತಿರುವದೂ ಸಂಪರ್ಕ ಪ್ರಸಂಗದಲ್ಲಿ ಅನಿವಾರ್ಯವಾಗುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ಕನ್ನಡದಲ್ಲಿ ಈ ತರದ ಬಳಕೆಯನ್ನು ಇಲ್ಲಿ ಅನ್ವಯಿಕ ದೃಷ್ಟಿಯಿಂದ ನೋಡಲಾಗಿದೆ.

ಈ ಅಧ್ಯಯನಕ್ಕಾಗಿ, ಐಬಿಎಚ್ ಪ್ರಕಾಶನದ ಕನ್ನಡ–ಕನ್ನಡ–ಇಂಗ್ಲಿಷ್ ನಿಘಂಟು, ಡಾ. ವಿಲ್ಯಂ ಮಾಡ್ಗ ಅವರು ಅನುವಾದಿಸಿದ ಎಂ. ಎಸ್. ಅಂದ್ರೊನಫ ಅವರ "ಕನ್ನಡ ಭಾಷೆ", ಪ್ರೊ. ಡಿ. ಟಿ. ರಂಗಸ್ವಾಮಿ ಅವರ 'ಸರ್ಕಾರಿ ಪತ್ರಲೇಖನ' ಎಂಬ ಮೂರು ಗ್ರಂಥಗಳನ್ನು ಪರಿಶೀಲಿಸಲಾಗಿದೆ. ಪ್ರಥಮ ಸ್ವರ ಬದಲಾವಣೆ ಹೊಂದಿದ ಶಬ್ದಗಳು 'ನಿಘಂಟಿನಲ್ಲಿ' 230, 'ಕನ್ನಡ ಭಾಷೆ' ಯಲ್ಲಿ 27 ಮತ್ತು 'ಸರ್ಕಾರಿ ಪತ್ರಲೇಖನ' ದಲ್ಲಿ 62 ಕಂಡು ಬರುತ್ತವೆ. ನಿಘಂಟಿನ ಒಟ್ಟು ಶಬ್ದಗಳು ಸುಮಾರು 15,000 ಎಂದು ಇಟ್ಟುಕೊಂಡರೆ ಪ್ರಥಮ ಸ್ವರಗಳು ಆದೇಶ ಹೊಂದಿ ಬರುವ ತದ್ಧಿತ ಪದಗಳು. ಶೇಕಡಾ 1.5 ಆಗುತ್ತದೆ. ಈ 230 ಶಬ್ದಗಳನ್ನೇ ಕನ್ನಡದಲ್ಲಿ ಸಾಧಾರಣವಾಗಿ ಬಳಕೆಯಲ್ಲಿರುವ ಈ ರೀತಿಯ ಶಬ್ದಗಳೆಂದಿಟ್ಟುಕೊಂಡರೆ 'ಕನ್ನಡ ಭಾಷೆ' ಯಲ್ಲಿ ಶೇಕಡಾ 11 ರಷ್ಟು 'ಪತ್ರಲೇಖನ' ದಲ್ಲಿ ಶೇಕಡಾ 26 ರಷ್ಟು ಬಳಕೆಯಾಗಿವೆ. ಅಂದರೆ ದೈನಂದಿನ ಓದು–ಬರಹಗಳಲ್ಲಿ ಇಂಥವುಗಳಿಗೆ ಪ್ರಾಮುಖ್ಯತೆ ಇದೆ ಎಂಬುದು ನಿರ್ವಿವಾದ.

ಇಷ್ಟೊಂದು ಮುಖ್ಯವಾದ ವ್ಯಾಕರಣಾಂಶವನ್ನು ಕೇಶಿರಾಜ ತನ್ನ ಶಬ್ದಮಣಿ-ದರ್ಪಣದ ತದ್ಧಿತ ಪ್ರಕರಣದಲ್ಲಿಯೋ. ಅಪಭ್ರಂಶ ಪ್ರಕರಣದಲ್ಲಿಯೋ ಉಳಿ-ದೆಡೆಯೋ ವಿಶ್ಲೇಷಿಸಿದಂತೆ ಕಂಡು ಬರುವದಿಲ್ಲ. ಸಂಸ್ಕೃತದ ವಿಧಿಯನುಸಾರ ಪ್ರಯೋಗದಲ್ಲಿರುವದರಿಂದ (ಸಂಸ್ಕೃತ ವ್ಯಾಕರಣದಲ್ಲಿ ನೋಡಿಕೊಳ್ಳಲಿ ಎಂಬ ಭಾವನೆ ಯಿಂದ) ಕೇಶಿರಾಜ ಇವುಗಳ ಬಗ್ಗೆ ಮೌನತಾಳಿರಲು ಸಾಕು. ಇವುಗಳ ಬಳಕೆ ವಿಪುಲವಾಗಿರುವದರಿಂದ ಮತ್ತು ಇವುಗಳು ಸಾಂಬಂಧಿಕ ಶಬ್ದಗಳ ಬಳಕೆಯೂ ಇರುವದರಿಂದ ಕನ್ನಡ ವ್ಯಾಕರಣದಲ್ಲಿ ಈ ವಿಚಾರಕ್ಕೆ ಸ್ಥಾನ ಇದ್ದೇ ಇದೆ. ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಧ್ವನ್ಯಾಧಾರಿತ ಮತ್ತು ಅರ್ಥಾಧಾರಿತ ನಿಯಮಗಳ ವಿವೇಚನೆ ಇದೆ. ಕನ್ನಡದಲ್ಲಿ ಸಾಧಾರಣ ಬಳಕೆಯಲ್ಲಿರುವ ಇಂಥಹ ಶಬ್ದಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಇಲ್ಲಿ ಕೆಳಗಿನ ನಿಯಮಗಳನ್ನು ಗುರುತಿಸಲಾಗಿದೆ.

ಮೂಲಪದದ ಪ್ರಥಮ ಸ್ವರ	ತದ್ಧಿತ ಪದದ ಪ್ರಥಮ ಸ್ವರ	ಉದಾಹರಣೆ
ಅ	ಆ	ಅರ್ಥ—ಆರ್ಥಿಕ
		ದಂಪತಿ—ದಾಂಪತ್ಯ
ಇ	ಐ	ಇತಿಹಾಸ—ಐತಿಹಾಸಿಕ
		ಜಿನ—ಜೈನ

ಈ	ಐ	ಧೀರ—ಧೈರ್ಯ
ಏ	ಐ	ಏಕ—ಐಕ್ಯ ಕೇವಲ—ಕೈವಲ್ಯ
ಉ	ಔ	ಉಪಚಾರ—ಔಪಚಾರಿಕ ಕುಮಾರ—ಕೌಮಾರ್ಯ
ಊ	ಔ	ಕ್ರೂರ—ಕ್ರೌರ್ಯ ಭೂತ—ಭೌತ
ಓ	ಔ	ಲೋಕ—ಲೌಕಿಕ

ಆಕಾರಕ್ಕೆ ಮೂಲ ಒಂದು:[1] ಐಕಾರ, ಔಕಾರಗಳಿಗೆ ಮೂಲ ಮೂರು ಮೂರು ಅಂದರೆ ಅಕಾರ ಐಕಾರ ಔಕಾರಗಳು ಪ್ರಥಮ ಸ್ವರಗಳಾಗಿದ್ದಲ್ಲಿ ಅವುಗಳ ಸಂಬಂಧ-ವುಚಿಬಹುಮೂಲದ್ದೆಂಬುದನ್ನು ಅವಶ್ಯ ಅರಿಯಬೇಕು. ಇದು ಬಳಕೆಯಲ್ಲಿ ತೊಡಕನ್ನುಂಟುಮಾಡುತ್ತದೆ. ನಿಯಮಜ್ಞಾನ ಸ್ವಲ್ಪ ಮಟ್ಟಿಗೆ ಇದನ್ನು ನೀಗಿಸುತ್ತದೆ.

ಹೀಗೆ ಶಬ್ದಗಳನ್ನು ಸ್ವರ ಬದಲಾವಣೆ ಮಾಡಿ ಬಳಸುವದು ಕಷ್ಟ ಎಂದು ಈ ಪದ್ಧತಿಯನ್ನೇ ಬಿಡಬಹುದೇ ಎಂಬ ಪ್ರಶ್ನೆ ಏಳುವದು ಸಹಜ. ಇದಕ್ಕೆ ಉತ್ತರ "ಬಿಡುವದು ಸುಲಭವಲ್ಲ" ಎಂಬುದೇ. ಕನ್ನಡದಲ್ಲಿ ಮಹಾಪ್ರಾಣಗಳನ್ನು ಬಿಡಬಹುದು.[2] ಏಕೆಂದರೆ ಅವುಗಳ ಪರ್ಯಾಯವಾಗಿ ಅಲ್ಪಪ್ರಾಣಗಳನ್ನು ಬಳಸಬಹುದು. ಇದರಿಂದ ಅರ್ಥಭಿನ್ನತೆ ಬರುವದು ವಿರಳ. ಆದರೆ ಪ್ರಥಮ ಸ್ವರಾದೇಶ ತದ್ಧಿತ ತಾತ್ಸಮ್ಯ ಪದಗಳನ್ನು ಸುಲಭವಾಗಿ ಬಿಡಲಿಕ್ಕಾಗದು. ಏಕೆಂದರೆ ಇವುಗಳಿಗೆ ಪರ್ಯಾಯ ಪದಗಳಿಲ್ಲ. ಭಾಷೆಯನ್ನು ಸರಳೀಕರಿಸಬೇಕೆಂದಲ್ಲಿ ಕನ್ನಡದಲ್ಲಿ ಸಾಮ್ಯ ರಚನೆಗಳಲ್ಲಿ ಇರುವ ನಿಯಮವರಿತು ಹೊಸ ರೀತಿಯ ತದ್ಧಿತ ರೂಪಗಳನ್ನು ಕಟ್ಟಬೇಕು. ಸಂಸ್ಕೃತದ ಶಬ್ದಗಳನ್ನು ಇಡಿಯಾಗಿ ಬಿಡುವುದಂತೂ ಇಂದಿನ ಪರಿಸ್ಥಿತಿಯಲ್ಲಿ ಸಲ್ಲದ ಮಾತು.

ವಿಚಾರ ವಿನಿಮಯದಲ್ಲಿ ನೆರವಾದ ಡಾ. ಪರಡ್ಡಿ ಅವರಿಗೆ ಋಣಿಯಾಗಿದ್ದೇನೆ.

—ಲೇಖಕ

---

1. ವ್ಯಕ್ತಿ-ವೈಯಕ್ತಿಕ, ವ್ಯಾಕರಣ-ವೈಯಾಕರಣ ಮುಂತಾದೆಡೆ ಬರುವ ಐ ಸ್ವರಾದೇಶವಲ್ಲ; ಆಗಮ. ಆದರೆ ತದ್ಧಿತ ಕ್ರಿಯೆ ಇದನ್ನು ಹೋಲುವಂತದ್ದು.
2. ನೋಡಿ ನನ್ನ ಲೇಖನ : ಕನ್ನಡದಲ್ಲಿ ಮಹಾಪ್ರಾಣ, ಒಂದು ಅನ್ವಯಿಕ ವಿಶ್ಲೇಷಣೆ.

ಗ್ರಂಥಋಣ

1. ರಂಗಸ್ವಾಮಿ ಡಿ. ಟಿ. — **ಸರ್ಕಾರ ಪತ್ರಲೇಖನ**
ಗೀತಾ ಬುಕ್ ಹೌಸ್ : ಮೈಸೂರು 1981.

2. ವಿಲ್ಯಂ ಮಾಡ್ತ — **ಕನ್ನಡ ಭಾಷೆ**
(ಅನುವಾದಕ)
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1977.

3. ವೆಂಕಟಸುಬ್ಬಯ್ಯ ಮತ್ತು ಇತರರು (ಸಂಪಾದಕರು) :
ಕನ್ನಡ–ಕನ್ನಡ–ಇಂಗ್ಲಿಷ ನಿಘಂಟು
ಐ. ಬಿ. ಎಚ್. ಪ್ರಕಾಶನ ಬೆಂಗಳೂರು 1981.

ಒರೆಗಲ್ಲು :
ಪಂಚಮಹಾಶಬ್ದ : ಒಂದು ಟಿಪ್ಪಣಿ

● ಎಸ್. ಕೆ. ಕೊಪ್ಪಾ

ಕನ್ನಡ ಕಾವ್ಯ ಮತ್ತು ಶಾಸನಗಳಲ್ಲಿ ಮಹಾಸಾಮಂತ, ಮಹಮಂಡಳೇಶ್ವರರ ಗೌರವ ಪ್ರಶಸ್ತಿಯಲ್ಲಿ ಪಂಚಮಹಾಶಬ್ಧ ಮರ್ಯಾದೆ ಕಾಣಿಸಿಕೊಳ್ಳುತ್ತಿದ್ದು: ಅದರ ಕುರಿತು ಸಾಕಷ್ಟು ಚರ್ಚೆ ಈ ವರೆಗೆ ನಡೆದಿದೆ.[1] ಒಂದು ಅಭಿಪ್ರಾಯ ಪಂಚಮಹಾ ಶಬ್ದವನ್ನು ಮಹಾ ಎಂದು ಪ್ರಾರಂಭವಾಗುವ ಐದು ಬಿರುದುಗಳೆಂದೂ ವಾದ್ಯವನ್ನು ಐದು ಸಲ ಬಾರಿಸುವುದೆಂದೂ ಹೇಳಿದರೆ ಮತ್ತೊಂದು ಅದು ಐದು ರೀತಿಯ ವಾದ್ಯ-ಗಳನ್ನು ಸೂಚಿಸುತ್ತದೆ ಎಂದಿದೆ. ಅದು ಐದು ಅಧಿಕಾರಗಳನ್ನು ಸೂಚಿಸುತ್ತದೆಂದು ಹೇಳಿದ ಕಲ್ಹಣ ಐದು ಅಧಿಕಾರಗಳ ಪಟ್ಟಿ ಕೊಟ್ಟಿದ್ದಾನೆ. ಪಂಚಮಹಾಶಬ್ದದ ಕುರಿತಾದ ಈ ಎಲ್ಲ ವಿವರಗಳನ್ನು ಚರ್ಚಿಸಿದ ಡಾ. ವಿ. ರಾಘವನ್ ಐದು ರೀತಿಯ ವಾದ್ಯಗಳ ಈ ಗೌರವವು ಮಹಾಸಾಮಂತರಿಗೂ ಮಹಾಮಂಡಳೇಶ್ವರರಿಗೂ ಮೀಸಲಾಗಿದ್ದ ಗೌರವವಾದುದರಿಂದ ಕಲ್ಹಣ ಅವರ ಅಧಿಕಾರಗಳನ್ನು ಸೂಚಿಸಲು ಈ ಶಬ್ದ ಬಳಸಿಕೊಂಡಿರಬಹುದೆಂದಿದ್ದಾರೆ. ಆದರೆ ಈ ವಿಷಯಕವಾದ ಸಂದೇಹ ಮಾತ್ರ ಇನ್ನೂ ಪರಿಹಾರವಾಗಿಲ್ಲ.

ತದ್ದರ್ವಾಡಿ ನಾಡಿನ ಶಾಸನವೊಂದು[2] "ಶ್ವೇತಛತ್ರ ಚಾಮರ ಕರುಳಕೊಂತ ಧವಳಶಂಖ ಭೇರಿಯೆಂಬ ಪಂಚಮಹಾಶಬ್ದ" ಎಂಬ ಉಲ್ಲೇಖವನ್ನು ನೀಡಿದೆ. ಇಲ್ಲಿ ಶ್ವೇತಛತ್ರ, ಚಾಮರ ಅಧಿಕಾರ ಸೂಚಕಗಳಾದರೆ ಕರುಳಕೊಂತ ಆಯುಧ. ಧವಳಶಂಖ, ಭೇರಿ ರಣವಾದ್ಯಗಳಾಗಿವೆ. ಬಹುಶಃ ಅಧಿಕಾರ ಮತ್ತು ಶೌರ್ಯ ಸೂಚಕವಾದ ಪಂಚಪದವಸ್ತು ಗೌರವಗಳನ್ನೇ ಪಂಚಮಹಾಶಬ್ದವೆಂದಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಇಲ್ಲಿ ಶಬ್ದವನ್ನು ಧ್ವನಿಯೆಂಬರ್ಥದಲ್ಲಿ ತೆಗೆದುಕೊಳ್ಳದೇ ವಸ್ತು ಸೂಚಿ ಪದವಾದ ಶಬ್ದಾರ್ಥವಾಗಿ ತೆಗೆದುಕೊಳ್ಳಬೇಕು. ನಂತರ ಇವು ಪಂಚಮಹಾ

1. ವಿವರಗಳಿಗೆ ನೋಡಿ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ. ಎಂ. ಚಿದಾನಂದ ಮೂರ್ತಿ ಪು. 337.
2. ಸೌ. ಇ. ಇ. XV, 155, ಮಂಕಣಿ (ತಾ) ಬಾಗಲಕೋಟ (ಕ್ರಿ. ಶ. 1206).

ವಾದ್ಯಗಳೆಂದು ಮಾರ್ಪಡುವಲ್ಲಿ ಶಬ್ದದ ನಿಜ ಅರ್ಥ ಸ್ಪಷ್ಟಗೊಳ್ಳದೇ ಶಬ್ದ – ವಾದ್ಯ ಸಮಾನಾರ್ಥಕವಾಗಿ ಭಾವಿಸಿರುವುದು ಕಾರಣವಾದಂತೆ ತೋರುತ್ತದೆ. ಒಟ್ಟಿನಲ್ಲಿ ಮಹಾಸಾಮಂತ, ಮಹಾಮಂಡಳೇಶ್ವರ ಪ್ರಶಸ್ತಿಯಲ್ಲಿನ ಪಂಚಮಹಾಶಬ್ದ ಈ ವರೆಗೆ ತಿಳಿದಿರುವಂತೆ ಪಂಚಮಹಾವಾದ್ಯಗಳಾಗಿರದೇ ಶೌರ್ಯಾಧಿಕಾರ ಗೌರವ ಸೂಚಕವಾದ ಪಂಚಮಹಾಪದ ವಸ್ತುಗಳನ್ನು ನಿರ್ದೇಶಿಸುತ್ತದೆನ್ನುವುದು ಗಮನಾರ್ಹ.

ಈ ಸಂಚಿಕೆಯ ಲೇಖಕರು

೧. ಪ್ರೊ. ಎಂ. ಎಸ್. ಮಹಾಂತಯ್ಯ
ಳ-೨-೮೬೩, ಏಕಬೋಟೆ ಬಿಲ್ಡಿಂಗ್
ರಾಮಕೋಟೆ, ಹೈದ್ರಾಬಾದ–೫೦೦ ೦೦೧

೨. ಪ್ರೊ. ಬಸವರಾಜ ನಾಯ್ಕರ
ಆಂಗ್ಲಭಾಷಾ ಅಧ್ಯಾಪಕರು,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩. ಡಾ. ವಿ. ಶಿವಾನಂದ
ಕನ್ನಡ ಅಧ್ಯಾಪಕರು,
ಭಾರತೀಯ ಭಾಷಾ ವಿಭಾಗ
ಬನಾರಸ ಹಿಂದೂ ವಿಶ್ವವಿದ್ಯಾಲಯ,
ವಾರಣಾಸಿ (ಉತ್ತರ ಪ್ರದೇಶ)

೪. ಡಾ. ಎಂ. ಬಿ. ಕೊಟ್ರಶೆಟ್ಟಿ
ಪ್ರಾಧ್ಯಾಪಕರು,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಮಹಾದೇವ ಜೋಶಿ
ಸಂಸ್ಕೃತ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಡಾ. ಬಿ. ಸಿ. ಜವಳಿ
ರೀಡರ್,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಡಾ. ದೇವೇಂದ್ರಕುಮಾರ ಹಕಾರಿ
ರೀಡರ್,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಪ್ರೊ. ಪಿ. ಕೆ. ಶ್ರೀಕೃಷ್ಣಭಟ್
ಕನ್ನಡ ವಿಭಾಗ,
ಮಧುರೈ ಕಾಮರಾಜ ವಿಶ್ವವಿದ್ಯಾಲಯ, ಮಧುರೈ

೧೦. ಡಾ. ವಿಲ್ಯಂ ಮಾಡ್ತ
ಭಾಷಾವಿಜ್ಞಾನ ರೀಡರ್,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಬಿ. ಎ. ಸನದಿ
೪೫೬, ಸೆಕ್ಟರ್,
ಸಿ. ಜಿ. ಕಾಲೊನಿ, ಮುಂಬೈ–೪೦೦ ೦೩೭

೧೨. ವೈ. ಉಮಾನಾಥ ಶೆಣೈ
ಇತಿಹಾಸ ಅಧ್ಯಾಪಕರು,
ವಿವೇಕಾನಂದ ಕಾಲೇಜು,
ಪುತ್ತೂರು (ದಕ್ಷಿಣ ಕನ್ನಡ ಜಿಲ್ಲೆ)

೧೩. ಡಾ. ಬಿ. ಆರ್. ಹಿರೇಮಠ
ರೀಡರ್,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಪ್ರೊ. ಕೆ. ಅನ್ಬನ್
ಭಾಷಾವಿಜ್ಞಾನ ಅಧ್ಯಾಪಕರು,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫. ಪ್ರೊ. ಎಸ್. ಕೆ. ಕೊಪ್ಪಾ
ಕನ್ನಡ ಅಧ್ಯಾಪಕರು,
ಶಾಂತೇಶ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,
ಇಂಡಿ (ಜಿಲ್ಲಾ : ವಿಜಾಪುರ)

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ – ಸಂಸ್ಥೆಗಳು ರೂ. ೧೦೦–೦೦ (ಒಂದುನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮–೦೦ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨–೫೦ (ಅಂಚೆವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪–೦೦

ಹಣವನ್ನು ಫಾಯನಾನ್ಸ್ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩, ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ ತೆಗೆಯಿಸಿ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ

ನಿರ್ದೇಶಕರು

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ